ಬುಧವಾರ, ಜನವರಿ 17, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 17 | ಪುಟ 18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮಾಲಿನ್ಯಕಾರಿ ವಸ್ತುಗಳನ್ನು ಶೀಘ್ರ ಕೊಳೆಯಿಸಬಲ್ಲ ಪರಿಸರಸ್ನೇಹಿ ಯೀಸ್ಟ್ ಶೋಧಗೊಂಡಿದೆ

ಆಳ-ಅಗಲ ವಿಮಾನ ವಿಳಂಬಕ್ಕೆ ಹತ್ತಾರು ಕಾರಣಗಳು

ರಸ್ತೆ ಅಪಘಾತ: ಗಂಟೆಗೆ 19 ಸಾವು 12

ಇಂಡಿಗೊ, ಎಂಐಎಎಲ್‌ಗೆ ನೋಟಿಸ್ 13

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,128	22,032	₹64,650 (ಬೆಂಗಳೂರು)	₹73,800 (ಬೆಂಗಳೂರು)	83.12

ಸರ್ಕಾರಕ್ಕೆ ₹5 ಲಕ್ಷ ಕೋರ್ಟ್ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ಆದೇಶಗಳನ್ನೇ ಪಾಲಿಸದ ಈ ಸರ್ಕಾರದಲ್ಲಿ ಯಾವ ರೀತಿಯ ತಮಾಷೆ ನಡೆಯುತ್ತಿದೆ' ಎಂದು ಸ್ವತಃ ಹೈಕೋರ್ಟ್ ಪ್ರಶ್ನಿಸಿದೆ. ಸಿವಿಲ್ ನ್ಯಾಯಾಂಗ ನಿಂದನೆ ಪ್ರಕರಣವೊಂದರಲ್ಲಿ ಈ ರೀತಿ ಕಿಡಿಕಾರಿರುವ ಕೋರ್ಟ್, ರಾಜ್ಯ ಸರ್ಕಾರಕ್ಕೆ ₹5 ಲಕ್ಷ ದಂಡವನ್ನೂ ವಿಧಿಸಿದೆ.

'ವೇತನ ತಾರತಮ್ಯ ಸರಿಪಡಿಸಲು ಹೈಕೋರ್ಟ್ ನೀಡಿದ್ದ ಆದೇಶವನ್ನು ಸರ್ಕಾರ ಪಾಲನೆ ಮಾಡಿಲ್ಲ' ಎಂದು ಆಕ್ಷೇಪಿಸಲಾದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಸರ್ಕಾರದ ಪರ ಹಾಜರಿದ್ದ ಪ್ರಧಾನ ವಕೀಲ ಎಸ್.ಎಸ್.ಮಹೇಂದ್ರ, 'ಅರ್ಜಿಗೆ ಸಂಬಂಧಿಸಿದ ಪ್ರಸ್ತಾವ ಹಣಕಾಸು ಇಲಾಖೆಯ ಒಪ್ಪಿಗೆಗಾಗಿ ಕಾಯುತ್ತಿದೆ. ಹೈಕೋರ್ಟ್ ಆದೇಶ ಪಾಲಿಸಲು ಆರು ವಾರಗಳ ಕಾಲಾವಕಾಶ ನೀಡಬೇಕು' ಎಂದು ಮೆಮೊ ಸಲ್ಲಿಸಿದರು.

6ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಎಸ್‌ಸಿ, ಎಸ್‌ಟಿ, ಮಹಿಳೆ, ಮಕ್ಕಳಿಗೆ ಭಯರಹಿತ ಬದುಕು: ಸಿ.ಎಂ ತಾಕೀತು

ದೌರ್ಜನ್ಯ ತಡೆ ಎಸ್‌ಪಿ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತರು, ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾಗುವವರ ಪ್ರಮಾಣ ರಾಜ್ಯದಲ್ಲಿ ಕಡಿಮೆ ಇದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಶಿಕ್ಷೆ ಪ್ರಮಾಣ ಹೆಚ್ಚಾಗದಿದ್ದರೆ ಡಿಸಿಪಿ/ಎಸ್‌ಪಿಗಳನ್ನೇ ಹೊಣೆ ಮಾಡುವುದು ಅನಿವಾರ್ಯ ಎಂದು ಕಟುವಾಗಿಯೇ ಎಚ್ಚರಿಕೆ ಕೊಟ್ಟಿದ್ದಾರೆ.

ನಗರದಲ್ಲಿ ಮಂಗಳವಾರ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಅವರು ಮಾತನಾಡಿದರು.

'ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ದಾಖಲಾಗುವ ಪ್ರಕರಣಗಳಿಗೆ ಶಿಕ್ಷೆಯಾಗುತ್ತಿರುವ ಪ್ರಮಾಣ ಕಡಿಮೆ ಇದೆ. ರಾಷ್ಟ್ರದಲ್ಲಿ ಈ ಪ್ರಮಾಣ ಶೇ 33ರಷ್ಟಿದೆ. ರಾಜ್ಯದಲ್ಲಿ ಇದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷೆಯಾಗಬೇಕು. ಅಲಕ್ಷಿತ ಸಮುದಾಯದವರು ಭಯದಲ್ಲಿ ಬದುಕುವ ವಾತಾವರಣ ಇರಲೇಬಾರದು. ಇಂತಹ ಪ್ರಕರಣಗಳಲ್ಲಿ 60 ದಿನಗಳಲ್ಲಿ ದೋಷಾರೋಪಪಟ್ಟಿ ಸಿದ್ಧಪಡಿಸಿ ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ಗಡುವು ವಿಧಿಸಿದರು.

'ನಮ್ಮ ಸರ್ಕಾರ ಪೊಲೀಸರಿಗೆ ಮುಕ್ತ ವಾತಾವರಣ ಕಲ್ಪಿಸಿದೆ. ಪೊಲೀಸರ ಕೆಲಸದಲ್ಲಿ ಮೂಗು ತೂರಿಸಬಾರದು ಎಂಬುದು ನನ್ನ ಬದ್ಧತೆ. ಈ ಮುಕ್ತ ವಾತಾವರಣ ದುರುಪಯೋಗ ಆಗಬಾರದು. ಇದನ್ನು ಜನರಿಗೆ ಅನುಕೂಲವಾಗುವಂತೆ ಬಳಸಿ' ಎಂದು ಕಿವಿಮಾತು ಹೇಳಿದರು.

'ರಾಜ್ಯದಲ್ಲಿ ಕೋಮುಗಲಭೆಗಳು ನಡೆದಿಲ್ಲದಿರುವುದು ಕಾನೂನು ಸುವ್ಯವಸ್ಥೆಗೆ ಉತ್ತಮವಾಗಿರುವುದಕ್ಕೆ ನಿದರ್ಶನ' ಎಂದು ತಿಳಿಸಿದರು.

6ನೇ ಪುಟ ನೋಡಿ

ಬೆಂಗಳೂರಿನಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಎಂ.ಎ. ಸಲೀಂ, ಕೆ. ರಾಮಚಂದ್ರ ರಾವ್ ಮತ್ತು ಮಾಲಿನಿ ಕೃಷ್ಣಮೂರ್ತಿ ಮಧ್ಯೆ ನಗೆ ಚಟಾಕಿ ಹಾರಿದ ಕ್ಷಣ ಪ್ರಜಾವಾಣಿ ಚಿತ್ರ/ಬಿ.ಕೆ. ಜನಾರ್ದನ್

ತಂತ್ರಜ್ಞಾನ ಆಧಾರಿತ ಸೇವೆಗಳಿಗೆ ಚಾಲನೆ

- ಅನುಕಂಪ ಆಧಾರದ ನೇಮಕಾತಿ ಪೋರ್ಟಲ್
- ಪೊಲೀಸ್ ಐಟಿ–ವಿ2
- ಐಟಿಪಿಎ ಸರಳ್ ಆ್ಯಪ್
- ಸಿ.ಜಿ ನೋಂದಣಿ ಪೋರ್ಟಲ್
- ಪೊಲೀಸ್ ಮಿತ್ರ ಚಾಟ್‌ಬಾಟ್
- ರಾಜ್ಯ ಪೊಲೀಸ್ ಕೃತಕ ಬುದ್ಧಿಮತ್ತೆ (ಎಐ) ತಂತ್ರಾಂಶ
- ಆರ್ಥಿಕ ಗುಪ್ತಚರ ತಂತ್ರಾಂಶಗಳು ಹಾಗೂ ಸಂಕ್ಷಿಪ್ತ ಸೈಬರ್ ಅಪರಾಧ ಕೈಪಿಡಿ

ಕಾನೂನು ಸುವ್ಯವಸ್ಥೆ ಚೆನ್ನಾಗಿದ್ದರೆ ರಾಜ್ಯದ ಅಭಿವೃದ್ಧಿ ಸಾಧ್ಯ. ಜನರ ತಲಾ ಆದಾಯ, ಜಿಡಿಪಿ ಹೆಚ್ಚಾಗುತ್ತದೆ. ಹೂಡಿಕೆದಾರರು ಬರುತ್ತಾರೆ. ಆದ್ದರಿಂದ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಪೊಲೀಸರ ವೈದ್ಯಕೀಯ ವೆಚ್ಚ ₹1,500ಕ್ಕೆ ಏರಿಕೆ

ಕರ್ನಾಟಕ ಸುವರ್ಣ ಮಹೋತ್ಸವದ ಅಂಗವಾಗಿ ಸಿದ್ದರಾಮಯ್ಯ ಅವರು ಪೊಲೀಸ್ ಸಿಬ್ಬಂದಿಗೆ ಸಂಬಂಧಿಸಿದ ಕೆಲವು ಘೋಷಣೆಗಳನ್ನು ಮಾಡಿದರು.

ಪೊಲೀಸರಿಗೆ ಈಗ ನೀಡುತ್ತಿರುವ ₹1,000 ವೈದ್ಯಕೀಯ ವೆಚ್ಚವನ್ನು ₹1,500ಕ್ಕೆ ಹೆಚ್ಚಿಸುವುದಾಗಿ ಹೇಳಿದರು.

ಪೊಲೀಸ್ ಸಿಬ್ಬಂದಿಗೆ ಸುವರ್ಣ ಮಹೋತ್ಸವದ ನೆನಪಿಗೆ ಬೆಳ್ಳಿ ಪದಕ ನೀಡಲಾಗುವುದು. ರಾಜ್ಯದಲ್ಲಿ ಸುಸಜ್ಜಿತ ಸುವರ್ಣ ಪೊಲೀಸ್ ಭವನ ನಿರ್ಮಾಣ ಮಾಡಲಾಗುವುದು. ಇದಕ್ಕಾಗಿ ಬಜೆಟ್‌ನಲ್ಲಿ ಹಣ ನಿಗದಿ ಮಾಡಲಾಗುವುದು ಎಂದರು.

ಸೆನ್ (ಸೈಬರ್ ಎಕನಾಮಿಕ್ ಆ್ಯಂಡ್ ನಾರ್ಕೋಟಿಕ್ ಕ್ರೈಮ್) ಠಾಣಾಧಿಕಾರಿಗಳ ಹುದ್ದೆಯನ್ನು ಎಸಿಪಿ ಮತ್ತು ಡಿಸಿಪಿ ಹುದ್ದೆಗಳಿಗೆ ಸಮಾನವಾಗಿ ಮೇಲ್ದರ್ಜೆಗೆ ಏರಿಸಲಾಗುವುದು ಎಂದು ಹೇಳಿದರು.

ಗರುಡ ಪಡೆಗೆ ಕೆಲವು ಅತ್ಯಾಧುನಿಕ ಸಾಧನಗಳನ್ನು ನೀಡಲಾಗಿದೆ

ನವೋದ್ಯಮ ಶ್ರೇಯಾಂಕ ಮುಂಚೂಣಿಯಲ್ಲಿ ರಾಜ್ಯ

ನವದೆಹಲಿ (ಪಿಟಿಐ): ನವೋದ್ಯಮಿಗಳಿಗೆ ಉತ್ತೇಜನ ನೀಡಿ ಪೂರಕ ವಾತಾವರಣ ಕಲ್ಪಿಸಿದ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಪಟ್ಟಿಯಲ್ಲಿ ಕರ್ನಾಟಕವು ಸತತ ಎರಡನೇ ಬಾರಿಗೆ 'ಅತ್ಯುತ್ತಮ ಸಾಧಕ ರಾಜ್ಯ' ಶ್ರೇಯಕ್ಕೆ ಭಾಜನವಾಗಿದೆ.

ಗುಜರಾತ್, ಕೇರಳ, ತಮಿಳುನಾಡು ಹಾಗೂ ಹಿಮಾಚಲ ಪ್ರದೇಶ ಕೂಡ ಈ ಪಟ್ಟಿಯಲ್ಲಿ ಸ್ಥಾನ ಗಿಟ್ಟಿಸಿಕೊಂಡಿವೆ. ಈ ವಿಭಾಗದಲ್ಲಿ ಗುಜರಾತ್ ಸತತ ನಾಲ್ಕನೇ ಬಾರಿ ಸ್ಥಾನ ಪಡೆದಿದೆ.

ನವೋದ್ಯಮಿಗಳಿಗೆ ಅಗತ್ಯ ಸೌಲಭ್ಯ ಒದಗಿಸಲು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳ ಆಧಾರದ ಮೇಲೆ ಈ ಶ್ರೇಯಾಂಕ ನಿಗದಿಪಡಿಸಲಾಗಿದೆ. ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಯು (ಡಿಪಿಐಐಟಿ) ಸಿದ್ಧಪಡಿಸಿರುವ ಈ ಪ್ರಕ್ರಿಯೆಯಲ್ಲಿ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಪಾಲ್ಗೊಂಡಿದ್ದವು.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು 'ಸ್ಟಾರ್ಟ್‌ಅಪ್ ಶ್ರೇಯಾಂಕ 2022' ಅನ್ನು ಮಂಗಳವಾರ ಬಿಡುಗಡೆಗೊಳಿಸಿದರು.

ಪ್ರಧಾನಿ ಮೋದಿ ಅವರು 'ಮೇಡ್ ಇನ್ ಇಂಡಿಯಾ' ಆಂದೋಲನಕ್ಕೆ ಕರೆ ನೀಡಿದ್ದಾರೆ. ಇದರ ಯಶಸ್ಸಿನತ್ತಲೂ ನವೋದ್ಯಮಿಗಳು ಗಮನಹರಿಸಬೇಕು

ಪೀಯೂಷ್ ಗೋಯಲ್
ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

ಶ್ರೇಯಾಂಕ ನೀಡುವ ಉದ್ದೇಶದಿಂದ 'ಅತ್ಯುತ್ತಮ ಸಾಧಕ ರಾಜ್ಯಗಳು', 'ಉತ್ತಮ ಸಾಧಕ ರಾಜ್ಯಗಳು', 'ಸಾಧಕ ರಾಜ್ಯಗಳು', 'ಸಾಧನೆ ಆಕಾಂಕ್ಷಿ ರಾಜ್ಯಗಳು' ಹಾಗೂ 'ಪ್ರವರ್ಧಮಾನಕ್ಕೆ ಬರುತ್ತಿರುವ ರಾಜ್ಯಗಳು' ಎಂಬ ಶೀರ್ಷಿಕೆಯಡಿ ಐದು ವಿಭಾಗಗಳಾಗಿ ವರ್ಗೀಕರಿಸಲಾಗಿತ್ತು.

ಅಲ್ಲದೇ, ಒಂದು ಕೋಟಿ ಒಳಗಿರುವ ಜನಸಂಖ್ಯೆ ಹಾಗೂ ಅದಕ್ಕಿಂತ ಹೆಚ್ಚಿರುವ ಜನಸಂಖ್ಯೆ ಆಧಾರದ ಮೇಲೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ವಿಂಗಡಿಸಲಾಗಿತ್ತು ಎಂದು ಡಿಪಿಐಐಟಿ ತಿಳಿಸಿದೆ.

ಮಹಾರಾಷ್ಟ್ರ, ಒಡಿಶಾ, ಪಂಜಾಬ್, ರಾಜಸ್ಥಾನ, ತೆಲಂಗಾಣ, ಅರುಣಾಚಲ ಪ್ರದೇಶ ಮತ್ತು ಮೇಘಾಲಯ 'ಉತ್ತಮ ಸಾಧಕ ರಾಜ್ಯಗಳು' ಪಟ್ಟಿಯಲ್ಲಿವೆ. ಆಂಧ್ರಪ್ರದೇಶ, ಅಸ್ಸಾಂ, ಮಧ್ಯಪ್ರದೇಶ, ಉತ್ತರಪ್ರದೇಶ, ಉತ್ತರಾಖಂಡ, ಗೋವಾ, ಮಣಿಪುರ ಮತ್ತು ತ್ರಿಪುರ 'ನಾಯಕ' ಎಂದು ಪರಿಗಣಿತವಾಗಿವೆ.

'ಸಾಧನೆ ಆಕಾಂಕ್ಷಿ ರಾಜ್ಯಗಳು/ಪ್ರದೇಶಗಳು' ಪಟ್ಟಿಯಲ್ಲಿ ಬಿಹಾರ, ಹರಿಯಾಣ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪ, ನಾಗಾಲ್ಯಾಂಡ್ ಇವೆ.

ಛತ್ತೀಸಗಢ, ನವದೆಹಲಿ, ಜಮ್ಮು ಮತ್ತು ಕಾಶ್ಮೀರ, ಚಂಡೀಗಢ, ದಾದ್ರಾ ಮತ್ತು ನಗರ್ ಹವೇಲಿ, ದಮನ್ ಮತ್ತು ಡಿಯು, ಲಡಾಖ್, ಮಿಜೋರಾಂ, ಪುದುಚೇರಿ ಮತ್ತು ಸಿಕ್ಕಿಂ 'ಪ್ರವರ್ಧಮಾನಕ್ಕೆ ಬರುತ್ತಿರುವ ರಾಜ್ಯಗಳು/ಪ್ರದೇಶಗಳು' ಪಟ್ಟಿಯಲ್ಲಿವೆ.

ನವೋದ್ಯಮಿಗಳಿಗೆ ಸಾಂಸ್ಥಿಕ ಬೆಂಬಲ, ಆರ್ಥಿಕ ನೆರವು ಸೇರಿದಂತೆ 25 ಅಂಶಗಳ ಪಾಲನೆಯಲ್ಲಿ ರಾಜ್ಯಗಳ ಕ್ರಮಗಳ ಆಧಾರದ ಮೇಲೆ ಪಟ್ಟಿ ಸಿದ್ಧಪಡಿಸಲಾಗಿದೆ.

ಕಾರ್ಖಾನೆಯನ್ನು ಮುಚ್ಚಲು ಮಾರ್ಚ್ 31ರ ಗಡುವು

ವಿಐಎಸ್‌ಎಲ್ ಭವಿಷ್ಯ ಅತಂತ್ರ

● ವೆಂಕಟೇಶ ಜಿ.ಎಚ್

ಶಿವಮೊಗ್ಗ: ಭದ್ರಾವತಿಯ ವಿಶ್ವೇಶ್ವರಾಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ (ವಿಐಎಸ್‌ಎಲ್) ಶಾಶ್ವತವಾಗಿ ಮುಚ್ಚುವ ಪ್ರಕ್ರಿಯೆಗೆ ಕೇಂದ್ರ ಸರ್ಕಾರ ನೀಡಿದ್ದ 'ತಾತ್ಕಾಲಿಕ ಜೀವದಾನ'ದ ಗಡುವು ಇದೇ ಮಾರ್ಚ್ 31ಕ್ಕೆ ಕೊನೆಗೊಳ್ಳಲಿದೆ ಎಂದು ಹೇಳಲಾಗುತ್ತಿದ್ದು, ಕಾರ್ಖಾನೆಯ ಕಾರ್ಮಿಕರ ವಲಯದಲ್ಲಿ ತಳಮಳ ಶುರುವಾಗಿದೆ.

'ಉತ್ಪಾದನೆ ಚಟುವಟಿಕೆ ಸೇರಿದಂತೆ ಎಲ್ಲ ಪ್ರಕ್ರಿಯೆ ಅಂದು (ಮಾರ್ಚ್ 31) ಕೊನೆಗೊಳ್ಳಬಹುದು' ಎಂದು ವಿಐಎಸ್‌ಎಲ್ ಆಡಳಿತ ಮಂಡಳಿ ಸೋಮವಾರ ಕಾರ್ಮಿಕರನ್ನು ಕರೆದು ಮೌಖಿಕವಾಗಿ ಸೂಚಿಸಿದೆ' ಎಂದು ಗುತ್ತಿಗೆ ಕಾರ್ಮಿಕರ ಸಂಘದ ಅಧ್ಯಕ್ಷ ಎಚ್.ಜಿ.ಸುರೇಶ್ 'ಪ್ರಜಾವಾಣಿ'ಗೆ ತಿಳಿಸಿದರು. ಆದರೆ, ಇದನ್ನು ವಿಐಎಸ್‌ಎಲ್ ಆಡಳಿತ ಖಚಿತಪಡಿಸಿಲ್ಲ.

ಭದ್ರಾವತಿಯ ವಿಐಎಸ್‌ಎಲ್ ಕಾರ್ಖಾನೆಯಲ್ಲಿ ಸದ್ಯ ಚಾಲನೆಯಲ್ಲಿರುವ ಬಾರ್‌ಮಿಲ್

ಸದ್ಯ ವಿಐಎಸ್‌ಎಲ್‌ನಲ್ಲಿ ಭಾರತೀಯ ಉಕ್ಕು ಪ್ರಾಧಿಕಾರಕ್ಕೆ (SAIL) ಬೇಕಾದ ಬಿಡಿ ಭಾಗಗಳ ಉತ್ಪಾದನೆ ಮಾತ್ರ ನಡೆಯುತ್ತಿದ್ದು, ಅಲ್ಲಿ ಪ್ರೈಮರಿ ಮಿಲ್ ಹಾಗೂ ಬಾರ್‌ಮಿಲ್‌ಗಳು ಕಾರ್ಯಾಚರಣೆಯಲ್ಲಿವೆ.

6ನೇ ಪುಟ ನೋಡಿ

B.G. SHIRKE CONSTRUCTION TECHNOLOGY PVT. LTD., PUNE

School Campus

Middle School. Admin Block, High School & Pu College

Hostel Block

KRANTHIVEERA SANGOLLI RAYANNA SAINIK SCHOOL COMPLEX AT SANGOLLI, BELAGAVI DISTRICT

OUR FOURTH EDUCATIONAL CAMPUS BEING INAUGURATED IN A SPAN OF 19 MONTHS IN KARNATAKA STATE

We thank the progressive Government of Karnataka for giving us an opportunity to execute yet another Prestigious Educational Campus Project.

Regd Office: 72-76, Industrial Estate, Mundhwa, Pune- 411 036, Tel. No. 020-26708100
Email: contracts@shirke.co.in

SHIRKE®
QUALITY | TECHNOLOGY | CUSTOMER SATISFACTION
www.shirkegroup.com

Bengaluru Office: BEL-AIR DRIVE, #9, 3rd Floor, Next to HMT Bhavan, Bengaluru – 560 032
Tel. No. 080-23332633 Email: bgs531@shirke.co.in

Media Vinspa

ಅಯೋಧ್ಯೆ
ಹೊಸ ಇತಿಹಾಸದ ಅನಾವರಣ

ವಿಶ್ವ ನಕಾಶೆಯಲ್ಲಿ ಅಯೋಧ್ಯೆಯನ್ನು ಒಂದು ಪ್ರಮುಖ ಅಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿ ಪುನರುತ್ಥಾನಗೊಳಿಸಲು, ಉತ್ತರ ಪ್ರದೇಶದ ಡಬಲ್ ಇಂಜಿನ್ ಸರ್ಕಾರವು ನಿರಂತರವಾಗಿ ಶ್ರಮಿಸುತ್ತಿದೆ. ಪ್ರಸ್ತುತ, ಅಯೋಧ್ಯ ನಗರಿಗೆ ರೂ.31,000 ಕೋಟಿ ಮೌಲ್ಯದ 178 ಯೋಜನೆಗಳು ಲಭ್ಯವಾಗಿವೆ. ಮಾಸ್ಟರ್ ಪ್ಲಾನ್ 2031ರ ಯೋಜನೆ ಅಡಿಯಲ್ಲಿ, ಮುಂಬರುವ 10 ವರ್ಷಗಳಲ್ಲಿ ರೂ.85,000 ಕೋಟಿ ಮೌಲ್ಯದ ಅಭಿವೃದ್ಧಿ ಯೋಜನೆಗಳು, ಈ ನಗರಿಯ ಮೂಲಸೌಕರ್ಯಗಳಿಗೆ ಮತ್ತಷ್ಟು ಇಂಬು ನೀಡಲಿವೆ. ಆತ್ಮನಿರ್ಭರ ಭಾರತ ಎಂಬ ದೂರದೃಷ್ಟಿಯ ಸಾಕಾರ ರೂಪದಲ್ಲಿ, ಯುಪಿಜಿಐಎಸ್ ಸಂದರ್ಭದಲ್ಲಿ ಸಹಿ ಹಾಕಲಾಗಿರುವ ಪರಸ್ಪರ ಒಪ್ಪಂದಗಳ ಮುಖಾಂತರ, ಮುಂದಿನ ದಿನಗಳಲ್ಲಿ ಅಯೋಧ್ಯ ನಗರಿಯಲ್ಲಿ ರೂ.1.54 ಲಕ್ಷ ಕೋಟಿ ಹೂಡಿಕೆಯ ಜೊತೆಗೆ 1.31 ಲಕ್ಷ ಉದ್ಯೋಗಗಳು ಸೃಷ್ಟಿಗೊಳ್ಳುತ್ತವೆ. ಸಪ್ತಪುರಿಗಳಲ್ಲೇ ಅತ್ಯುತ್ತಮವಾದ ಅವಧಪುರಿಯು, 'ನೂತನ ಮಾದರಿ ಅಭಿವೃದ್ಧಿ' ಆಗಿ ಸ್ಥಾಪಿತಗೊಳ್ಳುತ್ತಲಿದೆ.

ಮಾನ್ಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ದೂರದೃಷ್ಟಿ ಸಾಕಾರತೆಯ ಜೊತೆಗೆ, 'ಧರ್ಮನಗರಿ' ಅಯೋಧ್ಯೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದು ಸರ್ಕಾರದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ. ದಿವ್ಯ, ಭವ್ಯ, ನವ್ಯ ಅಯೋಧ್ಯೆಯನ್ನು ಕಣ್ತುಂಬಿಕೊಳ್ಳಲು ದೇಶದ ಮತ್ತು ವಿಶ್ವದ ಜನತೆ ಕಾತರದಿಂದ ಕಾಯುತ್ತಲಿದ್ದಾರೆ. ಅಯೋಧ್ಯೆಯ ಪ್ರತಿ ಭಕ್ತಾದಿಗಳು ಮತ್ತು ಅಯೋಧ್ಯೆಗೆ ಭೇಟಿ ನೀಡುವ ಪ್ರತಿ ಪ್ರವಾಸಿಗರೂ ಸಂತೋಷ ಮತ್ತು ಸಾರ್ಥಕತೆಯೊಂದಿಗೆ ಹಿಂದಿರುಗುವುದನ್ನು ನಾವು ಖಚಿತಪಡಿಸಬೇಕಿದೆ.

ಯೋಗಿ ಆದಿತ್ಯನಾಥ, ಮುಖ್ಯಮಂತ್ರಿ, ಉತ್ತರ ಪ್ರದೇಶ

ಅಯೋಧ್ಯೆಯು ನಮ್ಮ ಸಂಪ್ರದಾಯಗಳ ಅತ್ಯುತ್ತಮತೆಯನ್ನು ಹಾಗೂ ನಮ್ಮ ಅತ್ಯುತ್ತಮ ಅಭಿವೃದ್ಧಿದಾಯಕ ಪರಿವರ್ತಣೆಗಳನ್ನು ಸ್ಪಷ್ಟಪಡಿಸುವಂತಾಗಬೇಕು. ಈ ನಗರದ ಮಾನವೀಯ ನೀತಿ ಪರಿಕಲ್ಪನೆಗಳನ್ನು ಹೋಲುವಂತೆ ಭವಿಷ್ಯದ ಮೂಲಸೌಕರ್ಯಗಳನ್ನು ರೂಪಿಸಬೇಕು, ಇವು ಭಕ್ತಾದಿಗಳು ಮತ್ತು ಪ್ರವಾಸಿಗರು ಸೇರಿದಂತೆ ಸಮಸ್ತರಿಗೂ ಪ್ರಯೋಜನಕಾರಿಯಾಗಲಿವೆ. ಯುವ ಜನಾಂಗದವರು ಜೀವನದಲ್ಲಿ ಒಂದು ಬಾರಿಯಾದರೂ ಅಯೋಧ್ಯೆಯನ್ನು ಕಾಣಬೇಕೆಂದು ಹಂಬಲಿಸುವಂತಿರಬೇಕು. ಇದು ನಮ್ಮೆಲ್ಲರ ಒಗ್ಗಟ್ಟಿನ ಪ್ರಯತ್ನವಾಗಿದ್ದು, ನಾವೆಲ್ಲರೂ ಅಯೋಧ್ಯೆಯ ಕುರುಹನ್ನು ಸಂಭ್ರಮಿಸಬೇಕಿದೆ ಮತ್ತು ಅಯೋಧ್ಯೆಯ ಸಾಂಸ್ಕೃತಿಕ ಕಂಪನವನ್ನು ಆವಿಷ್ಕಾರಿ ವಿಧಾನಗಳಲ್ಲಿ ಜೀವಂತವಾಗಿ ಇರಿಸಬೇಕಿದೆ.

ನರೇಂದ್ರ ಮೋದಿ, ಪ್ರಧಾನಮಂತ್ರಿ

ಐತಿಹಾಸಿಕ ಹೆಜ್ಜೆಗಳು

- ಅಯೋಧ್ಯ ಮುನಿಸಿಪಲ್ ಕಾರ್ಪೋರೇಶನ್ ರಚನೆ.
- ಅಯೋಧ್ಯ ಬೈಪಾಸ್‌ನಲ್ಲಿ ಬೃಹತ್ ಅದ್ದೂರಿ ಬಸ್ ನಿಲ್ದಾಣ ನಿರ್ಮಾಣ.
- ರಾಜರ್ಷಿ ದಶರಥ ಸ್ವಾಯುತ್ತ ರಾಜ್ಯ ವೈದ್ಯಕೀಯ ಕಾಲೇಜು ನಿರ್ಮಾಣ.
- ಭಜನ ಸಂಧ್ಯಾ ಸ್ಥಳ, ಸಂಗ್ರಹಾಲಯ, ಶ್ರೀರಾಮ ಮೂರ್ತಿ ನಿರ್ಮಾಣ.
- ಅಯೋಧ್ಯ ನಗರವನ್ನು ಸ್ಮಾರ್ಟ್ ಸಿಟಿಯನ್ನಾಗಿ ಅಭಿವೃದ್ಧಿಪಡಿಸುವುದು.
- ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ.
- ಅಯೋಧ್ಯೆಯ ಸುತ್ತಮುತ್ತಲಿನ ರಸ್ತೆಗಳನ್ನು ಚತುಷ್ಪಥಗಳನ್ನಾಗಿ ರೂಪಿಸಿ, ಸುಂದರಗೊಳಿಸುವುದು.
- ಶ್ರೀರಾಮ ಮಂದಿರ ಮಾರ್ಗದ ಅಗಲೀಕರಣ ಮತ್ತು ಸೌಂದರ್ಯೀಕರಣ.
- ಧರ್ಮಪಥದ ಜೊತೆಗೆ ಇತರೆ ಮಾರ್ಗಗಳ ವಿಸ್ತರಣೆ.
- ಮಹರ್ಷಿ ಮಹೇಶ ಯೋಗಿ ವಿಶ್ವವಿದ್ಯಾಲಯ ಸ್ಥಾಪನೆ.
- ಉತ್ತರ ಪ್ರದೇಶ ಶ್ರೀ ಅಯೋಧ್ಯಾಜಿ ತೀರ್ಥ ವಿಕಾಸ ಪರಿಷತ್ ರಚನೆ.
- ಭಾರತೀಯ ಮಂದಿರ ವಾಸ್ತುಶಿಲ್ಪ ಸಂಗ್ರಹಾಲಯ ಸ್ಥಾಪನೆ.
- ಅಂತರರಾಷ್ಟ್ರೀಯ ರಾಮಾಯಣ ಮತ್ತು ವೈದಿಕ ಸಂಶೋಧನಾ ಸಂಸ್ಥೆ.
- ಮಾದರಿ ಸೌರ ನಗರ ರೀತಿಯಾಗಿ ಅಭಿವೃದ್ಧಿ.
- ಅಯೋಧ್ಯೆಯಲ್ಲಿ ಆಯೋಜಿಸಲಾಗುವ ಎಲ್ಲಾ ಜಾತ್ರೆಗಳಿಗೆ ರಾಜ್ಯದ ಮೆರಗು.

ಆರಂಭವಾಗಿರುವ ಯೋಜನೆಗಳು

- ರೂ.1,463 ಕೋಟಿ ವೆಚ್ಚದಲ್ಲಿ ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಅಯೋಧ್ಯ ಧಾಮ.
- ರೂ.1,919 ಕೋಟಿ ವೆಚ್ಚದಲ್ಲಿ ಜೌನಪುರ - ಅಯೋಧ್ಯ - ಬಾರಾಬಂಕಿ ರೈಲ್ವೆ ಲೈನ್ ಯೋಜನೆ ಅಡಿಯಲ್ಲಿ 4 ಸೆಕ್ಷನ್‌ಗಳ ಡಬ್ಲಿಂಗ್ ಯೋಜನೆ.
- ರೂ.845 ಕೋಟಿ ವೆಚ್ಚದಲ್ಲಿ ರಾಮಪಥ (ಶಹಾದತ್‌ಗಂಜ್ ನಿಂದ ನಯಾ ಘಾಟ್ ವರೆಗೆ) ನಿರ್ಮಾಣ.
- ರೂ. 241 ಕೋಟಿ ವೆಚ್ಚದಲ್ಲಿ ಅಯೋಧ್ಯಾಧಾಮ ಜಂಕ್ಷನ್ ರೈಲ್ವೆ ನಿಲ್ದಾಣದ ಪುನಶ್ಚೇತನ ಯೋಜನೆ.
- ರೂ. 167 ಕೋಟಿ ವೆಚ್ಚದಲ್ಲಿ ಎತ್ತರಿಸಿದ ವಿದ್ಯುತ್ ತಂತಿಗಳ ನೆಲದಡಿ ಕಾಮಗಾರಿ ಯೋಜನೆ.
- ರೂ.75 ಕೋಟಿ ವೆಚ್ಚದಲ್ಲಿ ಬಡಿ ಬುವಾ ರೈಲ್ವೆ ಕ್ರಾಸಿಂಗ್‌ನಲ್ಲಿ ರೈಲ್ವೆ ಮೇಲ್ಸೆತುವೆ ನಿರ್ಮಾಣ ಕಾಮಗಾರಿ.
- ರೂ.68 ಕೋಟಿ ವೆಚ್ಚದಲ್ಲಿ ಭಕ್ತಿಪಥ (ಅಯೋಧ್ಯ ಮುಖ್ಯರಸ್ತೆಯಿಂದ ಹನುಮಾನ್ ಘಡಿವರೆಗೆ) ನಿರ್ಮಾಣ.
- ರೂ.67 ಕೋಟಿ ವೆಚ್ಚದಲ್ಲಿ ಮಹರ್ಷಿ ಅರುಂಧತಿ ಪಾರ್ಕಿಂಗ್ ಮತ್ತು ವಾಣಿಜ್ಯ ಸಂಕಿರಣ (ಪೂರ್ವ ಮತ್ತು ಪಶ್ಚಿಮ) ನಿರ್ಮಾಣ.
- ರೂ.65 ಕೋಟಿ ವೆಚ್ಚದಲ್ಲಿ ಧರ್ಮಪಥ (ರಾಹೆ-27 ರಿಂದ ನಯಾ ಘಾಟ್ ಹಳೆಯ ಸೇತುವೆವರೆಗೆ) ನಿರ್ಮಾಣ.
- ರೂ.45 ಕೋಟಿ ವೆಚ್ಚದಲ್ಲಿ ರಾಹೆ-27 ಬೈಪಾಸ್ ಮಹೋಬರಾ ಬಜಾರಿನಿಂದ ಶ್ರೀರಾಮ ಜನ್ಮಭೂಮಿವರೆಗೆ, ತೆದಿ ಬಜಾರ್ ಮಾರ್ಗವಾಗಿ ಚತುಷ್ಪಥ ರಸ್ತೆ ನಿರ್ಮಾಣ.
- ರೂ.41 ಕೋಟಿ ವೆಚ್ಚದಲ್ಲಿ ಶ್ರೀರಾಮ ಜನ್ಮಭೂಮಿ ಪಥ (ಸುಗ್ರೀವ ಕೋಟೆಯಿಂದ ಶ್ರೀರಾಮ ಜನ್ಮಭೂಮಿವರೆಗೆ) ನಿರ್ಮಾಣ.
- ರೂ.37 ಕೋಟಿ ವೆಚ್ಚದಲ್ಲಿ ಕಲೆಕ್ಟೊರೇಟ್ ಪ್ರಾಂಗಣದಲ್ಲಿ ಲಕ್ಷ್ಮಣಕುಂಜ್ ಸ್ಮಾರ್ಟ್ ಪಾರ್ಕಿಂಗ್ ಯೋಜನೆ.
- ರೂ.34 ಕೋಟಿ ವೆಚ್ಚದಲ್ಲಿ ಪೋಲೀಸ್ ಸಿಬ್ಬಂದಿಗಾಗಿ ಟ್ರಾನ್ಸಿಟ್ ಹಾಸ್ಟೇಲ್ ಯೋಜನೆ.
- ರೂ.20 ಕೋಟಿ ವೆಚ್ಚದಲ್ಲಿ ಅಯೋಧ್ಯ-ಸುಲ್ತಾನಪುರ ರಾಹೆ-330 ರಿಂದ ವಿಮಾನ ನಿಲ್ದಾಣದವರೆಗೆ ಚತುಷ್ಪಥ ರಸ್ತೆ ನಿರ್ಮಾಣ ಯೋಜನೆ.
- ರೂ.17 ಕೋಟಿ ವೆಚ್ಚದಲ್ಲಿ ಸೋಹವಾಲ್ ಪ್ರದೇಶದ ಪಿಸ್ವಾರೌಲಿ ಗ್ರಾಮ ಸಭಾದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕ ಸ್ಥಾಪನೆ.
- ರೂ.17 ಕೋಟಿ ವೆಚ್ಚದಲ್ಲಿ ಅಮಾನಿಗಂಜ್ ಎಂಬಲ್ಲಿ ಬಹು ಹಂತದ ವಾಹನ ನಿಲುಗಡೆ ಮತ್ತು ವಾಣಿಜ್ಯ ಸಂಕಿರಣ ಯೋಜನೆ.

ಪರಿವರ್ತನೆಯ ಅಷ್ಟ ಪರಿಕಲ್ಪನೆಗಳು

ಈ ನಗರದಲ್ಲಿ 8 ಮುಖ್ಯ ಪರಿಲ್ಪನೆಗಳನ್ನು ಆಧರಿಸಿದ ಅಭಿವೃದ್ಧಿ ಚಾಲನೆಗಳು ಕಾರ್ಯಗತಗೊಳ್ಳುತ್ತಿದ್ದು, ನಗರದ ಸರಿಸಾಟಿಯಿಲ್ಲದ ಸಮೃದ್ಧಿಯನ್ನು ಪುನರ್‌ರೂಪಿಸುವ ಮತ್ತು ಇದನ್ನೊಂದು ಪ್ರಮುಖ ನಗರವನ್ನಾಗಿ ಪರಿವರ್ತಿಸುವ ಗುರಿಯನ್ನು ಹೊಂದಿವೆ.

ಸಾಂಸ್ಕೃತಿಕ ಅಯೋಧ್ಯೆ

ಅಯೋಧ್ಯೆಯನ್ನು ಭಾರತದ ಸಾಂಸ್ಕೃತಿಕ ರಾಜಧಾನಿಯನ್ನಾಗಿ ಪರಿವರ್ತಿಸುವುದು ಇದರ ಉದ್ದೇಶವಾಗಿದೆ. ಈ ಚಾಲನೆಯಲ್ಲಿ ಸೊಗಸಾದ ದೇಗುಲ, ಮಠ ಮತ್ತು ಆಶ್ರಮಗಳ ಸ್ಥಾಪನೆ, ಬೃಹತ್ ನಗರ ದ್ವಾರಗಳ ನಿರ್ಮಾಣ ಮತ್ತು ದೇಗುಲ ಸಂಗ್ರಹಾಲಯ ರೀತಿಯ ಯೋಜನೆಗಳ ಅನುಷ್ಠಾನ ಮಾದರಿಯ ಕಾರ್ಯಗಳು ಅಡಕಗೊಂಡಿದ್ದು, ಎಲ್ಲವೂ ಯೋಜನಾ ತಂತ್ರಗಾರಿಕೆಗೆ ಪೂರಕವಾಗಿ ಕಾರ್ಯಗತವಾಗುತ್ತಿವೆ.

ಸಕ್ಷಮ ಅಯೋಧ್ಯೆ

ಸಕ್ಷಮ ಅಯೋಧ್ಯೆ ಪರಿಕಲ್ಪನೆಯ ಅಯೋಧ್ಯ ನಗರವನ್ನು ಸಂಪೂರ್ಣ ಸ್ವಾವಲಂಬಿ ನಗರವನ್ನಾಗಿ ಅಭಿವೃದ್ಧಿಪಡಿಸುವ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ದೈನಂದಿನ ಉದ್ಯೋಗ, ಪ್ರವಾಸೋದ್ಯಮ, ಹಾಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಸೇರಿದಂತೆ ವಿವಿಧ ವಿಧಾನಗಳ ಮುಖಾಂತರ ಸುಸ್ಥಿರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು ಇದರ ಉದ್ದೇಶವಾಗಿದೆ.

ಸುರಮ್ಯ ಅಯೋಧ್ಯೆ

ಈ ಪರಿಕಲ್ಪನೆಯಲ್ಲಿ ಹಲವಾರು ಕೊಳ, ಕೆರೆ ಮತ್ತು ಪುರಾತನ ಜಲಾಶಯಗಳ ಸೌಂದರ್ಯೀಕರಣ, ಹಳೆಯ ಉದ್ಯಾನಗಳ ಪುನಶ್ಚೇತನ, ಹೊಸ ಉದ್ಯಾನಗಳ ಸ್ಥಾಪನೆ ಮತ್ತು ಅಸ್ತವ್ಯಸ್ತ ತಂತಿ ತಾರುಗಳ ಜಾಲವನ್ನು ಕೊನೆಗೊಳಿಸಿ ನಗರದ ಆಕರ್ಷಣೆಯನ್ನು ಹೆಚ್ಚಿಸಲು ಪಾರಂಪರಿಕ ದೀಪಾಲಂಕಾರ ವ್ಯವಸ್ಥೆಯ ಸ್ಥಾಪನೆ ಸೇರಿರುತ್ತದೆ. ಮುಂಭಾಗದ ಬೆಳಕಿನ ವ್ಯವಸ್ಥೆಯ ಮೂಲಕ ಉಂಟಾಗುವ ಬೀದಿ ಬೆಳಕಿನ ಚಿತ್ತಾರವು ಅಯೋಧ್ಯೆಯ ಅಭಿವೃದ್ಧಿಗೆ ಕೊಡುಗೆಯಾಗಿದೆ.

ಭಾವನಾತ್ಮಕ ಅಯೋಧ್ಯೆ

ಭಾವನಾತ್ಮಕ ಅಯೋಧ್ಯೆಯ ದೃಷ್ಟಿಕೋನದಲ್ಲಿ, ಸನಾತನಿ ಸಮುದಾಯವು ಅಯೋಧ್ಯೆ ಜೊತೆಗೆ ಹೊಂದಿರುವ ಭಾವುಕ ಬಂಧವನ್ನು ಬಿಂಬಿಸುವ, ಶ್ರೀರಾಮನ ಜೊತೆಗಿರುವ ಭಾವನಾತ್ಮಕ ನಂಟನ್ನು ಪ್ರಚುರಪಡಿಸುವಿಕೆಯನ್ನು ಹೊಂದಿರುತ್ತದೆ. ಈ ಉದ್ದೇಶದಿಂದಾಗಿ, ನಗರದ ಗೋಡೆಗಳಲ್ಲಿ, ರಸ್ತೆಯ ಇಕ್ಕೆಲಗಳಲ್ಲಿ ಮತ್ತು ರಸ್ತೆಗಳು ಛೇದಿಸುವ ಸ್ಥಳಗಳಲ್ಲಿ ಸಾಂಸ್ಕೃತಿಕ ಅಡಕಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ.

ಆಧುನಿಕ ಅಯೋಧ್ಯೆ

ಆಧುನಿಕ ಅಯೋಧ್ಯೆ ಪರಿಕಲ್ಪನೆಯಲ್ಲಿ, ಈ ಪವಿತ್ರ ನಗರವು ಒಂದು ಆಧುನೀಕರಣ ಪ್ರಕ್ರಿಯೆಗೆ ಒಳಗಾಗುತ್ತಲಿದ್ದು, ಸೌಲಭ್ಯ ಸೌಕರ್ಯಗಳ ಶ್ರೇಣಿಯನ್ನೇ ಇಲ್ಲಿ ಪರಿಚಯಿಸಲಾಗುತ್ತಿದೆ. ಸ್ಮಾರ್ಟ್ ಸಿಟಿ, ಸೇಫ್ ಸಿಟಿ, ಸೋಲಾರ್ ಸಿಟಿ ಮತ್ತು ಗ್ರೀನ್‌ಫೀಲ್ಡ್ ಟೌನ್‌ಶಿಪ್ ನಂತಹ ಚಾಲನೆಗಳು, ಅಯೋಧ್ಯೆ ನಗರವನ್ನು ಆಧುನೀಕರಣದ ಪ್ರಯತ್ನಗಳಿಗೆ ಪೂರಕವಾಗಿ ರೂಪಗೊಳಿಸುತ್ತಿವೆ.

ಸುಗಮ್ಯ ಅಯೋಧ್ಯೆ

ಸುಗಮ್ಯ ಅಯೋಧ್ಯೆ ಪರಕಲ್ಪನೆಗೆ ಬದ್ಧವಾಗಿ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಅಯೋಧ್ಯಾಧಾಮ ಜಂಕ್ಷನ್ ರೈಲು ನಿಲ್ದಾಣ, ನಗರದೊಳಗೆ ಅಥವಾ ಜಿಲ್ಲೆಗಳನ್ನು ಸಂಪರ್ಕಿಸುವ ಹತ್ತಿರದ ಚತುಷ್ಪಥ ರಸ್ತೆಗಳು ಅಥವಾ ಸರಯೂ ಮತ್ತು ಒಳನಾಡು ಜಲಮಾರ್ಗಳ ಸಂಪರ್ಕ ರಸ್ತೆಗಳ ಸ್ಥಾಪನೆಗೆ ಸಂಬಂಧಿಸಿದಂತೆ ಸರ್ಕಾರಗಳು ಸಾಕಷ್ಟು ಕ್ಷಮತೆಯಿಂದ ಕಾರ್ಯನಿರ್ವಹಿಸುತ್ತ, ಅಯೋಧ್ಯೆಯ ಸಂಪರ್ಕ ಸೇತುಗಳ ಬಗ್ಗೆ ಗರಿಷ್ಠ ಗಮನವಹಿಸಲಾಗಿದೆ.

ಸ್ವಚ್ಛ ಅಯೋಧ್ಯೆ

ಸ್ವಚ್ಛ ಅಯೋಧ್ಯೆ ಎಂಬ ಹೆಸರೇ ಸೂಚಿಸುವಂತೆ, ನಗರದ ಒಳಗಿನ ಚರಂಡಿಗಳು ಮತ್ತು ತ್ಯಾಜ್ಯ ಕಾಲುವೆಗಳ ಅಭಿವೃದ್ಧಿ ಚಾಲನೆಗಳು ಚಾಲ್ತಿಯಲ್ಲಿದ್ದು, ಸ್ವಚ್ಛ ಅಯೋಧ್ಯೆ ಸಾಕಾರಗೊಳಿಸುವ ಸಕಲ ಪ್ರಯತ್ನಗಳು ಅವಿರತವಾಗಿ ನಡೆಯುತ್ತಲಿವೆ. ರಾಜ್ಯದ ಮುಖ್ಯಮಂತ್ರಿಗಳು ಅಯೋಧ್ಯೆಯನ್ನು ಮುಖ್ಯ ಪ್ರವಾಸಿ ಮತ್ತು ಧಾರ್ಮಿಕ ಕೇಂದ್ರವನ್ನಾಗಿ ಮತ್ತು ದೇಶದ ನಿರ್ಮಲ ನಗರವನ್ನಾಗಿ ರೂಪಿಸಲಾಗುವುದೆಂದು ಸಂಕಲ್ಪ ಮಾಡಿದ್ದಾರೆ.

ಆಯುಷ್ಮಾನ್ ಅಯೋಧ್ಯೆ

ಈ ಆಯುಷ್ಮಾನ್ ಅಯೋಧ್ಯೆ ಪರಿಕಲ್ಪನೆಯಲ್ಲಿ, ಅಯೋಧ್ಯೆಯ ಆರೋಗ್ಯ ಮೂಲಸೌಕರ್ಯಗಳನ್ನು, ರೋಗಿಗಳಿಗೆ ಉತ್ಕೃಷ್ಟ ಗುಣಮಟ್ಟದ ಹಾಗೂ ಅನುಕೂಲಕರ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವಂತೆ ಪುನರ್‌ರೂಪಿಸಲಾಗಿದೆ. ರಾಜರ್ಷಿ ದಶರಥ ರಾಜ್ಯ ಸ್ವಾಯುತ್ತ ವೈದ್ಯಕೀಯ ಕಾಲೇಜು, ಕೇವಲ ವೈದ್ಯಕೀಯ ಸೇವೆಗಳನ್ನು ಒದಗಿಸುವುದಷ್ಟೆ ಅಲ್ಲದೆ, ತುರ್ತು ವೈದ್ಯಕೀಯ ಸೌಲಭ್ಯಗಳ ಕುರಿತ ವಿಸ್ತ್ರತ ಸಂಶೋಧನೆಗಳನ್ನು ಕೂಡ ಕೈಗೊಳ್ಳುತ್ತದೆ.

ನಿರ್ಮಾಣ ಹಂತದಲ್ಲಿರುವ ಯೋಜನೆಗಳು

- ರೂ.2,182 ಕೋಟಿ ವೆಚ್ಚದ ಗ್ರೀನ್‌ಫೀಲ್ಡ್ ಟೌನ್‌ಶಿಪ್ ಯೋಜನೆ.
- ರೂ.300 ಕೋಟಿ ವೆಚ್ಚದ ವಶಿಷ್ಠಕುಂಜ್ ವಸತಿ ಯೋಜನೆ.
- ರೂ.297 ಕೋಟಿ ವೆಚ್ಚದಲ್ಲಿನ ರಾಹೆ-27 ರಲ್ಲಿರುವ ಲಕ್ನೋ-ಅಯೋಧ್ಯ ಸೆಕ್ಷನ್‌ನಲ್ಲಿ ಕಿ.ಮೀ. 8.000 ದಿಂದ ಕಿ.ಮೀ. 121.600 ವರೆಗೆ, ಇಪಿಸಿ ಮಾದರಿಯಲ್ಲಿ ರಸ್ತೆ ಅಗಲೀಕರಣ ಮತ್ತು ಬಲವರ್ಧನೆ ಕಾಮಗಾರಿ.
- ರೂ.218 ಕೋಟಿ ವೆಚ್ಚದಲ್ಲಿನ ರಾಹೆ-27 ರಲ್ಲಿರುವ ಅಯೋಧ್ಯ ಬೈಪಾಸ್‌ನಲ್ಲಿ ಕಿ.ಮೀ. 121.600 ದಿಂದ ಕಿ.ಮೀ. 144.020 ವರೆಗೆ, ಇಪಿಸಿ ಮಾದರಿಯಲ್ಲಿ ರಸ್ತೆ ಅಗಲೀಕರಣ ಮತ್ತು ಬಲವರ್ಧನೆ ಕಾಮಗಾರಿ.
- ರೂ.120 ಕೋಟಿ ವೆಚ್ಚದ ಅಯೋಧ್ಯ ಮುನಿಸಿಪಲ್ ಕಾರ್ಪೋರೇಶನ್ ಮತ್ತು ಅಯೋಧ್ಯ ಅಭಿವೃದ್ಧಿ ಪ್ರಾಧಿಕಾರ ಕಚೇರಿ ಕಟ್ಟಡ ನಿರ್ಮಾಣ ಯೋಜನೆ.
- ರೂ.40 ಕೋಟಿ ವೆಚ್ಚದ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೊಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ (ಸಿಪಿಇಟಿ) ನಿರ್ಮಾಣ ಯೋಜನೆ.
- ರೂ.28 ಕೋಟಿ ವೆಚ್ಚದ ಉತರೌಲ್-ಫೈಜಾಬಾದ್-ಅಲಹಾಬಾದ್ ರಸ್ತೆಯ ಅಗಲೀಕರಣ ಮತ್ತು ಬಲವರ್ಧನೆ ಯೋಜನೆ.
- ರೂ.27 ಕೋಟಿ ವೆಚ್ಚದ ರೌನಾಹಿ-ದಿಯೊದಿ ರಸ್ತೆ ಅಗಲೀಕರಣ ಮತ್ತು ಬಲವರ್ಧನೆ ಯೋಜನೆ.
- ರೂ.24 ಕೋಟಿ ವೆಚ್ಚದ ಗುಪ್ತಾರ್ ಘಾಟ್ ಮತ್ತು ರಾಜ್ ಘಾಟ್ ನಡುವಿನ ಪೂರ್ವ ನಿರ್ಮಿತ ಘಾಟ್‌ಗಳ ಪುನಶ್ಚೇತನ ಮತ್ತು ನೂತನ ಕಾಂಕ್ರೀಟ್ ಘಾಟ್‌ಗಳ ನಿರ್ಮಾಣ ಯೋಜನೆ.
- ರೂ.23 ಕೋಟಿ ವೆಚ್ಚದಲ್ಲಿ ನಯಾ ಘಾಟ್‌ನಿಂದ ಲಕ್ಷ್ಮಣ ಘಾಟ್‌ವರೆಗೆ ಪ್ರವಾಸಿಗರ ಸೌಲಭ್ಯಗಳ ಅಭಿವೃದ್ಧಿ ಮತ್ತು ಸೌಂದರ್ಯೀಕರಣ ಯೋಜನೆ.
- ರೂ.23 ಕೋಟಿ ವೆಚ್ಚದ ರಾಮ್ ಕಿ ಪಾಯಿದಿಯಲ್ಲಿ ಸಂದರ್ಶಕರ ಗ್ಯಾಲರಿ ನಿರ್ಮಾಣ.
- ರೂ.23 ಕೋಟಿ ವೆಚ್ಚದಲ್ಲಿ ರಾಮ್ ಕಿ ಪಾಯಿದಿ ಇಂದ ರಾಜ್‌ಘಾಟ್‌ವರೆಗೆ, ರಾಜ್‌ಘಾಟ್ ನಿಂದ ಶ್ರೀರಾಮ ಜನ್ಮಭೂಮಿ ಮಂದಿರದವರೆಗೆ ಭಕ್ತಾದಿಗಳ ಮಾರ್ಗದ ಬಲವರ್ಧನೆ ಮತ್ತು ನವೀಕರಣ ಯೋಜನೆ.
- ರೂ.20 ಕೋಟಿ ವೆಚ್ಚದಲ್ಲಿ ಅಯೋಧ್ಯಾಧಾಮ ಜಂಕ್ಷನ್ ರೈಲು ನಿಲ್ದಾಣದಿಂದ ರಾಮಪಥದವರೆಗೆ ಸ್ಮಾರ್ಟ್ ರೋಡ್ (ಕ್ಷೀರಸಾಗರ ಪಥ) ನಿರ್ಮಾಣ ಯೋಜನೆ.
- ರೂ.20 ಕೋಟಿ ವೆಚ್ಚದಲ್ಲಿ ಅಯೋಧ್ಯ-ಲಕ್ನೋ ಮಾರ್ಗದಲ್ಲಿ ಗೇಟ್ ಕಾಂಪ್ಲೆಕ್ಸ್ ನಿರ್ಮಾಣ ಯೋಜನೆ.
- ರೂ.20 ಕೋಟಿ ವೆಚ್ಚದಲ್ಲಿ ಅಯೋಧ್ಯ-ಅಂಬೇಡ್ಕರ್‌ನಗರ ಮಾರ್ಗದಲ್ಲಿ ಗೇಟ್ ಕಾಂಪ್ಲೆಕ್ಸ್ ನಿರ್ಮಾಣ ಯೋಜನೆ.
- ರೂ.20 ಕೋಟಿ ವೆಚ್ಚದಲ್ಲಿ ಅಯೋಧ್ಯ-ರಾಯ್‌ಬರೇಲಿ ಮಾರ್ಗದಲ್ಲಿ ಗೇಟ್ ಕಾಂಪ್ಲೆಕ್ಸ್ ನಿರ್ಮಾಣ ಯೋಜನೆ.
- ರೂ.18 ಕೋಟಿ ವೆಚ್ಚದಲ್ಲಿ ರಾಯ್‌ಬರೇಲಿ-ಅಯೋಧ್ಯ ರಸ್ತೆಯನ್ನು ನಾಕಾ ಹೈವೆ ಇಂದ ನಾಕಾ ಚುಂಗಿವರೆಗೆ ಚತುಷ್ಪಥ ರಸ್ತೆಯನ್ನಾಗಿ ಬಲಪಡಿಸುವ ಮತ್ತು ಅಗಲೀಕರಣ ಕಾಮಗಾರಿ.
- ರೂ.17 ಕೋಟಿ ವೆಚ್ಚದಲ್ಲಿ ಅವಧ ಆಗಮನ ಪಥ (ಕ್ಷೀರಸಾಗರ ಪಥದಿಂದ ರಾಮಪಥದವರೆಗೆ) ನಿರ್ಮಾಣ ಯೋಜನೆ.
- ರೂ.17 ಕೋಟಿ ವೆಚ್ಚದಲ್ಲಿ ಗುಪ್ತಾರ್ ಘಾಟ್ ಸೌಂದರ್ಯೀಕರಣ (ಮೂರನೇ ಹಂತ).
- ರೂ.15 ಕೋಟಿ ವೆಚ್ಚದಲ್ಲಿ 4 ಐತಿಹಾಸಿಕ ಪ್ರವೇಶ ದ್ವಾರಗಳ ಸಂರಕ್ಷಣೆ ಮತ್ತು ಸೌಂದರ್ಯೀಕರಣ ಯೋಜನೆ.

‘ಆಸ್ತಿ ತೆರಿಗೆ: ದುಬಾರಿ ದಂಡ ಕಡಿತ’

₹2 ಸಾವಿರ ಕೋಟಿ ವೆಚ್ಚದಲ್ಲಿ ರಸ್ತೆಗಳಿಗೆ ವೈಟ್ ಟಾಪಿಂಗ್: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಸ್ತಿ ತೆರಿಗೆಗೆ ದುಬಾರಿ ದಂಡವನ್ನು ಕಡಿಮೆ ಮಾಡಲು ಕಾನೂನಿಗೆ ತಿದ್ದುಪಡಿ ಮಾಡಲಾಗುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಆಸ್ತಿ ತೆರಿಗೆ ಪಾವತಿಗೆ ನೋಟಿಸ್, ದುಬಾರಿ ದಂಡ ವಿಧಿಸಲಾಗುತ್ತಿದೆ ಎಂಬ ದೂರುಗಳು ಹೆಚ್ಚಾಗುತ್ತಿವೆ. ಈ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು 2020ರಲ್ಲಿ ಜಾರಿಗೆ ಬಂದ ಕಾನೂನಿಗೆ ಕೆಲವು ದಿನಗಳಲ್ಲೇ ತಿದ್ದುಪಡಿ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಪಶ್ಚಿಮ ವಲಯದ ಗಾಂಧಿನಗರ, ಮಲ್ಲೇಶ್ವರ ಹಾಗೂ ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರಗಳ ನಾಗರಿಕರ ದೂರುಗಳನ್ನು ಆಲಿಸಲು ಮಂಗಳವಾರ ಶೇಷಾದ್ರಿಪುರದಲ್ಲಿ ಆಯೋಜಿಸಿದ್ದ ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕಾಲಮಿತಿಯೊಳಗೆ ತೆರಿಗೆ ಪಾವತಿಸಿ ಎಂದು ನೋಟಿಸ್ ಬಂದಿರುವುದರ ಬಗ್ಗೆ ಗಾಬರಿಯಾಗಬೇಡಿ. ಆಸ್ತಿ ತೆರಿಗೆ ಪಾವತಿ ಬಗ್ಗೆ ಜನರ ಮೇಲೆ ಒತ್ತಡ ಹೇರಬೇಡಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಹೇಳಿದರು.

‘ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯಲ್ಲಿ ಜನರು ತಮ್ಮ ಆಸ್ತಿಗೆ ತಕ್ಕಂತೆ ತೆರಿಗೆ ಪಾವತಿ ಮಾಡುತ್ತಿಲ್ಲ. ಮೂರು ಅಂತಸ್ತಿನ ಮನೆ ಇದ್ದರೆ ಒಂದು ಅಂತಸ್ತು ಎಂದು ತೋರಿಸಿ ಕಡಿಮೆ ತೆರಿಗೆ ಕಟ್ಟುತ್ತಿದ್ದಾರೆ. ಈ ಕುರಿತು ಸಚಿವ ರಾಮಲಿಂಗಾರೆಡ್ಡಿ ಅವರು ಪತ್ರ ಬರೆದಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

ಅನಧಿಕೃತ ಫ್ಲೆಕ್ಸ್ ವಿರುದ್ಧ ಪ್ರಕರಣ: ‘ನನ್ನ ಮನೆ ಬಳಿಯೂ ಸೇರಿದಂತೆ ಅನೇಕ ಕಡೆಗಳಲ್ಲಿ ಹಬ್ಬ, ಹೊಸವರ್ಷದ ಶುಭಾಶಯಗಳ ಫ್ಲೆಕ್ಸ್ ಹಾಕಲಾಗಿದೆ. ಯಾವುದೇ ಪಕ್ಷದವರಾಗಿರಲಿ, ನನ್ನ ಫೋಟೊ ಹಾಕಿರಲಿ ಅಥವಾ ಬೇರೆಯವರ ಫೋಟೊ ಹಾಕಿರಲಿ ಎಲ್ಲ ಅನಧಿಕೃತ ಫ್ಲೆಕ್ಸ್ ತೆರವು ಮಾಡಿ, ಪ್ರಕರಣ ದಾಖಲಿಸಲು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಲಾಗಿದೆ. ಇನ್ನು ಮುಂದೆ ಹೊಸ ಜಾಹೀರಾತು ನೀತಿ ತರಲಾಗುವುದು’ ಎಂದು ಹೇಳಿದರು.

ಅಧಿಕಾರಿ ಅಮಾನತು: ಪಿಂಚಣಿಯ ಬಾಕಿ ಮೊತ್ತ ಬಿಡುಗಡೆಗೆ ₹50 ಸಾವಿರ ಲಂಚ ಕೇಳಿದ್ದ ಬೆಸ್ಕಾಂನ ಕೆಂಗೇರಿ ವಿಭಾಗದ ಲೆಕ್ಕಾಧಿಕಾರಿ ಗಿರೀಶ್ ಅವರನ್ನು ಅಮಾನತು ಮಾಡಲು ಡಿಸಿಎಂ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಸ್ಕಾಂನಲ್ಲಿ ಕಾರ್ಯನಿರ್ವಹಿಸಿ 2007ರಲ್ಲಿ ನಿವೃತ್ತಿ ಹೊಂದಿದ್ದು, 15 ವರ್ಷಗಳಿಂದ ಪಿಂಚಣಿಗಾಗಿ ಅಲೆದು ಸುಸ್ತಾಗಿದ್ದೇನೆ ಎಂದು ಎಸ್. ಎಂ. ಗೋವಿಂದಪ್ಪ ಅವರ ದೂರಿಗೆ ಸ್ಪಂದಿಸಿದರು.

ಚಾಮರಾಜಪೇಟೆ ಭಕ್ಷಿ ಗಾರ್ಡನ್‌ನಲ್ಲಿರುವ ಮಹಾತ್ಮಗಾಂಧಿ ಅವರು ಭೇಟಿ ನೀಡಿದ ಸರ್ಕಾರಿ ಶಾಲೆಯನ್ನು ಅಭಿವೃದ್ಧಿಪಡಿಸುವಂತೆ ಪ್ರಭಾಕರ್ ಮನವಿ ಮಾಡಿದರು. ಜಕ್ಕರಾಯನಕೆರೆ ಆಟದ ಮೈದಾನದಲ್ಲಿ ಜಪ್ತಿ ಮಾಡಿಕೊಂಡಿರುವ ವಾಹನಗಳನ್ನು ಪೊಲೀಸರು ತುಂಬಿದ್ದು, ಮಕ್ಕಳಿಗೆ ಮೈದಾನವಿಲ್ಲದಂತಾಗಿದೆ ಎಂದು ಶೇಷಾದ್ರಿಪುರದ ಮುರಳಿ ಹೇಳಿದರು.

‘ಕುಂಬಳಗೋಡಿನ ದೇವಕೆರೆಯಲ್ಲಿ ಮನೆಗಳನ್ನು ಹಂಚಿಕೆ ಮಾಡಿದ್ದಾರೆ. ಆದರೆ ನಮ್ಮ ಹೆಸರಿಗೆ ನೀಡಿಲ್ಲ’ ಎಂದ ಪ್ರಕಾಶ್ ಅವರಿಗೆ, ‘ಜಮೀರ್ ಅವರೇ ಸಚಿವರು, ಅವರನ್ನ ಬಿಡಬೇಡ ಹಿಡ್ಕೊ’ ಎಂದರು.

‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಶಾಸಕ ಅಶ್ವತ್ಥನಾರಾಯಣ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ತಳ್ಳುವ ಗಾಡಿಗೆ ಮಾತ್ರ ಅವಕಾಶ

‘ಬೀದಿಬದಿ ವ್ಯಾಪಾರಿಗಳು ನೋಂದಣಿ ಮಾಡಿಸಿಕೊಂಡು, ತಳ್ಳುವ ಗಾಡಿಯಲ್ಲಿ ಮಾತ್ರ ವ್ಯಾಪಾರ ಮಾಡಬೇಕು. ಪಾದಚಾರಿ ಮಾರ್ಗದಲ್ಲಿ ಅಂಗಡಿ ಹಾಕಿಕೊಂಡರೆ ಜನ ಸಾಮಾನ್ಯರು ಎಲ್ಲಿ ಓಡಾಡಬೇಕು? ಪಾದಚಾರಿ ಮಾರ್ಗ ತೆರವು ಮಾಡುವಂತೆ ಹೈಕೋರ್ಟ್‌ನಿಂದ ಆದೇಶ ಕೂಡ ಬಂದಿದೆ. ಆ ಆದೇಶ ಪಾಲನೆ ಆಗದಿದ್ದರೆ ಪಾಲಿಕೆ ಆಯುಕ್ತರು ಜೈಲಿಗೆ ಹೋಗಬೇಕಾಗುತ್ತದೆ’ ಎಂದು ಶಿವಕುಮಾರ್ ಹೇಳಿದರು.

ಶಿವಕುಮಾರ್ ಸಿಎಂ ಆಗಲಿ: ‘ಪಾದಚಾರಿ ಮಾರ್ಗ ಒತ್ತುವರಿ ತೆರವು ಮಾಡುವ ಮೂಲಕ ಸರ್ಕಾರ ಉತ್ತಮ ಕೆಲಸ ಮಾಡುತ್ತಿದೆ. ವೃದ್ಧರಿಗೆ, ಶಾಲಾ ಮಕ್ಕಳ ಓಡಾಟಕ್ಕೆ ಇದ್ದ ತೊಂದರೆ ನಿವಾರಣೆಯಾಗಿದೆ. ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಲಿ’ ಎಂದು ಮಲ್ಲೇಶ್ವರ ವಿಧಾನಸಭೆ ಕ್ಷೇತ್ರದ ಬಿಜೆಪಿ ಶಾಸಕ ಡಾ. ಅಶ್ವತ್ಥನಾರಾಯಣ ಹೇಳಿದರು.

‘ವಿಶ್ವಧರ್ಮ ಚೇತನ ಮಂಚ್’ನಿಂದ ಸ್ಥಾಪನೆಗೆ ನಿರ್ಧಾರ

500 ಡಯಾಲಿಸ್ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನ್ಮದಿನ ಆಚರಣೆಯ ನೆಪದಲ್ಲಿ ಪ್ರಸಕ್ತ ವರ್ಷ 500 ಡಯಾಲಿಸ್ ಕೇಂದ್ರಗಳನ್ನು ಸ್ಥಾಪಿಸಲು ವಿಶ್ವಧರ್ಮ ಚೇತನ ಮಂಚ್ ನಿರ್ಧರಿಸಿರುವುದು ಶ್ಲಾಘನೀಯ ಎಂದು ತಿರುಪತಿಯ ಸಿದ್ಧಗುರು ಶ್ರೀ ಸಿದ್ದೇಶ್ವರ ಬ್ರಹ್ಮರ್ಷಿ ಗುರುದೇವ ಹೇಳಿದರು.

ನಗರದ ಅರಮನೆ ಮೈದನದಲ್ಲಿ ಗುರುದೇವ ಅವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಆನಂದ ಮಹೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪ್ರತಿಯೊಬ್ಬರ ಜೀವನವೂ ಸಮಾಜದ ಇತರ ಜನರಿಗೆ ಹಾಗೂ ಮುಂದಿನ ಪೀಳಿಗೆಗೆ ಮಾದರಿಯಾಗಿರಬೇಕು. ಒಳ್ಳೆಯ ಮನಸ್ಸಿನಿಂದ ಸಮಾಜಸೇವಾ ಕಾರ್ಯವನ್ನು ಆರಂಭಿಸಿದರೆ ಉಳಿದ ಕೆಲಸವನ್ನು ದೇವರು ಪೂರ್ಣಗೊಳಿಸುವನು. ಅಂತಹ ಮಹೋನ್ನತ ಸೇವಾ ಕಾರ್ಯವನ್ನು ವಿಶ್ವಧರ್ಮ ಚೇತನ ಮಂಚ್ ಹಮ್ಮಿಕೊಂಡಿದೆ. ಡಯಾಲಿಸ್ ಕೇಂದ್ರಗಳ ಜತೆಗೆ, 500 ಕೃತಕ ಅಂಗಗಳು, ಒಂದು ಸಾವಿರ ಯೂನಿಟ್ ರಕ್ತದಾನ ಮಾಡಲು ಮಂಚ್‌ನ ಸದಸ್ಯರು ಸಂಕಲ್ಪ ಮಾಡಿದ್ದಾರೆ. ಇಂತಹ ಕಾರ್ಯಗಳು ಹೆಚ್ಚಾಗಬೇಕು’ ಎಂದು ಹೇಳಿದರು.

ಮೊದಲ ಹಂತದಲ್ಲಿ 84 ಕೃತಕ ಅಂಗಗಳನ್ನು ಕರ್ನಾಟಕ ಮಾರ್ವಾಡಿ ಯುವ ಒಕ್ಕೂಟಕ್ಕೆ ಹಸ್ತಾಂತರಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ‘ಸಿದ್ಧಗುರುಗಳು ಪ್ರಬುದ್ಧ ಗುರುಗಳು. ಜನರ ಕಷ್ಟದುಃಖಗಳಲ್ಲಿ ಸದಾ ಭಾಗಿಯಾಗುತ್ತಾರೆ. ಸಮಾಜ ಸೇವಾ ಕಾರ್ಯಗಳ ಮೂಲಕ ಬಡವರು, ದುರ್ಬಲರ ಪರ ಕೆಲಸ ಮಾಡುತ್ತಾರೆ. ಒಳ್ಳೆಯ ಬದುಕಿಗೆ ಮಾರ್ಗದರ್ಶನ ನೀಡುತ್ತಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ದೇವನಹಳ್ಳಿ ಬಳಿ ನಿರ್ಮಾಣವಾಗುತ್ತಿರುವ ಆಶ್ರಮದ ಅಭಿವೃದ್ಧಿಗೆ ಸರ್ಕಾರದಿಂದ ನೆರವಿನ ಭರವಸೆ ನೀಡಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ವಿಶ್ವಧರ್ಮ ಚೇತನ ಮಂಚ್‌ನ ರಾಷ್ಟ್ರೀಯ ಮುಖ್ಯಸ್ಥ ರಮೇಶ್ ಸಂಖಲ, ಪ್ರಖರ್ ಗುಲೇಚಾ, ಹ್ಯಾಪಿನೆಸ್ ಆ್ಯಂಡ್ ಜಾಯ್ ಆಶ್ರಮದ ರಾಜ್‌ಕುಮಾರ್ ಸಿಪಾನಿ, ರಮೇಶ್, ಸಂಕ್ಲಾ ನಾಯೋನಲ್ ಅಧ್ಯಕ್ಷ ತೇಜರಾಜ್ ಗುಲೇಚಾ, ಸಲಹಾ ಮಂಡಳಿ ಸದಸ್ಯ ನವೀನ್ ಗಿರಿಯಾ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಆನಂದ ಮಹೋತ್ಸವ ಕಾರ್ಯಕ್ರಮದಲ್ಲಿ 84 ಕೃತಕ ಅಂಗಗಳನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರ್ನಾಟಕ ಮಾರ್ವಾಡಿ ಯುವ ಒಕ್ಕೂಟಕ್ಕೆ ಹಸ್ತಾಂತರಿಸಿದರು. ರಮೇಶ್ ಸಂಖಲ, ಪ್ರಖರ್ ಗುಲೇಚಾ,ರಾಜ್‌ಕುಮಾರ್ ಸಿಪಾನಿ, ರಮೇಶ್, ತೇಜರಾಜ್ ಗುಲೇಚಾ, ನವೀನ್ ಗಿರಿಯಾ ಉಪಸ್ಥಿತರಿದ್ದರು



ಪ್ರಕೃತಿ ಸೊಬಗು

ನಗರದ ಕಬ್ಬನ್ ಉದ್ಯಾನದಲ್ಲಿ ಮೈದುಂಬಿ ನಿಂತಿರುವ ಗುಲಾಬಿ ಬಣ್ಣದ ‘ಟಬಿಬಿಯಾ ರೋಸಿಯಾ’ ಹೂವಿನ ಸೌಂದರ್ಯಕ್ಕೆ ಮಾರುಹೋದ ವಾಯು ವಿಹಾರಿಗಳು ಮಂಗಳವಾರ ಫೋಟೊ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು

–ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಬಸವನಹಳ್ಳಿ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬಸವನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಬಿ.ಎನ್.ನರಸಿಂಹಮೂರ್ತಿ ಅವರು ಅಧ್ಯಕ್ಷರಾಗಿ ಹಾಗೂ ಬಿ.ಎನ್. ಕೃಪಾನಂದ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಬಿ.ಎ.ವರದನಾರಾಯಣ, ಬಿ.ಎ. ಪ್ರಕಾಶ್, ಬಿ.ಎಸ್.ವೆಂಕಟೇಶ್, ಸತೀಶ್, ಜೆ.ಅನಿಲ್‌ಕುಮಾರ್, ಹೇಮಣ್ಣ, ರಾಮಣ್ಣ, ಚಿಕ್ಕಣ್ಣ, ಮುನಿಚೌಡಮ್ಮ, ಚಿಕ್ಕಯಲ್ಲಮ್ಮ, ಮುನಿ ಬೈರಯ್ಯ ಅವರು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಜ. 2ರಂದು ಆಡಳಿತ ಮಂಡಳಿಗೆ ಚುನಾವಣೆ ನಡೆದು, 13 ಜನ ನಿರ್ದೇಶಕರಾಗಿ ಆಯೆಯಾಗಿದ್ದರು.

ನೂತನ ಬಸ್‌ನಿಲ್ದಾಣದ ಕಾಮಗಾರಿಯನ್ನು ಶಾಸಕ ಎನ್.ಶ್ರೀನಿವಾಸ್ ಪರಿಶೀಲಿಸಿದರು

ನೆಲಮಂಗಲ: ಕಾಮಗಾರಿ ಶೀಘ್ರ ಪೂರ್ಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬಸ್ ನಿಲ್ದಾಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಶಾಸಕ ಎನ್. ಶ್ರೀನಿವಾಸ್ ಗುತ್ತಿಗೆದಾರರಿಗೆ ಮತ್ತು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ನೂತನ ಬಸ್‌ನಿಲ್ದಾಣದ ನಿರ್ಮಾಣ ಕಾಮಗಾರಿ ಪರಿಶೀಲಿಸಿದ ಅವರು, ‘ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಾಸವಾಗಬಾರದು. ತ್ವರಿತಗತಿಯಲ್ಲಿ ಕಾಮಗಾರಿ ಪೂರೈಸಬೇಕು’ ಎಂದರು.

ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ನಿಲ್ದಾಣ ನಿರ್ಮಾಣ ಕಾಮಗಾರಿ 2025ರ ಜನವರಿಗೆ ಪೂರ್ಣಗೊಳ್ಳಲಿದೆ. ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು, ಈಗಿನ ಬಸ್ ನಿಲ್ದಾಣವನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಸಾರಿಗೆ ಅಧಿಕಾರಿಗಳು ಶಾಸಕರಲ್ಲಿ ಮನವಿ ಮಾಡಿದರು.

‘ನಿತ್ಯವೂ ರಾಜ್ಯ ಸಾರಿಗೆ ಸಂಸ್ಥೆಯ 188 ಬಸ್‌ಗಳು 50 ಟ್ರಿಪ್ ಮತ್ತು ನಗರ ಸಾರಿಗೆಯ 853 ಬಸ್‌ಗಳು 250 ಟ್ರಿಪ್ ಸಂಚರಿಸುವುದರಿಂದ ದಟ್ಟಣೆ ಹೆಚ್ಚಾಗಿ, ಕಾಮಗಾರಿಗೆ ಅಡಚಣೆಯಾಗುತ್ತಿದೆ. ನಿಲ್ದಾಣವನ್ನು ತಾತ್ಕಾಲಿಕವಾಗಿ ಸ್ಥಳಾಂತರಿಸಿದರೆ ಕಾಮಗಾರಿ ನಿರ್ವಹಿಸಲು ಸಹಕಾರಿಯಾಗುತ್ತದೆ’ ಎಂದೂ ಮನವಿ ಮಾಡಿದರು.

ಅಧಿಕಾರಿಗಳ ಮನವಿಗೆ ಸ್ಪಂದಿಸಿದ ಶಾಸಕರು, ‘ಪಟ್ಟಣದ ಬಸವಣ್ಣ ದೇವರ ಮಠದ ಮುಂಭಾಗದ ಸಹಕಾರಿ ಮಹಾಮಂಡಳದ ನಿವೇಶನಕ್ಕೆ ಸ್ಥಳಾಂತರಿಸಲು ಸಂಬಂಧಿಸಿದವರೊಂದಿಗೆ ಚರ್ಚಿಸುತ್ತೇನೆ’ ಎಂದು ಭರವಸೆ ನೀಡಿದರು. ನಗರಸಭೆ ಅಧ್ಯಕ್ಷೆ ಲತಾ ಹೇಮಂತಕುಮಾರ್, ಆಯುಕ್ತ ಮನುಕುಮಾರ್, ಪುರಸಭೆ ಮಾಜಿ ಅಧ್ಯಕ್ಷ ನಾರಾಯಣಗೌಡ, ಕಾಂಗ್ರೆಸ್ ಅಧ್ಯಕ್ಷ ವಜ್ರಘಟ್ಟ ನಾಗರಾಜು ಈ ಸಂದರ್ಭದಲ್ಲಿ ಹಾಜರಿದ್ದರು.

‘ಜೀವನದ ಪರಿಪೂರ್ಣತೆಗೆ ಪ್ರೀತಿ ಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವನದ ಪರಿಪೂರ್ಣತೆಗಾಗಿ ನಮಗೆ ಪ್ರೀತಿ, ತಾದಾತ್ಮ್ಯ ಹಾಗೂ ಪ್ರಬುದ್ಧತೆ ಬೇಕಿದೆ. ಇತರರ ನೋವಿಗೆ ಸ್ಪಂದಿಸುವ ಗುಣವನ್ನೂ ಬೆಳೆಸಿಕೊಳ್ಳಬೇಕಿದೆ’ ಎಂದು ಅಮೃತ ವಿಶ್ವ ವಿದ್ಯಾಪೀಠಂನ ಉಪ ಕುಲಪತಿ ಅಮೃತಾನಂದಮಯಿ ಹೇಳಿದರು.

ನವದೆಹಲಿಯಲ್ಲಿ ಇತ್ತೀಚೆಗೆ ಅಮೃತ ವಿಶ್ವ ವಿದ್ಯಾಪೀಠಂನಿಂದ ಹಮ್ಮಿಕೊಂಡಿದ್ದ ಅಮೃತ ಸಂಶೋಧನೆ ಮತ್ತು ಅನ್ವೇಷಣೆ ಕುರಿತ ವಿಚಾರ ಸಂಕಿರಣದಲ್ಲಿ (ಅರೈಸ್) ಅವರು ಮಾತನಾಡಿದರು.

‘ಜೀವನ ನಡೆಸಲು ಉದ್ಯೋಗ, ಹಣ, ಮನೆ ಬೇಕಿದೆ. ಆದರೆ, ಇವುಗಳಿಂದ ಬದುಕು ಪರಿಪೂರ್ಣವಾಗುವುದಿಲ್ಲ. ನಾವು ಹೊರ ಜಗತ್ತನ್ನು ನೋಡುವಂತೆ ನಮ್ಮೊಳಗಿನ ಕಣ್ಣುಗಳಿಂದ ಅಂತರಂಗವನ್ನು ನೋಡಬೇಕಿದೆ’ ಎಂದು ಸಲಹೆ ನೀಡಿದರು.

ನಾಲ್ಕು ದಿನಗಳ ಕಾಲ ನಡೆದ ವಿಚಾರ ಸಂಕಿರಣದಲ್ಲಿ ಆರೋಗ್ಯ, ಪರಿಸರ, ಮೌಲ್ಯ ಶಿಕ್ಷಣ, ಕೃತಕ ಬುದ್ಧಿಮತ್ತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಅಮೆರಿಕದ ಬಫಲೊ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ.ವೇಣು ಗೋವಿಂದರಾಜು, ಕೇಂದ್ರ ವಿಜ್ಞಾನ ಮತ್ತು ಎಂಜಿನಿಯರಿಂಗ್ ಸಂಶೋಧನಾ ಮಂಡಳಿಯ ಕಾರ್ಯದರ್ಶಿ ಡಾ.ಅಖಿಲೇಶ್ ಗುಪ್ತಾ, ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಉಪಾಧ್ಯಕ್ಷ ಡಾ.ಶಂಕರ ವೇಣುಗೋಪಾಲ, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹಿರಿಯ ನಿರ್ದೇಶಕ ಡಾ.ರಂಜಿತ್ ಕೃಷ್ಣ, ಕೇಂದ್ರ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ ಜೀವ ವಿಜ್ಞಾನಗಳ ವಿಭಾಗದ ಪ್ರಧಾನ ನಿರ್ದೇಶಕ ಡಾ.ಉಪೇಂದ್ರ ಕುಮಾರ್ ಪಾಲ್ಗೊಂಡಿದ್ದರು.

ಇದೇ ವೇಳೆ ಅಮೃತ ವಿಶ್ವ ವಿದ್ಯಾಪೀಠಂನ 24 ಸಂಶೋಧಕರನ್ನು ಸನ್ಮಾನಿಸಲಾಯಿತು.

ನವದೆಹಲಿಯಲ್ಲಿ ಇತ್ತೀಚೆಗೆ ಅಮೃತ ವಿಶ್ವ ವಿದ್ಯಾಪೀಠಂನಿಂದ ಅಮೃತ ಸಂಶೋಧನೆ ಮತ್ತು ಅನ್ವೇಷಣೆ ಕುರಿತು ವಿಚಾರ ಸಂಕಿರಣ ನಡೆಯಿತು. ಮಾತಾ ಅಮೃತಾನಂದಮಯಿ ಹಾಜರಿದ್ದರು

ಮೈಸೂರು ರೇಸ್

ಗ್ಯಾಮ ಗೆಲ್ಲುವ ನಿರೀಕ್ಷೆ

ಏರ್‌ಫೋರ್ಸ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ಯಾಮ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಕಂಟ್ರೀಸ್ ಫೇಮ್ 9, ಡಿ ಥರ್ಟೀನ್ ಟ್ವೆಲ್ವ್ 1, ಆರ್ಮಮೆಂಟ್ 2
2ನೇ ರೇಸ್: ಶಿವಾಲಿಕ್ ಸೌಂಡ್ 7, ಶೂಟಿಂಗ್ ವೀನಸ್ 4, ಸ್ಟೆಪ್ ಅಪ್ ಗರ್ಲ್ 2
3ನೇ ರೇಸ್: ಅಕ್ವಿಲಾ ಡಿ ಓರೊ 1, ರಿಯಲ್ ಶೋ 2, ಕ್ಯಾಲಿಫೋರ್ನಿಯಾ ಗೋಲ್ಡ್ 12
4ನೇ ರೇಸ್: ಎಗೆನ್ಸ್ಟ್ ಆಲ್ ಆಡ್ಸ್ 2, ಮಿಲೊಸ್ 4, ತಲ್ವಾರ್ 7
5ನೇ ರೇಸ್: ಗ್ಯಾಮ 6, ಫೆರೆಟ್ಟಿ 5, ಇಬ್ರಾಹಿಮೊವಿಕ್ 8
6ನೇ ರೇಸ್: ಸ್ಪಿರಿಚ್ಯುಯಲ್ ಫೋರ್ಸ್ 12, ಮಾರ್ಚ್ ಟು ವಿಕ್ಟರಿ 3, ಓಕರ್ 10
7ನೇ ರೇಸ್: ಅತುಲ್ಯಾ 6, ಲಕ್ಕಿ ಪಾಯಿಂಟ್ 5, ಸ್ವಿಚ್ ಇನ್ ಟೈಮ್ 2

ಉತ್ತಮ ಬೆಟ್: ಅತುಲ್ಯಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ನಗರದಲ್ಲಿ ಇಂದು

ವೆಂಕಟಪ್ಪ ಕಲಾ ಗ್ಯಾಲರಿ ಜೀರ್ಣೋದ್ಧಾರಕ್ಕೆ ಚಾಲನೆ: ಎಚ್.ಕೆ. ಪಾಟೀಲ, ಟಿ.ಕೆ. ಅನಿಲ್ ಕುಮಾರ್, ಉಪಸ್ಥಿತಿ: ಎಂ.ಆರ್. ಜೈಶಂಕರ್, ಆಯೋಜನೆ: ಬ್ರಿಗೇಡ್ ಫೌಂಡೇಷನ್, ಸ್ಥಳ: ವೆಂಕಟಪ್ಪ ಕಲಾ ಗ್ಯಾಲರಿ, ಕಸ್ತೂರಬಾ ರಸ್ತೆ, ಬೆಳಿಗ್ಗೆ 11

ಎರಡು ನಾಟಕ ಪ್ರದರ್ಶನ: ಹೇಮಂತ್ ಕುಮಾರ್ ನಿರ್ದೇಶನದ ‘ಎಬ್ಬೆಟ್ ರಾಮಕ್ಕ’, ಜಯಚಂದ್ರ ನಿರ್ದೇಶನದ ‘ಗುರು–ಶಿಷ್ಯರು’, ಆಯೋಜನೆ: ರಂಗನಾಯಕಿ ಕಲಾ ತಂಡ, ಸ್ಥಳ: ನಿರಾಶ್ರಿತರ ಪರಿಹಾರ ಕೇಂದ್ರ, ಮಾಗಡಿ ರಸ್ತೆ, ಮಧ್ಯಾಹ್ನ 2 ಮತ್ತು 3ಕ್ಕೆ

‘ಹೊರಗೆ ಬಾರೋ ರಾವಣ’ ನಾಟಕ ಪ್ರದರ್ಶನ: ನಿರ್ದೇಶನ: ಬಿ.ವಿ. ರಾಜಾರಾಂ, ಆಯೋಜನೆ: ಕಲಾ ಗಂಗೋತ್ರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಕರ್ನಾಟಕ– ಕ್ಲಿಕ್ಸ್ ಕ್ಯಾಪಿಟಲ್ ಒಪ್ಪಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಯುಬಿ ಕೋ.ಲೆಂಡ್ ಪ್ಲಾಟ್‌ಫಾರ್ಮ್ ಮೂಲಕ ಸಹ-ಸಾಲ ನೀಡಲು ಎನ್.ಬಿ.ಎಫ್.ಸಿ.ಗಳಲ್ಲಿ ಒಂದಾದ ಕ್ಲಿಕ್ಸ್ ಕ್ಯಾಪಿಟಲ್ ಜೊತೆ ಕರ್ನಾಟಕ ಬ್ಯಾಂಕ್ ಒಡಂಬಡಿಕೆ ಮಾಡಿಕೊಂಡಿದೆ.

ಈ ಒಪ್ಪಂದಕ್ಕೆ ಮಂಗಳವಾರ ಬೆಂಗಳೂರಿನಲ್ಲಿ ಸಹಿ ಹಾಕಲಾಗಿದೆ. ಈ ಬಗ್ಗೆ ಮಾತನಾಡಿದ ಕರ್ನಾಟಕ ಬ್ಯಾಂಕ್‌ನ ಎಂಡಿ ಹಾಗೂ ಸಿಇಒ ಶ್ರೀಕೃಷ್ಣನ್ ಎಚ್, ‘ಕ್ಲಿಕ್ಸ್ ಕ್ಯಾಪಿಟಲ್‌ನೊಂದಿಗೆ ಕರ್ನಾಟಕ ಬ್ಯಾಂಕ್ ಮಾಡಿಕೊಂಡಿರುವ ಸಹ-ಸಾಲ ಒಡಂಬಡಿಕೆಯು ಬ್ಯಾಂಕ್‌ನ ಶಾಖೆಗಳ ಮೂಲಕ ಉನ್ನತ ಉತ್ಪನ್ನ ಮತ್ತು ಗ್ರಾಹಕ ಸೇವೆ, ಜೊತೆಗೆ ಎಂಎಸ್‌ಎಂಇ ವಲಯಗಳ ಡಿಜಿಟಲ್ ಸಾಲ ಪ್ರಕ್ರಿಯೆಯನ್ನು ಕೇಂದ್ರೀಕರಿಸಲಿದೆ. ಈ ವ್ಯವಸ್ಥೆಯಿಂದ ಎಂಎಸ್‌ಎಂಇ ವಲಯಕ್ಕೆ ಸುಲಭದಲ್ಲಿ ಆಕರ್ಷಕ ಬಡ್ಡಿದರದಲ್ಲಿ ಸಾಲ ದೊರೆಯುತ್ತದೆ’ ಎಂದರು.

ಕರ್ನಾಟಕ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಶೇಖರ್ ರಾವ್ ಮಾತನಾಡಿ, ‘ವಿಸ್ತಾರವಾದ ಆರ್ಥಿಕ ಉತ್ಪನ್ನಗಳನ್ನು ಹಾಗೂ ಸೇವೆಗಳನ್ನು ಡಿಜಿಟಲ್ ಮಾಧ್ಯಮದ ಮೂಲಕ ಸಮರ್ಪಕವಾಗಿ ಎಂಎಸ್‌ಎಂಇ ವಲಯಕ್ಕೆ ಒದಗಿಸಲು ಈ ಪಾಲುದಾರಿಕೆಯಿಂದ ಸಹಾಯವಾಗಲಿದೆ’ ಎಂದರು. ಕ್ಲಿಕ್ಸ್ ಕ್ಯಾಪಿಟಲ್‌ನ ಸಿಇಒ ರಾಕೇಶ್ ಕೌಲ್ ಮಾತನಾಡಿ, ‘ಈ ಪಾಲು ದಾರಿಕೆಯು ಎಲ್ಲ ಎಂಎಸ್‌ಎಂಇ ವಲಯಗಳನ್ನು ತಲುಪಲು ಸಾಧ್ಯವಾಗಲಿದೆ’ ಎಂದರು.

ಕರ್ನಾಟಕ ಬ್ಯಾಂಕ್ ಮತ್ತು ಕ್ಲಿಕ್ಸ್ ಕ್ಯಾಪಿಟಲ್ ಜೊತೆಗಿನ ಒಡಂಬಡಿಕೆಗೆ ಎರಡೂ ಸಂಸ್ಥೆಗಳ ಪ್ರಮುಖರು ಬೆಂಗಳೂರಿನಲ್ಲಿ ಸಹಿ ಹಾಕಿದರು

ತಂತ್ರಜ್ಞಾನ ಪುಟ ಓದಿರಿ



ತಿರುವಳ್ಳುವರ್ ಪ್ರತಿಮೆಗೆ ಬಿ.ವೈ.ವಿಜಯೇಂದ್ರ ಮಾಲಾರ್ಪಣೆ

‘ಪ್ರತಿಮೆಗಳು ಸಹೋದರತ್ವದ ಸಂಕೇತ’

ಪ್ರಜಾವಾಣಿ ವಾರ್ತೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿರುವಳ್ಳುವರ್ ಪ್ರತಿಮೆಗೆ ಪುಷ್ಪಾರ್ಪಣೆ ಮಾಡಿದರು. ಸಂಸದ ಪಿ.ಸಿ.ಮೋಹನ್, ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಸಿ.ರಾಮಮೂರ್ತಿ ಪಾಲ್ಗೊಂಡಿದ್ದರು

ಬೆಂಗಳೂರು: ‘ನಗರದ ತಿರುವಳ್ಳುವರ್ ಮತ್ತು ಚೆನ್ನೈನ ಸರ್ವಜ್ಞನ ಪ್ರತಿಮೆಗಳು ಕನ್ನಡಿಗರು ಮತ್ತು ತಮಿಳರ ನಡುವಿನ ಸಹೋದರತ್ವದ ಸಂಕೇತ. ಬಿ.ಎಸ್. ಯಡಿಯೂರಪ್ಪ ಅವರಿಂದ ಇವುಗಳ ಅನಾವರಣ ಸಾಧ್ಯವಾಯಿತು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಹಲಸೂರು ಬಳಿ ಇರುವ ವಿಶ್ವಕವಿ ತಿರುವಳ್ಳುವರ್ ಪ್ರತಿಮೆಗೆ ಮಂಗಳವಾರ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

‘ಬೆಂಗಳೂರಿನಲ್ಲಿ ತಿರುವಳ್ಳುವರ್ ಪ್ರತಿಮೆ ಮತ್ತು ಚೆನ್ನೈನಲ್ಲಿ ಸರ್ವಜ್ಞ ಅವರ ಪ್ರತಿಮೆ ಅನಾವರಣಗೊಳ್ಳಬೇಕು ಎಂಬ ಬಗ್ಗೆ ಹಲವು ದಶಕಗಳ ಕಾಲ ಹೋರಾಟ ನಡೆಯಿತು. 18 ವರ್ಷ ಪ್ರತಿಮೆಯನ್ನು ಮುಚ್ಚಿಡಲಾಗಿತ್ತು. 2009 ರಲ್ಲಿ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಕರ್ನಾಟಕ ಮತ್ತು ತಮಿಳುನಾಡಿನ ಮಧ್ಯೆ ಸೋದರ ಭಾವನೆಯ ವೃದ್ಧಿಗಾಗಿ ಕರುಣಾನಿಧಿ ಅವರ ಜತೆ ಮಾತುಕತೆ ನಡೆಸಿದರು. ಅದರ ಪರಿಣಾಮ ಎರಡೂ ಕಡೆ ಪ್ರತಿಮೆಗಳು ಅನಾವರಣಗೊಂಡವು’ ಎಂದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ. ಮೋಹನ್, ಬಿಜೆಪಿಯ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಸಪ್ತಗಿರಿ ಗೌಡ, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಸಿ.ರಾಮಮೂರ್ತಿ ಅವರು ಭಾಗವಹಿಸಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ST.CHARLES HIGH SCHOOL (CISCE)
St. Thomas Town, Lingarajapuram
Bengaluru-560084
WE ARE HIRING
Graduate & Postgraduate Qualified Teachers
- Kindergarten : NTT & MTT Trained
- Primary: Graduates in All Subjects
- Middle & High School: Integrated Science, History, Geography & Maths
- Admin : M.Com, Computer
- Music & Dance

Apply with C.V. by 5th February, 2024.
Email:schsban@gmail.com
Contact: 080 25463987
Whatsapp : 8431553087

SIDDAGANGA SREE SHIVAKUMARA SWAMIJI VIDYA PEETHA TRUST #1,1st Stage, 2nd phase, chandra layout Bengaluru-560072. Phone: 080-23397600 invites application for (I)Siddaganga Public School, chandra layout 1.Office Assistant (Male)-Any degree with Tally ERP-9 & computer knowledge 2.Maintenance Asst (Male) Diploma in Automobile or Mechanical Engineering preferred. (II)SSK Degree College: 1.Lecturer in Commerce-M.Com with SLET 2.Physical Instructor- M.P.Ed. 3.Lab. Technician-PUC Science/B.Sc. Interview date`will`be intimated. Interested candidates may send their resume, service`& salary certificates`& Testimonials to the Mail: sskvptrust.2001 @gmail.com/ personally submit`the above`details to Trust office on or before 22/01/2024 between 9am`to`4pm

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.in

Invites Application for the following Post

Assistant Professor for P.G. Mathematics at MES Degree College, Malleshwaram,
Pay Scale: 27550-56750

Qualification: Master's Degree in relevant subject from a recognized university with a minimum of 55% Marks and PhD., (with course work included as part of the doctoral programme)
Desirable: Post-Doctoral experience & Research Publications. Previous Teaching experience at PG level in College(s) or University

1. The post has scale of pay and allowances such as HRA at 25%, Interim allowance 60%. Besides this, contribution towards PF and Gratuity as terminal benefits.
2. Applications with BIO-DATA and copies of certificates of the qualifications and experience etc., should reach the Chief Executive, MES at the above address on or before 25.01.2024 duly superscribing the envelope with "Application for the post of **"Assistant Professor for PG Mathematics"**.
3. Competency in ICT enabled teaching is necessary
4. Decision of the selection committee is final.
5. Resorting to any sort of influence will be deemed as a disqualification of the candidature.

Advt. No. MES/19/ADM-1/2024 Dated 16.01.2024 CHIEF EXECUTIVE

WANTED
Our esteemed and vibrant learning community/school in Vijayanagar, extends invitation to experienced and enthusiastic educators / teachers to join. We have multiple positions open.
- **ASSISTANT HEADMISTRESS /ADMINISTRATOR:** Minimum eight to ten years of experience, preferably with graduation in M.Sc., M.A., M.Ed.
- **ACCOUNTANT:** With degree in accountancy (B.com).
- **TEACHERS:** With a minimum of two to three years of teaching experience, graduates with B.Ed. or D.Ed.

Send resumes to the following number via WhatsApp.
9480420265

BG NATIONAL PUBLIC SCHOOL, JAKKUR LAYOUT, Opp GKVK Campus,Requires HEAD MISTRESS Qualification: Post Graduate,BEd, Experience: min 5 years Contact: 8867062154/ 9740619796 Email: bgnps@2015gmail.com

1.D.ED SPECIAL EDUCATION in any of the Category of Special Disability. 2.GRADUATION IN PSYCHOLOGY/ POST GRADUATE in Child Development/ Diploma in carrier guidance or Counselling. 9449835744/ 9535601743

ST.CHARLES WOMEN'S PU COLLEGE, is looking for well qualified and committed female post graduate Lecturers with excellent communication skills and talents for the following subjects: Physics, Chemistry, Mathematics, Biology, Computer Science, History, Economics Business studies, Accountancy, Statistic. Kannada, Hindi & English Candidates with graduation degree for admn staff can also apply. Eligible candidates can drop in your resume with passport size recent photo within 5 days to the address mentioned below: ST.CHARLES WOMEN'S PU COLLEGE, St. Thomas Town, Lingarajapuram. B'lore-84. Ph: 080-25800997, 9380264158. Email: stcharlespu@gmail.com

MOUNT CARMEL PU COLLEGE #58,Palace Road, Bengaluru-52. mails@mcpuc.edu.in Phone-22370404, requires Post-Graduates with B.Ed in ENGLISH, ECONOMICS, COMMERCE, CHEMISTRY, HOME SCIENCE,PHYSICS, PSYCHOLOGY, SOCIOLOGY and PHYSICAL EDUCATION (B.P.Ed and M.P.Ed). Apply before 29.01.2024.

MOOKAMBIKA SCHOOL, NR.Colony Wanted trained TEACHERS for All Subjects including DANCE, MUSIC, ART & CRAFT. Also CO-ORDINATOR. Fluency in English & Computer skill must. Best Salary. Send Resume to: mookambikaschool.nr@gmail.com/ Mob: 74835-54511

Walk-in

WALK IN INTERVIEW on 19th January 2024 at 10.00 am for thepost of Receptionist, Office Assistant (Any Degree with computer knowledge),Electrician (Dip/ ITI), Technical Support- Dip. in CS/ B.E (CS). V.E.T.Institutions, 14th Main, 2nd Phase, J.P. Nagar, Bengalore-78. Ph:080-26586808/26584760, E-mail:vetinst@rediffmail.com /parvathi3838@gmail.com

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

General

REQUIRED ADVOCATES
Advocates with experience of 2 years, are hereby called upon to be appointed in the Office of the undersigned. The payment for joining the Office will be on the basis of a discussion made.
V.B. SHIVAKUMAR
Advocate & Solicitor
VBS LAW INC.
#230, First Floor, 4th Main Road, Chamarajpet, Bengaluru-18.
Ph: 080-2667 8443, 2242 6644
Mobile: 98861 17443
Email: vbshivakumar_adv@yahoo.com

WANTED IMMEDIATELY PLACEMENT MANAGER, TRAVELS MANAGER, BUSINESS EXECUTIVES, RECEPTIONIST, TELECALLERS, CAB DRIVERS. Good Salary. Bengaluru South Candidates Call: 99000-54461/62

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

Om Sai Ram
NEW BALDWIN GROUP OF INSTITUTIONS
* BANASWADI * MANDUR * T.C PALYA * ANEKAL * ANEKAL TOWN * CHANDAPUR * ATTIBELE
NEW BRANCHES AT: * HSR & * (KODATIGATE) SARJAPURA
About us: NBGI having 9 Schools, 4 PU College, 2 Degree College & Upcoming University are the Pioneers in providing quality education since 1990, Our campuses are well facilitated in providing education of International standards. We are collaborated with ICSE, CBSE & Cambridge (IGCSE) Boards. We cater to Day Schooling and on campus Boarding Facilities.

PRINCIPAL/VICE PRINCIPAL
Candidates possessing with brilliant academy records. Post Graduate with 5 to 10 yrs experience & leadership qualities in reputed institution.

KINDERGARTEN - Teachers
Candidates with NTT & MTT, having experience handling KG students, should be humble and committed to provide quality & innovative teaching.

PRIMARY SCHOOL - ALL SUBJECTS
Graduated candidates with experience teaching primary classes for grade 1 to 4 - ICSE / CBSE & IGCSE streams. Should be team bounded and committed to provide quality & innovation teaching.

HIGH SCHOOL - ALL SUBJECTS
Graduate / Post graduate candidates with experience teaching High school section from grade 5 to 10 - ICSE / CBSE & IGCSE streams. Should be result oriented & committed to provide quality and innovative teaching.

Remuneration: at par with the institutional standard. With additional facilities like food & transport in the gross package.

APPLY IMMEDIATELY
Applying candidates should clearly specify the Position Applied for, branch Opted with updated resume
Contact: 98860 84799 / 78990 83463
hrcentral.nbgi@gmail.com www.newbaldwininstitutions.org

REAL ESTATE SELLING

Sites

Nagarabhavi

"SALE 40X60,30X40 MPM Layout near Ambedkar Engineering college Good location, Genuine Buyers Contact: 7760388034/ 9242135834"

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, **NURJEHAN WAHID,** Residing at Flat No. A-5, 5th Floor, Regency Park Apartment, No. 24, Hall Road, Richards Town, Frazer Town, Bengaluru-560005 have changed my name to **NOOR JEHAN WAHID** vide affidavit dt:16-01-2024, before Notary A Idinabba, Benglauru. Henceforth I shall be called **NOOR JEHAN WAHID** only.

CHANGE OF NAME
I, **VIDYARANI** W/o Late Nagaraj, D/o No. 1317560, Rank, SPR, C. Mariya Joseph, Residing at # 128, 3rd Cross, D Street, J.J.R. Nagar, Bengaluru-18 have changed my name to **IRUDIYA RANI** vide affidavit dt:09-01-2024, before Notary S I Balaguru, Bengaluru Henceforth I shall be know as **IRUDIYA RANI** only.

I, SRINIVASA. G.D. Residing at #32, Ganganahalli, Shidlaghatta, Kondenahalli, Chikkaballapur-562103 have changed my name as SHRINIVAS. G.D. vide affidavit dated 16/1/2024 before Notary Kodi-Nagappaya, Bengaluru

I, UTTARIYA MARY W/o.Late M.Chowrappa R/a#52 1st_main 20th_cross MTS_Layout KS.Town Kengeri Bangalore-560060 declare that my name was wrongly entered_as UTTARI_MARY in my Husband's PF_A/c Nominee Name Instead of my Correct Name as UTTARIYA_MARY vide`affidavit dated:2.8.2023 before`Notary Ravi,Bangalore

CHANGE OF NAME
I, **RANJINI G,** Residing at # 170, 3rd Cross, 9th Block, Nagarabhavi 2nd Stage, Bengaluru-72, declare that in some documents my name is mentioned as **RANJINI C G** & **RANJINI GOVINDA.** Both the names are pertain to me only, vide affidavit dt. 12-01-2024, before Notary G. Dayananda, Bengaluru. Henceforth I shall be called **RANJINI G** only

I, SRIDHARA MURTHY NANJUNDAPPA, R/a #545, Dharmachatra Road, Ward No. 19, Chickballapur-562101, have changed my name to SHRIDHAR MURTHY NANJUNDAPPA, vide affidavit dated 12.01.2024 before Notary K.H. Venkatappa, Chickaballapur.

CHANGE OF NAME
I, **DHANANJAYA GOWDA Y** S/o K. Yoganarasimha Swamy R/a #79/2, 3rd Cross, Nagappa Block, Srirampuram, Bangalore-560021 have changed my Name from **DHANAJAYGOWDA** to **DHANANJAYA GOWDA Y** vide affidavit dated:16.01.2024 Sworn before Notary H.R. Karunakara, Bengaluru.

I LAKSHMANA TANGADAGI, Residing at No- 1-26, GB Ramappa Building, Nagondanahalli, Whitefield, Bengaluru- 560066, have changed to New name LAKSHMANA RAMANAGOUDA TANGADAGI, vide affidavit dated 15/01/2024 before notary Veena J., Bangalore

Announcements

ANNOUNCEMENT
I, **MADHAVANKUTTY GOPALAN NAIR,** Residing at # 48/49, Thejus, 5th Cross, Nagappa Reddy Layout, Opp. St.Johns Orthodox Church, B Narayanapura, Bengaluru-16, declare that in some documents my name is mentioned as **MADHAVANKUTTY GOPALAN NAIR, MADHAVANBHAI GOPALANBHAI NAIR, MADHAVAN, MADHAVANKUTTY NAIR** all the names pertain to me only, vide affidavit dt. 08-01-2024, before Notary Rajanna S M, Bengaluru.

Lost

DOCUMENT LOST
I, **Thangamani N.** have lost my Original sale deed, bearing Site No. 209, Survey 43/1, Chalaghatta Village, Kengeri Hobli, Bangalore South. While Renovating the House. Finders Please **Contact: 9845159086**

LOST
I, KAVYA J, have lost property original Khatha Certificate document No. NPKL-1/1095/2018-2019 Dated: 06.10.2018 property situated at Nadaprabhu Kempegowda Layout, Survey No. 108, Kannalli Grama, 1st Block, Sector-H, Site No. 1095. above certificate lost on 12.1.2024 at Mallathalli, Bangalore.
If anybody found please call: 9611722829 or nearby Police Station.

EDUCATIONAL

Training

NURSERY TEACHERS TRAINING Course at JNANABHARATHI,with in Class Training 6_Months/1_year (offline/online),100% Job_Assurance. Call:6363032729

BUSINESS

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

WANTED BUSINESS Partners Gold Business 5, 10, 25 Lakhs Investment Monthly Income 1 Lakhs Contact: 8892501007/ 9606701007

CONNECT ಕ್ಲಾಸಿಫೈಡ್ಸ್

DH DECCAN HERALD
Classifieds
More value, more impact
ಪ್ರಜಾವಾಣಿ
JOB HUNT
Get your HIRING NEEDS answered
JOB
Get the right people for your company...
Book your Ad with us now !
www.dhclassifieds.com BOOK NOW
For more details contact:
+91 9901641752 | +91 9731810277 | +91 9900428036 | +91 9886213331 | +91 9845114560 | 080-45557163/164

Go, change the world
RV Institute of Management®
Approved by AICTE, New Delhi Accredited by NAAC with 'A+' grade | Autonomus Institution, Affiliated to Bengaluru City University
in collaboration with
Boston IT Solutions India Pvt. Ltd
is launching an
Industry-Curated One Year
POST GRADUATE DIPLOMA IN BUSINESS ANALYTICS (PGDBA)
Approved by Bengaluru City University
from January - February 2024
COURSE DETAILS
- Venue: **Centre for Business Analytics,** RV Institute of Management, Jayanagar, Bengaluru
- Eligibility: Graduates from any discipline
- Mode: Hybrid (Blend of Online & Offline)
- Duration: ONE year - 2 semesters of 5 months each & Two months Real World Capstone Project
- Tuition fees: Rs 1,50,000/-
- Timings: Mon to Fri: 6.30pm to 9.00pm, Sat: 2.30pm to 9.00pm

Scan QR code for Course details, to register & pay the fee
Contact Person : Prof. Mithun D J
Mob: 9844284240 Ph: 08042540300
Website : www.rvim.edu.in

ಶ್ರೇಯಾ ಹಿಯರಿಂಗ್ ಕ್ಲಿನಿಕ್ Dr. Sathya Ranna's
SHRÉYA HEARING CLINIC
SHREYA SURE SAFE !
25 ANNIVERSARY 1997-2023
Never Before offer
Purchase between 17th to 20th January
Additional two years
Shreya Active Free Extended warranty
(SAFE)
1800 425 3435
25ನೇ ವರ್ಷದ ಆಚರಣೆಯ ಕೊಡುಗೆಗಳು ಬನ್ನಿ ನಮ್ಮ ಕುಟುಂಬದ ಭಾಗವಾಗಿರಿ
ಉಚಿತ ಶ್ರವಣ ಪರೀಕ್ಷೆ ಸ್ಮಾರ್ಟ್ ಶ್ರವಣ ಸಾಧನ ಡೆಮೋ
HOME VISITS 9945633115
We believe in sound relationship...

Indiranagar	Jayanagar	Koramangala	Bannerghatta Road
2521 4746 /47/48	2653 3055 /56/ 57	2563 4411 /12/13	2648 6033 /34
Sadashivanagar	Vijayanagar	Kammanahalli	Marathalli
2361 8037 /38/ 39	9900044214 /23180011	2545 5078 /79	9686449365

ReSound GN Made for iPhone
Centers at Hyderabad , Mangaluru and Mysuru
sathya@shreyahearingclinic.com www.shreyahearingclinic.com
signia Life sounds brilliant.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರ: ಬಿಜೆಪಿ ಭದ್ರಕೋಟೆ ವಶಕ್ಕೆ 'ಕೈ' ತಂತ್ರ

ಡಿವಿಎಸ್ ನಿಲುವು ಬದಲು; ಹಲವರ ಒಲವು

• ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ರಾಜಕೀಯದಿಂದ ನೇಪಥ್ಯಕ್ಕೆ ಸರಿಯುವುದಾಗಿ ಘೋಷಿಸಿದ್ದ ಹಾಲಿ ಸಂಸದ ಡಿ.ವಿ. ಸದಾನಂದ ಗೌಡ ಬದಲಾದ ನಿಲುವು, ಬಿಜೆಪಿ-ಜೆಡಿಎಸ್ ಮೈತ್ರಿ, ಬಿಜೆಪಿ ಭದ್ರಕೋಟೆಯನ್ನು ಈ ಬಾರಿಯಾದರೂ ವಶಕ್ಕೆ ಪಡೆಯಬೇಕೆಂಬ ಕಾಂಗ್ರೆಸ್ ಲೆಕ್ಕಾಚಾರಗಳು ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಣ ಚಿತ್ರಣವನ್ನೇ ಬದಲಿಸಿದೆ.

ಒಕ್ಕಲಿಗ ಮತದಾರರು ನಿರ್ಣಾಯಕ ಸಂಖ್ಯೆಯಲ್ಲಿರುವ ಈ ಕ್ಷೇತ್ರದಿಂದ ಆ ಸಮುದಾಯದ ಅಭ್ಯರ್ಥಿಗೆ ಪಕ್ಷಗಳು ಮಣೆ ಹಾಕುವುದು ನಿಶ್ಚಿತ. ಯಾರನ್ನು ಕಣಕ್ಕಿಳಿಸಬೇಕೆಂಬ ಬಿಜೆಪಿ- ಜೆಡಿಎಸ್ ಮೈತ್ರಿಕೂಟ ಮತ್ತು ಕಾಂಗ್ರೆಸ್ ಇನ್ನೂ ನಿರ್ಧರಿಸಿಲ್ಲ. ಆದರೆ, ರಾಜಕೀಯ ಪಡಸಾಲೆಯಲ್ಲಿ ನಾನಾ ಲೆಕ್ಕಾಚಾರಗಳು, ಸಮೀಕರಣಗಳು ನಡೆಯುತ್ತಿವೆ.

ರಾಜ್ಯದ ಕೆಲವು ಬಿಜೆಪಿ ಸಂಸದರಿಗೆ ಈ ಬಾರಿ ಟಿಕೆಟ್ ಇಲ್ಲ ಎಂಬ ಮಾತು ಕೆಲವು ತಿಂಗಳುಗಳ ಹಿಂದೆ ಚಾಲ್ತಿಯಲ್ಲಿತ್ತು. ಆಗ ಬೇಸರಗೊಂಡಿದ್ದ ಸದಾನಂದಗೌಡರು ದೆಹಲಿಗೆ ದೌಡಾಯಿಸಿದ್ದರು. ಅದರೆ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಭೇಟಿಗೆ ಸಿಕ್ಕಿರಲಿಲ್ಲ. ಮರಳಿ ಬಂದ ಅವರು, 'ಇನ್ನು ಮುಂದೆ ಚುನಾವಣೆಗೆ ಸ್ಪರ್ಧಿಸುವುದಿಲ್ಲ'ವೆಂದು ಪ್ರಕಟಿಸಿದ್ದರು. ಆ ಬೆನ್ನಿಗೆ, 'ಉತ್ತರ'ಕ್ಕೆ ಬಿಜೆಪಿಯಿಂದ ಹಲವರ ಹೆಸರು ಮುನ್ನೆಲೆಗೆ ಬಂದಿದ್ದವು. ಉಡುಪಿ- ಚಿಕ್ಕಮಗಳೂರು ಸಂಸದೆ ಶೋಭಾ ಕರಂದ್ಲಾಜೆ ಮತ್ತು ವಿಧಾನಸಭೆ ಚುನಾವಣೆಯಲ್ಲಿ ಸೋಲು ಕಂಡಿರುವ ಸಿ.ಟಿ. ರವಿ ಹೆಸರು ಮುನ್ನೆಲೆಗೆ ಬಂದಿತ್ತು. ಈ ವದಂತಿ ರೆಕ್ಕೆಪುಕ್ಕ ಪಡೆಯುತ್ತಿದ್ದಂತೆ ಮತ್ತೆ ಅಖಾಡಕ್ಕಿಳಿಯುವ 'ಇಂಗಿತ' ವ್ಯಕ್ತಪಡಿಸಿದ ಗೌಡರು ಅಚ್ಚರಿ ಮೂಡಿಸಿದ್ದಾರೆ.

ಕರಂದ್ಲಾಜೆ, ರವಿ ಹೆಸರು ಕೇಳಿ ಎಚ್ಚೆತ್ತುಕೊಂಡ ಕೆಲ ಬಿಜೆಪಿ ನಾಯಕರು ಗೌಡರ ಮನಪರಿವರ್ತನೆಗೆ ಮುಂದಾದುದು ಬಿಜೆಪಿಯ ಒಳ 'ರಾಜಕಾರಣ'ವನ್ನು ಬಯಲು ಮಾಡಿದೆ. ಶಾಸಕರಾದ ಆರ್. ಅಶೋಕ, ಬಸವರಾಜ ಬೊಮ್ಮಾಯಿ, ಡಾ. ಸಿ.ಎನ್. ಅಶ್ವತ್ಥನಾರಾಯಣ, ದಾಸರಹಳ್ಳಿ ಮುನಿರಾಜು ಸೇರಿದಂತೆ ಕೆಲವರು, 'ನೀವೇ ಸ್ಪರ್ಧಿಸಿ' ಎಂದು ಸದಾನಂದಗೌಡರ ಬೆನ್ನು ಬಿದ್ದಿದ್ದರು. ಈ ಮಾತನ್ನು ಅವರೇ ಹೇಳಿಕೊಂಡಿದ್ದಾರೆ. 'ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಎಲ್ಲರೂ ಒತ್ತಾಯಿಸುತ್ತಿದ್ದಾರೆ. ಈ ಒತ್ತಡ ಮೀರಿ ನಿಲ್ಲುವಲ್ಲಿ ಯಶಸ್ವಿ ಆಗುತ್ತೇನೆಂದು ಸದ್ಯಕ್ಕೆ ಹೇಳುವುದಕ್ಕೆ ಆಗುವುದಿಲ್ಲ' ಎಂದು ಹೇಳುವ ಮೂಲಕ ಮತ್ತೊಮ್ಮೆ ಕಣಕ್ಕಿಳಿಯುವ ಬಯಕೆಯನ್ನು ಗೌಡರು ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ.

ಉಡುಪಿ- ಚಿಕ್ಕಮಗಳೂರು ಕ್ಷೇತ್ರಕ್ಕೆ ವಲಸೆ ಹೋಗುವುದಕ್ಕೂ ಮೊದಲು ಶೋಭಾ, ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಯಶವಂತಪುರ ವಿಧಾನಸಭಾ ಕ್ಷೇತ್ರವನ್ನು ಒಂದು ಅವಧಿಗೆ (2008-2013) ಪ್ರತಿನಿಧಿಸಿದ್ದರು. ಶೋಭಾ ಅವರನ್ನು ಕಣಕ್ಕಿಳಿಸಿದರೆ ಸಮರ್ಥ ಅಭ್ಯರ್ಥಿಯೊಬ್ಬರನ್ನು ಕಣಕ್ಕಿಳಿಸುವ ಜೊತೆಗೆ, ಉಡುಪಿ- ಚಿಕ್ಕಮಗಳೂರು ಕ್ಷೇತ್ರ ಮುಕ್ತವಾಗುತ್ತದೆ. ಆ ಕ್ಷೇತ್ರಕ್ಕೆ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಿದ್ದು, ಮತ್ತೊಬ್ಬರಿಗೆ ಅವಕಾಶ ಮಾಡಿಕೊಡಬಹುದು ಎಂಬ ಚಿಂತನೆಯಲ್ಲಿ ಬಿಜೆಪಿ ವರಿಷ್ಠರಿದ್ದಾರೆ ಎಂಬ ಮಾತೂ ಇದೆ. ಸಿ.ಟಿ. ರವಿ ಈ ಕ್ಷೇತ್ರದ ಪ್ರಬಲ ಆಕಾಂಕ್ಷಿಗಳಲ್ಲಿ ಒಬ್ಬರು.

ಬಿಜೆಪಿ - ಜೆಡಿಎಸ್ ಮೈತ್ರಿ ಪಕ್ಕಾ ಆಗಿರುವುದರಿಂದ ಮಂಡ್ಯ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟು ಕೊಡಬೇಕಾದ ಅನಿವಾರ್ಯ ಬಿಜೆಪಿಗೆ ಎದುರಾಗಲಿದೆ. ಆಗ ಮಂಡ್ಯದ ಹಾಲಿ ಸಂಸದೆ, ಬಿಜೆಪಿ ಸಖ್ಯದಲ್ಲಿರುವ ಸುಮಲತಾ ಅಂಬರೀಶ್ ಅವರಿಗೆ ಕ್ಷೇತ್ರ ಇಲ್ಲವಾಗುತ್ತದೆ. ಅವರಿಗೆ 'ಸುರಕ್ಷಿತ' ಕ್ಷೇತ್ರ ಎಂದರೆ ಬೆಂಗಳೂರು ಉತ್ತರ ಇದೆ. 'ನಾನು ಮಂಡ್ಯದ ಸೊಸೆ. ಕ್ಷೇತ್ರವನ್ನು ತೊರೆಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಬೆಂಗಳೂರಿನತ್ತ ಹೋಗುವುದಿಲ್ಲ' ಎಂದು ಸುಮಲತಾ ಹೇಳಿದ್ದಾರೆ.

ಸುಮಲತಾ ಅವರನ್ನು ಮನವೊಲಿಸಿ ಕಣಕ್ಕಿಳಿಸಲು ಬಿಜೆಪಿ ಮುಂದಾಗಬಹುದೇ? ಅವರು ಬೆಂಗಳೂರು ಉತ್ತರಕ್ಕೆ ಬರಬಹುದೇ? ಎಂಬ ಕುತೂಹಲವೂ ಇದೆ. ಬಿಜೆಪಿ ಕಾನೂನು ಪ್ರಕೋಷ್ಠದ ಅಧ್ಯಕ್ಷ ವಿವೇಕ್ ರೆಡ್ಡಿ ಕೂಡಾ ತಾವು ಆಕಾಂಕ್ಷಿ ಎಂದು ಬಹಿರಂಗವಾಗಿ ಹೇಳಿಕೊಂಡಿದ್ದಾರೆ. ಅಲ್ಲದೆ, ಸಾಮಾಜಿಕ ಮಾಧ್ಯಮಗಳ ಮೂಲಕ ಈಗಾಗಲೇ ಜನಸಂಪರ್ಕ ಆರಂಭಿಸಿದ್ದಾರೆ.

ಕಾಂಗ್ರೆಸ್‌ನಿಂದ ಕುಸುಮಾ ಹನುಮಂತರಾಯಪ್ಪ ಹೆಸರು ಪ್ರಮುಖವಾಗಿದೆ. ವಿಧಾನ ಸಭೆ ಚುನಾವಣೆಯಲ್ಲಿ ಆರ್.ಆರ್. ನಗರ ಕ್ಷೇತ್ರದಲ್ಲಿ ಎರಡು ಬಾರಿ ಸೋಲುಕಂಡಿರುವ ಅವರು, 'ನಾನು ಆಕಾಂಕ್ಷಿಯಲ್ಲ' ಎಂದು ಹೇಳಿಕೊಂಡಿದ್ದಾರೆ. ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಸಂಸದ ಡಿ.ಕೆ. ಸುರೇಶ್ ಅವರಿಗೆ ಬೆಂಗಳೂರು ಉತ್ತರದ ಟಿಕೆಟ್ ನೀಡಿ ಇಲ್ಲಿನ ಪರಿಸ್ಥಿತಿ ಅವಲೋಕಿಸಿದ್ದಾರೆ. ಹಾಗಾದಲ್ಲಿ, ಗ್ರಾಮಾಂತರ ಕ್ಷೇತ್ರದಿಂದ ಕುಸುಮಾ ಅವರನ್ನು ಕಣಕ್ಕಿಳಿಸುವ ಬಗ್ಗೆಯೂ ಕಾಂಗ್ರೆಸ್‌ನಲ್ಲಿ ಚರ್ಚೆ ನಡೆಯುತ್ತಿದೆ. ಈ ಮಧ್ಯೆ, ಯಶವಂತಪುರ ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಅವರನ್ನು ಪಕ್ಷಕ್ಕೆ ಸೆಳೆಯಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ.

ಬಿಜೆಪಿ-ಕಾಂಗ್ರೆಸ್ ಸಮಬಲ

ಹಾಗೆ ನೋಡಿದರೆ, ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸಮಬಲ ಹೊಂದಿದೆ. ಎಂಟು ವಿಧಾನಸಭಾ ಕ್ಷೇತ್ರಗಳಿರುವ ಈ ಕ್ಷೇತ್ರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ 5ರಲ್ಲಿ ಬಿಜೆಪಿ, 3ರಲ್ಲಿ ಕಾಂಗ್ರೆಸ್ ಗೆದ್ದಿದೆ. ಒಕ್ಕಲಿಗ ಮತಗಳೇ ದೊಡ್ಡ ಶಕ್ತಿಯಾಗಿರುವ ಕ್ಷೇತ್ರದಲ್ಲಿ ಡಿ.ಕೆ. ಶಿವಕುಮಾರ್ ಪರ ಮತಗಳ ಕ್ರೋಡೀಕರಣ, ಎಸ್.ಟಿ. ಸೋಮಶೇಖರ್ ಬೆಂಬಲಿಗರ ಬೆಂಬಲ, 'ಗ್ಯಾರಂಟಿ' ಯೋಜನೆಗಳ ಜನಪ್ರಿಯತೆ 'ಕೈ' ಹಿಡಿದರೆ ಕುಸುಮಾ ಅಥವಾ ಡಿ.ಕೆ. ಸುರೇಶ್ ಗೆಲುವಿನ ದಡ ದಾಟಬಹುದೆಂಬ ಲೆಕ್ಕಾಚಾರ ಕಾಂಗ್ರೆಸ್‌ನವರದ್ದಾಗಿದೆ.



ಡಿ.ವಿ. ಸದಾನಂದಗೌಡ

ಸಂವಿಧಾನ ಜಾಗೃತಿ: ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನವರಿ 26ರಿಂದ ಎರಡು ತಿಂಗಳು ನಡೆಯುವ ಸಂವಿಧಾನ ಜಾಗೃತಿ ಜಾಥಾವನ್ನು ಯಶಸ್ವಿಗೊಳಿಸಲು ಜಿಲ್ಲಾ ಮಟ್ಟದಲ್ಲಿ ಸಿದ್ಧತೆ ನಡೆಸುವಂತೆ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹಾಗೂ ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

ಜಾಥಾ ಪೂರ್ವ ತಯಾರಿ ಕುರಿತು ಪರಿಶೀಲನೆ ನಡೆಸಲು ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಜತೆ ಮಂಗಳವಾರ ವಿಡಿಯೊ ಕಾನ್ಫರೆನ್ಸ್ ನಡೆಸಿದ ಸಚಿವರು, ಸಿದ್ಧತೆಗಳನ್ನು ಚುರುಕುಗೊಳಿಸುವಂತೆ ಸೂಚಿಸಿದರು.

'ಎಲ್ಲ ಜಿಲ್ಲೆಗಳಲ್ಲೂ ಜಾಥಾ ಸಂಚರಿಸುವ ಮಾರ್ಗಗಳ ಪಟ್ಟಿಯನ್ನು ಅಂತಿಮಗೊಳಿಸಬೇಕು. ಯುವಜನರು, ಮಹಿಳೆಯರು ಸೇರಿದಂತೆ ಎಲ್ಲ ಜನರನ್ನೂ ತಲುಪುವಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಸಂವಿಧಾನದ ಪ್ರಸ್ತಾವನೆಯ ಮುದ್ರಿತ ಪ್ರತಿಗಳನ್ನು ವಿತರಿಸಬೇಕು' ಎಂದು ಸೂಚಿಸಿದರು.

'ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸಿ ಕಾರ್ಯಕ್ರಮದ ರೂಪುರೇಷೆ ನಿರ್ಧರಿಸಬೇಕು. ಆಯಾ ಪ್ರದೇಶದಲ್ಲಿನ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸ್ತಬ್ಧ ಚಿತ್ರದ ಮೆರವಣಿಗೆಯಲ್ಲಿ ಪ್ರದರ್ಶಿಸಬೇಕು. ಆಯಾ ಜಿಲ್ಲೆಯಲ್ಲಿನ ಸರ್ಕಾರೇತರ ಸಂಸ್ಥೆಗಳು, ವಿವಿಧ ಸಂಘಟನೆಗಳನ್ನೂ ಒಳಗೊಳ್ಳಬೇಕು' ಎಂದು ಮಹದೇವಪ್ಪ ನಿರ್ದೇಶನ ನೀಡಿದರು.

ನೈಋತ್ಯ ರೈಲ್ವೆ

ಟೆಂಡರು ಅಧಿಸೂಚನೆ ಸಂ. 01/2024, ದಿನಾಂಕ: 12.01.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8236672	ಎಸ್‌ಡಬ್ಲ್ಯೂಆರ್–ಝಡ್‌ಹೆಚ್‌ಕ್ಯೂಇಎಲ್‌ಇಸಿ(ಜಿಎಸ್)/33/2021–ಓ/ಒ. ಸಿಹೆಚ್ಯ. ಓಎಸ್/ಓ/ಪಿಸಿಇಇ/ಎಸ್‌ಡಬ್ಲ್ಯೂಆರ್ ದಿನಾಂಕ 14.09.2023ರ ನಿರ್ಧಿಷ್ಟತೆಯಂತೆ ಮತ್ತು ಅನುಸಾರವಾಗಿ, ಎರಡು ವರ್ಷಗಳ ವಾರಂಟಿ ಮತ್ತು **ಪರಿಮಾಣ: (24+6) ಸಂಖ್ಯೆಯ** ಸಮಗ್ರವಾದ ವಾರ್ಷಿಕ ನಿರ್ವಹಣೆ ಒಪ್ಪಂದದೊಂದಿಗೆ ಮಶೀನ್ ರೂಂ ರಹಿತ ಮತ್ತು ಗಿಯರ್ ರಹಿತವಾದ 20 ಜನರನ್ನು ಸಾಗಿಸುವ ಸಾಮರ್ಥ್ಯವುಳ್ಳ ಹೆವಿ ಡ್ಯೂಟಿ ಎಲಿವೇಟರ್‌ನ ವಿನ್ಯಾಸ, ತಯಾರಿಕೆ, ಪೂರೈಕೆ, ಸ್ಥಾಪನೆ, ಪರಿಶೀಲನೆ, ಕಾರ್ಯಾರಂಭ ಮತ್ತು ನಿರ್ವಹಣೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ/ಟೆಂಡರ್‌ನ ಕೊನೆಯ ದಿನಾಂಕ: **06.02.2024, 10.30 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/629/AAD/PRB/SWR/2023-24 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರು ಅಧಿಸೂಚನೆ ಸಂ. 46/2023, ದಿನಾಂಕ: 11.01.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ: **ಟೆಂಡರು ಮುಕ್ತಾಯ ದಿನಾಂಕ: 10.30 ಗಂಟೆಗೆ**

ಕ್ರ.ಸಂ.	ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ	ಟೆಂಡರು ಕೊನೆಯ ದಿನಾಂಕ
1	ಎಲ್8236320ಬಿ	ಆರ್‌ಡಿಎಸ್‌ಓ ನಿರ್ಧಿಷ್ಟತೆ ಸಂ. ಆರ್‌ಡಿಎಸ್‌ಓ/ಎಸ್‌ಪಿಎನ್/ಟಿಸಿ–94/2010 ರೆವ. 1.0 ಅಥವಾ ಇತ್ತೀಚಿನ ನಿರ್ಧಿಷ್ಟತೆಯನುಸಾರ ಎಕ್ಸ್–ರೇ ಬ್ಯಾಗೇಜ್ ಸ್ಕ್ಯಾನರ್. **ಪರಿಮಾಣ: 02 ಸಂ.**	05.02.2024
2	ಎಲ್8245066	ಇಂಟಿಗ್ರೇಟೆಡ್ ಪವರ್ ಸಪ್ಲೈ (ಐಪಿಎಸ್) ಎಸ್‌ಎಂಪಿಎಸ್ 6 ಲೈನ್‌ಗಳ ಆಧಾರಿತ ವ್ಯವಸ್ಥೆಯ ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭಗೊಳಿಸುವುದು. **ಪರಿಮಾಣ: 01 ಸಂ.**	31.01.2024
3	ಎಲ್8245052	ಸ್ಟಾರ್ 2 (ಇಇಎಲ್–3/5 ಸ್ಟಾರ್) ರೇಟಿಂಗ್‌ನ ಹೊರಾಂಗಣ ಮಾದರಿಯ ಡಿಸ್ಟ್ರಿಬ್ಯೂಷನ್ ಟ್ರಾನ್ಸ್‌ಫಾರ್ಮರ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆಯ ಮೇಲಿನ ಮೇಲ್ವಿಚಾರಣೆ, ಪರಿಶೀಲನೆ ಮತ್ತು ಕಾರ್ಯಾರಂಭಗೊಳಿಸುವುದು. **ಪರಿಮಾಣ: 02 ಸಂ.**	05.02.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/628/AAD/PRB/SWR/2023-24 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ಬೆಂಗಳೂರು ಶಿಕ್ಷಕರ ಕ್ಷೇತ್ರ: ಫೆ. 16ರಂದು ಚುನಾವಣೆ

ಕಾಂಗ್ರೆಸ್‌ನಿಂದ ಪುಟ್ಟಣ್ಣ ಕಣಕ್ಕೆ • ಫೆ. 20ಕ್ಕೆ ಮತ ಎಣಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಗೂ ಮುನ್ನ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದ ಪುಟ್ಟಣ್ಣ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ನೂತನ ಪ್ರತಿನಿಧಿ ಆಯ್ಕೆಗೆ ಫೆಬ್ರುವರಿ 16ರಂದು ಮತದಾನ ನಡೆಯಲಿದೆ.

ಮಾರ್ಚ್‌ನಲ್ಲಿ ಪುಟ್ಟಣ್ಣ ರಾಜೀನಾಮೆ ನೀಡಿದ್ದರು. ಆಗಿನಿಂದ ಈ ಕ್ಷೇತ್ರ ಖಾಲಿ ಇದೆ. ಬೆಂಗಳೂರು ಶಿಕ್ಷಕರ ಕ್ಷೇತ್ರದ ಉಪ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗವು ಮಂಗಳವಾರ ವೇಳಾಪಟ್ಟಿ ಪ್ರಕಟಿಸಿದೆ. 2026ರ ನವೆಂಬರ್ 11ರವರೆಗಿನ ಉಳಿದ ಅವಧಿಗೆ ಸೀಮಿತವಾಗಿ ಈ ಉಪ ಚುನಾವಣೆ ನಡೆಯಲಿದೆ.

ಜನವರಿ 23ರಂದು ಚುನಾವಣಾ ಅಧಿಸೂಚನೆ ಹೊರಬೀಳಲಿದ್ದು, ಅಂದಿನಿಂದಲೇ ನಾಮಪತ್ರ ಸಲ್ಲಿಕೆ ಆರಂಭವಾಗುತ್ತದೆ. ನಾಮಪತ್ರ ಸಲ್ಲಿಸಲು ಜ.30 ಕೊನೆಯ ದಿನ. ಜ.31ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಫೆಬ್ರುವರಿ 2 ಕೊನೆಯ ದಿನ. ಫೆ. 16ರಂದು ಬೆಳಿಗ್ಗೆ 8ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದೆ. ಫೆ. 20ರಂದು ಮತ ಎಣಿಕೆ ನಡೆಯಲಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರ ಪ್ರಕಟಣೆ ತಿಳಿಸಿದೆ.

ನೀತಿಸಂಹಿತೆ ಜಾರಿ: ಬೆಂಗಳೂರು ಶಿಕ್ಷಕರ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಬಿಬಿಎಂಪಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಮಂಗಳವಾರದಿಂದಲೇ (ಜ.16) ಚುನಾವಣಾ ನೀತಿಸಂಹಿತೆ ಜಾರಿಗೆ ಬಂದಿದೆ.

ಪುಟ್ಟಣ್ಣ ಕೈ ಅಭ್ಯರ್ಥಿ: ಕಾಂಗ್ರೆಸ್‌ನಿಂದ ಪುಟ್ಟಣ್ಣ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ಜೆಡಿಎಸ್‌ನಿಂದ ಅನೇಕ ಬಾರಿ ಗೆದ್ದಿದ್ದ ಪುಟ್ಟಣ್ಣ ಅವರು, ಹಿಂದಿನ ಚುನಾವಣೆ ವೇಳೆ ಬಿಜೆಪಿ ಸೇರಿ, ಗೆಲುವು ಸಾಧಿಸಿದ್ದರು. ವಿಧಾನಸಭೆ ಚುನಾವಣೆ ವೇಳೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಸೇರಿದ್ದರು. ರಾಜಾಜಿನಗರ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದರು.

ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ?

ಬಿಜೆಪಿ– ಜೆಡಿಎಸ್ ಮೈತ್ರಿ ಮಾಡಿಕೊಂಡಿರುವುದರಿಂದ ಮೈತ್ರಿಕೂಟದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆ ನಡೆದಿದೆ. ಈ ಕುರಿತು ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪಕ್ಷದ ಹಿರಿಯರು ಮತ್ತು ಪದಾಧಿಕಾರಿಗಳ ಜತೆ ಸಭೆ ನಡೆಸಲಿದ್ದಾರೆ.

ಆ ಬಳಿಕ ಎಚ್.ಡಿ.ಕುಮಾರ ಸ್ವಾಮಿ ಅವರ ಜತೆಗೂ ಮಾತುಕತೆ ನಡೆಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಪುಟ್ಟಣ್ಣ

19ರಿಂದ 21ರವರೆಗೆ 'ಉದ್ಯಮಿ ಒಕ್ಕಲಿಗ' ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫಸ್ಟ್ ಸರ್ಕಲ್ ಸೊಸೈಟಿಯು ಇದೇ 19ರಿಂದ 21ರವರೆಗೆ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ 'ಉದ್ಯಮಿ ಒಕ್ಕಲಿಗ' ಸಮಾವೇಶ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸೊಸೈಟಿ ಅಧ್ಯಕ್ಷ ನಂದೀಶ ರಾಜೇಗೌಡ, '19ರಂದು ಬೆಳಿಗ್ಗೆ 10 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮಾವೇಶ ಉದ್ಘಾಟಿಸಲಿದ್ದು, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದರು.

'ನೂತನ ಜಾಲತಾಣವನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಲೋಕಾರ್ಪಣೆ ಮಾಡಲಿದ್ದಾರೆ. ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ' ಎಂದರು.

'ಸಮಾವೇಶದಲ್ಲಿ ನೂರಕ್ಕೂ ಅಧಿಕ ಒಕ್ಕಲಿಗ ಉದ್ಯಮಿಗಳ ಮಳಿಗೆಗಳು ಇರಲಿವೆ. ಶಿಕ್ಷಣ, ಆರೋಗ್ಯ, ಕೈಗಾರಿಕೆ ಸೇರಿ ವಿವಿಧ ಕ್ಷೇತ್ರಗಳ ಬಗ್ಗೆ ಚಿಂತನ–ಮಂಥನ ನಡೆಯಲಿದೆ. ಈ ಬಾರಿ ಒಕ್ಕಲಿಗರ ಆಹಾರ ಪದ್ಧತಿ ವಿಶೇಷ ಆಕರ್ಷಣೆಯಾಗಲಿದೆ.

'ರಾಗಿ ಮುದ್ದೆ ಊಟ'ಕ್ಕೆ ಭೌಗೋಳಿಕ ಸೂಚ್ಯಂಕಕ್ಕೂ (ಜಿಐ ಟ್ಯಾಗ್) ಸಮಾವೇಶದಲ್ಲಿ ಒತ್ತಾಯಿಸಲಾಗುವುದು. 19ರ ಸಂಜೆ 'ದೇವಿ ಮಹಾತ್ಮೆ' ಮೂಡಲಪಾಯ ಯಕ್ಷಗಾನ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

'ತಮಿಳುನಾಡಿನಿಂದಲೂ ಒಕ್ಕಲಿಗ ಉದ್ಯಮಿಗಳು ಬರಲಿದ್ದಾರೆ. ಕರ್ನಾಟಕ ಮತ್ತು ತಮಿಳುನಾಡು ಒಕ್ಕಲಿಗ ಉದ್ಯಮಿಗಳ ಸಮನ್ವಯಕ್ಕಾಗಿ ಪ್ರತ್ಯೇಕ ಚರ್ಚೆ ಹಮ್ಮಿಕೊಳ್ಳಲಾಗುತ್ತದೆ. ಮೂರು ದಿನಗಳ ಸಮಾವೇಶದಲ್ಲಿ 20 ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಗಂಗವಾಡಿ ರಾಜ ವಂಶದ ಲಾಂಛನವನ್ನು ಸಮಾವೇಶದ ಆಕರ್ಷಣೆಯಾಗಿ ಬಳಸಿಕೊಳ್ಳಲಾಗುತ್ತದೆ' ಎಂದರು.

'ಕೊಬ್ಬರಿ ಬೆಂಬಲ ಬೆಲೆ: ಚರ್ಚೆ'

ತುಮಕೂರು: ಕೊಬ್ಬರಿ ಬೆಂಬಲ ಬೆಲೆ ಹೆಚ್ಚಳ ಮಾಡುವಂತೆ ಒತ್ತಡ ಬರುತ್ತಿದ್ದು, ಕ್ವಿಂಟಲ್ ದರ ₹15 ಸಾವಿರಕ್ಕೆ ಏರಿಕೆ ಮಾಡುವ ಬಗ್ಗೆ ಜ.18ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ನಿರ್ಧರಿಸಲಾಗುವುದು ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು. ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕೊಬ್ಬರಿ ಬೆಂಬಲ ಬೆಲೆ ಹೆಚ್ಚಿಸುವಂತೆ ತೆಂಗು ಬೆಳೆಯುವ ಪ್ರದೇಶದ ಸಚಿವರು ಒಟ್ಟಾಗಿ ಒತ್ತಾಯ ತರಲಿದ್ದೇವೆ. ಗೃಹ ಸಚಿವ ಜಿ.ಪರಮೇಶ್ವರ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮತ್ತು ಕೊಬ್ಬರಿ ಬೆಳೆಯುವ ಪ್ರದೇಶದ ಸಚಿವರ ಜತೆಗೆ ಈಗಾಗಲೇ ಚರ್ಚಿಸಲಾಗಿದೆ' ಎಂದು ಹೇಳಿದರು.

19ಕ್ಕೆ ಬೆಂಗಳೂರಿಗೆ ಪ್ರಧಾನಿ ಮೋದಿ

ಬೆಂಗಳೂರು: ದೇವನಹಳ್ಳಿಯಲ್ಲಿ ನಿರ್ಮಾಣಗೊಂಡಿರುವ ಬೋಯಿಂಗ್ ವಿಮಾನ ಕಂಪನಿಯ ಜಾಗತಿಕ ಎಂಜನಿಯರಿಂಗ್ ಟೆಕ್ನಾಲಜಿ ಇನೊವೇಷನ್ ಕ್ಯಾಂಪಸ್ ಅನ್ನು ಪ್ರಧಾನಿ ನರೇಂದ್ರ ಮೋದಿ ಜ.19ರಂದು ಉದ್ಘಾಟಿಸಲಿದ್ದಾರೆ. ಮೋದಿಯವರ ಭೇಟಿಯ ಕಾರಣ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸಭೆಯನ್ನು ರದ್ದುಪಡಿಸಲಾಗಿದೆ. ಮೋದಿ ಯವರಿಗೆ ದೊಡ್ಡ ಪ್ರಮಾಣದಲ್ಲಿ ಸ್ವಾಗತ ನೀಡುವ ಸಂಬಂಧ ಸಭೆ ನಡೆಸಿ ಚರ್ಚಿಸಲಾಯಿತು ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ತಿಳಿಸಿದ್ದಾರೆ.

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 11-SNT-MYS-2023

ದಿನಾಂಕ: 11.01.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಮೈಸೂರು ವಿಭಾಗೀಯ ಕಚೇರಿ ಕಟ್ಟಡದ ಪಾರಂಪರಿಕ ಕಟ್ಟಡದ ಸಂರಕ್ಷಣೆ ಮತ್ತು ಪುನ:ಸ್ಥಾಪನೆಯ ಅಂಗವಾಗಿ ನೆಟ್‌ವರ್ಕ್ ಮತ್ತು ದೂರವಾಣಿ ಕೇಬಲ್‌ಗಳನ್ನು ಸ್ಥಳಾಂತರಿಸುವುದು.	ರೂ. 10,48,468/-
2	ಮೈಸೂರು ವಿಭಾಗದಲ್ಲಿ ಬರುವ ಹಾಸನ, ಅರಸೀಕೆರೆ, ಬೀರೂರು–ಸಂಪಿಗೆ ರೋಡ್ ಮತ್ತು ಬೀರೂರು–ತಾಳಗುಪ್ಪ ವಿಭಾಗಗಳಲ್ಲಿ ವಿಐಪಿ – ಟಿಸಿಸಿಎಸ್ ವ್ಯವಸ್ಥೆಯ ಬೋರ್ಡ್–3ರಲ್ಲಿ ಒಂದು ವರ್ಷದ ಅವಧಿಗೆ ಸಮಗ್ರವಾದ ವಾರ್ಷಿಕ ನಿರ್ವಹಣಾ ಗುತ್ತಿಗೆ.	ರೂ. 8,50,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **02.02.2024, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಿಗ್ನಲ್ & ದೂರಸಂಪರ್ಕ ಇಂಜಿನಿಯರ್ ಮೈಸೂರು

PUB/627/AAD/PRB/SWR/2023-24

South Western Railway - SWR | SWRRLY | SWRRLY

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,

ನಿರ್ಮಾಣ ಮತ್ತು ನಿರ್ವಹಣೆ ವಿಭಾಗ

ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು–560008. ದೂ: 080–25037 131/174/214

ದಿನಾಂಕ: 16.01.2024

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು	ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್, ಬೆಂಗಳೂರು ಇದರ ವಿವಿಧ ಸೌಲಭ್ಯಗಳಿಗೆ 2 ಟಿಆರ್ ಇನ್‌ವರ್ಟರ್ ಟೈಪ್ ಸ್ಪ್ಲಿಟ್ ಎ/ಸಿ ಯೂನಿಟ್‌ಗಳ ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾಚರಣೆಗೊಳಿಸುವುದು
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಡಿ/ಎಲ್‌ಪಿಎಸ್‌ಸಿ(ಬಿ)/ಎಸಿ/ಎಂಇ/33/2023–24 ದಿನಾಂಕ: 16.01.2024
ಅಂದಾಜು ಮೊತ್ತ	₹ 22.54 ಲಕ್ಷಗಳು
ಪೂರ್ಣಗೊಳಿಸುವ ಅವಧಿ	1 ತಿಂಗಳು
ಮಾರಾಟದ ಅವಧಿ	17.01.2024 ರಿಂದ 30.01.2024 ರ ವರೆಗೆ
ಇಎಂಡಿ	₹ 45,080/-

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಿಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗಾಗಿ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ನೋಡಬಹುದು ಹಾಗೂ ವೆಬ್‌ಸೈಟ್ www.isro.gov.in, www.lpsc.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)

ಖಾಲಿ ಹುದ್ದೆ ಭರ್ತಿಗೆ ಆಗ್ರಹ: ನಾಳೆ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಸೇಷನ್ (ಎಐಡಿವೈಒ) ಆಗ್ರಹಿಸಿದ್ದು, ಇದೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಾ ಧರಣಿ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಡಿವೈಒ ಉಪಾಧ್ಯಕ್ಷ ಜಿ.ಎಸ್. ಕುಮಾರ್, 'ಪ್ರತಿಭಟನಾ ಧರಣಿಯಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಲೋಕಾಯುಕ್ತ ನ್ಯಾ.ಎನ್. ಸಂತೋಷ್ ಹೆಗ್ಡೆ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಟಿ.ಆರ್. ಚಂದ್ರಶೇಖರ್, ಲೇಖಕ ನಾ. ದಿವಾಕರ್ ಹಾಗೂ ಚಲನಚಿತ್ರ ನಿರ್ದೇಶಕ ಬಿ. ಸುರೇಶ್ ಭಾಗವಹಿಸಲಿದ್ದಾರೆ' ಎಂದರು.

ಭಾಷಣಕಾರರಾಗಿ ಎಐಡಿವೈಒ ಅಖಿಲ ಭಾರತ ಉಪಾಧ್ಯಕ್ಷರಾದ ರಾಜಗೋಪಾಲ್, ಜಿ.ಎಸ್. ಕುಮಾರ್, ರಾಜ್ಯಾಧ್ಯಕ್ಷ ಶರಣಪ್ಪ ಉದ್ಬಾಳ್, ರಾಜ್ಯ ಕಾರ್ಯದರ್ಶಿ ಸಿದ್ದಲಿಂಗ ಬಾಗೇವಾಡಿ ಪಾಲ್ಗೊಳ್ಳಲಿದ್ದಾರೆ' ಎಂದು ಹೇಳಿದರು.

'ಯುವಜನರು ನಿರುದ್ಯೋಗದ ಸುಳಿಯಲ್ಲಿ ಸಿಲುಕಿದ್ದಾರೆ. ದಿನೇ ದಿನೇ ನಿರುದ್ಯೋಗಿಗಳ ಪ್ರಮಾಣ ಹೆಚ್ಚುತ್ತಲೇ ಇದೆ. ಆದ್ದರಿಂದ ಕೇಂದ್ರ ಸರ್ಕಾರದ ವಿವಿಧ ಸಚಿವಾಲಯಗಳಲ್ಲಿ ಖಾಲಿಯಿರುವ 9.64 ಲಕ್ಷ ಹುದ್ದೆ ಹಾಗೂ ರಾಜ್ಯ ಸರ್ಕಾರದ ಶಿಕ್ಷಣ, ಆರೋಗ್ಯ ಸೇರಿ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.58 ಲಕ್ಷ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಈ ವರ್ಷ ತೀವ್ರ ಬರಗಾಲ ಇರುವುದರಿಂದ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವರ್ಷದಲ್ಲಿ ಕನಿಷ್ಠ 200 ದಿನಗಳು ಕೆಲಸ ನೀಡಿ, ದಿನಗೂಲಿಯನ್ನು ₹ 600ಕ್ಕೆ ಹೆಚ್ಚಿಸಬೇಕು' ಎಂದು ಆಗ್ರಹಿಸಿದರು.

'ಕರ್ನಾಟಕ ಲೋಕಸೇವಾ ಆಯೋಗವನ್ನು (ಕೆಪಿಎಸ್‌ಸಿ) ಭ್ರಷ್ಟಾಚಾರದಿಂದ ಮುಕ್ತಗೊಳಿಸಲು ಹೋಟಾ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ನಡೆದಿರುವ ಹಗರಣಗಳನ್ನು ಸಮಗ್ರ ತನಿಖೆಗೆ ಒಳಪಡಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಬೇಕು' ಎಂದು ಒತ್ತಾಯಿಸಿದರು.

ನಾದಜ್ಯೋತಿ ವಾರ್ಷಿಕ ಪ್ರಶಸ್ತಿ ಪ್ರಕಟ

ಕೆ.ನರಸಿಂಹ ಮೂರ್ತಿ

ರಂಜನಿ ವಾಸುಕಿ

ಅನಸೂಯ

ಬೆಂಗಳೂರು: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್ ನೀಡುವ 'ಜೀವಮಾನ ಸಾಧನೆ' ಪುರಸ್ಕಾರಕ್ಕೆ ಆಂಕ್‌ಲಂಗ್ ವಾದಕಿ ಎಚ್.ಎಸ್. ಅನಸೂಯ ಕುಲಕರ್ಣಿ, 'ಕಲಾಜ್ಯೋತಿ ಪ್ರಶಸ್ತಿ'ಗೆ ಮೈಸೂರಿನ ಖ್ಯಾತ ಪಿಟೀಲು ವಾದಕ ಕೆ. ನರಸಿಂಹಮೂರ್ತಿ ಮತ್ತು 'ನಾದಜ್ಯೋತಿ ಪುರಸ್ಕಾರ'ಕ್ಕೆ ಗಾಯಕಿ ರಂಜನಿ ವಾಸುಕಿ ಆಯ್ಕೆಯಾಗಿದ್ದಾರೆ.

'ಜೀವಮಾನ ಸಾಧನೆ', 'ಕಲಾಜ್ಯೋತಿ ಪ್ರಶಸ್ತಿ'ಯು ತಲಾ ₹ 20 ಸಾವಿರ ನಗದು, ಪ್ರಶಸ್ತಿ ಪತ್ರ ಹಾಗೂ 'ನಾದಜ್ಯೋತಿ ಪುರಸ್ಕಾರ'ವು ₹ 15 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಫೆ.17ರಂದು ಮಲ್ಲೇಶ್ವರದ 9ನೇ ಕ್ರಾಸ್‌ನಲ್ಲಿರುವ ಶ್ರೀರಾಮ ಮಂದಿರದಲ್ಲಿ ನಡೆಯುವ ಸಂಗೀತ ಸಭಾ ಟ್ರಸ್ಟ್‌ನ 59ನೇ 'ಸಂಗೀತ ಸಂಭ್ರಮ' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್ ಕಾರ್ಯದರ್ಶಿ ಕಟ್ಟೆ ಸತ್ಯನಾರಾಯಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಣಿಗಲ್ ಕುದುರೆ ಫಾರಂ ರಕ್ಷಣೆಗೆ ಇಂದಿನಿಂದ ಹೋರಾಟ

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ಇಲ್ಲಿಯ ಕುದುರೆ ತಳಿ ಸಂವರ್ಧನಾ ಕೇಂದ್ರ (ಸ್ಟಡ್ ಫಾರಂ) ರಕ್ಷಣೆ ಉದ್ದೇಶದೊಂದಿಗೆ ಅಸ್ತಿತ್ವಕ್ಕೆ ಬಂದಿರುವ ಹೋರಾಟ ಸಮಿತಿ ಜ. 17ರಿಂದ ಹೋರಾಟ ಹಮ್ಮಿಕೊಂಡಿದೆ.

ಹೋರಾಟದ ಅಂಗವಾಗಿ ಪ್ರತಿಭಟನಾ ಮೆರವಣಿಗೆ ಮತ್ತು ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಸಂಚಾಲಕ ಜಿ.ಕೆ.ನಾಗಣ್ಣ ತಿಳಿಸಿದ್ದಾರೆ.

ಪ್ರತಿಭಟನಾ ಸಭೆಯಲ್ಲಿ ತಾಲ್ಲೂಕಿನ ವಿವಿಧ ಸಂಘಟನೆಗಳು, ರಾಜಕೀಯ ಪಕ್ಷಗಳ ಮುಖಂಡರು, ಮುಖ್ಯಮಂತ್ರಿ ಚಂದ್ರು, ಲಲಿತಾ ನಾಯಕ್, ನಂಜರಾಜ್ ಅರಸು, ನಟ ಚೇತನ್, ತಲಕಾಡು ಚಿಕ್ಕರಂಗೇಗೌಡ, ಬರಹಗಾರ್ತಿ ಕೆ. ಷರೀಫಾ, ವಿಜಯ್ ನಿಶಾಂತ್, ಧರ್ಮೇಂದ್ರ ಕುಮಾರ್ ಭಾಗವಹಿಸಲಿದ್ದಾರೆ ಎಂದು ಜಿ.ಕೆ.ನಾಗಣ್ಣ ಅವರು ತಿಳಿಸಿದರು.

ಭಾರತೀಯ ಭೂಚುಂಬಕತ್ವ ಸಂಸ್ಥೆ

(ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಡಿಯಲ್ಲಿನ ಸ್ವಾಯುತ್ತ ವೈಜ್ಞಾನಿಕ ಸಂಶೋಧನಾ ಸಂಸ್ಥೆ)

www.iigm.res.in

ಜಾಹೀರಾತು ಸಂ.: 05/ಐಐಜಿ/ಹೆಚ್‌ಆರ್‌ಡಿ/2023

ಭಾರತೀಯ ಭೂಚುಂಬಕತ್ವ ಸಂಸ್ಥೆಯು ನಿಯಮಿತ ಹುದ್ದೆಗಳಿಗಾಗಿ ಭಾರತೀಯ ನಾಗರಿಕರಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಿರುತ್ತದೆ.

ಶೈಕ್ಷಣಿಕ, ತಾಂತ್ರಿಕ ಮತ್ತು ಆಡಳಿತಾತ್ಮಕ ಹುದ್ದೆಗಳನ್ನು, ಜಾಹೀರಾತು ಸಂ. 05/ಐಐಜಿ/ಹೆಚ್‌ಆರ್‌ಡಿ/2023 ರ ಅಡಿಯಲ್ಲಿ ನೇರ ನೇಮಕಾತ ಮೂಲಕ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಿಕೊಳ್ಳಲಾಗುತ್ತದೆ.

ದಯವಿಟ್ಟು ಹೆಚ್ಚಿನ ವಿವರಗಳಿಗಾಗಿ, ಸಂಸ್ಥೆಯ **https://iigm.res.in/careers/positionvacancies ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ.**

ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ **ದಿನಾಂಕ 04 ಫೆಬ್ರವರಿ 2024**. ಡೌನ್‌ಲೋಡ್ ಮಾಡಿಕೊಂಡು ಸಂಪೂರ್ಣ ಭರ್ತಿ ಮಾಡಿರುವ ಅರ್ಜಿಯೊಂದಿಗೆ ಅಗತ್ಯ ಪೂರಕ ದಾಖಲಾತಿಗಳನ್ನು ಲಗತ್ತಿಸಿ, ರಿಜಿಸ್ಟ್ರಾರ್‌ರವರ ಕಚೇರಿ, ಭಾರತೀಯ ಭೂಚುಂಬಕತ್ವ ಸಂಸ್ಥೆ, ಪ್ಲಾಟ್ ನಂ. 5, ಸೆಕ್ಟರ್ 18, ಕಳಂಬೋಲಿ ಹೆದ್ದಾರಿ, ನ್ಯೂ ಪನ್ವೇಲ್, ನವಿ ಮುಂಬಯಿ 410218 ವಿಳಾಸಕ್ಕೆ, **09 ಫೆಬ್ರವರಿ 2024 ರಂದು ಸಂಜೆ 05:00** ಗಂಟೆಯೊಳಗೆ ತಲುಪುವಂತೆ ರವಾನಿಸುವುದು.

CBC 36127/12/0005/2324

ರಿಜಿಸ್ಟ್ರಾರ್

ನೆಲಮಂಗಲ ಯೋಜನಾ ಪ್ರಾಧಿಕಾರ

2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ–562123. ಇ–ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ:CLU:43:2023-24 ದಿನಾಂಕ: 12/16–01–2023

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13–02–2007 ರನ್ವಯ **ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಬ್ಯಾಡರಹಳ್ಳಿ** ಗ್ರಾಮವು "ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ" ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01–06–2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ 'ಕೈಗಾರಿಕೆ (ವೇರ್ ಹೌಸ್)'** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **'ವ್ಯವಸಾಯ ವಲಯದಿಂದ' ಕೈಗಾರಿಕೆ (ವೇರ್ ಹೌಸ್)'** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು/ ಹೋಬಳಿ/ ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1. ಲಕ್ಷ್ಮಮ್ಮ ಕೋಂ ನರಸಿಂಹಯ್ಯ 2. ಸಾಕಮ್ಮ ಕೋಂ ಗಂಗಯ್ಯ ರವರುಗಳ ಪರವಾಗಿ ಜಿ.ಪಿ.ಎ. ಪ್ರತಿನಿಧಿಯಾದ ಸುರೇಶ್ ಕೊಟಾರಿ ಬಿನ್ ಮಂಗಿಲಾಲ್ ಕೊಟಾರಿ	ನೆಲಮಂಗಲ/ ತ್ಯಾಮಗೊಂಡ್ಲು/ ಬ್ಯಾಡರಹಳ್ಳಿ	142	00–33	ವ್ಯವಸಾಯ	ಕೈಗಾರಿಕೆ (ವೇರ್ ಹೌಸ್)
		144	00–15		
		145	00–13		
		ಒಟ್ಟು	01–21		

ಷರಾ:– ಸದರಿ ಜಾಗವು ಭೂ ಪರಿವರ್ತನೆಯಾದಲ್ಲಿ ಗ್ರಾಮ ಪಂಚಾಯಿತಿಗೆ ಕಂದಾಯದ ಮೂಲಕ ಆರ್ಥಿಕ ಅಭಿವೃದ್ಧಿಗೊಳ್ಳುತ್ತದೆ. ಕಾರ್ಖಾನೆಯು ಸ್ಥಾಪನೆಯಾದಲ್ಲಿ ಸ್ಥಳಿಯರಿಗೆ ಉದ್ಯೋಗವಕಾಶಗಳು ಹೆಚ್ಚುತ್ತದೆ. ಕಾರ್ಖಾನೆಯ ಸ್ಥಾಪನೆಯಾದಲ್ಲಿ ಸ್ಥಳೀಯರಿಗೆ ಉದ್ಯೋಗವಕಾಶಗಳು ಹೆಚ್ಚುತ್ತವೆ, ಉದ್ಯೋಗ ಬಯಸಿ ಬರುವವರಿಗೆ ವಾಸಿಸಲು ಮನೆಗಳು ಅವಶ್ಯಕತೆ ಇರುವುದರಿಂದ ಗ್ರಾಮದಲ್ಲಿ ಬಾಡಿಗೆ ಮನೆಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಕಾರ್ಮಿಕರಿಗೆ ಊಟದ ವ್ಯವಸ್ಥೆಗಳಿಗಾಗಿ ಹೋಟೆಲ್‌ಗಳಿಗೆ ಬೇಡಿಕೆ ಹೆಚ್ಚಾಗಿ ಗ್ರಾಮಸ್ಥರಿಗೆ ಉದ್ಯೋಗ ಸೃಷ್ಟಿಯಾಗುತ್ತವೆ. ಆರ್ಥಿಕವಾಗಿ ಜನರು ಸ್ವಾವಲಂಬಿಗಳಾಗಿ, ಗ್ರಾಮವು ಅಭಿವೃದ್ಧಿಯಾಗುತ್ತದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ಕೈಗಾರಿಕೆ (ವೇರ್ ಹೌಸ್)"** ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾಪ್ರ/3069/ಸ್ಪ್ಯಾನ್/2023–24

ADVERTISEMENT FOR THE POST OF PRINCIPAL ASHA SCHOOL (CENTRE FOR DIFFERENTLY ABLED CHILDREN), BANGALORE

1. Applications are invited from eligible candidates for filling up the post of **PRINCIPAL** of ASHA School, C/o HQ Karnataka & Kerala Sub Area, Cubbon Road, Bangalore - 01. Candidates who fulfill the following criteria may apply : -

Ser No	Post	No of Post	Qualification/ Experience	Age Limit	Honorarium per month
(a)	Principal	01	Post Graduate or Graduate plus B.Ed (General) in Special Education with 04 yrs experience or Diploma in Special Education with 06 yrs experience or BRS graduates with 05 yrs experience. M Ed in relevant special education field with 02 yrs experience or B.Ed in Special Education with 04 yrs experience or Diploma in Special Education with 06 yrs experience or BRS Graduates with 05 yrs experience and with administrative experience of 03 yrs.	35-45 yrs	Rs 27,000 to Rs 30,000

2. Candidates who fulfill the above criteria may forward their applications with Bio Data on email : ashaschoolblr@gmail.com and a hard copy via post by 29 Jan 2024.

3. Contact address - OIC, ASHA School
HQ Karnataka & Kerala Sub Area
Cubbon Road
Bangalore – 560 001
No : 080-25591999

ನಗರಸಭೆ ಕಾರ್ಯಾಲಯ, ನೆಲಮಂಗಲ

ಬೆಂಗಳೂರು ಗ್ರಾಮಾಂತರ ಜಿಲ್ಲೆ–562123

ಸಂಖ್ಯೆ: ನಸನೆ/ತಾಂ.ಶಾ(ವಿ)/ಟೆಂಡರ್/161/2023–24 ದಿನಾಂಕ: 16.01.2024

ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

(ಸ್ಟಾಂಡರ್ಡ್ ಡಾಕ್ಯುಮೆಂಟ್ KW 1&2&KG–1&2& KCರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯ ಸಂಬಂಧಿಸಿದಂತೆ, ದಿನಾಂಕ: **08.12.2023** ಮತ್ತು ದಿನಾಂಕ: **13.12.2023** ರಂದು 15ನೇ ಹಣಕಾಸು ಯೋಜನೆಯಡಿ 05 ಸಂಖ್ಯೆ ಆಟೋ ಟಿಪ್ಪರ್ ಪಡೆಯುವ ಬಗ್ಗೆ ಹಾಗೂ 14ನೇ ಹಣಕಾಸು ಯೋಜನೆಯಡಿ 01 ಸಂಖ್ಯೆ ಆಟೋ ಟಿಪ್ಪರ್ ಪಡೆಯುವ ಬಗ್ಗೆ. ನಗರಸಭಾ ನಿಧಿಯಡಿ ಮಿನಿ ಎಕ್ಸಾಕೇವೇಟರ್ ಪಡೆಯಲು ಹಾಗೂ 03 ಚಕ್ರದ ಎಲೆಕ್ಟ್ರಿಕ್ ಬೈಕ್ ಖರೀದಿಸಲು ಹಾಗೂ ಸ್ವಚ್ಛ ಭಾರತ್ ಮಿಷನ್ (ನಗರ) 2.0 ಅಡಿಯಲ್ಲಿ ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ 8 ಆಸನಗಳ ಮಹಾತ್ವಾಕಾಂಕ್ಷೆಯ ಶೌಚಾಲಯ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಹಾಗೂ 6000ಲೀ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲು ಹಾಗೂ ಶುದ್ಧಿ ಕುಡಿಯುವ ನೀರು ಘಟಕಗಳ ನಿರ್ವಹಣೆಗೆ (2 ಪ್ಯಾಕೇಜ್) ಹಾಗೂ ಕೊಳವೆ ಬಾವಿಕೊರೆಯುವ ಕಾಮಗಾರಿಗಳನ್ನು (04 ಸಂಖ್ಯೆ ಟೆಂಡರ್) (ಮರು ಟೆಂಡರ್) ಹಾಗೂ ಘನತ್ಯಾಜ್ಯ ವಸ್ತು ನಿರ್ವಹಣೆಯ ಹಾಗೂ ಪಾರಂಪಾರಿಕ ತ್ಯಾಜ್ಯ (ಲೆಗೇಸಿ ವೇಸ್ಟ್) ವಿಲೇವಾರಿಗಾಗಿ ವಾಹನಗಳ, ಯಂತ್ರೋಪಕರಣಗಳನ್ನು ಖರೀದಿಸಲು ಮತ್ತು ಮಾನವ ಸಂಪನ್ಮೂಲಗಳನ್ನು ಹೊರಗುತ್ತಿಗೆ ಆಧಾರದಡಿ ನೇಮಿಸಿಕೊಳ್ಳುವ ಕಾಮಗಾರಿಗಳನ್ನು ಕೈಗೊಳ್ಳಲು ಕರೆದಿದ್ದ ಟೆಂಡರ್ ಗಳನ್ನು ತಾಂತ್ರಿಕ ಕಾರಣಗಳಿಂದ ರದ್ದು ಗೊಳಿಸಿ ಒಟ್ಟು ಮೊತ್ತ ರೂ: **440.83** ಲಕ್ಷಗಳ ಟೆಂಡರ್‌ಗಳನ್ನು ಕೈಗೊಳ್ಳುವ ಕಾಮಗಾರಿಗಳ ಐಟಂವಾರು ಮತ್ತು ಕೆಪಿಪಿಪಿ ಪೋರ್ಟಲ್‌ನ ಏಕ ಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್: **https://kppp.karnataka.gov.in/** ಮೂಲಕ ಟೆಂಡರ್ ಸಲ್ಲಿಸುವುದು. ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:(As per KPPP Portal ಘಂಟೆಯವರೆಗೆ) ಟೆಂಡರ್ ತೆರೆಯುವ ದಿನಾಂಕ: (As per KPPP Portal) ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
ಶ್ರೀಮತಿ ಲತಾ ಹೇಮಂತ್‌ಕುಮಾರ್ ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀಮತಿ ಸುಜಾತ ಮುನಿಯಪ್ಪ ಮಾನ್ಯ ಉಪಾಧ್ಯಕ್ಷರು, ನಗರಸಭೆ, ನೆಲಮಂಗಲ	ಶ್ರೀ ಪ್ರದೀಪ್ ಸಿ ಮಾನ್ಯ ಸ್ಥಾಯಿ ಸಮಿತಿಅಧ್ಯಕ್ಷರು, ನಗರಸಭೆ, ನೆಲಮಂಗಲ	ಶ್ರೀ ಮನುಕುಮಾರ್ ಹೆಚ್ ಎಂ(ಕೆ.ಎಂ.ಎ.ಎಸ್) ಪೌರಾಯುಕ್ತರು, ನಗರಸಭೆ, ನೆಲಮಂಗಲ

ವಾಸಾಸಂಇ/ವಾ.ಪ್ರ/3049/ಶಿರಡಿ ಸಾಯಿ/2023–24

ಏಕವಚನ ಪ್ರಯೋಗ, ನಿಂದನೆ ಒಪ್ಪುವುದಿಲ್ಲ–ಸಿ.ಟಿ.ರವಿ • ಹಗುರ ಮಾತು ಖಂಡಿಸುತ್ತೇವೆ –ರೇಣುಕಾಚಾರ್ಯ

ಸಂಸದ ನಿಂದನೆ, ಪಕ್ಷದವರಿಂದಲೇ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಅವರು ಏಕವಚನದಲ್ಲಿ ನಿಂದಿಸಿರುವುದಕ್ಕೆ ಸ್ವಪಕ್ಷೀಯರಿಂದಲೇ ತೀವ್ರ ಆಕ್ಷೇಪ ವ್ಯಕ್ತವಾಗಿದೆ. 'ಇದನ್ನು ಸಹಿಸೆವು, ಸರಿಯಲ್ಲ' ಎಂದು ಮಾಜಿ ಶಾಸಕರಾದ ಸಿ.ಟಿ.ರವಿ, ರೇಣುಕಾಚಾರ್ಯ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಮಧ್ಯೆ, ಪಕ್ಷದವರ ಅಸಮಾಧಾನ ನಂತರವೂ ಸಂಸದರು, ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದು, ಈ ಕುರಿತು ಕಾಂಗ್ರೆಸ್ಸಿನವರು ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದ್ದಾರೆ.

ಚಿಕ್ಕಮಗಳೂರು ವರದಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಂಸದ ಅನಂತಕುಮಾರ ಹೆಗಡೆ ಏಕವಚನದಲ್ಲಿ ಟೀಕೆ ಮಾಡಿರುವುದನ್ನು ನಾವು ಒಪ್ಪಿಕೊಳ್ಳುವುದಿಲ್ಲ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಪ್ರತಿಕ್ರಿಯಿಸಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಸ್ಲಿಂ ದಾಳಿಕೋರರು 42 ಸಾವಿರಕ್ಕೂ ಹೆಚ್ಚು ದೇಗುಲ ನಾಶ ಪಡಿಸಿದ್ದಾರೆ ಎಂಬುದು ಅವರ ಭಾವನೆ ಇರಬಹುದು. ಆದರೆ, ದೇಶದ ಮುಸ್ಲಿಮರು ದಾಳಿಕೋರರ ಜತೆ ತಮ್ಮ ಅಸ್ಮಿತೆ ಗುರುತಿಸಿಕೊಳ್ಳುವುದಿಲ್ಲ. ಭಾರತೀಯತೆ ಮತ್ತು ಸನಾತನ ಪರಂಪರೆ ಬಗ್ಗೆ ವಿಶ್ವಾಸ ಇಟ್ಟಿದ್ದಾರೆ' ಎಂದು ವಿಶ್ಲೇಷಿಸಿದರು.

'ಏಕವಚನ ಬಳಕೆ, ನಿಂದನೆ ತಪ್ಪು' (ದಾವಣಗೆರೆ ವರದಿ): 'ಸಂಸದ ಅನಂತ್‌ಕುಮಾರ ಹೆಗಡೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಏಕವಚನ ಪ್ರಯೋಗ ಮಾಡಿದ್ದು, ನಿಂದಿಸಿದ್ದು ತಪ್ಪು' ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅಭಿಪ್ರಾಯಪಟ್ಟರು.

'ಸಿದ್ದರಾಮಯ್ಯ ಮುಖ್ಯಮಂತ್ರಿ ಹುದ್ದೆಯಲ್ಲಿದ್ದಾರೆ. ಅವರನ್ನು ರಾಜಕೀಯವಾಗಿ ವಿರೋಧಿಸಬಹುದು. ಅವರ ಕುರಿತು ಹಗುರವಾಗಿ ಮಾತನಾಡಿದ್ದನ್ನು ಖಂಡಿಸುತ್ತೇವೆ' ಎಂದು ಅವರು ಪ್ರತಿಕ್ರಿಯಿಸಿದರು.

'ಹೆಗಡೆ ಅವರು ಹಿಂದೆ ಸಂವಿಧಾನ ಬದಲಿಸುವ ಮಾತನಾಡಿದ್ದರು. ಪ್ರಧಾನಿ ಮೋದಿ ಈ ದೇಶವನ್ನು ಅಭಿವೃದ್ಧಿ ಮಾಡಲು ಹೊರಟಿದ್ದಾರೆಯೇ ಹೊರತು ಸಂವಿಧಾನ ಬದಲಿಸಲು ಅಲ್ಲ' ಎಂದರು.

'ಸೈದ್ಧಾಂತಿಕ ಮಾತು ಕಲಿಯಲಿ' (ಶಿರಸಿ): 'ಪ್ರಚೋದನಕಾರಿ ಮತ್ತು ಅವಹೇಳನಕಾರಿಯಾಗಿ ಮಾತನಾಡುವ ಸಂಸದ ಅನಂತಕುಮಾರ ಹೆಗಡೆ ಸೈದ್ಧಾಂತಿಕ ವಾಗಿ ಮಾತನಾಡುವುದು ಕಲಿಯಲಿ. ಧರ್ಮ ಬದಲು ಅಭಿವೃದ್ಧಿ ಕುರಿತು ಮಾತನಾಡಲಿ' ಎಂದು ಕಾಂಗ್ರೆಸ್ ಶಾಸಕ ಭೀಮಣ್ಣ ನಾಯ್ಕ ಅವರು ಪ್ರತಿಕ್ರಿಯಿಸಿದರು.

'ಸಿ.ಎಂಗೆ ಇಲ್ಲದ ಸಭ್ಯತೆ ಬಿಜೆಪಿಗೆ ಏಕೆ?'

ಅನಂತಕುಮಾರ ಹೆಗಡೆ

ಶಿರಸಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಏಕವಚನದಲ್ಲಿ ಮಾತನಾಡಿದ್ದು ಸರಿ ಇದ್ದರೆ, ನಾನು ಮಾತನಾಡಿದ್ದೂ ಸರಿಯಿದೆ. ಕಾಂಗ್ರೆಸ್, ಸಿದ್ದರಾಮಯ್ಯಗೆ ಇಲ್ಲದ ಸಭ್ಯತೆ ಬಿಜೆಪಿಗೆ ಯಾಕೆ' ಎಂದು ಸಂಸದ ಅನಂತಕುಮಾರ ಹೆಗಡೆ ಪ್ರಶ್ನಿಸಿದರು.

'ಯಾರಿಗೆ ಯಾವ ಭಾಷೆಯಲ್ಲಿ ಹೇಗೆ ಮಾತಾಡಬೇಕು ಹಾಗೆಯೇ ಮಾತನಾಡಿದ್ದೇನೆ. ಸಂಸ್ಕೃತಿ, ಸಭ್ಯತೆ ಬಗ್ಗೆ ಮಾತನಾಡುವ ಕಾಂಗ್ರೆಸ್‌ನವರು ಮತ್ತು ಸಿದ್ದರಾಮಯ್ಯ ನನ್ನ ಜೊತೆ ಬಹಿರಂಗ ಚರ್ಚೆ ಮಾಡಲಿ. ಅವುಗಳ ಬಗ್ಗೆ ನಾನು ಅವರಿಗೆ ಪಾಠ ಮಾಡುವೆ' ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಬಿ.ಎಸ್.ಯಡಿಯೂರಪ್ಪ, ಪ್ರಧಾನಿ ಮೋದಿ ಹಾಗೂ ದೇವಸ್ಥಾನಗಳ ಬಗ್ಗೆ ಅಸಭ್ಯವಾಗಿ ಮೊದಲು ಮಾತನಾಡಿದ್ದು ಸಿದ್ದರಾಮಯ್ಯ. ದೇವಸ್ಥಾನದ ಬಗ್ಗೆ ಅಷ್ಟು ಕೀಳಾಗಿ ಮಾತನಾಡಿದ್ದು ಯಾಕೆ? ಕಾಂಗ್ರೆಸ್‌ನ ಸಲ್ಮಾನ್ ಖುರ್ಷಿದ್ ಮೋದಿಯವರನ್ನು ಕಪ್ಪೆ, ಮಂಗ, ನಪುಂಸಕ ಎಂದು ಕರೆದರೆ, ಶರದ್ ಪವಾರ್ ಮೋದಿಯವರನ್ನು ಹಿಟ್ಲರ್ ಎಂದರು. ಸಿದ್ದರಾಮಯ್ಯ, ಮೋದಿಯವರನ್ನು ಏಕವಚನದಲ್ಲಿ 'ಮಾಸ್ ಮರ್ಡರರ್' ಎಂದು ಕರೆದರು. ಇನ್ನೂ ಏನೇನು ಹೇಳಿಸಿಕೊಳ್ಳಬೇಕು ನಾವು? ಅವರಿಗೊಂದು ಮತ್ತು ನಮಗೊಂದು ನ್ಯಾಯವೇ? ಯಾರು ನನ್ನನ್ನು ಒಪ್ಪಿಕೊಳ್ಳುತ್ತಾರೋ, ಬಿಡುತ್ತಾರೋ ಗೊತ್ತಿಲ್ಲ. ಹಿಂದೂ ಸಮಾಜ ನನ್ನನ್ನು ಒಪ್ಪಿದೆ' ಎಂದರು.

'ಓಲೈಕೆ ರಾಜಕಾರಣ ಮಾಡುವ ಸಿದ್ದರಾಮಯ್ಯ ಹಿಂದೂಗಳನ್ನು ಕಡೆಗಣಿಸಿದ್ದಾರೆ. ಹಿಂದೂಗಳಿಗೆ ಕಿಮ್ಮತ್ತಿಲ್ಲವೇ? ಸಿದ್ದರಾಮಯ್ಯ ವಿರುದ್ಧ ಏಕವಚನ ಬಳಸಿದ್ದು ನನ್ನ ಹೇಳಿಕೆಯೇ ಹೊರತು ಪಕ್ಷದ್ದಲ್ಲ. ಈ ಕುರಿತಂತೆ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹೇಳಿದ್ದು ಸರಿ ಇದೆ' ಎಂದು ತಿಳಿಸಿದರು.

'ಬಿಜೆಪಿ ದ್ವಂದ್ವ ನಿಲುವಿನ ಪ್ರತೀಕ'

ಬೆಳಗಾವಿ: 'ಅನಂತಕುಮಾರ ಹೆಗಡೆ ಅಸಂಬದ್ಧ ಹೇಳಿಕೆ ಇದೇ ಮೊದಲಲ್ಲ. ಮಸೀದಿಗಳ ಬಗ್ಗೆಯೂ ಕೆಟ್ಟದಾಗಿ ಮಾತನಾಡಿದ್ದಾರೆ. ಅವರ ಹೇಳಿಕೆ ಬಿಜೆಪಿ ನಾಯಕರ ದ್ವಂದ್ವ ನೀತಿಯ ಭಾಗ' ಎಂದು ಮಾಜಿ ಸಚಿವ ಎಚ್.ಎಂ. ರೇವಣ್ಣ ಹೇಳಿದರು. 'ಬಿಜೆಪಿ ಮತ್ತು ಆರ್‌ಎಸ್‌ಎಸ್ ಬಗ್ಗೆ ಜನರಿಗಿರುವ ಒಳ್ಳೆಯ ಅಭಿಪ್ರಾಯವು ಹೆಗಡೆ ಅಂಥವರ ಹೇಳಿಕೆಗಳಿಂದ ಬದಲಾಗುತ್ತಿದೆ. ಇದೇ ಕಾರಣಕ್ಕೆ ಸಿ.ಟಿ.ರವಿ ಅಂಥವರು ಮನೆ ಸೇರಿದ್ದಾರೆ' ಎಂದರು.

ಮುಖ್ಯಮಂತ್ರಿ ಕುರಿತು ಸಂಸದ ಅನಂತಕುಮಾರ ಹೆಗಡೆ ಏಕವಚನದಲ್ಲಿ ಹೇಳಿಕೆ ನೀಡಬಾರದಿತ್ತು. ಏನೇ ಹೇಳಿಕೆ ನೀಡಿದರೂ ಸಭ್ಯತೆಯಿಂದ ಕೂಡಿರಬೇಕು
ದೊಡ್ಡನಗೌಡ ಪಾಟೀಲ
ವಿಧಾನಸಭೆ ವಿರೋಧಪಕ್ಷದ ಮುಖ್ಯಸಚೇತಕ

ಸಿದ್ದರಾಮಯ್ಯ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಅನಂತಕುಮಾರ್ ಹೆಗಡೆ ದುರಹಂಕಾರಿ ಮನುಷ್ಯನೋ, ಮೃಗನೋ ಗೊತ್ತಿಲ್ಲ. ಇದನ್ನು ಎಲ್ಲರೂ ಖಂಡಿಸಬೇಕು
ಕೆ.ಎನ್.ರಾಜಣ್ಣ
ಸಹಕಾರ ಸಚಿವ

ಅಣಕು ಶವಯಾತ್ರೆ, ಹೆಗಡೆ ಬಂಧನಕ್ಕೆ ಆಗ್ರಹ

ಸಂಸದ ಅನಂತಕುಮಾರ ಹೆಗಡೆ ಹೇಳಿಕೆ ಖಂಡಿಸಿ ವಿಜಯನಗರ ಜಿಲ್ಲೆ ಕೂಡ್ಲಗಿ ತಾಲ್ಲೂಕಿನ ಕಾನಹೊಸಹಳ್ಳಿಯಲ್ಲಿ ಮಂಗಳವಾರ ಕಾಂಗ್ರೆಸ್ ಕಾರ್ಯಕರ್ತರು ಕುರಿಗಳೊಂದಿಗೆ ಪ್ರತಿಭಟನೆ ನಡೆಸಿ, ನಾಡಕಚೇರಿಯಲ್ಲಿ ಮನವಿ ಸಲ್ಲಿಸಿದರು

ಹುಬ್ಬಳ್ಳಿ: ಮುಖ್ಯಮಂತ್ರಿ ವಿರುದ್ಧ ಸಂಸದ ಅನಂತಕುಮಾರ ಹೆಗಡೆ ಏಕವಚನದಲ್ಲಿ ಟೀಕಿಸಿದ್ದನ್ನು ಖಂಡಿಸಿ ಬಾಗಲಕೋಟೆ, ವಿಜಯನಗರ ಜಿಲ್ಲೆಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿ ಅವರ ಪ್ರತಿಕೃತಿ ದಹಿಸಿದರು.

ಹೊಸಪೇಟೆಯಲ್ಲಿ ಅನಂತಕುಮಾರ ಹೆಗಡೆ ಅವರ ಅಣಕು ಶವಯಾತ್ರೆ ನಡೆಸಿದ್ದು, ಹೆಗಡೆ ಅವರ ಭಾವಚಿತ್ರವಿದ್ದ ಫ್ಲೆಕ್ಸ್‌ಗೆ ಮೊಟ್ಟೆ ಎಸೆದು ಧಿಕ್ಕಾರ ಕೂಗಲಾಯಿತು.

ಕೂಡ್ಲಗಿ ತಾಲ್ಲೂಕಿನ ಕಾನಹೊಸಳ್ಳಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹೆಗಡೆ ಪ್ರತಿಕೃತಿಯೊಂದಿಗೆ ಕುರಿಗಳನ್ನು ಹೊಡೆದುಕೊಂಡು ಪ್ರಮುಖ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು. ಪ್ರತಿಕೃತಿ ದಹಿಸಿದರು.

ಬಾದಾಮಿ ಮತ್ತು ಗುಳೇದಗುಡ್ಡದಲ್ಲಿ ಕಾಂಗ್ರೆಸ್ ಮುಖಂಡರು ಪೊಲೀಸ್ ಠಾಣೆಗೆ ತೆರಳಿ, ಅನಂತಕುಮಾರ ಹೆಗಡೆ ಅವರನ್ನು ಬಂಧಿಸುವಂತೆ ದೂರು ನೀಡಿದರು.

ಕಾಂಗ್ರೆಸ್ ಪ್ರತಿಭಟನೆ: ಸಂಸದ ಅನಂತಕುಮಾರ ಹೆಗಡೆ ಹೇಳಿಕೆ ವಿರೋಧಿಸಿ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ನಗರದ ಹಳೆ ಬಸ್ ನಿಲ್ದಾಣ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು. 'ವರ್ತನೆ ಸರಿಪಡಿಸಿಕೊಳ್ಳದಿದ್ದರೆ, ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಪ್ರತಿಭಟನೆ ನಡೆಸಲಾಗುವುದು' ಎಂದು ಅವರು ಎಚ್ಚರಿಸಿದರು.

ಸಂಸದ ಹೆಗಡೆ ವಿರುದ್ಧ ದೂರು

ಮಾಲೂರು (ಕೋಲಾರ): ಮುಖ್ಯಮಂತ್ರಿ ಸಿದ್ದರಾಮಯ್ಯ ಕುರಿತು ಅವಹೇಳನಕಾರಿಯಾಗಿ ಮಾತನಾಡಿರುವ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕರ್ನಾಟಕ ಪ್ರದೇಶ ಕುರುಬರ ಸಂಘದ ತಾಲೂಕು ಪದಾಧಿಕಾರಿಗಳು ಮಂಗಳವಾರ ಮಾಲೂರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಹೆಗಡೆ ವಿರುದ್ಧ ಕುರುಬರ ಸಂಘ, ಸಮುದಾಯದವರು ರಾಜ್ಯಾದ್ಯಂತ ಹೋರಾಟ ನಡೆಸುವುದಾಗಿ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಂಜನಿ ಸೋಮಣ್ಣ ಮಂಗಳವಾರ ತಿಳಿಸಿದರು.

ಸಿ.ಎಂ. ಅವಹೇಳನ- ಆರೋಪಿ ವಶಕ್ಕೆ (ಮಂಗಳೂರು ವರದಿ): ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಯುವಕರೊಬ್ಬರು ಆಕ್ಷೇಪಾರ್ಹ ಪದ ಬಳಸಿ ಮಾತನಾಡಿ, ಅದರ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡ ಆರೋಪದ ಮೇರೆಗೆ ಸುರತ್ಕಲ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಆರೋಪಿಯನ್ನು ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ಸುದ್ದಿ 2 ನಿಮಿಷ

ಎಚ್‌ಡಿಕೆ ಇಂದು ದೆಹಲಿಗೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಬುಧವಾರ ದೆಹಲಿಗೆ ತೆರಳಲಿದ್ದಾರೆ.

ಎನ್‌ಡಿಎ ಮೈತ್ರಿಕೂಟದ ಭಾಗವಾಗಿರುವ ಜೆಡಿಎಸ್‌ಗೆ ಚುನಾವಣೆಗೆ ಮೊದಲೇ ಕೇಂದ್ರ ಸಂಪುಟದಲ್ಲಿ ಸ್ಥಾನ ನೀಡಲು ಪ್ರಧಾನಿ ನರೇಂದ್ರ ಮೋದಿ ನಿರ್ಧರಿಸಿದ್ದಾರೆ ಎಂಬ ಮಾತು ರಾಜಕೀಯ ವಲಯದಲ್ಲಿ ಕೆಲವು ದಿನಗಳಿಂದ ಚರ್ಚೆಗೆ ಗ್ರಾಸವಾಗಿತ್ತು. ಕುಮಾರಸ್ವಾಮಿ ಅವರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಳ್ಳಲಾಗುತ್ತದೆ ಎಂಬ ಸುದ್ದಿಯೂ ಸದ್ದು ಮಾಡಿತ್ತು.

'ಕುಮಾರಸ್ವಾಮಿ ಮತ್ತು ಅವರ ಮಗ ನಿಖಿಲ್ ಕುಮಾರಸ್ವಾಮಿ ಇಬ್ಬರೂ ಬುಧವಾರ ದೆಹಲಿಗೆ ತೆರಳಲಿದ್ದಾರೆ. ಅಲ್ಲಿ ಬಿಜೆಪಿ ವರಿಷ್ಠರನ್ನು ಭೇಟಿ ಮಾಡಿ ಚರ್ಚಿಸುವ ಸಾಧ್ಯತೆ ಇದೆ. ಸಂಪುಟದಲ್ಲಿ ಸ್ಥಾನ ನೀಡುವ ಕುರಿತು ಯಾವುದೇ ಮಾಹಿತಿ ಇಲ್ಲ' ಎಂದು ಕುಮಾರಸ್ವಾಮಿ ಅವರ ಆಪ್ತ ಮೂಲಗಳು ತಿಳಿಸಿವೆ.

ಗುರುವಾರ ಅಥವಾ ಶುಕ್ರವಾರ ಕುಮಾರಸ್ವಾಮಿ ಅವರು ದೆಹಲಿಯಿಂದ ಬೆಂಗಳೂರಿಗೆ ವಾಪಸಾಗುವರು. ನಂತರ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ವಿಗ್ರಹದ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಉತ್ತರ ಪ್ರದೇಶಕ್ಕೆ ತೆರಳುವರು ಎಂದು ಮೂಲಗಳು ಹೇಳಿವೆ.

ಬಿಜೆಪಿ ಜಿಲ್ಲಾ ಘಟಕ: ಪದಾಧಿಕಾರಿಗಳ ನೇಮಕಕ್ಕೆ ಸೂಚನೆ

ಬೆಂಗಳೂರು: ಪಕ್ಷದ ಜಿಲ್ಲಾ ಘಟಕಗಳ ಪದಾಧಿಕಾರಿಗಳ ನೇಮಕ ಪ್ರಕ್ರಿಯೆ ಆರಂಭಿಸುವಂತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸೂಚನೆ ನೀಡಿದರು.

ಹೊಸದಾಗಿ ನೇಮಕಗೊಂಡ ಜಿಲ್ಲಾ ಘಟಕಗಳ ಅಧ್ಯಕ್ಷರ ಜತೆ ಮಂಗಳವಾರ ವರ್ಚುವಲ್ ಸಭೆ ನಡೆಸಿದ ಅವರು, ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಪಕ್ಷಕ್ಕಾಗಿ ಹಗಲಿರುಳು ದುಡಿಯುವ ಉತ್ಸಾಹಿ ತಂಡವನ್ನು ಕಟ್ಟಬೇಕು. ಆ ಬಳಿಕ ಜಿಲ್ಲಾ ಪ್ರವಾಸವನ್ನು ನಡೆಸಿ ಲೋಕಸಭಾ ಚುನಾವಣೆಗೆ ಕಾರ್ಯಕರ್ತರನ್ನು ಅಣಿಗೊಳಿಸಬೇಕು ಎಂದು ಸಲಹೆ ನೀಡಿದರು.

ಜಿಲ್ಲೆಗಳಲ್ಲಿ ವಿಕಸಿತ ಭಾರತ ಯಾತ್ರೆಗಳನ್ನು ಹೆಚ್ಚು ಪ್ರಮಾಣದಲ್ಲಿ ನಡೆಸಬೇಕು ಮತ್ತು ಕಾರ್ಯಕರ್ತರು ನಮೋ ಆ್ಯಪ್ ಡೌನ್‌ಲೋಡ್ ಮಾಡಿಕೊಳ್ಳಲು ಆದ್ಯತೆ ನೀಡಬೇಕು. ಜನಸಂಪರ್ಕವನ್ನು ಹೆಚ್ಚಿಸಬೇಕು ಎಂದು ಹೇಳಿದರು.

ರಾಜ್ಯ ಘಟಕದ ಪದಾಧಿಕಾರಿಗಳು ಜಿಲ್ಲಾ ಪ್ರವಾಸಗಳನ್ನು ಆರಂಭಿಸಬೇಕು. ಕ್ಲಸ್ಟರ್‌ಗಳ ಸಭೆಯ ಬಳಿಕ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು ಎಂದೂ ವಿಜಯೇಂದ್ರ ತಿಳಿಸಿದರು. ಸುಮಾರು ಒಂದು ಗಂಟೆ ಸಭೆ ನಡೆಯಿತು.

ಕರ್ತವ್ಯಲೋಪ: ಇಬ್ಬರ ಅಮಾನತು

ಸಾಮೂಹಿಕ ಅತ್ಯಾಚಾರ ಪ್ರಕರಣ: ಎಂಟನೇ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಹಾವೇರಿ: ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಕರ್ತವ್ಯಲೋಪ ಮತ್ತು ವಿಳಂಬ ಧೋರಣೆ ತೋರಿದ ಆರೋಪದಡಿ ಹಾನಗಲ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶ್ರೀಧರ್ ಎಸ್. ಆರ್ ಮತ್ತು ಕಾನ್‌ಸ್ಟೆಬಲ್ ಇಲಿಯಾಸ್ ಶೇತಸನದಿ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಂಶುಕುಮಾರ್ ಅಮಾನತು ಮಾಡಿ, ಆದೇಶ ಹೊರಡಿಸಿದ್ದಾರೆ.

ತಾಲ್ಲೂಕಿನ ನಾಲ್ಕರ ಕ್ರಾಸ್ ಸಮೀಪದ ಲಾಡ್ಜ್‌ನಲ್ಲಿ ಜನವರಿ 8ರಂದು ಕೊಠಡಿಯಲ್ಲಿದ್ದ ಹಿಂದೂ ಪುರುಷ ಮತ್ತು ಮುಸ್ಲಿಂ ಮಹಿಳೆ ಮೇಲೆ ಮುಸ್ಲಿಂ ಯುವಕರ ಗುಂಪು ಹಲ್ಲೆ ನಡೆಸಿತ್ತು. ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿತ್ತು.

ಜನವರಿ 10ರಂದು ರೂಂ ಬಾಯ್ ನೀಡಿದ ದೂರಿನ ಮೇರೆಗೆ ಹಾನಗಲ್ ಠಾಣೆಯಲ್ಲಿ 'ಅನೈತಿಕ ಪೊಲೀಸ್‌ಗಿರಿ' ಪ್ರಕರಣ ಮಾತ್ರ ದಾಖಲಾಗಿತ್ತು. ಜನವರಿ 11ರಂದು ಸಂತ್ರಸ್ತೆಯು ನ್ಯಾಯಾಧೀಶರ ಮುಂದೆ ಕಲಂ '164' ಸಿಆರ್‌ಪಿಸಿ ಅಡಿಯಲ್ಲಿ ಹೇಳಿಕೆಯನ್ನು ದಾಖಲಿಸಿ, 7 ಜನರಿಂದ ಸಾಮೂಹಿಕ ಅತ್ಯಾಚಾರವಾಗಿದೆ ಎಂದು ತಿಳಿಸಿದ್ದರು. ಆ ನಂತರ ಎಫ್‌ಐಆರ್‌ನಲ್ಲಿ '376–ಡಿ' ಸೆಕ್ಷನ್ ಅನ್ನು ಪೊಲೀಸರು ಸೇರಿಸಿದ್ದರು.

ಪ್ರಕರಣದ ಮಾಹಿತಿ ಸಂಗ್ರಹಿಸುವಲ್ಲಿ ವೈಫಲ್ಯ, ಎಫ್‌ಐಆರ್ ದಾಖಲಿಸುವಲ್ಲಿ ನಿರ್ಲಕ್ಷ್ಯ, ಆರೋಪಿಗಳನ್ನು ಬಂಧಿಸುವಲ್ಲಿ ವಿಳಂಬ ತೋರಿದ ಆರೋಪದ ಮೇಲೆ ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

8ನೇ ಆರೋಪಿ ಬಂಧನ: 'ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ 8ನೇ ಆರೋಪಿ ಅಕ್ಕಿಆಲೂರಿನ ಮಫೀದ್ ಓಣಿಕೇರಿ (23) ಎಂಬುವವನನ್ನು ಮಂಗಳವಾರ ಬಂಧಿಸಲಾಗಿದೆ. ಇನ್ನೂ ಮೂರು ಅಥವಾ ನಾಲ್ಕು ಜನರು ಅತ್ಯಾಚಾರ ಪ್ರಕರಣದಲ್ಲಿ ಭಾಗಿಯಾದ ಶಂಕೆಯಿದ್ದು, ಈ ಬಗ್ಗೆ ತನಿಖೆ ನಡೆದಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿ ಮಹಮ್ಮದ್ ಸೈಫ್ ಸಾವಿಕೇರಿ ಅಪಘಾತದಲ್ಲಿ ಗಾಯಗೊಂಡು 7 ದಿನಗಳಿಂದ ಹಾವೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ. ಕಾಲು ಬಾವು ಬಂದ ಪರಿಣಾಮ ಆತನನ್ನು ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಪಿ.ಆರ್. ಹಾವನೂರ ತಿಳಿಸಿದ್ದಾರೆ.

ಶ್ರೀಧರ್ ಎಸ್ ಆರ್

ಇಲಿಯಾಸ್ ಶೇತಸನದಿ

ಪುಂಡರನ್ನು ಹದ್ದುಬಸ್ತಿನಲ್ಲಿಡುವಲ್ಲಿ ಜಿಲ್ಲಾ ಪೊಲೀಸರು ನಿಷ್ಕ್ರಿಯರಾಗಿದ್ದಾರೆ. ಹೀಗಾಗಿ ಹಲ್ಲೆ, ಅತ್ಯಾಚಾರ, ಅಪಹರಣ ಕೃತ್ಯಗಳು ನಡೆಯುತ್ತಿವೆ.
ಬಿ.ಸಿ.ಪಾಟೀಲ, ಮಾಜಿ ಸಚಿವ

ಮತ್ತೊಂದು ಹಲ್ಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದ ಮೂವರನ್ನು ಶೀಘ್ರ ಬಂಧಿಸಲಾಗುವುದು
ಗೋಪಾಲ್ ಸಿ., ಹೆಚ್ಚುವರಿ ಎಸ್ಪಿ, ಹಾವೇರಿ

ಸಿದ್ದರಾಮಯ್ಯ ಅವರು ಅತ್ಯಾಚಾರ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಲು ನಿರಾಕರಿಸಿದ್ದಾರೆ. ಇದರಿಂದಾಗಿ ಪೊಲೀಸರು ಪ್ರಕರಣ ಮುಚ್ಚಿ ಹಾಕುವುದು ನಿಶ್ಚಿತ
ಬಸವರಾಜ ಬೊಮ್ಮಾಯಿ, ಶಾಸಕ

ಮತ್ತೊಬ್ಬ ಯುವತಿ ಮೇಲೆ ಅನೈತಿಕ ಪೊಲೀಸ್‌ಗಿರಿ!

ಹಾವೇರಿ: ಜನವರಿ 4ರಂದು ನಡೆದ 'ಅನೈತಿಕ ಪೊಲೀಸ್‌ಗಿರಿ' ಪ್ರಕರಣದ ಆರೋಪಿಗಳನ್ನು ಪೊಲೀಸರು ಶೀಘ್ರ ಬಂಧಿಸಿದ್ದರೆ, ಜನವರಿ 8ರಂದು ಸಾಮೂಹಿಕ ಅತ್ಯಾಚಾರ ಘಟನೆಯೇ ನಡೆಯುತ್ತಿರಲಿಲ್ಲ ಎಂಬ ಚರ್ಚೆ ಸಾರ್ವಜನಿಕ ವಲಯದಲ್ಲಿ ನಡೆದಿದೆ.

8ರಂದು ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದ ಪ್ರಮುಖ ಇಬ್ಬರು ಆರೋಪಿಗಳೇ ನಾಲ್ಕು ದಿನಗಳ ಮುಂಚೆ ಮುಸ್ಲಿಂ ಯುವತಿ ಮೇಲೆ ದೌರ್ಜನ್ಯ ನಡೆಸಿರುವುದು ಬೆಳಕಿಗೆ ಬಂದಿದೆ.

ಅಫ್ತಾಬ್ ಚಂದನಕಟ್ಟಿ (24) ಮತ್ತು ಮಾದರಸಾಬ್ ಮಂಡಕ್ಕಿ (23) ಈ ಇಬ್ಬರೂ ಆರೋಪಿಗಳೇ ಸಾಮೂಹಿಕ ಅತ್ಯಾಚಾರ ಪ್ರಕರಣದ ಎ–1, ಎ–2 ಆರೋಪಿಗಳಾಗಿದ್ದಾರೆ.

ಅತ್ಯಾಚಾರ ಪ್ರಕರಣ ನಡೆದ ಬೆನ್ನಲ್ಲೇ ಮುಸ್ಲಿಂ ಯುವತಿಯರಿಗೆ ಕಿರುಕುಳ ನೀಡುತ್ತಿರುವ ಕೆಲ ವಿಡಿಯೊ ತುಣುಕುಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದವು. ಮುಸ್ಲಿಂ ಯುವತಿಯನ್ನು ಕಾರಿನಲ್ಲಿ ಕೂರಿಸಿಕೊಂಡ ನಾಲ್ಕೈದು ಯುವಕರ ಗುಂಪು ಆಕೆಯ ಕಪಾಳಕ್ಕೆ ಹೊಡೆಯುವ, ಅವಾಚ್ಯ ಶಬ್ದಗಳಿಂದ ನಿಂದಿಸುವ, ಬೆದರಿಕೆ ಹಾಕುವ ದೃಶ್ಯಗಳು ವಿಡಿಯೊದಲ್ಲಿದ್ದವು.

ಈ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾದ ಕೂಡಲೇ ಹಾನಗಲ್ ಠಾಣೆಯ ಪೊಲೀಸರು, ಐವರು ಆರೋಪಿಗಳ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ವರದಿ

ಹಾನಗಲ್‌ನಲ್ಲಿ ನಡೆದಿದ್ದ ಅತ್ಯಾಚಾರ ಪ್ರಕರಣದ ಬಗ್ಗೆ ಜನವರಿ 12ರಂದು ಸ್ವಯಂಪ್ರೇರಿತ ದೂರು ದಾಖಲಿಸಿದ್ದ ರಾಷ್ಟ್ರೀಯ ಮಹಿಳಾ ಆಯೋಗ, 3 ದಿನದಲ್ಲಿ ಸಮಗ್ರ ವರದಿ ಸಲ್ಲಿಸುವಂತೆ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಿಗೆ (ಡಿಜಿಪಿ) ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಸೂಚಿಸಿದ್ದರು.

'ಪ್ರಕರಣದ ತನಿಖೆ, ಆರೋಪಿಗಳ ಬಂಧನ, ಈವರೆಗಿನ ಬೆಳವಣಿಗೆ ಸೇರಿದಂತೆ ವರದಿ ತಯಾರಿಸಿ ಡಿಜಿಪಿ ಅವರ ಮುಖಾಂತರ ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ವರದಿ ಸಲ್ಲಿಸಲಾಗಿದೆ' ಎಂದು ಹಾವೇರಿಯ ಹೆಚ್ಚುವರಿ ಎಸ್ಪಿ ಗೋಪಾಲ್ ಸಿ. 'ಪ್ರಜಾವಾಣಿ'ಗೆ ತಿಳಿಸಿದರು.

ಪಿಎಸ್‌ಐ ಪರೀಕ್ಷೆ: ಜೀನ್ಸ್, ಶೂ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್ (ಪಿಎಸ್‌ಐ) 545 ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ 23ರಂದು ಮರು ಲಿಖಿತ ಪರೀಕ್ಷೆ ನಡೆಸಲಿದ್ದು, ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ವಸ್ತ್ರ ಸಂಹಿತೆ ಕಡ್ಡಾಯಗೊಳಿಸಿದೆ.

'ಪುರುಷ ಅಭ್ಯರ್ಥಿಗಳು ಪೂರ್ಣ ತೋಳಿನ ಶರ್ಟ್ ಧರಿಸಲು ಅವಕಾಶ ಇಲ್ಲ. ಅದರ ಬದಲು ಅರ್ಧ ತೋಳಿನ ಶರ್ಟ್ ಧರಿಸಬೇಕು. ಸಾಧ್ಯವಾದಷ್ಟು ಕಾಲರ್‌ರಹಿತ ಶರ್ಟ್ ಧರಿಸಬೇಕು. ಜೇಬು ಇಲ್ಲದಿರುವ ಅಥವಾ ಕಡಿಮೆ ಜೇಬುಗಳಿರುವ ಪ್ಯಾಂಟ್ ಧರಿಸಬೇಕು. ಹಾಗೆಂದು, ಕುರ್ತಾ, ಪೈಜಾಮ, ಜೀನ್ಸ್ ಪ್ಯಾಂಟ್ ಧರಿಸಲು ಅನುಮತಿ ಇಲ್ಲ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದಾರೆ.

'ಧರಿಸುವ ಬಟ್ಟೆಗಳು ಹಗುರವಾಗಿರಬೇಕು. ಅಂದರೆ, ಜಿಪ್ ಪಾಕೆಟ್‌ಗಳು, ದೊಡ್ಡ ಬಟನ್‌ಗಳು, ವಿಸ್ತಾರವಾದ ಕಸೂತಿ ಇರುವ ಬಟ್ಟೆಗಳು ಬಟ್ಟೆಯಲ್ಲಿ ಇರಬಾರದು. ಪರೀಕ್ಷೆಯ ಹಾಲ್ ಒಳಗೆ ಶೂಗಳನ್ನು ಕಟ್ಟುನಿಟ್ಟಾಗಿ ನಿಷೇಧಿಸ ಲಾಗಿದೆ. ಸ್ಯಾಂಡಲ್ ಅಥವಾ ತೆಳುವಾದ ಅಡಿಭಾಗ ಇರುವ ಚಪ್ಪಲಿಗಳನ್ನು ಧರಿಸುವುದು ಸೂಕ್ತ. ಕುತ್ತಿಗೆಯ ಸುತ್ತ ಯಾವುದೇ ಲೋಹದ ಆಭರಣ ಧರಿಸುವುದು ಅಥವಾ ಕಿವಿಯೋಲೆ, ಉಂಗುರ, ಕಡಗಗಳನ್ನು ಧರಿಸುವುದನ್ನೂ ನಿಷೇಧಿಸಲಾಗಿದೆ' ಎಂದಿದ್ದಾರೆ.

'ಮಹಿಳಾ ಅಭ್ಯರ್ಥಿಗಳು ವಿಸ್ತಾರವಾದ ಕಸೂತಿ, ಹೂಗಳು, ಬ್ರೂಚ್‌ಗಳು ಅಥವಾ ಬಟನ್‌ಗಳನ್ನು ಹೊಂದಿರುವ ಬಟ್ಟೆಗಳನ್ನು ಧರಿಸುವುದನ್ನು ನಿಷೇಧಿಸಲಾಗಿದೆ. ಪೂರ್ಣ ತೋಳಿನ ಬಟ್ಟೆ, ಜೀನ್ಸ್ ಪ್ಯಾಂಟ್ ಧರಿಸಬಾರದು. ಎತ್ತರವಾದ ಹಿಮ್ಮಡಿಯ ಮತ್ತು ದಪ್ಪವಾದ ಅಡಿಭಾಗ ಹೊಂದಿರುವ ಶೂ ಅಥವಾ ಚಪ್ಪಲಿ ಧರಿಸಬಾರದು. ತೆಳುವಾದ ಅಡಿಭಾಗ ಹೊಂದಿರುವ ಚಪ್ಪಲಿ ಧರಿಸುವುದು ಕಡ್ಡಾಯ. ಮಂಗಳಸೂತ್ರ ಮತ್ತು ಕಾಲುಂಗುರ ಹೊರತುಪಡಿಸಿ ಬೇರೆ ಯಾವುದೇ ರೀತಿಯ ಲೋಹದ ಆಭರಣಗಳನ್ನು ಧರಿಸಬಾರದು' ಎಂದೂ ಅವರು ಹೇಳಿದ್ದಾರೆ.

'ಎಲೆಕ್ಟ್ರಾನಿಕ್ ವಸ್ತುಗಳು, ಮೊಬೈಲ್ ಫೋನ್, ಪೆನ್ ಡ್ರೈವ್, ಇಯರ್ ಫೋನ್, ಮೈಕ್ರೋಫೋನ್, ಬ್ಲೂಟೂತ್ ಸಾಧನ, ಕೈ ಗಡಿಯಾರವನ್ನು ಪರೀಕ್ಷಾ ಕೊಠಡಿಯ ಒಳಗೆ ತೆಗೆದುಕೊಂಡು ಹೋಗುವಂತಿಲ್ಲ. ಕುಡಿಯುವ ನೀರಿನ ಬಾಟಲಿ, ತಿಂಡಿ, ತಿನಿಸುಗಳನ್ನು ತರುವುದು, ತಿನ್ನುವುದನ್ನು ನಿಷೇಧಿಸಲಾಗಿದೆ. ತಲೆಯ ಮೇಲೆ ಟೋಪಿ ಧರಿಸಬಾರದು, ಯಾವುದೇ ರೀತಿಯ ಮಾಸ್ಕ್ ಧರಿಸುವಂತಿಲ್ಲ' ಎಂದು ಕಟ್ಟುನಿಟ್ಟಿನ ಸೂಚನೆ ನೀಡಿರುವ ಅವರು, ನಿಯಮ ಪಾಲಿಸದ ಅಭ್ಯರ್ಥಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಪಿಎಸ್‌ಐ ಮರುಪರೀಕ್ಷೆ: 17ಕ್ಕೆ ಪ್ರವೇಶಪತ್ರ ಲಭ್ಯ

ಬೆಂಗಳೂರು: ಪಿಎಸ್‌ಐ ನೇಮಕಾತಿ ಮರುಪರೀಕ್ಷೆ ಜ.23ರಂದು ನಡೆಯಲಿದ್ದು, ಅಭ್ಯರ್ಥಿಗಳು ಜ.17ರಂದು ಬೆಳಿಗ್ಗೆ 11ರಿಂದ ಪ್ರವೇಶಪತ್ರ ಡೌನ್ಲೋಡ್ ಮಾಡಿಕೊಳ್ಳಬಹುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಪ್ರಾಧಿಕಾರದ ಜಾಲತಾಣ http://kea.kar.nic.in ನಲ್ಲಿ ನಿಗದಿತ ಲಿಂಕ್ ಆಯ್ಕೆ ಮಾಡಿಕೊಳ್ಳಬೇಕು. ಬಳಿಕ ಆಧಾರ್ ಸಂಖ್ಯೆ ಮತ್ತು ಹೆಸರು ನಮೂದಿಸಿ ಪ್ರವೇಶ ಪತ್ರ ಪಡೆಯಬಹುದು. ಪರೀಕ್ಷೆ 23ರಂದು ಬೆಳಿಗ್ಗೆ 10.30ರಿಂದ ಮಧ್ಯಾಹ್ನ 2ರವರೆಗೆ ನಡೆಯಲಿದೆ. ಅಭ್ಯರ್ಥಿಗಳು ವಸ್ತ್ರಸಂಹಿತೆ ಸೇರಿದಂತೆ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಪ್ರಾಧಿಕಾರ ಸೂಚಿಸಿದೆ.

ಜಿಲ್ಲಾ ಪಂಚಾಯತ, ಕೊಪ್ಪಳ

ಅನುಬಂಧ–"ಎ"

2023–24ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಅನುದಾನದ ಕಾಮಗಾರಿಗಳು ಹಾಗೂ ಇತರೆ ಯೋಜನೆಗಳಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳನ್ನು ಗುಣಮಟ್ಟ ಪರಿಶೀಲಿಸಿ 3ನೇ ವ್ಯಕ್ತಿಯ ತಪಾಸಣೆಯ ಇ–ಟೆಂಡರನ್ನು ದ್ವಿಲಕೋಟೆಗಳಲ್ಲಿ ಸಲ್ಲಿಸಲು ಜಿಲ್ಲಾ ಪಂಚಾಯತಿ ಕೊಪ್ಪಳ ಇವರು ಅವ್ಹಾನಿಸಿರುತ್ತಾರೆ. ಆಸಕ್ತಿಯುಳ್ಳ ಟೆಂಡರುದಾರರು, ಟೆಂಡರ್ https://www.eproc.karnataka.gov.in ವೆಬ್ ಸೈಟ್ ಸಂಪರ್ಕಿಸಲು ತಿಳಿಸಲಾಗಿದೆ. (ಎಲ್ಲಾ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ:08539–220002, ಇ–Mail: ceo_zp_kpl@nic.in)

ಕಾಮಗಾರಿ ಹೆಸರು: 2023–24ನೇ ಸಾಲಿನ ಕೊಪ್ಪಳ ಜಿಲ್ಲೆಯ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಅನುದಾನದ ಕಾಮಗಾರಿಗಳು ಹಾಗೂ ಇತರೆ ಯೋಜನೆಗಳಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿಗಳನ್ನು ಗುಣಮಟ್ಟ ಪರಿಶೀಲಿಸಿ 3ನೇ ತಂಡದ ತಪಾಸಣೆಯ ಇ–ಟೆಂಡರ ಮೂಲಕ ಆಯ್ಕೆ ಮಾಡುವ ಕುರಿತು. **ಅಂದಾಜು ಮೊತ್ತ:** 3587 **ಇ.ಎಮ್.ಡಿ ಮೊತ್ತ:** 15.00 **ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ:** 20/01/2024 ಸಂಜೆ 5.30 ಗಂಟೆಗೆ **ಟೆಂಡರಿನ ದಾಖಲೆಗಳನ್ನು ವೆಬ್ ಸೈಟಿನಲ್ಲಿ ಪಡೆಯುವ ದಿನಾಂಕ:** 12–01–2024 **ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 22–01–2024 **ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ:** 22–01–2024

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ, ಕೊಪ್ಪಳ
ವಾ.ಸಾ.ಇ/ಕೊಪ್ಪಳ/334/ದೇಶಪಾಂಡೆಪಬ್ಲಿಸಿಟಿ/2023–24

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರ ಕಛೇರಿ (ತಾಂತ್ರಿಕ), ಬೆಂಘತ್ಯಾನಿನಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.

ಸಂ: ಮುಅ&ಮುಪ್ರವ್ಯ(ತಾಂ)/ಬೆಂಘತ್ಯಾನಿನಿ/ಟೆಂಡ್/06/2023–24 ದಿನಾಂಕ:16.01.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಬಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕಾಮಗಾರಿಗಳಿಗೆ 15 ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ ಮತ್ತು ಅದಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಸರ್ಕಾರವು ಅನುಮೋದಿಸಿದೆ.
2. ಈ ನಿಟ್ಟಿನಲ್ಲಿ, ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ, ಬೆಂಗಳೂರು ಅವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗೆ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನ (ಅಂದರೆ https://kppp.karnataka.gov.in) ಮೂಲಕ ಕೋಷ್ಟಕದಲ್ಲಿ ನೀಡಲಾದ ಕಾಮಗಾರಿಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು ಬಿಡ್‌ದಾರರು ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಅರ್ಹತೆ ಪಡೆಯಲು ಕೆ.ಡಬ್ಲ್ಯೂ–4 ನೋಂದಾಯಿತ ಗುತ್ತಿಗೆದಾರರಾಗಿರಬೇಕು.
3. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.
5. GSTಅನ್ನು ಪ್ರತ್ಯೇಕವಾಗಿ ಪಾವತಿಸಬೇಕು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿನ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇಎಂಡಿ (ರೂಗಳಲ್ಲಿ)
1	ಮಹದೇವಪುರ ಕ್ಷೇತ್ರದ ಎಸ್‌ಡಬ್ಲ್ಯೂಎಂ ಮಂಡೂರಿನ ಕಸದ ಜಾಗದಿಂದ ಲೆಗಸಿ ತ್ಯಾಜ್ಯದ ಜೈವಿಕ ಗಣಿಗಾರಿಕೆ ಕಾಮಗಾರಿ. (ಹಂತ–2).	7967.53	ರೂ. 1,00,000/– ಇ–ಪೇಮೆಂಟ್–ಆನ್‌ಲೈನ್/ ಆರ್‌ಟಿಜಿಎಸ್/ಎನ್‌ಇಎಫ್‌ಟಿ/ ಓಟಿಸಿ, ಮೂಲಕ. ಉಳಿದ ಮೊತ್ತ ರೂ. 78,67,500/– ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ.

ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿದಂತೆ): **24 ತಿಂಗಳು.** 1. ಬಿಡ್ ಪೂರ್ವಭಾವಿ ಸಭೆಯು **24.01.2024 ರಂದು 15:00 ಗಂಟೆಗೆ** ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ ನಡೆಯಲಿದೆ.
2. ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು **06.02.2024 ರಂದು ಅಥವಾ 16:00 ಗಂಟೆಗಳ ಮೊದಲು** ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ **https://kppp.karnataka.gov.in** ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್ ಅನ್ನು ಕೆಪಿಪಿ–ಪೋರ್ಟಲ್ ಮೂಲಕ **07.02.2024 ರಂದು 16:30 ಗಂಟೆಗಳ ನಂತರ** ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ. ಬಿಡ್ದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ನಿರ್ದಿಷ್ಟಪಡಿಸಿದಂತೆ ಬಿಡ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಬಿಡ್‌ಗಳನ್ನು ತೆರೆಯಲಾಗುತದೆ.
3. ನಿಯಂತ್ರಣಕ್ಕೆ ಮೀರಿದ ಸಿಸ್ಟಮ್ ವೈಫಲ್ಯದ ಕಾರಣದಿಂದಾಗಿ ಯಾವುದೇ ವಿಳಂಬಗಳಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರವಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್‌ನ ಇ–ಮೇಲ್ ವಿಳಾಸ https://kppp.karnataka.gov.in ಆಗಿದೆ.ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರರಾಗಿರುವುದಿಲ್ಲ.
4. ಯಾವುದೇ ತಿದ್ದುಪಡಿ/ಅನುಬಂಧಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ವಾಸಾಸಂಇ/ವಾಪ್ರ/3072/2023–24

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.

ಸಂಖ್ಯೆ:ಕಾಅ/ಗ್ರಾಕುನೀ&ನೈವಿ/ಬೆಂನ/ತಾಂಸ/ಟೆಂಡರ್/22/2023–24 ದಿನಾಂಕ: 12–01–2024

ಅಲ್ಪಾವಧಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ

2022–23 ನೇ ಸಾಲಿನ JJM ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **23–01–2024 ರಂದು ಸಂಜೆ 4.00 ಗಂಟೆಯವರೆಗೆ** ಸಲ್ಲಿಸಬಹುದಾಗಿರುತ್ತದೆ.

ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **https://kppp.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/3050/ಅಡ್ವರ್ಟೋರ್/2023–24

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ

ಆಯುಕ್ತರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು–560024.
ಇ–ಮೇಲ್: commisionerahvs@gmail.com ದೂ: 080–23412767

ಸಂ: GEM/2023/B/4491596-24 ದಿನಾಂಕ: 16.01.2024

ಅಲ್ಪಾವಧಿ ಟೆಂಡರ್ ನೋಟಿಫಿಕೇಷನ್
("ಜೆಮ್ ಪೋರ್ಟಲ್" ಮೂಲಕ ಮಾತ್ರ)

2023–24ನೇ ಸಾಲಿನಲ್ಲಿ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕೇಂದ್ರ ಪುರಸ್ಕೃತ ಯೋಜನೆಯಡಿ Two-mode Ice Lined Refrigerator (Large) ಗಳನ್ನು ಪೂರೈಸುವುದಕ್ಕೆ ಸಂಬಂಧಿಸಿದಂತೆ BID No: Gem/2023/B/4491596-24 ರಲ್ಲಿ ಅರ್ಹ ಬಿಡ್ಡುದಾರರಿಂದ ಜೆಮ್ ಪೋರ್ಟಲ್ ಮೂಲಕ ಟೆಂಡರನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿಪಡಿಸಿದ ಒಟ್ಟು ಮೊತ್ತ ರೂ. 358.20 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: **16–01–2024** ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು **"ಜೆಮ್ ಪ್ಲಾಟ್‌ಫಾರ್ಮ್"** ನಲ್ಲಿ ದಿನಾಂಕ: **16–01–2024 ರಿಂದ 27–01–2024 ರವರೆಗೆ ಸಾಯಂಕಾಲ 5.00 ಗಂಟೆಯೊಳಗೆ** ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಜೆಮ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–
ಉಪ ನಿರ್ದೇಶಕರು,
ಪಶುವೈದ್ಯಕೀಯ ಔಷಧಿ ಭಂಡಾರ
DIPR/CP/3076/SPAN/2023-24

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ

ಮುಖ್ಯ ಪ್ರಧಾನ ವ್ಯವಸ್ಥಾಪಕರವರ ಕಛೇರಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಮುಇಂ&ಮುಪ್ರವ್ಯ(ತಾಂತ್ರಿಕ)/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/03/2023–24 ದಿನಾಂಕ: 05–01–2024

ತಿದ್ದುಪಡಿ
ಆಸಕ್ತಿ ವ್ಯಕ್ತಪಡಿಸುವಿಕೆ (ಇಓಐ)

ತಾಂತ್ರಿಕ ಕಾರಣಗಳಿಂದಾಗಿ ಇಓಐ ಪ್ರಕಟಣೆ ಸಂಖ್ಯೆ: ಮುಇಂ&ಮುಪ್ರವ್ಯ (ತಾಂತ್ರಿಕ)/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/03/2023–24, ದಿನಾಂಕ: 05–01–2024 ರ ಇಓಐ ಸಲ್ಲಿಸುವ ದಿನಾಂಕವನ್ನು ಕೆಳಕಂಡಂತೆ ವಿಸ್ತರಿಸಲಾಗಿದೆ.

- ಇಓಐ ಪ್ರತಿಕ್ರಿಯನ್ನು ಸಲ್ಲಿಸಲು ಕೊನೆಯ ದಿನಾಂಕ (ಮುಕ್ತಾಯ): 24/01/2024 ರ ಸಂಜೆ 4.00 ಗಂಟೆಗೆ. ಇ–ಮೇಲ್: agmbswml@gmail.com
- ಕೆಪಿಪಿ ಪೋರ್ಟಲ್ ಮೂಲಕ ಇಓಐ ಗೆ ಈಗಾಗಲೇ ಪ್ರತಿಕ್ರಿಯೆ ಸಲ್ಲಿಸಿರುವವರು ಮೂಲ ಪ್ರತಿಯನ್ನು (ಸದರಿ ಸಹಿಯೊಂದಿಗೆ) ಸ್ಪೀಡ್ ಪೋಸ್ಟ್ ಅಥವಾ ಕೂರಿಯರ್ ಅಥವಾ ಭೌತಿಕವಾಗಿ ಮೇಲಿನ ವಿಳಾಸಕ್ಕೆ 29/01/2024 ರ ಸಂಜೆ 4.00 ಗಂಟೆ ಅಥವಾ ಮುಂಚಿತವಾಗಿ ತಲುಪಿಸಬೇಕು.

ಇಂತಹ ಉಪಕರಣಗಳನ್ನು ವೈಶಿಷ್ಟ್ಯತೆಯಂತೆ ತಯಾರಿಕೆ ಮತ್ತು/ಅಥವಾ ಸರಬರಾಜು ಮಾಡಿರುವ ಅನುಭವಿ ಆಸಕ್ತಿವುಳ್ಳ ಸಂಸ್ಥೆಗಳು ವೆಬ್‌ಸೈಟ್ www.kppp.kar.gov.in ಮೂಲಕ ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸುವ ಮೂಲಕ ಇಓಐ ನಲ್ಲಿ ಭಾಗವಹಿಸಬಹುದು.

ಸಹಿ/–
ಮುಖ್ಯ ಇಂಜಿನಿಯರ್ & ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಬಿಎಸ್‌ಡಬ್ಲ್ಯೂಎಂಎಲ್
ವಾ.ಸಾ.ಸಂ.ಇ/ವಾಪ್ರ/3070/ಆಕಾರ್/2023–24

ಪ್ರಜಾವಾಣಿ

ಸಂಕ್ರಾಂತಿ ಸಡಗರ

ವರ್ಷದ ಮೊದಲ ಹಬ್ಬ ಮಕರ ಸಂಕ್ರಮಣವನ್ನು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಲಾಯಿತು. ಸಂಕ್ರಾಂತಿ ಹಬ್ಬದ ದಿನ ಹೊಸ ಉಡುಪುಗಳನ್ನು ತೊಟ್ಟು , ಸ್ನೇಹಿತರ ಮನೆಗೆ ತೆರಳಿ ಎಳ್ಳು ಬೆಲ್ಲವನ್ನು ಕೊಟ್ಟು ಸಂಭ್ರಮಿಸಿದ ಕ್ಷಣಗಳನ್ನು ಹಂಚಿಕೊಂಡಿರುವವರ ಆಯ್ದ ಕೆಲವು ಚಿತ್ರಗಳು ಇಲ್ಲಿವೆ.

ಸಾಂಪ್ರದಾಯಿಕ ಉಡುಗೆ ತೊಡುಗೆಗಳಿಂದ ಹಿಡಿದು, ಮನಸೂರೆಗೊಳಿಸುವ ರಂಗೋಲಿ ಮತ್ತು ಸಕ್ಕರೆ ಅಚ್ಚುಗಳ ಸಿಹಿಯವರೆಗೆ, ಎಳ್ಳು ಬೆಲ್ಲವನ್ನು ಬೀರುವ ಸಂಭ್ರಮಾಚರಣೆಯ ತುಣುಕುಗಳನ್ನು ನಮ್ಮೊಂದಿಗೆ ಹಂಚಿಕೊಂಡಿದ್ದಕ್ಕೆ ಧನ್ಯವಾದಗಳು. ಇದೇ ರೀತಿಯ ರೋಚಕ ಸ್ಪರ್ಧೆಯಲ್ಲಿ ಭಾಗವಹಿಸಲು ಕಾಯ್ದಿರಿ!

ನಿರೀಕ್ಷಾ ಗೌಡ
ಮಂಡ್ಯ

ಧನ್ಯ
ಬೆಂಗಳೂರು

ಆಶಾ
ಬೆಂಗಳೂರು


ಗ್ರೀಷ್ಮ , ಸುಶ್ರಾವ್ಯ, ಮಹಿಮಾ, ನಲ್ಮೆ
ಹೊಸದುರ್ಗ

ಮಿಶಿಕ
ಬೆಂಗಳೂರು


ಚಿರಸ್ವಿ
ದಾವಣಗೆರೆ

ಶೃತಿ ಮತ್ತು ಸ್ವಸ್ತಿಕ್
ಬೆಂಗಳೂರು

ಇಶಾನಿ
ಬೇಲೂರು


ಅದ್ವಿತಿ ಶೆಟ್ಟಿ
ಮಂಗಳೂರು

ಅದ್ವಿತ್ ಮತ್ತು ಚಿರಾತ್
ಬೆಂಗಳೂರು


ಕೃತಿ ಭಟ್
ಬೆಂಗಳೂರು

ರೇಖಾ
ಬೆಂಗಳೂರು


ಆರಾಧ್ಯಾ,
ಶ್ರೇಯಾ, ತನ್ವಿ
ಬೆಂಗಳೂರು


ಅದ್ವಿಕಾ
ಮೈಸೂರು


ಹಂಸ
ಬೆಂಗಳೂರು

ಕೃಧಾ
ಬೆಂಗಳೂರು

ನಿಹಾರಿಕಾ ಕೋಟಿ
ಗದಗ


ರೂಪ ಮತ್ತು ಕುಟುಂಬ
ಬೆಂಗಳೂರು

ಶ್ರೀಗೌರಿ
ವಿಜಯನಗರ

ಕವಿತಾ ದಿವಾಕರ್
ಬೆಂಗಳೂರು

ರುದ್ಧಿ ಗೌಡ
ಚನ್ನಪಟ್ಟಣ

ಸಾನ್ವಿ , ಪುನರ್ವಿ
ಬೆಂಗಳೂರು

ದಿವ್ಯ
ಕೆ.ಆರ್.ನಗರ

ಶಾಂತಾ, ಮುಕುಂದ
ಬೆಂಗಳೂರು

ಹನ್ನೆರಡನೇ ಶತಮಾನಕ್ಕೆ ಕರೆದೊಯ್ಯಲಿದೆ 215ನೇ ಫಲಪುಷ್ಪ ಪ್ರದರ್ಶನ • 18ರಿಂದ 28ರವರೆಗೆ ಲಾಲ್‌ಬಾಗ್‌ನಲ್ಲಿ ಆಯೋಜನೆ

ಗಾಜಿನ ಮನೆಯಲ್ಲಿ ಅನುಭವ ಮಂಟಪದ ಅನಾವರಣ

ಪ್ರಜಾವಾಣಿ ವಾರ್ತೆ

ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಅನುಭವ ಮಂಟಪದ ಮಾದರಿಗೆ ಸಿಬ್ಬಂದಿ ಮಂಗಳವಾರ ಹೂವುಗಳನ್ನು ಅಳವಡಿಸಿದರು (ಎಡ ಚಿತ್ರ). ಗಾಜಿನ ಮನೆಯಲ್ಲಿ ಹೂವುಗಳ ಕುಂಡಗಳನ್ನು ಜೋಡಿಸಿ ಇಟ್ಟಿರುವುದು –ಪ್ರಜಾವಾಣಿ ಚಿತ್ರಗಳು

ಬೆಂಗಳೂರು: ತೋಟಗಾರಿಕೆ ಇಲಾಖೆಯು ಗಣರಾಜ್ಯೋತ್ಸವದ ಪ್ರಯುಕ್ತ ಇದೇ 18ರಿಂದ 28ರವರೆಗೆ ಲಾಲ್‌ಬಾಗ್‌ನಲ್ಲಿ 215ನೇ ಫಲಪುಷ್ಪ ಪ್ರದರ್ಶನವನ್ನು ಹಮ್ಮಿಕೊಂಡಿದೆ.ಈ ಬಾರಿಯ ಪ್ರದರ್ಶನವು ಬಸವಣ್ಣ ಮತ್ತು ವಚನ ಸಾಹಿತ್ಯವನ್ನು ಆಧರಿಸಿದ್ದು, ಗಾಜಿನ ಮನೆಯ ಒಳಗಡೆ 12ನೇ ಶತಮಾನದ 'ಅನುಭವ ಮಂಟಪ' ಹೂವುಗಳಲ್ಲಿ ಅರಳಲಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇಲಾಖೆಯ ನಿರ್ದೇಶಕ ರಮೇಶ್ ಡಿ.ಎಸ್., '11 ದಿನಗಳು ನಡೆಯಲಿರುವ ಫಲಪುಷ್ಪ ಪ್ರದರ್ಶನವು 12ನೇ ಶತಮಾನಕ್ಕೆ ಕರೆದೊಯ್ಯಲಿದೆ. ಗಾಜಿನ ಮನೆಯ ಪ್ರವೇಶ ದ್ವಾರದ ಬಳಿ ಇಂಡೋ-ಅಮೆರಿಕನ್ ಹೈಬ್ರಿಡ್ ಸೀಡ್ಸ್ ಕಂಪನಿಯ ಹೂ ಜೋಡಣೆ ಇರಿಸಲಾಗುತ್ತದೆ. ಪೆಲನಾಪ್ಸಿಸ್, ಡೆಂಡ್ರೊಬಿಯಂ ವಾಂಡಾ ಸೇರಿ 20 ಬಗೆಯ ಹೂವುಗಳನ್ನು ಬಳಸಲಾಗುತ್ತದೆ' ಎಂದರು.

'ಇಲ್ಲಿ ಬಸವಣ್ಣ ಅವರ ಪುತ್ಥಳಿಯನ್ನೂ ಇರಿಸಲಾಗುತ್ತದೆ. ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ಅನುಭವ ಮಂಟಪದ ಪುಷ್ಪ ಮಾದರಿ ತಲೆಯೆತ್ತಲಿದೆ. ಇದು ಬಸವಕಲ್ಯಾಣದಲ್ಲಿ ನಿರ್ಮಾಣದ ಹಂತದಲ್ಲಿರುವ ಅನುಭವ ಮಂಟಪದ ಯಥಾವತ್ ಕಿರು ಪುಷ್ಪ ಪ್ರತಿರೂಪವಾಗಿದ್ದು, 34 ಅಡಿ ಅಗಲ ಮತ್ತು 30 ಅಡಿ ಎತ್ತರ ಇರುತ್ತದೆ. 4.8 ಲಕ್ಷ ಹೂವುಗಳನ್ನು ಬಳಸುತ್ತಿದ್ದು, ಪ್ರದರ್ಶನದ ಅವಧಿಯಲ್ಲಿ ಎರಡು ಬಾರಿಗೆ 9.6 ಲಕ್ಷ ಹೂವುಗಳನ್ನು ಅಳವಡಿಸಲಾಗುತ್ತದೆ' ಎಂದರು.

'ಅನುಭವ ಮಂಟಪದ ಪುಷ್ಪ ಮಾದರಿಯ ಮುಂದೆ ಬಸವಣ್ಣ ಅವರ 10 ಅಡಿ ಎತ್ತರದ ಪ್ರತಿಮೆ ಇರಲಿದೆ. ಬಸವಣ್ಣ ಅವರು ವಚನ ರಚಿಸುವ ಭಂಗಿಯನ್ನು ಇಲ್ಲಿ ನೋಡಬಹುದಾಗಿದೆ. ಗಾಜಿನ ಮನೆಯ ಕೇಂದ್ರ ಭಾಗದ ಬಲಬದಿಗೆ ವಚನಾನುಭವ ಗೋಷ್ಠಿಯನ್ನು ನೆನಪಿಸುವಂತಹ ಕಲಾಕೃತಿಗಳನ್ನು ಪ್ರದರ್ಶಿಸಲಾಗುತ್ತದೆ. ಬಸವಣ್ಣ ಅವರು ವಚನಗಳನ್ನು ವಾಚಿಸುತ್ತಿರುವ ಸನ್ನಿವೇಶದ ಪ್ರತಿಕೃತಿ ಇದಾಗಿರಲಿದೆ' ಎಂದು ತಿಳಿಸಿದರು.

'ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ಅನುಭವ ಮಂಟಪದ ಹಿಂಬದಿಗೆ ಬಸವಣ್ಣ ಅವರ ಬದುಕಿನ ವಿವಿಧ ಹಂತಗಳನ್ನು ಪ್ರತಿಬಿಂಬಿಸುವ 5 ಕಲಾಕೃತಿಗಳು ವಿಶೇಷ ಹೂ–ಗಿಡಗಳ ಜೋಡಣೆಯ ನಡುವೆ ಪ್ರದರ್ಶನ ಗೊಳ್ಳಲಿವೆ. ಕೇಂದ್ರಭಾಗದಲ್ಲಿ ಕೂಡಲ ಸಂಗಮದಲ್ಲಿರುವ ಬಸವಣ್ಣ ಅವರ ಐಕ್ಯ ಮಂಟಪದ ಪುಷ್ಪ ಮಾದರಿ ಇರುತ್ತದೆ. ಈ ಮಾದರಿಗೆ 1.5 ಲಕ್ಷ ಗುಲಾಬಿ ಹಾಗೂ 2 ಲಕ್ಷ ಸೇವಂತಿಗೆ ಹೂವುಗಳನ್ನು ಬಳಸಲಾಗಿದೆ' ಎಂದು ತಿಳಿಸಿದರು.

ಶರಣರ ಪ್ರತಿಮೆ: 'ಗಾಜಿನ ಮನೆಯ ಒಳಾಂಗಣದ ಹಿಂಬದಿಯ ಆವರಣದಲ್ಲಿ ಅಕ್ಕಮಹಾದೇವಿ, ಅಂಬಿಗರ ಚೌಡಯ್ಯ, ಹಡಪದ ಅಪ್ಪಣ್ಣ, ಕುಂಬಾರ ಗುಂಡಣ್ಣ, ಅಕ್ಕ ನಾಗಲಾಂಬಿಕೆ, ಮಡಿವಾಳ ಮಾಚಿದೇವ, ಸಮಗಾರ ಹರಳಯ್ಯ, ಬಾಚಿಕಾಯಕದ ಬಸವಣ್ಣ ಮತ್ತು ಶರಣೆ ಸತ್ಯಕ್ಕನವರ ಪ್ರತಿಮೆಗಳನ್ನು ಪೀಠದ ಮೇಲಿರಿಸಿ, ಪೀಠವನ್ನು ಹೂಗಳಿಂದ ಅಲಂಕರಿಸಲಾಗುತ್ತದೆ. ಗಾಜಿನ ಮನೆಯ ಕೇಂದ್ರ ಭಾಗದ ಎಡಬದಿಗೆ ಆಕರ್ಷಕ ವರ್ಟಿಕಲ್ ಗಾರ್ಡನ್ ಮತ್ತು ಇಷ್ಟಲಿಂಗ ಪರಿಕಲ್ಪನೆಯ ಕಲಾಕೃತಿ ಪ್ರದರ್ಶಿಸಲಾಗುತ್ತದೆ. ಗಾಜಿನ ಮನೆಯ ಒಳಾಂಗಣದಲ್ಲಿ 8 ಅಡಿ ಅಗಲ ಮತ್ತು 7 ಅಡಿ ಉದ್ದದ ಪ್ರದೇಶದಲ್ಲಿ ಪ್ರಾಚೀನ ಓಲೆಗರಿ ಹಸ್ತಪ್ರತಿಗಳು ಮತ್ತು ಅವುಗಳ ಸಂರಕ್ಷಣಾ ವಿಧಾನ, ಮಹತ್ವ ಕುರಿತಂತೆ ವಿಶೇಷ ಪ್ರದರ್ಶನ ಇರುತ್ತದೆ' ಎಂದು ಹೇಳಿದರು.

'ಗಾಜಿನ ಮನೆಯ ಮೂಲೆಯಲ್ಲಿ ಪುಷ್ಪ ಪಿರಮಿಡ್‌ಗಳು ತಲೆಯೆತ್ತಲಿವೆ. ಇದಕ್ಕೆ 15 ಸಾವಿರಕ್ಕೂ ಅಧಿಕ ಹೂ ಕುಂಡಗಳನ್ನು ಬಳಸಲಾಗುತ್ತದೆ. ಬಸವಾದಿ ಶರಣರ ಚಿತ್ರ ಮತ್ತು ವಚನಗಳನ್ನೂ ಗಾಜಿನ ಮನೆಯ ಒಳಗಡೆ ಪ್ರದರ್ಶಿಸಲಾಗುತ್ತದೆ. ಗಾಜಿನ ಮನೆಯ ಹೊರಗಡೆಯೂ ವಿವಿಧ ಆಕರ್ಷಣೆಗಳು ಇರಲಿವೆ. ಆಯ್ದ ಆರು ಸ್ಥಳದಲ್ಲಿ ಎಲ್‌ಇಡಿ ಸ್ಕ್ರೀನ್‌ಗಳ ಮೂಲಕ ಬಸವಣ್ಣ ಅವರ ತತ್ವಗಳನ್ನು ಪ್ರದರ್ಶಿಸಲಾಗುತ್ತದೆ' ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ಕಾರ್ಯದರ್ಶಿ ಶಮ್ಲಾ ಇಕ್ಬಾಲ್, ಜಂಟಿ ನಿರ್ದೇಶಕ ಎಂ. ಜಗದೀಶ್, ಉಪನಿರ್ದೇಶಕಿ ಜಿ. ಕುಸುಮಾ ಇದ್ದರು.

ಅಂಕಿ ಅಂಶಗಳು

136 ಉದ್ಯಾನದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾಗಳು

32 ಲಕ್ಷ ಪ್ರದರ್ಶನಕ್ಕೆ ಬಳಕೆಯಾಗುವ ಹೂವುಗಳು

₹2.85 ಕೋಟಿ ಫಲಪುಷ್ಪ ಪ್ರದರ್ಶನಕ್ಕೆ ಮಂಜೂರಾದ ಅನುದಾನ

ಪ್ರವೇಶ ಶುಲ್ಕ

ವಯಸ್ಕರಿಗೆ	₹80
ಮಕ್ಕಳಿಗೆ (12 ವರ್ಷದೊಳಗೆ)	₹30
ರಜಾ ದಿನಗಳಲ್ಲಿ	₹100

ಸಮವಸ್ತ್ರ ಧರಿಸಿದ 10ನೇ ತರಗತಿವರೆಗಿನ ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ

ಪ್ರದರ್ಶನದ ಸಮಯ

ಬೆಳಿಗ್ಗೆ 6ರಿಂದ ಸಂಜೆ 6.30

ಮೆಟ್ರೊ ಬಳಸಲು ಮನವಿ

'ಲಾಲ್‌ಬಾಗ್ ಸುತ್ತಮುತ್ತ ವಾಹನ ಪಾರ್ಕಿಂಗ್‌ಗೆ ಸೂಕ್ತ ಸ್ಥಳಾವಕಾಶ ಇಲ್ಲದಿರುವುದರಿಂದ ಸಾಧ್ಯವಾದಷ್ಟು ಮೆಟ್ರೊ ರೈಲುಗಳನ್ನು ಬಳಸುವುದು ಉತ್ತಮ. ಲಾಲ್‌ಬಾಗ್ ಪಶ್ಚಿಮ ದ್ವಾರಕ್ಕೆ ಹೊಂದಿಕೊಂಡು ಮೆಟ್ರೊ ನಿಲ್ದಾಣ ಇರುವುದರಿಂದ ಬರುವವರಿಗೆ ಅನುಕೂಲ ಆಗಲಿದೆ. ನಾಲ್ಕು ಚಕ್ರಗಳ ವಾಹನಗಳಿಗೆ ಶಾಂತಿನಗರ ಬಸ್‌ನಿಲ್ದಾಣದ ಬಹುಮಹಡಿ ವಾಹನ ನಿಲ್ದಾಣ, ಜೋಡಿ ರಸ್ತೆಯ ಬಳಿಯ ಹಾಪ್‌ಕಾಮ್ಸ್ ಆವರಣ ಹಾಗೂ ಜೆ.ಸಿ. ರಸ್ತೆಯಲ್ಲಿರುವ ಬಿಬಿಎಂಪಿ ಬಹುಮಹಡಿ ವಾಹನ ನಿಲ್ದಾಣದಲ್ಲಿ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಲಾಗಿದೆ. ದ್ವಿಚಕ್ರ ವಾಹನಗಳಿಗೆ ಲಾಲ್‌ಬಾಗ್ ಮುಖ್ಯದ್ವಾರದ ಬಳಿ ಇರುವ ಅಲ್ ಅಮೀನ್ ಕಾಲೇಜು ಆವರಣದಲ್ಲಿ ಅವಕಾಶ ನೀಡಲಾಗುತ್ತದೆ' ಎಂದು ರಮೇಶ್ ಡಿ.ಎಸ್. ವಿವರಿಸಿದರು.

ಜೇನು ತುಪ್ಪ ಬ್ರ್ಯಾಂಡ್ ಅನಾವರಣ

'ಫಲಪುಷ್ಪ ಪ್ರದರ್ಶನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜ.18ರಂದು ಸಂಜೆ 6 ಗಂಟೆಗೆ ಉದ್ಘಾಟಿಸುತ್ತಾರೆ. ಇದೇ ವೇಳೆ ಕರ್ನಾಟಕದ ಜೇನು ತುಪ್ಪವನ್ನು ನೂತನ ಬ್ರ್ಯಾಂಡ್ ಅಡಿ ಲೋಕಾರ್ಪಣೆ ಮಾಡಲಾಗುತ್ತದೆ. ಇಲ್ಲಿನ ಜೇನು ತುಪ್ಪ ತನ್ನದೆಯಾದ ವಿಶೇಷತೆ ಹೊಂದಿದ್ದು, ಅದನ್ನು ನೂತನ ಬ್ರ್ಯಾಂಡ್ ಅಡಿ ಇನ್ನಷ್ಟು ಜನರಿಗೆ ತಲುಪಿಸಲಾಗುತ್ತದೆ' ಎಂದು ಶಮ್ಲಾ ಇಕ್ಬಾಲ್ ತಿಳಿಸಿದರು.

ಟಿಕೆಟ್ ಎಲ್ಲಿ ಲಭ್ಯ?

ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಟಿಕೆಟ್ ದೊರೆಯಲಿದೆ. ತೋಟಗಾರಿಕೆ ಇಲಾಖೆಯ ಜಾಲತಾಣದ ಮೂಲಕ ಆನ್‌ಲೈನ್‌ನಲ್ಲಿಯೂ ಟಿಕೆಟ್ ಪಡೆಯುವ ಅವಕಾಶ ನೀಡಲಾಗಿದೆ.

ಸಂಭ್ರಮದ ಘಾಟಿ ಸುಬ್ರಹ್ಮಣ್ಯ ರಥೋತ್ಸವ

ಪ್ರಜಾವಾಣಿ ವಾರ್ತೆ

ತೂಬಗೆರೆ (ದೊಡ್ಡಬಳ್ಳಾಪುರ): ಘಾಟಿಯ ಸುಬ್ರಹ್ಮಣ್ಯ ರಥೋತ್ಸವ ಷಷ್ಠಿಯ ದಿನವಾದ ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಭಕ್ತರು ರಥಕ್ಕೆ ಬಾಳೆಹಣ್ಣು, ದವನ ಎಸೆದು ಭಕ್ತಿ ಸಮರ್ಪಿಸಿದರು.

ಮಂಗಳವಾರ ಬೆಳಗಿನ ಜಾವದಿಂದಲೇ ದೇವಸ್ಥಾನದಲ್ಲಿ ಪೂಜಾ ಕಾರ್ಯಗಳು ಆರಂಭವಾದವು. ರಾತ್ರಿ 8.30ರವರೆಗೂ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ದೊಡ್ಡಬಳ್ಳಾಪುರ, ಬೆಂಗಳೂರು, ಚಿಕ್ಕಬಳ್ಳಾಪುರ, ಗೌರಿಬಿದನೂರು, ಕೋಲಾರ ಮತ್ತಿತರ ಸ್ಥಳಗಳಿಂದ 84 ವಿಶೇಷ ಜಾತ್ರಾ ಬಸ್ ವ್ಯವಸ್ಥೆ ಮಾಡಲಾಗಿತ್ತು. ರಥೋತ್ಸವಕ್ಕೆ ದೂರದ ಊರುಗಳಿಂದ ಬಂದವರಿಗೆ ಅನ್ನದಾಸೋಹ, ಮಜ್ಜಿಗೆ, ಪಾನಕದ ವ್ಯವಸ್ಥೆ ಮಾಡಲಾಗಿತ್ತು.

ರಥೋತ್ಸವಕ್ಕೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್.ಮುನಿಯಪ್ಪ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ಎಂ.ವೀರಪ್ಪಮೊಯ್ಲಿ, ಶಾಸಕ ಧೀರಜ್ ಮುನಿರಾಜ್, ಜಿಲ್ಲಾಧಿಕಾರಿ ಡಾ.ಎನ್.ಶಿವಶಂಕರ, ಉಪವಿಭಾಗಾಧಿಕಾರಿ ಎಂ.ಶ್ರೀನಿವಾಸ್, ತಹಶೀಲ್ದಾರ್ ವಿಭಾ ವಿದ್ಯಾ ರಾಥೋಡ್, ಟಿ.ವೆಂಕಟರಮಣಯ್ಯ ಭಾಗವಹಿಸಿದ್ದರು.

ಸಂಚಾರ ದಟ್ಟಣೆ ನಿಯಂತ್ರಿಸಲು ದೇವಾಲಯದಿಂದ ಒಂದು ಕಿ.ಮೀ ದೂರದಲ್ಲೇ ಬೈಕ್, ಕಾರು, ಬಸ್‌ಗಳಿಗೆ ಪ್ರತ್ಯೇಕವಾಗಿ 14 ಸ್ಥಳಗಳಲ್ಲಿ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲಾಗಿತ್ತು.

ದೊಡ್ಡಬಳ್ಳಾಪುರ ತಾಲ್ಲೂಕಿನ ಘಾಟಿ ಸುಬ್ರಹ್ಮಣ್ಯ ರಥೋತ್ಸವ ಮಂಗಳವಾರ ವಿಜೃಂಭಣೆಯಿಂದ ನಡೆಯಿತು

ಬಸವೇಶ್ವರ ಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸೋಂಪುರ ಬಳಿಯ ವರಹಾಸಂದ್ರದಲ್ಲಿ ಬಸವೇಶ್ವರ ದೇವಸ್ಥಾನ ಸಮಿತಿಯವರು ಸೋಮವಾರ ಆಯೋಜಿಸಿದ್ದ ಬಸವೇಶ್ವರ ಸ್ವಾಮಿ ದೇವರ ರಥೋತ್ಸವ, ಕಡಲೆಕಾಯಿ ಪರಿಷೆ ಸಂಭ್ರಮದಿಂದ ನಡೆಯಿತು. ಸುತ್ತ–ಮುತ್ತಲಿನ ಮೂವತ್ತೆರಡು ಹಳ್ಳಿಗಳ ಗ್ರಾಮಸ್ಥರು ಜಾತ್ರಾ ಮಹೋತ್ಸವಕ್ಕೆ ಸಾಕ್ಷಿಯಾದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರು ಬಸವೇಶ್ವರ ಸ್ವಾಮಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಜಾತ್ರಾ ಮಹೋತ್ಸವವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, 'ಸಂಕ್ರಾಂತಿ ಹಬ್ಬವನ್ನು ಎಲ್ಲ ವರ್ಗದ ಜನರು ಸೇರಿ ಆಚರಿಸಿಕೊಂಡು ಬರುತ್ತಿರುವುದು ಸಂತಸವಾಗಿದೆ. ಎಲ್ಲರಿಗೂ ಆರೋಗ್ಯ, ನೆಮ್ಮದಿ ಸಿಗಲಿ' ಎಂದು ಆಶಿಸಿದರು.

ಮುಮ್ಮಡಿ ನಿರ್ವಾಣ ಸ್ವಾಮಿಜಿ, ಶಿವರುದ್ರ ಸ್ವಾಮಿಜಿ, ಹರಗುರು ಚರಮೂರ್ತಿ ಸ್ವಾಮಿಜಿಗಳು ರಥೋತ್ಸವ ಮತ್ತು ಕಡಲೆಕಾಯಿ ಪರಿಷೆಗೆ ಚಾಲನೆ ನೀಡುತ್ತಿದ್ದಂತೆ ಭಕ್ತರ ಹರ್ಷಘೋಷ ಮುಗಿಲು ಮುಟ್ಟಿತು.

ದೇವಸ್ಥಾನ ಸಮಿತಿ ಅಧ್ಯಕ್ಷ ಎಂ.ರುದ್ರೇಶ್ ಅವರು ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ತಲಾ ಎರಡು ಸೇರು ಕಡಲೆಕಾಯಿ, ಒಂದು ಜಲ್ಲೆ ಕಬ್ಬನ್ನು ವಿತರಿಸಿದರು.

ಜಾತ್ರಾಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಎರಡನೇ ದಿನದ ಕುಸ್ತಿ ಪಂದ್ಯಾವಳಿಗೆ ನಟ ಪ್ರೇಮ್ ಚಾಲನೆ ನೀಡಿದರು. 'ಆರೋಗ್ಯವಂತ ಸಮಾಜಕ್ಕೆ ಕುಸ್ತಿ, ಕರಾಟೆ, ಯೋಗ, ಕ್ರೀಡೆಗಳು ಅವಶ್ಯಕವಾಗಿ ಬೇಕಾಗಿವೆ' ಎಂದು ಹೇಳಿದರು.

ಕರುನಾಡ ವಿಜಯಸೇನೆ ರಾಜ್ಯ ಘಟಕದ ಅಧ್ಯಕ್ಷ ಎಚ್.ಎನ್.ದೀಪಕ್ ಅವರು ವಿವಿಧ ಹೂವು, ಬಣ್ಣಗಳಿಂದ ಶೃಂಗರಿಸಿ ಮೆರವಣಿಗೆ ಬಂದಿದ್ದ ಗೋವುಗಳಿಗೆ ಪೂಜೆ ನೆರವೇರಿಸಿ, ಅಲಂಕೃತ ರಾಸುಗಳ ಮೆರವಣಿಗೆಗೆ ಚಾಲನೆ ನೀಡಿದರು.

ಮಾಳಗಾಲ: 'ಸಂಕ್ರಾಂತಿ ಉತ್ಸವ'ದ ಸಡಗರ

ರಾಶಿ ಪೂಜೆ, ರಾಸುಗಳ ಮೆರವಣಿಗೆ, ಎಳ್ಳು–ಬೆಲ್ಲ ವಿತರಣೆ, ವ್ಯವಸಾಯ ಪರಿಕರ ವೀಕ್ಷಿಸಿದ ಜನ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಒಂದೆಡೆ ರಾಶಿ ಪೂಜೆ, ಇನ್ನೊಂದೆಡೆ ರಾಸುಗಳ ಪೂಜೆ, ಮೆರವಣಿಗೆ, ನೇಗಿಲು, ಕೂರಿಗೆಯಂತಹ ಕೃಷಿ ಉಪಕರಣಗಳ ಪ್ರದರ್ಶನ, ಕಡಲೆಕಾಯಿ, ಅವರೆಕಾಯಿ, ಗೆಣಸು, ಎಳ್ಳು-ಬೆಲ್ಲ ಹಂಚುವ ಸಂಭ್ರಮ...

ರಾಜರಾಜೇಶ್ವರಿ ನಗರ ವ್ಯಾಪ್ತಿಯ ಮಾಳಗಾಲದಲ್ಲಿ ಕಾಂಗ್ರೆಸ್ ಮುಖಂಡ ಎನ್. ಶೇಖರ್ ಅವರು ಸೋಮವಾರ ಹಮ್ಮಿಕೊಂಡಿದ್ದ 'ಸಂಕ್ರಾಂತಿ ಉತ್ಸವ'ದಲ್ಲಿ ಕಂಡು ಬಂದ ಸಂಭ್ರಮದ ದೃಶ್ಯಗಳಿವು.

ಕೆಪಿಸಿಸಿ ವಕ್ತಾರೆ ಎಚ್.ಕುಸುಮಾ ಅವರು ಧಾನ್ಯಗಳ ರಾಶಿಗೆ, ಗೋವುಗಳು ಹಾಗೂ ಕೃಷಿ ಪರಕರಗಳಿಗೆ ಪೂಜೆ ನೆರವೇರಿಸುವ ಮೂಲಕ ಸಂಕ್ರಾಂತಿ ಉತ್ಸವ ಹಾಗೂ ಮೆರವಣಿಗೆಗೆ ಚಾಲನೆ ನೀಡಿದರು. ಉತ್ಸವಕ್ಕೆ ಬಂದಿದ್ದವರಿಗೆ ಕಡಲೆಕಾಯಿ, ಅವರೆಕಾಯಿ, ಗೆಣಸು, ಎಳ್ಳು, ಬೆಲ್ಲ, ಕಬ್ಬಿನ ಜಲ್ಲೆ ವಿತರಿಸಿದರು.

ಕಾಂಗ್ರೆಸ್ ಮುಖಂಡ ಕೊಟ್ಟಿಗೆಪಾಳ್ಯ ಎನ್.ಶೇಖರ್ ಮಾತನಾಡಿ, 'ಗ್ರಾಮೀಣ ಸೊಗಡು, ಜನಪದ ಕಲೆಗಳನ್ನು ನಗರದ ನಾಗರಿಕರಿಗೆ, ವಿಶೇಷವಾಗಿ ಯುವ ಸಮೂಹಕ್ಕೆ ಪರಿಚಯಿಸಲು ಸಂಕ್ರಾಂತಿ ಉತ್ಸವ ಆಚರಿಸಲಾಗುತ್ತಿದೆ' ಎಂದರು.

ಸಂಕ್ರಾಂತಿ ಉತ್ಸವದಲ್ಲಿ ವ್ಯವಸಾಯ ಉಪಕರಣಗಳ ಪ್ರದರ್ಶನ ವೀಕ್ಷಿಸುತ್ತಿರುವ ನಾಗರಿಕರು

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಅವರು ಮಾತನಾಡಿ, 'ಗ್ರಾಮೀಣ ಸೊಗಡನ್ನು ಪಟ್ಟಣದ ನಾಗರಿಕರಿಗೆ ಪರಿಚಯಿಸುತ್ತಿರುವ ಕೆಲಸ ಶ್ಲಾಘನೀಯ' ಎಂದರು. 'ನಾನು ಹಳ್ಳಿಯಲ್ಲೇ ಹುಟ್ಟಿ ಬೆಳೆದವನು. ಇಂದಿಗೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ. ಅನ್ನದಾತನೇ ದೇಶದ ಶಕ್ತಿ' ಎಂದರು.

ಕೆಪಿಸಿಸಿ ಸದಸ್ಯ ಮಂಜುನಾಥ್, ಪಾಲಿಕೆ ಮಾಜಿ ಸದಸ್ಯ ಜಿ.ಮೋಹನ್ ಕುಮಾರ್, ಮುಖಂಡರಾದ ಕೃಷ್ಣ ಮೂರ್ತಿ, ಕೊಡ್ಲಿ ಮಂಜುನಾಥ್, ರಾಂಪುರ ನಾಗೇಶ್, ಅಮರನಾಥ್, ಲಗ್ಗೆರೆ ರಮೇಶ್ ಗೌಡ, ಜೆ.ದಿನೇಶ್ ಇದ್ದರು.

ಉತ್ಸವದಲ್ಲಿ ಮಾಳಗಾಲ, ಕೊಟ್ಟಿಗೆ ಪಾಳ್ಯ, ಸಜ್ಜೆಪಾಳ್ಯ, ಸುಂಕದಕಟ್ಟೆ, ಶ್ರೀನಿವಾಸ ನಗರ, ಮದ್ದೂರಮ್ಮ ಬಡಾವಣೆ, ಸಲ್ಲಾಪುರದಮ್ಮ ಬಡಾವಣೆಯ ಜನರಿಗೆ ಸಂಕ್ರಾಂತಿ ಉಡುಗೊರೆ ನೀಡಲಾಯಿತು.

ಶಿವಗಂಗೆ: ವೈಭವದ ಗಿರಿಜಾ ಕಲ್ಯಾಣೋತ್ಸವ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕಿನ ಶಿವಗಂಗೆಯ ಪ್ರಸಿದ್ಧ 'ಶ್ರೀಗಿರಿಜಾ ಕಲ್ಯಾಣೋತ್ಸವ' (ಗಂಗಪ್ಪನ ಧಾರೆ) ಧಾರ್ಮಿಕ ವಿಧಿ ವಿಧಾನಗಳೊಂದಿಗೆ ವೈಭವದಿಂದ ನಡೆಯಿತು. ಸಾವಿರಾರು ಭಕ್ತರು ಭಾಗವಹಿಸಿ ಪುನೀತರಾದರು.

ಸೋಮವಾರ ಬೆಳಿಗ್ಗೆ 8.27ಕ್ಕೆ ಗಿರಿಯ(ಬೆಟ್ಟ) ಮೇಲಿನ ಕಕುದ್ಗಿರಿ ಶಿಖರದಲ್ಲಿ 'ಗಂಗೋತ್ಪತ್ತಿ' (ತೀರ್ಥೋದ್ಭವ) ಆಯಿತು. ಅರ್ಚಕರಾದ ನವೀನ್ ದೀಕ್ಷಿತ್, ಗುರು ದೀಕ್ಷಿತ್ ಹಾಗೂ ಕಾರ್ತಿಕ್ ದೀಕ್ಷಿತ್ ಗಿರಿ ಮೇಲಿಂದ ಗಂಗೆಯನ್ನು ತಂದು ಕೆಂಪೇಗೌಡ ಹಜಾರದಲ್ಲಿ ಪೂಜೆ ಸಲ್ಲಿಸಿದರು. ವಾದ್ಯ, ನಂದಿಧ್ವಜ ಸಮೇತ ಕಲ್ಯಾಣ ಮಂಟಪಕ್ಕೆ ತೆಗೆದುಕೊಂಡು ಬರಲಾಯಿತು. ಬೆಳಿಗ್ಗೆ 10ರಿಂದ 10.30ರವರೆಗೆ ಗಿರಿಜಾಕಲ್ಯಾಣೋತ್ಸವ ನಡೆಯಿತು.

ಗಿರಿಜಾ ಕಲ್ಯಾಣೋತ್ಸವದ ಪ್ರಯುಕ್ತ ಗಂಗಾದರೇಶ್ವರ ಸ್ವಾಮಿಗೆ ಪಂಚಾಮೃತ, ತುಪ್ಪ, ರುದ್ರ, ಮೃತ್ಯುಂಜಯ ಅಭಿಷೇಕಗಳನ್ನು ಮಾಡಲಾಯಿತು. ಪಾರ್ವತಿದೇವಿಗೆ ಅರಿಶಿನ, ಕುಂಕುಮ, ತ್ರಿಶಕ್ತಿ ಸೇವೆ, ನವರಣ ಅರ್ಚನೆ, ಚಂಡಿಕಾ ಹೋಮ ಮಾಡಲಾಯಿತು.

ಶಾಸಕ ಎನ್.ಶ್ರೀನಿವಾಸ್, ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಬಿ.ಪ್ರಭುದೇವ, ತಹಶೀಲ್ದಾರ್ ಅಮೃತ್ ಆತ್ರೇಶ್, ಉಪ ತಹಶೀಲ್ದಾರ್ ಬಿ.ಸಿ.ಶಶಿಧರ್, ತಾ.ಪಂ ಇಒ ಎಸ್.ಮಧು, ವಿಧಾನ ಪರಿಷತ್ ಸದಸ್ಯ ಸುಧಾಮ್ ದಾಸ್, ಹೆಚ್ಚುವರಿ ಎಸ್.ಪಿ.ಪುರುಷೋತ್ತಮ್, ಡಿವೈಎಸ್ ಪಿ.ಜಗದೀಶ್, ಬಮೂಲ್ ನಿರ್ದೇಶಕ ಜಿ.ಆರ್.ಭಾಸ್ಕರ್, ದಾಬಸ್ ಪೇಟೆ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ರಾಜು, ಮುಜರಾಯಿ ಇಲಾಖೆ ಇಒ ಕೆ.ಕೆ.ರಮ್ಯ ಇದ್ದರು.

ರಾಸುಗಳಿಗೆ ಬಹುಮಾನ: ಜಾನುವಾರು ಜಾತ್ರೆಗೆ ಆಗಮಿಸಿದ್ದ ರಾಸುಗಳಿಗೆ ಪಶು ವೈದ್ಯ ಇಲಾಖೆ ಸಹಯೋಗದಲ್ಲಿ ಬಹುಮಾನವನ್ನು ನೀಡಲಾಯಿತು. ಶ್ರೀಗಂಗಾದರೇಶ್ವರ ಹೊನ್ನಾದೇವಿ ಟ್ರಸ್ಟ್‌ನಿಂದ ಅನ್ನ ದಾಸೋಹ, ಬಮೂಲ್ ಟ್ರಸ್ಟ್‌ನಿಂದ ಮಜ್ಜಿಗೆ ವಿತರಿಸಲಾಯಿತು. ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಬಾಗಲಗುಂಟೆ: 21ರಂದು 'ಸಂಕ್ರಾಂತಿ ಸಂಭ್ರಮ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬಾಗಲಗುಂಟೆಯ ರಂಗಮಂದಿರದಲ್ಲಿ 21 ರಂದು ಸ್ನೇಹಜೀವಿ ಗೆಳೆಯರ ಬಳಗ ಸಾಹಿತ್ಯಿಕ ಘಟಕ ವತಿಯಿಂದ ಸಂಕ್ರಾಂತಿ ಸಂಭ್ರಮ-2024 ಜರುಗಲಿದೆ.

ಹಿರಿಯ ಕಲಾವಿದ ಬಿ.ಆರ್. ಶ್ರೀನಿವಾಸಮೂರ್ತಿ ಕಾರ್ಯಕ್ರಮದ ಸರ್ವಾಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎಸ್. ಮುನಿರಾಜು ಉದ್ಘಾಟಿಸಲಿದ್ದಾರೆ. ಬೆಂಗಳೂರು ನಗರ ಜಿಲ್ಲಾ ಕಸಾಪ ಅಧ್ಯಕ್ಷ ಎಂ.ಪ್ರಕಾಶ್ ಮೂರ್ತಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಸ್ವಾಭಿಮಾನಿ ಕರ್ನಾಟಕ ವೇದಿಕೆಯ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ಆಗಮಿಸಲಿದ್ದಾರೆ.

'ಬೆಳಿಗ್ಗೆ 10ಕ್ಕೆ ಬಾಗಲಗುಂಟೆ ಬಸ್ ನಿಲ್ದಾಣದಿಂದ ರಂಗಮಂದಿರದವರೆಗೂ ಕಲಾತಂಡಗಳೊಂದಿಗೆ ಭುವನೇಶ್ವರಿ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ರಾಜ್ಯಮಟ್ಟದ ಕವಿಗೋಷ್ಠಿ ಹಾಗೂ 'ಸ್ನೇಹ ಜೀವಿ ರತ್ನ ಪ್ರಶಸ್ತಿ' ಪ್ರದಾನ, ಗೀತ ಗಾಯನ, ಪುಸ್ತಕ ಲೋಕಾರ್ಪಣೆ, ನೃತ್ಯಪ್ರದರ್ಶನ ನಡೆಯಲಿವೆ' ಎಂದು ಸ್ನೇಹಜೀವಿ ಗೆಳೆಯರ ಬಳಗದ ಸಂಸ್ಥಾಪಕ ಅಧ್ಯಕ್ಷ ಶಶಿಕಾಂತ್ ರಾವ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉತ್ತರ ಕರ್ನಾಟಕ ಗೆಳೆಯರ ಚಾರಿಟಬಲ್ ಟ್ರಸ್ಟ್ ವತಿಯಿಂದ ಬಂಡೆಮಠದಲ್ಲಿ ಆಯೋಜಿಸಲಾಗಿದ್ದ ಸಂಕ್ರಾಂತಿ ಸಂಜೆ ಕಾರ್ಯಕ್ರಮಕ್ಕೆ ಬಂಡೆ ಮಠದ ಸಚ್ಚಿದಾನಂದ ಸ್ವಾಮೀಜಿ ಚಾಲನೆ ನೀಡಿದರು

ರಾಮದೇವರ ಬೆಟ್ಟ: ಸಂಕ್ರಾಂತಿ ವಿಶೇಷ ಪೂಜೆ

ದಾಬಸ್ ಪೇಟೆ: ಸೋಂಪುರ ಹೋಬಳಿಯ ಶ್ರೀರಾಮದೇವರ ಬೆಟ್ಟದಲ್ಲಿ ಭಾನುವಾರ ಸಂಜೆ ಹಾಗೂ ಸೋಮವಾರ ಬೆಳಿಗ್ಗೆ ಮಕರ ಸಂಕ್ರಾಂತಿಯ ಅಂಗವಾಗಿ ಪೂಜಾ ಕಾರ್ಯಕ್ರಮಗಳು ನಡೆದವು.

ಭಾನುವಾರ ಸಂಜೆ ಗೋಧೂಳಿ ಲಗ್ನದಲ್ಲಿ ಗಂಗಾ ಪೂಜಾ ತೀರ್ಥ ಸಂಗ್ರಹ, ಸ್ವಸ್ತಿವಾಚನ, ದೀಪಾರಾಧನೆ, ರಕ್ಷಾಬಂಧನ, ಕಳಶಾರಾಧನೆ, ಇತರ ಪೂಜಾ ಕೈಂಕರ್ಯಗಳು ನಡೆದವು.

ಸೋಮವಾರ ಬೆಳಿಗ್ಗೆ ಶ್ರೀರಾಮದೇವರಿಗೆ ವೇದಪಾರಾಯಣ, ಪುಣ್ಯಾಹ, ಫಲಾಪಂಚಾಮೃತ ಅಭಿಷೇಕ ನಂತರ ಅಗ್ನಿಪ್ರತಿಷ್ಠೆ, ಶ್ರೀರಾಮ ತಾರಕ ಹೋಮ, ಮೂರ್ತಿ ಹೋಮ, ಮಹಾ ಪೂರ್ಣಾಹುತಿ ದಿಕ್ಪಾಲಕರ ಬಲಿಪ್ರದಾನ, ಕುಂಭಾಬಿಷೇಕ ಮತ್ತು ಪ್ರಾಕಾರೋತ್ಸವ ಶೋಢಷೋಪಚಾರ, ಅಷ್ಟಾವಾದಾನ ಸೇವೆ ಮಹಾ ಮಂಗಳಾರತಿ ನಡೆದವು. ಭಕ್ತರಿಗೆ ಅನ್ನಸಂತರ್ಪಣೆ ನಡೆಯಿತು.

'ಟೆಂಟ್‌ನಲ್ಲಿ ಬೊಂಬೆ ತಂದಿಟ್ಟು ಶ್ರೀರಾಮ ಎಂದ್ರು'

ತುಮಕೂರು: ಬಿಜೆಪಿಯವರು ಚುನಾವಣೆಗಾಗಿ ರಾಮಮಂದಿರ ಕಟ್ಟಿ ಜನರಿಗೆ ಮೋಸ ಮಾಡುತ್ತಿದ್ದಾರೆ. ಜನರ ಭಾವನೆಗಳನ್ನು ಕೆಟ್ಟ ಹಾದಿಯಲ್ಲಿ ತೆಗೆದುಕೊಂಡು ಹೋಗಬಾರದು ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಮಂಗಳವಾರ ನಡೆದ ಹಿಂದುಳಿದ ವರ್ಗಗಳ ಒಕ್ಕೂಟದ ದಶಮಾನೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು,'ಬಾಬ್ರಿ ಮಸೀದಿ ಗಲಾಟೆಯ ಸಮಯದಲ್ಲಿ ನಾನು ಅಯೋಧ್ಯೆಗೆ ಭೇಟಿ ನೀಡಿದ್ದೆ. ಒಂದು ಟೆಂಟ್‌ನಲ್ಲಿ ಎರಡು ಬೊಂಬೆ ತಂದಿಟ್ಟು ಶ್ರೀರಾಮ ಎಂದು ಹೇಳುತ್ತಿದ್ದರು. ನಾವು ಒಳಗಡೆ ಹೋಗಿ ನೋಡಿದರೆ ದೇವಸ್ಥಾನ ಅಂತ ಅನ್ನಿಸುತ್ತಿರಲಿಲ್ಲ. ಟೂರಿಂಗ್ ಟಾಕಿಸ್‌ನ ಬೊಂಬೆಗಳಂತೆ ಕಂಡವು. ಇವತ್ತು ಯಾವ ರೀತಿ ಅಭಿವೃದ್ಧಿ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ' ಎಂದರು.

ಕೃಷ್ಣಶಿಲೆ ದೊರೆತ ಜಮೀನಿನಲ್ಲಿ ವಿಶೇಷ ಪೂಜೆ

ಗುಜ್ಜೇಗೌಡನಪುರ; ರಾಮಭಕ್ತರ ಸಂಭ್ರಮ

ಪ್ರಜಾವಾಣಿ ವಾರ್ತೆ

ಜಯಪುರ: 'ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಬಾಲರಾಮನ ಮೂರ್ತಿಗೆ ನಮ್ಮ ಜಮೀನಿನ ಶಿಲೆಯನ್ನು ಬಳಸಿರುವುದು ಹೆಮ್ಮೆ ತಂದಿದೆ' ಎಂದು ಹೋಬಳಿಯ ಗುಜ್ಜೇಗೌಡನಪುರದ ರಾಮದಾಸ್ ಮತ್ತು ಅವರ ಮಗ ರಂಗಸ್ವಾಮಿ ಹರ್ಷ ವ್ಯಕ್ತಪಡಿಸಿದರು.

ಶಿಲೆ ದೊರೆತ ಸ್ಥಳದಲ್ಲಿ ಮಂಗಳವಾರ ಏರ್ಪಡಿಸಿದ್ದ ಪೂಜಾ ಕಾರ್ಯಕ್ರಮದಲ್ಲಿ ಅವರು ಸಂತಸ ವ್ಯಕ್ತಪಡಿಸಿದರು.

ಮೈಸೂರು ಅರಮನೆಯ ರಾಜಪುರೋಹಿತ ಪ್ರಹ್ಲಾದ್ ರಾವ್ ಸಮ್ಮುಖದಲ್ಲಿ ವಿಶೇಷ ಪೂಜೆ ನಡೆಯಿತು.

'ನಮ್ಮ ಜಮೀನಿನಲ್ಲಿ ಸಿಕ್ಕ ಶಿಲೆಯಿಂದ ಬಾಲರಾಮನ ಮೂರ್ತಿ ಮೂಡಿದೆ. ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಕೆತ್ತಿರುವ ಮೂರ್ತಿಯೇ ಅಯೋಧ್ಯೆಯಲ್ಲಿ ಪ್ರತಿಷ್ಠಾಪನೆಯಾಗುತ್ತಿರುವುದು ಹೆಮ್ಮೆಯ ಸಂಗತಿ. ರಾಮನೇ ನಮ್ಮ ಜಮೀನಿನಲ್ಲಿದ್ದ ಎನ್ನುವ ಭಾವನೆ ಮೂಡಿದೆ' ಎಂದರು.

ಗಣಿ ಗುತ್ತಿಗೆದಾರ ಗುಜ್ಜೇಗೌಡನಪುರ ಶ್ರೀನಿವಾಸ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ನೂರಾರು ಭಕ್ತರು ಪಾಲ್ಗೊಂಡರು.

ರಾಮದೇವರ ಭಾವಚಿತ್ರಕ್ಕೆ ವಿಶೇಷ ಅಲಂಕಾರ ಮಾಡಿ, ಹೋಮ ನಡೆಸಲಾಯಿತು. ಆ ವೇಳೆ ಜೈ ಶ್ರೀರಾಮ್ ಜಯಘೋಷ ಮೊಳಗಿತು. ಭಕ್ತರಿಗೆ ಪಾನಕ, ಮಜ್ಜಿಗೆ ಮತ್ತು ಸಿಹಿಯನ್ನು ವಿತರಿಸಲಾಯಿತು.

ಮುಖಂಡರಾದ ಚನ್ನಕೇಶವ ಗೌಡ, ಮಧುಕೇಶವ ಗೌಡ, ವೆಂಕಟೇಶ್ ಪಾಲ್ಗೊಂಡಿದ್ದರು.

ಗುಜ್ಜೇಗೌಡನಪುರ ಗ್ರಾಮದಲ್ಲಿ ಬಾಲರಾಮನ ಮೂರ್ತಿ ಕೆತ್ತನೆಗೆ ಕೃಷ್ಣಶಿಲೆ ದೊರೆತ ಸ್ಥಳದಲ್ಲಿ ಮಂಗಳವಾರ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಪುರೋಹಿತರು ಹಾಗೂ ಗ್ರಾಮಸ್ಥರು ಪಾಲ್ಗೊಂಡರು

21, 22ಕ್ಕೆ ರಾಮತಾರಕ ಮಹಾಯಾಗ

ಬೆಂಗಳೂರು: ಅಯೋಧ್ಯೆಯಲ್ಲಿ ರಾಮಲಲ್ಲಾ ವಿಗ್ರಹ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಇದೇ 21 ಮತ್ತು 22ರಂದು ಮಹಾಲಕ್ಷ್ಮೀ ಲೇಔಟ್‌ನ ರಾಣಿ ಅಬ್ಬಕ್ಕ ಆಟದ ಮೈದಾನದಲ್ಲಿ ತ್ರಯೋದಶ ಲಕ್ಷ ಶ್ರೀ ರಾಮತಾರಕ ಮಹಾಯಾಗ, ಸೀತಾ ಕಲ್ಯಾಣೋತ್ಸವ ಹಾಗೂ ಕಲಶಾಭಿಷೇಕ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಹಾಸಭೆ ಅಧ್ಯಕ್ಷ ಅಶೋಕ ಹಾರನಹಳ್ಳಿ, 'ಲೋಕ ಕಲ್ಯಾಣಾರ್ಥವಾಗಿ ಈ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 21ರಂದು ಬೆಳಿಗ್ಗೆ 7 ಗಂಟೆಯಿಂದ ಶ್ರೀರಾಮ ಸುಪ್ರಭಾತ, ಗೋಪೂಜೆ, ಗಂಗಾ ಪೂಜೆ, ಗಣಪತಿ ಪೂಜೆ ಸೇರಿ ವಿವಿಧ ಧಾರ್ಮಿಕ ವಿಧಿ ವಿಧಾನಗಳು ನಡೆಯಲಿವೆ. ಮಧ್ಯಾಹ್ನ 12.30ಕ್ಕೆ ಮಹಾಮಂಗಳಾರತಿ ಮತ್ತು ತೀರ್ಥ–ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 4 ಗಂಟೆಗೆ ಸೀತಾ ಕಲ್ಯಾಣೋತ್ಸವ ನಡೆಯಲಿದೆ. ಸಂಜೆ 7ರಿಂದ ರಾಮನ ಕುರಿತು ನೃತ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

'22ರಂದು ಬೆಳಿಗ್ಗೆ 7.30ರಿಂದ ರಾಮತಾರಕ ಮಹಾಯಾಗ–ಕಲಶಾಭಿಷೇಕ ನಡೆಯಲಿದೆ. ಬೆಳಿಗ್ಗೆ 11ರಿಂದ ಅಯೋಧ್ಯೆಯಲ್ಲಿ ನಡೆಯುವ ರಾಮಲಲ್ಲಾ ವಿಗ್ರಹ ಪ್ರಾಣ ಪ್ರತಿಷ್ಠಾಪನೆಯ ನೇರ ಪ್ರಸಾರವನ್ನು ವೀಕ್ಷಿಸಿ, ಬಳಿಕ ಮಹಾಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ ಮಾಡಲಾಗುತ್ತದೆ' ಎಂದು ತಿಳಿಸಿದರು.

'ಎರಡು ದಿನಗಳ ಈ ಕಾರ್ಯಕ್ರಮಗಳಲ್ಲಿ 25 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿದೆ. ರಾಜಾಜಿನಗರದ ಸಚ್ಚಿದಾನಂದ ಅದ್ವೈತ ಆಶ್ರಮದ ಅದ್ವಯಾನಂದ ಸರಸ್ವತಿ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಚಾಮರಾಜಪೇಟೆಯಲ್ಲಿರುವ ಕೂಡಲಿ ಶೃಂಗೇರಿ ಮಠದ ವಿದ್ಯಾವಿಶ್ವೇಶ್ವರ ಭಾರತಿ ಸ್ವಾಮೀಜಿ ಹಾಗೂ ಬೆಲಗೂರಿನ ವಿಜಯಮಾರುತಿ ಶರ್ಮ ಗುರೂಜಿ ಸಾನ್ನಿಧ್ಯ ವಹಿಸಲಿದ್ದಾರೆ. ಆಧ್ಯಾತ್ಮಿಕ ಚಿಂತಕ ಪಾವಗಡ ಪ್ರಕಾಶ್ ರಾವ್ ಉಪಸ್ಥಿತರಿರುತ್ತಾರೆ' ಎಂದು ಹೇಳಿದರು.

ಅಪಘಾತ ಬೈಕ್ ಸವಾರ ಸಾವು

ಬೆಂಗಳೂರು: ರಾಜಾಜಿನಗರದ ಡಾ. ರಾಜಕುಮಾರ್ ರಸ್ತೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಮತ್ತು ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ರಾಜಾಜಿನಗರದ 6ನೇ ಬ್ಲಾಕ್ ನಿವಾಸಿ ಎನ್. ರಘು (41) ಮೃತಪಟ್ಟವರು. 'ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದ ರಘು ಅವರು ಸೋಮವಾರ ರಾತ್ರಿ ಪ್ರಕಾಶನಗರದಿಂದ ರಾಜಾಜಿನಗರದ ಕಡೆಗೆ ತೆರಳುತ್ತಿದ್ದರು. ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ತೆರಳು-ತ್ತಿದ್ದಾಗ ರಾಜಾಜಿನಗರದಿಂದ ನವರಂಗ ಚಿತ್ರಮಂದಿರ ಕಡೆಗೆ ಕೆಎಸ್‌ಆರ್‌ಟಿಸಿ ಬಸ್ ಅತಿವೇಗವಾಗಿ ಬಂದಿದ್ದು, ನಿಯಂತ್ರಣ ತಪ್ಪಿ ಬೈಕ್‌ಗೆ ಗುದ್ದಿದೆ. ರಘು ಅವರು ಬೈಕ್ ಸಮೇತ ಕೆಳಗಡೆ ಬಿದ್ದಿದ್ದು, ತಲೆಗೆ ಬಲವಾದ ಪೆಟ್ಟು ಬಿದ್ದಿದೆ. ಕೂಡಲೇ ಅವರನ್ನು ಆಸ್ಪತ್ರೆ ದಾಖಲಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದರು. 'ರಘು ಮಂಗಳವಾರ ಮುಂಜಾನೆ ಮೃತಪಟ್ಟಿದ್ದಾರೆ. ಈ ಬಗ್ಗೆ ರಾಜಾಜಿನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ಮೂಲಗಳು ತಿಳಿಸಿವೆ.

ದುಪ್ಪಟ್ಟು ಕಮಿಷನ್ ಆಮಿಷ • ಆನ್‌ಲೈನ್ ಟಿಕೆಟ್ ಬುಕ್ಕಿಂಗ್ ಕಂಪನಿಯಿಂದ ಉದ್ಯಮಿಗೆ ವಂಚನೆ ಆರೋಪ

ಕಮಿಷನ್ ಹೆಸರಲ್ಲಿ ₹16.81 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ರಾಮನಗರ: ಆನ್‌ಲೈನ್ ಟಿಕೆಟ್ ಬುಕ್ಕಿಂಗ್ ಕಂಪನಿಯ ದುಪ್ಪಟ್ಟು ಲಾಭದ ಆಸೆಗೆ ಮಾರುಹೋದ ಉದ್ಯಮಿಯೊಬ್ಬರು, ಆನ್‌ಲೈನ್ ವಂಚಕರ ಜಾಲಕ್ಕೆ ಸಿಲುಕಿ ₹16.81 ಲಕ್ಷ ಕಳೆದುಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ. ಬೆಂಗಳೂರಿನ ಜೀವನ್ ಕೆ. ವಂಚನೆಗೊಳಗಾದವರು. ಈ ಕುರಿತು, ತಾಲ್ಲೂಕಿನ ಕುಂಬಳಗೋಡು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸೂಪರ್ ಮಾರ್ಕೆಟ್ ಉದ್ಯಮಿಯಾಗಿರುವ ಜೀವನ್ ಅವರಿಗೆ ಟೆಲಿಗ್ರಾಂ ಆ್ಯಪ್‌ನಿಂದ http://www.yatra.int.com ಎಂಬ ಕಂಪನಿಯಿಂದ ಕಳೆದ ನ. 1ರಂದು ವರ್ಕ್ ಫ್ರಂ ಹೋಂ ಉದ್ಯೋಗದ ಆಫರ್ ಬಂದಿತ್ತು. ಯಾತ್ರಾ ಏರ್‌ಲೈನ್ ಟಿಕೆಟ್ ಬುಕ್ಕಿಂಗ್ ಡಾಕ್ಯುಮೆಂಟರಿ ಕಂಪನಿ ಪ್ರತಿನಿಧಿಗಳೆಂದು ಹೇಳಿಕೊಂಡಿದ್ದ ಅದಿತಿ ನಾರಾಯಣ್ ಮತ್ತು ಸ್ಟೀಫನ್ ಎಂಬುವರು, ಉದ್ಯೋಗದ ಕುರಿತು ಜೀವನ್ ಅವರಿಗೆ ವಾಟ್ಸ್‌ಆ್ಯಪ್ ಮೂಲಕ ಕೆಲಸದ ಕುರಿತು ತಿಳಿಸಿದ್ದರು.

ಕಂಪನಿಯ ಬುಕ್ಕಿಂಗ್ ಸ್ಟ್ಯಾಂಡರ್ಡ್ ಹೆಚ್ಚಿಸಬೇಕು. ಇದಕ್ಕಾಗಿ, ನಿತ್ಯ ನಿಮಗೆ 30 ಟಿಕೆಟ್ ಕೊಡಲಾಗುತ್ತದೆ. ಪ್ರತಿ ಟಿಕೆಟ್ ಮಾರಾಟದ ಮೇಲೆ ನಿಮಗೆ ಕಮಿಷನ್ ನೀಡಲಾಗುವುದು ಎಂದು ಹೇಳಿದ್ದರು. ಜೀವನ್ ಅವರ ಬ್ಯಾಂಕ್ ಖಾತೆ ಮಾಹಿತಿ ಪಡೆದಿದ್ದರು. ವೆಬ್‌ಸೈಟ್‌ಗೆ ಲಾಗಿನ್ ಆಗಿ ಕೆಲಸ ಶುರುಮಾಡಿದ್ದ ಜೀವನ್, 30 ಟಿಕೆಟ್‌ಗಳನ್ನು ಮಾರಾಟ ಮಾಡಿದ್ದರು. ಇದಕ್ಕೆ ಪ್ರತಿಯಾಗಿ ಅವರಿಗೆ ಕಂಪನಿ ₹940 ಪಾವತಿಸಿತ್ತು.

ಇದೇ ರೀತಿ 30ರಿಂದ 40 ನಿಮಿಷಗಳಲ್ಲಿ ಸೈಟ್‌ನಲ್ಲಿರುವ ಟಿಕೆಟ್‌ಗಳನ್ನು ಮಾರಾಟ ಮಾಡಿದರೆ ಹಣ ಡ್ರಾ ಮಾಡಬಹುದು ಎಂದು ಹೇಳಿದ್ದರು. ಅದರಂತೆ, ಕೆಲಸ ಶುರು ಮಾಡಿದ ಜೀವನ್ ಅವರಿಗೆ ₹8 ಸಾವಿರ ಪಾವತಿಸಿದರೆ, ಇಂದೇ ₹17 ಸಾವಿರ ಲಾಭ ಪಡೆಯಬಹುದು ಎಂದಿದ್ದರು. ಅದರಂತೆ, ಪಾವತಿಸಿದ್ದ ಅವರ ಖಾತೆಗೆ ₹17,257 ಪಾವತಿಯಾಗಿತ್ತು.

ಆರಂಭದಲ್ಲಿ ದುಪ್ಪಟ್ಟು ಕಮಿಷನ್ ಬಂದಿದ್ದರಿಂದ ಉತ್ಸುಕರಾದ ಜೀವನ್, ಪ್ರತಿನಿಧಿಗಳು ಹೇಳಿದ್ದಷ್ಟು ಮೊತ್ತವನ್ನು ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ವಿವಿಧ ಬ್ಯಾಂಕ್ ಖಾತೆಗಳಿಗೆ ಪಾವತಿಸಿದ್ದಾರೆ. ಅದೇ ರೀತಿ 2023ರ ನ. 15ರಿಂದ 2024ರ ಜ. 8ರವರೆಗೆ ತಮ್ಮ ಬಳಿ ಇದ್ದ ಹಣದ ಜೊತೆಗೆ, ಸ್ನೇಹಿತರ ಬಳಿ ಸಾಲ ಮಾಡಿಕೊಂಡು ₹16.81 ಲಕ್ಷ ಪಾವತಿಸಿದ್ದಾರೆ.

ಕಡೆಗೆ ವಂಚಕರು ₹9.85 ಲಕ್ಷ ಪಾವತಿಸಿದರೆ ನಿಮ್ಮ ಹಣ ನಿಮಗೆ ಸಂಪೂರ್ಣವಾಗಿ ಸಿಗುತ್ತದೆ. ನೀವೀಗ 91 ಸ್ಕೋರ್ ಗಳಿಸಿದ್ದು, 100 ತಲುಪಿದರೆ ನಿಮ್ಮ ಹಣ ನಿಮಗೆ ಸಿಗಲಿದೆ. ಒಂದು ಸ್ಕೋರ್‌ಗೆ ನೀವು ₹1.09 ಲಕ್ಷದಂತೆ ₹9.85 ಲಕ್ಷ ಪಾವತಿಸಬೇಕಿತ್ತು ಎಂದರು.

ಆಗ ಜೀವನ್, ನನ್ನ ಬಳಿ ಹಣವಿಲ್ಲ ಎಂದು ಹೇಳಿದಾಗ, ನಿಮ್ಮ ಖಾತೆಯನ್ನು ಸ್ಥಗಿತಗೊಳಿಸುವುದಾಗಿ ಹೇಳಿದ ವಂಚಕರು ಮತ್ತೆ ಸಂಪರ್ಕಕ್ಕೆ ಸಿಕ್ಕಿಲ್ಲ. ಇತ್ತ ಪಾವತಿಸಿಕೊಂಡ ಹಣ ಸಹ ಹಿಂದಿರುಗಿಸಿಲ್ಲ ಎಂದು ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಜೀವನ್ ತಿಳಿಸಿದ್ದಾರೆ.

ರಾಮನಗರ: ಮನೆಯಲ್ಲಿದ್ದ ಚಿನ್ನ, ನಗದು ಕಳವು

ರಾಮನಗರ: ಬಿಎಂಟಿಸಿ ಕಾರ್ಮಿಕ ಕಲ್ಯಾಣಾಧಿಕಾರಿಯ ಮನೆ ಬಾಗಿಲು ಮುರಿದು ಒಳ ನುಗ್ಗಿರುವ ಕಳ್ಳರು, ತಿಜೋರಿಯಲ್ಲಿದ್ದ 168 ಗ್ರಾಂ ಚಿನ್ನಾಭರಣ ಹಾಗೂ ₹2.90 ಲಕ್ಷ ನಗದು ದೋಚಿರುವ ಘಟನೆ ನಗರದ ಯಾರಬ್ ನಗರದಲ್ಲಿ ಸೋಮವಾರ ನಡೆದಿದೆ.

ಇಲ್ಲಿನ ನೂರಿ ಶಾದಿ ಕಲ್ಯಾಣ ಮಂಟಪ ರಸ್ತೆಯಲ್ಲಿರುವ ಸಾದತ್ ಜಮೀರ್ ಎಂಬುವರ ಮನೆಯಲ್ಲಿ ಬಿಎಂಟಿಸಿ ಕಾರ್ಮಿಕ ಕಲ್ಯಾಣಾಧಿಕಾರಿ ಅಪ್ತಾಬ್ ಪಾಷ ಅವರು ಬಾಡಿಗೆಯಲ್ಲಿದ್ದರು. ಸಂಕ್ರಾಂತಿ ಹಬ್ಬದ ಕಾರಣಕ್ಕಾಗಿ ಶನಿವಾರದಿಂದ ಮೂರು ದಿನ ಕಚೇರಿಗೆ ರಜೆ ಇದ್ದಿದ್ದರಿಂದ, ತಮ್ಮ ಸಂಬಂಧಿಕರ ಮನೆಗೆ ಕುಟುಂಬದೊಂದಿಗೆ ಹೋಗಿದ್ದರು.

ಸಂಬಂಧಿಕರ ಮನೆಯಿಂದ ಸೋಮವಾರ ಮನೆಗೆ ವಾಪಸ್ಸಾದಾಗ ಮನೆಗೆ ಕಳ್ಳರು ಮನೆ ಬಾಗಿಲು ಮುರಿದು ತಿಜೋರಿಯಲ್ಲಿದ್ದ ಚಿನ್ನದ ನೆಕ್ಲೆಸ್, ಕಿವಿಯೋಲೆ, ಉಂಗುರ ಹಾಗೂ ನಗದು ಕದ್ದೊಯ್ದಿರುವುದು ಗೊತ್ತಾಗಿದೆ ಎಂದು ರಾಮನಗರ ಪುರ ಠಾಣೆ ಪೊಲೀಸರು ತಿಳಿಸಿದರು.

ಮನೆಯ ಗೇಟ್ ಬೀಗ ಮುರಿದಿರುವ ಕಳ್ಳರು, ಹಾರೆಯಿಂದ ಬಾಗಿಲಿನ ಲಾಕ್ ಮುರಿದು ಒಳ ನುಗ್ಗಿದ್ದಾರೆ. ಕೊಠಡಿಯ ಕಪಾಟು ಮತ್ತು ತಿಜೋರಿಯನ್ನು ಒಡೆದು ಕೈಗೆ ಸಿಕ್ಕಿದ್ದನ್ನು ಒಯ್ದಿದ್ದಾರೆ. ಪಾಷಾ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕೆಎಸ್‌ಆರ್‌ಟಿಸಿ ರಾಮನಗರ ವಿಭಾಗದಲ್ಲಿ ಕಾರ್ಮಿಕ ಕಲ್ಯಾಣಾಧಿಕಾರಿಯಾಗಿದ್ದ ಪಾಷಾ ಅವರು, ನಾಲ್ಕು ತಿಂಗಳ ಹಿಂದೆ ಬಿಎಂಟಿಸಿಗೆ ವರ್ಗಾವಣೆಯಾಗಿದ್ದರು. ವಿಷಯ ಗೊತ್ತಾಗುತ್ತಿದ್ದಂತೆ ಡಿವೈಎಸ್ಪಿ ದಿನಕರ ಶೆಟ್ಟಿ, ಪುರ ಠಾಣೆ ಸಬ್ ಇನ್‌ಸ್ಪೆಕ್ಟರ್ ಆಕಾಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸ್ಥಳಕ್ಕೆ ಶ್ವಾನ ದಳ ಮತ್ತು ಬೆರಳಚ್ಚು ತಜ್ಞರು ಭೇಟಿ ನೀಡಿ ಸಾಕ್ಷ್ಯ ಸಂಗ್ರಹಿಸಿದರು.

ಒಟ್ಟಿಗಿದ್ದ ಯುವಕ– ಯುವತಿ ಪ್ರಶ್ನಿಸಿದ ಜನರು

ಉಜಿರೆ (ದಕ್ಷಿಣ ಕನ್ನಡ): ಧರ್ಮ-ಸ್ಥಳದಲ್ಲಿ ಜೊತೆಯಲ್ಲಿ ಓಡಾಡುತ್ತಿದ್ದ ಬೆಂಗಳೂರಿನ ಮುಸ್ಲಿಂ ಯುವಕ–ಹಿಂದೂ ಯುವತಿಯನ್ನು ಸ್ಥಳೀಯ ಕೆಲ ಸಾರ್ವಜನಿಕರು ತಡೆದು ಪ್ರಶ್ನಿಸಿದ್ದಾರೆ. ಅವರಿಬ್ಬರು ಒಟ್ಟಿಗೆ ತಿರುಗಾಡುತ್ತಿರುವ ಬಗ್ಗೆ ತರಾಟೆಗೆ ತೆಗೆದುಕೊಂಡಿದ್ದಾರೆ.

ಈ ಬಗ್ಗೆ ಸ್ಥಳೀಯ ಆಟೊರಿಕ್ಷಾ ಚಾಲಕರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಧಾವಿಸಿದ ಪೊಲೀಸರು ಯುವಕ– ಯುವತಿಯನ್ನು ಠಾಣೆಗೆ ಕರೆಯಿಸಿ ವಿಚಾರಿಸಿದ್ದಾರೆ. 'ಯುವಕ–ಯುವತಿ ಇಬ್ಬರೂ ಪ್ರಾಪ್ತ ವಯಸ್ಕರು. ಅವರ ಮೇಲೆ ಯಾರೂ ಹಲ್ಲೆ ನಡೆಸಿಲ್ಲ. ಈ ಬಗ್ಗೆ ಅವರಿಂದಲೇ ಹೇಳಿಕೆ ಪಡೆದು ಖಾತರಿಪಡಿಸಿಕೊಂಡಿ-ದ್ದೇವೆ. ಅವರಿಬ್ಬರನ್ನು ಊರಿಗೆ ಕಳುಹಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾಲಮೇಡು ಜಲ್ಲಿಕಟ್ಟು: 42 ಜನರಿಗೆ ಗಾಯ

ಮದುರೈ (ಪಿಟಿಐ): ಪೊಂಗಲ್ ಪ್ರಯುಕ್ತ ಪಾಲಮೇಡುವಿನಲ್ಲಿ ಮಂಗಳವಾರ ನಡೆದ ಜಲ್ಲಿಕಟ್ಟು ಕ್ರೀಡೆಯಲ್ಲಿ ಹೋರಿಗಳು ತಿವಿದು 16 ಮಂದಿ ಪ್ರೇಕ್ಷಕರು, 14 ಮಂದಿ ಹೋರಿ ಪಳಗಿಸುವವರು ಸೇರಿದಂತೆ 42 ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಲ್ಲಿ ಹನ್ನೆರಡು ಮಂದಿ ಹೋರಿ ಮಾಲೀಕರೂ ಸೇರಿದ್ದಾರೆ.

14 ಹೋರಿಗಳನ್ನು ಹಿಡಿದು ಪಳಗಿಸಿದ ಮದುರೈನ ಪಿ. ಪ್ರಭಾಕರನ್ ಅವರ ಶೌರ್ಯಕ್ಕೆ ಪ್ರಥಮ ಬಹುಮಾನವಾಗಿ 'ಮುಖ್ಯಮಂತ್ರಿ ಪ್ರಶಸ್ತಿ'ಯಾಗಿ ಕಾರು ನೀಡಿ ಗೌರವಿಸಲಾಯಿತು.

'ಕಳೆದ ಮೂರು ವರ್ಷಗಳಿಂದ ಸತತ ಜಲ್ಲಿಕಟ್ಟು ಗೆದ್ದಿದ್ದೇನೆ. ತುಂಬಾ ಸಂತೋಷವಾಗಿದೆ. ಶೀಘ್ರವೇ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರನ್ನು ಭೇಟಿ ಮಾಡುತ್ತೇನೆ' ಎಂದು ಪ್ರಭಾಕರ್ ಸುದ್ದಿಗಾರರಿಗೆ ತಿಳಿಸಿದರು.

11 ಹೋರಿಗಳನ್ನು ಪಳಗಿಸಿ, ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟ ಚಿನ್ನಪಟ್ಟಿ ತಮಿಳರಸನ್ 'ಈ ಬಾರಿ ಉತ್ತಮ ಹೋರಿಗಳನ್ನು ಅಖಾಡಕ್ಕೆ ಇಳಿಸಿದ್ದರಿಂದ ಅವುಗಳನ್ನು ಪಳಗಿಸುವುದು ಕಷ್ಟವಾಯಿತು' ಎಂದು ಹೇಳಿದರು. ತಮಿಳರಸನ್‌ಗೆ ಬಹುಮಾನವಾಗಿ ಬೈಕ್ ದೊರೆಯಿತು. 8 ಹೋರಿಗಳನ್ನು ಪಳಗಿಸಿದ ಪಾಂಡೀಶ್ವರನ್ ಅವರಿಗೆ ತೃತೀಯ ಸ್ಥಾನ ಲಭಿಸಿತು.

ಪುದುಕೊಟ್ಟೈ ಜಿಲ್ಲೆಯ ಚಿನ್ನ ಕರುಪ್ಪು ಎಂಬವರಿಗೆ ಸೇರಿದ ಹೋರಿ ಯಾರ ಹಿಡಿತಕ್ಕೂ ಸಿಗದೆ ನುಣುಚಿಕೊಂಡು, 'ಮುಖ್ಯಮಂತ್ರಿ ಪ್ರಶಸ್ತಿ'ಗೆ ಭಾಜನವಾಯಿತು. ಈ ಹೋರಿ ಮಾಲೀಕರಿಗೆ ರಾಜ್ಯ ಯುವಜನ ಕಲ್ಯಾಣ ಮತ್ತು ಕ್ರೀಡಾ ಅಭಿವೃದ್ಧಿ ಸಚಿವ ಉದಯನಿಧಿ ಸ್ಟಾಲಿನ್ ಕಾರು ನೀಡಿ ಗೌರವಿಸಿದರು. ಥೇಣಿ ಜಿಲ್ಲೆಯ ಮತ್ತೊಬ್ಬ ಹೋರಿ ಮಾಲೀಕ ಅಮರನಾಥ್ ಅವರಿಗೆ ಬಹುಮಾನವಾಗಿ ಹಸು ನೀಡಲಾಯಿತು. ಒಟ್ಟು 840 ಹೋರಿಗಳನ್ನು ಜಲ್ಲಿಕಟ್ಟು ಅಂಗಳಕ್ಕೆ ಬಿಡಲಾಯಿತು. ಸುಮಾರು 1,000 ಮಂದಿ ಹೋರಿ ಪಳಗಿಸುವವರು ಕ್ರೀಡೆಯಲ್ಲಿ ಭಾಗವಹಿಸಿದ್ದರು.

ಹೋರಿಗಳು ತಪ್ಪಿಸಿಕೊಂಡು, ಹಿಡಿಯಬಂದವರನ್ನು ಕೊಂಬಿನಲ್ಲಿ ತಿವಿದು, ಕೆಡವುತ್ತಿದ್ದಾಗ, ಕೆಲವು ಹೋರಿಗಳನ್ನು ಯುವಕರು ಪಳಗಿಸಿದಾಗ ಪ್ರೇಕ್ಷಕರ ಕೇಕೆ, ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ಮದುರೈನ ಪಾಲಮೇಡುವಿನಲ್ಲಿ ಮಂಗಳವಾರ ನಡೆದ ಜಲ್ಲಿಕಟ್ಟು ಕ್ರೀಡೆಯಲ್ಲಿ ಯುವಕರು ಹೋರಿ ಹಿಡಿದು ಪಳಗಿಸಲು ಯತ್ನಿಸಿದರು — ಪಿಟಿಐ ಚಿತ್ರ

ಅಡುಗೆ ಅನಿಲ ಸಿಲಿಂಡರ್ ಸ್ಫೋಟ

ಯಲಹಂಕ: 6 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಯಲಹಂಕ: ಅಡುಗೆ ಅನಿಲದ ಸಿಲಿಂಡರ್ ಸೋರಿಕೆಯಾಗಿ ಸ್ಫೋಟಗೊಂಡು ಆರು ಮಂದಿಗೆ ಗಾಯಗಳಾಗಿದ್ದು, ಒಂದೇ ಕುಟುಂಬಕ್ಕೆ ಸೇರಿದ ಐದು ಮನೆಗಳಿಗೆ ಹಾನಿಯಾಗಿದೆ. ಈ ಕುರಿತು ಯಲಹಂಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಸ್ಮಾ (58) ಫರಿಯಾ (44), ಸಲ್ಮಾ (22), ಶಾಹೀದ್ (18), ಮೀನಾಕ್ಷಿ ತಮ್ಮಯ್ಯ (34), ಅಫ್ರೋಜ್ (28) ಘಟನೆಯಲ್ಲಿ ಗಾಯಗೊಂಡವರು. ಗಂಭೀರವಾಗಿ ಗಾಯಗೊಂಡಿದ್ದ ಫರಿಯಾ ಮತ್ತು ಆಸ್ಮಾ ಅವರಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಉಳಿದವರಿಗೆ ಯಲಹಂಕ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಯಲಹಂಕ ಪೊಲೀಸ್ ಠಾಣೆಯ ವ್ಯಾಪ್ತಿಯ ಲಾಲ್ ಬಹದ್ದೂರ್ ಶಾಸ್ತ್ರಿ ಬಡಾವಣೆಯಲ್ಲಿ ಪಾಷಾ ಎಂಬುವರಿಗೆ ಸೇರಿದ ಏಳು ಮನೆಗಳಿವೆ.

ಈ ಮನೆಗಳಲ್ಲಿ ಪಾಷಾ ಅವರ ಕುಟುಂಬದ ಒಂಬತ್ತು ಮಂದಿ ವಾಸಿ-ಸುತ್ತಿದ್ದರು. ಈ ಮನೆಗಳ ನಡುವಿರುವ ಮನೆಯೊಂದನ್ನು ಆಸ್ಮಾ ಎಂಬುವವರಿಗೆ ಬಾಡಿಗೆ ನೀಡಲಾಗಿತ್ತು.

ಇವರ ಮನೆಯಲ್ಲೇ ಬೆಳಿಗ್ಗೆ 7 ರಿಂದ 8 ಗಂಟೆಯ ನಡುವೆ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸ್ಫೋಟಗೊಂಡಿದೆ ಎಂದು ಪೊಲೀಸರು ತಿಳಿಸಿದರು.

'ಸ್ಫೋಟದ ತೀವ್ರತೆಗೆ ಅಕ್ಕಪಕ್ಕದಲ್ಲಿದ್ದ ಐದು ಮನೆಗಳ ಗೋಡೆಗಳು ಕುಸಿದು ಬಿದ್ದಿವೆ. ಮನೆಯಲ್ಲಿದ್ದ ವಸ್ತುಗಳೆಲ್ಲ ಚೆಲ್ಲಾಪಿಲ್ಲಿಯಾಗಿವೆ. ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಅನಿಲ ಸೋರಿಕೆಯಿಂದ ಈ ಘಟನೆ ಸಂಭವಿಸಿರಬಹುದು' ಎಂದು ಪೊಲೀಸರು ಹೇಳಿದರು.

ಸ್ಥಳಕ್ಕೆ ಆಗಮಿಸಿದ ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್, ಸಂತ್ರಸ್ತರಿಗೆ ಸೂಕ್ತ ಪರಿಹಾರ ನೀಡುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿಲಿಂಡರ್ ಸ್ಫೋಟದ ತೀವ್ರತೆಗೆ ಮನೆಯ ಗೋಡೆಗಳು ಬಿದ್ದಿವೆ

ಚಿತ್ರಾವಳಿ

ಸಂಗೀತ ವಿದ್ವಾಂಸ ಆರ್‌.ಕೆ. ಶ್ರೀಕಂಠನ್ ಅವರ 104ನೇ ಜನ್ಮ ವಾರ್ಷಿಕೋತ್ಸವದ ಪ್ರಯುಕ್ತ ವಿದ್ವಾನ್ ಆರ್‌.ಕೆ. ಶ್ರೀಕಂಠನ್ ಟ್ರಸ್ಟ್ ನಗರದಲ್ಲಿ ಹಮ್ಮಿಕೊಂಡಿದ್ದ 28ನೇ ವಾರ್ಷಿಕ ಸಂಕ್ರಾಂತಿ ಸಂಗೀತ ಉತ್ಸವದಲ್ಲಿ ತಿರುಚಿ ಶಂಕರನ್ ಅವರಿಗೆ 'ಶ್ರೀಕಂಠ ಶಂಕರ' ಹಾಗೂ ಕೆ.ಜಿ. ಸುಬ್ರಾಯ ಶರ್ಮಾ ಅವರಿಗೆ 'ಶಂಕರಾದ್ವೈತ ತತ್ವಜ್ಞ' ಬಿರುದು ಮತ್ತು ಪ್ರಶಸ್ತಿಯನ್ನು ಶಿಕ್ಷಣ ತಜ್ಞ ಗುರುರಾಜ ಕರಜಗಿ ಪ್ರದಾನ ಮಾಡಿದರು. ಟ್ರಸ್ಟ್‌ನ ಕಾರ್ಯದರ್ಶಿ ಆರ್‌.ಎಸ್ ಕುಮಾರ್, ಮಂಜುಳಾ, ಟ್ರಸ್ಟ್‌ನ ಅಧ್ಯಕ್ಷ ರುದ್ರಪಟ್ಟಣಂ ಎಸ್‌. ರಮಾಕಾಂತ್, ಗಾಯಕಿ ರತ್ನಮಾಲಾ ಪ್ರಕಾಶ್ ಪಾಲ್ಗೊಂಡಿದ್ದರು. ಹರಿಹರಪುರದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ (ಬಲತುದಿ) ಸಾನ್ನಿಧ್ಯ ವಹಿಸಿದ್ದರು. ಎರಡು ಪ್ರಶಸ್ತಿಗಳು ತಲಾ ₹50 ಸಾವಿರ ನಗದು ಹಾಗೂ ಬೆಳ್ಳಿ ದೀಪ ಒಳಗೊಂಡಿವೆ ಪ್ರಜಾವಾಣಿ ಚಿತ್ರ

ಮಸ್ಸೂರಿಯ ಲಾಲ್‌ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್‌ನಲ್ಲಿ 2023ನೇ ಸಾಲಿನಲ್ಲಿ ಐಎಎಸ್ ತರಬೇತಿ ಪಡೆಯುತ್ತಿರುವ ಅಧಿಕಾರಿಗಳು 'ಭಾರತ ದರ್ಶನ' ಅಧ್ಯಯನ ಪ್ರವಾಸದ ಭಾಗವಾಗಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ಮಂಗಳವಾರ ಭೇಟಿ ನೀಡಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್‌. ಅವರು, ಸರ್ಕಾರದ ಶಕ್ತಿ ಯೋಜನೆ ಅನುಷ್ಠಾನ ಸೇರಿದಂತೆ ಬಿಎಂಟಿಸಿ ಅಳವಡಿಸಿಕೊಂಡಿರುವ ಮಾದರಿ ಉಪಕ್ರಮಗಳ ಕುರಿತು ವಿವರಿಸಿದರು

ನಗರದಲ್ಲಿ 'ಸಪ್ತಕ' ಸಂಘಟನೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ಖ್ಯಾತ ಗಾಯಕ ಪಂಡಿತ್ ಎಂ.ವೆಂಕಟೇಶ್ ಕುಮಾರ್ ಅವರನ್ನು ಸನ್ಮಾನಿಸಿದರು. ಸಂಘಟನೆಯ ಧನಂಜಯ ಹೆಗಡೆ, ಗಾಯಕಿ ಗೀತಾ ಹೆಗಡೆ ಮತ್ತು ಸಂಘಟನೆ ಮುಖ್ಯಸ್ಥ ಜಿ.ಎಸ್‌. ಹೆಗಡೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು

ಜಯನಗರದ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿವತಿಯಿಂದ ಕನಕಪುರ ರಸ್ತೆಯಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ'ಯಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ರಾಜ್ಯ ಘಟಕದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಹೇಳಿಕೆ

ಅತಿ ಹಿಂದುಳಿದ ಸಮುದಾಯದ ಮಠಾಧೀಶರ ಮಹಾಸಭಾ ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಪ್ರಣವಾನಂದ ಸ್ವಾಮೀಜಿ

ಮುಖ್ಯಾಂಶಗಳು

- ಬಸವನಾಗಿದೇವ ಸ್ವಾಮೀಜಿ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ
- ಮಹಾಸಭಾದಲ್ಲಿ 51 ಸ್ವಾಮೀಜಿಗಳು ಆಜೀವ ಸದಸ್ಯರು
- ಕೇಂದ್ರ ಸಮಿತಿಯಲ್ಲಿ 11 ಸ್ವಾಮೀಜಿಗಳು

ಚಿತ್ರದುರ್ಗ: ಸಾಮಾಜಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಹಿಂದುಳಿದ ಸಮುದಾಯಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ಇವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಅತ್ಯಂತ ಹಿಂದುಳಿದ ಸಮುದಾಯಗಳ ಮಠಾಧೀಶರ ಮಹಾ ಸಭಾ ಅಸ್ತಿತ್ವಕ್ಕೆ ತರಲಾಗಿದೆ ಎಂದು ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

'ನಗರದ ಇಮ್ಮಡಿ ಕೇತೇಶ್ವರ ಮಠದಲ್ಲಿ ಸಂಕ್ರಾಂತಿ ದಿನದಂದು ಅತಿ ಹಿಂದುಳಿದ ಸಮುದಾಯದ ಮಠಗಳ ಸ್ವಾಮೀಜಿಗಳು ಸಭೆ ನಡೆಸಿ ಮಹಾಸಭಾ ಅಸ್ತಿತ್ವಕ್ಕೆ ತಂದಿದ್ದೇವೆ. ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ ಅವರನ್ನು ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ' ಎಂದು ಮಂಗಳ ವಾರ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಮಹಾಸಭಾದಲ್ಲಿ 51 ಸ್ವಾಮೀಜಿಗಳು ಆಜೀವ ಸದಸ್ಯರಿದ್ದಾರೆ. 11 ಸ್ವಾಮೀಜಿಗಳು ಕೇಂದ್ರ ಸಮಿತಿಯಲ್ಲಿದ್ದಾರೆ. ರಾಷ್ಟ್ರೀಯ ಜಂಟಿ ಕಾರ್ಯ-ದರ್ಶಿಗಳಾಗಿ ವಿಶ್ವಕರ್ಮ ಸಮುದಾಯದ ಕಲಬುರಗಿಯ ಸುಲ್ಲೇಪೇಟೆ ಪುಣ್ಯಕೋಟಿ ಮಠದ ದೊಡ್ಡೇಂದ್ರ ಸ್ವಾಮೀಜಿ, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಗಳಾಗಿ ಚಿತ್ರದುರ್ಗದ ಬಂಜಾರ ಗುರುಪೀಠದ ಸರ್ದಾರ್ ಸೇವಾಲಾಲ್ ಸ್ವಾಮೀಜಿ, ರಾಜ್ಯ ಘಟಕದ ಉಪಾಧ್ಯಕ್ಷರಾಗಿ ಚಿತ್ರದುರ್ಗದ ಕುಂಬಾರ ಗುಂಡಯ್ಯ ಮಠದ ಬಸವಮೂರ್ತಿ ಕುಂಬಾರ ಗುಂಡಯ್ಯ ಸ್ವಾಮೀಜಿ ಹಾಗೂ ಸದಸ್ಯರಾಗಿ ಚಿಕ್ಕಬಳ್ಳಾಪುರದ ಅರೆ ಅಲೆಮಾರಿ ಸಮಾಜದ ದೊಂಬಿ ದಾಸರ ಮಠದ ಕರುಣಾಕರ ಸ್ವಾಮೀಜಿ ಅವರನ್ನು ನೇಮಕ ಮಾಡಲಾಗಿದೆ ಎಂದರು.

ಮಹಾಸಭಾದ ಮೊದಲ ಸಭೆಯನ್ನು ಜ. 31ರಂದು ಬೆಂಗಳೂರಿನಲ್ಲಿ ಆಯೋ-ಜಿಸಲಾಗಿದ್ದು, ಎಲ್ಲ ಸಮುದಾಯದ ಮುಖಂಡರು ಭಾಗವಹಿಸಲಿದ್ದಾರೆ. ಸಭೆಯಲ್ಲಿ ವಿವಿಧ ಸಮಿತಿಗಳನ್ನು ರಚಿಸಿ ನಿರ್ಣಯ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದರು.

'ಸಮಾಜದಲ್ಲಿ ಅತಿ ಹಿಂದುಳಿದ ಸಮುದಾಯಗಳನ್ನು ಮುಖ್ಯವಾಹಿನಿಗೆ ತರಬೇಕಿದೆ. ಈ ಕೆಲಸ ಒಂದೇ ದಿನದಲ್ಲಿ ಆಗಲಿದೆ ಎಂಬ ಭ್ರಮೆ ನಮಗಿಲ್ಲ. ವಾಸ್ತವವಾಗಿ ಹಂತ ಹಂತವಾಗಿ ಹಿಂದುಳಿದ ಸಮುದಾಯ-ಗಳನ್ನು ಸಕಲ ರೀತಿಯಲ್ಲೂ ಸದೃಢ-ಗೊಳಿಸಲಾಗುತ್ತದೆ' ಎಂದು ಛಲವಾದಿ ಗುರುಪೀಠದ ಬಸವನಾಗಿದೇವ ಸ್ವಾಮೀಜಿ ಹೇಳಿದರು.

ಜೆಟ್‌ಲ್ಯಾಗ್ ಪಬ್ ಪರವಾನಗಿ 25 ದಿನ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಟೇರ' ಸಿನಿಮಾ ಯಶಸ್ಸು ಸಂಭ್ರಮಿಸಲು ನಟ ದರ್ಶನ್ ಮತ್ತು ಇತರೆ ಸಿನಿಮಾ ತಾರೆಯರು ನಿಯಮ ಮೀರಿ ತಡರಾತ್ರಿ ವರೆಗೆ ಪಾರ್ಟಿ ಮಾಡಿದ್ದರು ಎಂದು ಆರೋಪಿಸಲಾಗಿರುವ ಜೆಟ್‌ಲ್ಯಾಗ್ ಪಬ್‌ನ ಪರವಾನಗಿಯನ್ನು 25 ದಿನಗಳ ಕಾಲ ರದ್ದು ಮಾಡಿ ನಗರ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಜೆಟ್‌ಲ್ಯಾಗ್ ಪಬ್, ಅಬಕಾರಿ ನಿಯಮ ಮೀರಿರುವ ಕಾರಣ, ಮುಂದಿನ 25 ದಿನಗಳ ಕಾಲ ಮದ್ಯ ಮಾರಾಟ ಮಾಡುವಂತಿಲ್ಲ.

ಜೆಟ್‌ಲ್ಯಾಗ್ ಪಬ್ ನಲ್ಲಿ ಅಬಕಾರಿ ನಿಯಮ ಉಲ್ಲಂಘಿಸಿರುವ ಬಗ್ಗೆ ಎಫ್‌ಐ-ಆರ್‌ನಲ್ಲಿ ಉಲ್ಲೇಖ ಮಾಡಲಾಗಿತ್ತು. ಮೊದಲ ಬಾರಿ ಜೆಟ್‌ಲ್ಯಾಗ್ ವಿರುದ್ಧ ದೂರು ಬಂದಿರುವ ಕಾರಣ 25 ದಿನಗಳ ಕಾಲ ಪರವಾನಗಿ ರದ್ದು ಮಾಡಲಾಗಿದೆ. ಮೂರು ಬಾರಿ ನಿಯಮ ಉಲ್ಲಂಘಿಸಿದರೆ ಪರವಾನಗಿ ರದ್ದು ಮಾಡಲಾಗುತ್ತದೆ.

'ಜೆಟ್‌ಲ್ಯಾಗ್ ಪಬ್'ನಲ್ಲಿ ಜ. 3ರಂದು ಮುಂಜಾನೆವರೆಗೂ ಪಾರ್ಟಿ ಆಯೋಜಿಸಿದ್ದ ಪ್ರಕರಣದಲ್ಲಿ ನಟ ದರ್ಶನ್ ಸೇರಿ ಚಿತ್ರರಂಗದ ಎಂಟು ಮಂದಿ ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣೆಗೆ ಶುಕ್ರವಾರ ವಿಚಾರಣೆಗೆ ಹಾಜರಾಗಿ, ನೋಟಿಸ್‌ಗೆ ಉತ್ತರಿಸಿದ್ದ-ರು. ದರ್ಶನ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ನಿರ್ದೇಶಕ ತರುಣ್ ಸುಧೀರ್, ನಟರಾದ 'ನೀನಾಸಂ' ಸತೀಶ್, ಡಾಲಿ ಧನಂಜಯ್, ಚಿಕ್ಕಣ್ಣ, ಅಭಿಷೇಕ್ ಅಂಬರೀಷ್ ಹಾಗೂ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ವಿಚಾರಣೆಗೆ ಹಾಜರಾಗಿದ್ದರು.

ಮುಂಜಾನೆಯವರೆಗೆ ಮದ್ಯ ಪೂರೈಸಿದ ಆರೋಪದ ಮೇರೆಗೆ ಪಬ್ ಮಾಲೀಕರಾದ ಶಶಿರೇಖಾ ಜಗದೀಶ್ ಹಾಗೂ ವ್ಯವಸ್ಥಾಪಕ ವ್ಯವಸ್ಥಾಪಕ ಪ್ರಶಾಂತ್ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ ಮತ್ತು ಅಬಕಾರಿ ಕಾಯ್ದೆ ಅಡಿ ಪ್ರಕರಣ ದಾಖಲಿಸಲಾಗಿದೆ.

ಭಾರತ– ಚೀನಾ ಘರ್ಷಣೆ: ಇನ್ನಷ್ಟು ಘಟನೆಗಳು ಬೆಳಕಿಗೆ

ನವದೆಹಲಿ (ಪಿಟಿಐ): ಭಾರತ ಮತ್ತು ಚೀನಾದ ಸೈನಿಕರ ನಡುವೆ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ನಡೆದ ಎರಡು ಘಟನೆಗಳು, ಭಾರತೀಯ ಸೇನಾ ಸಿಬ್ಬಂದಿಗೆ ನೀಡಿದ ಶೌರ್ಯ ಪ್ರಶಸ್ತಿಗಳ ಉಲ್ಲೇಖಗಳೊಂದಿಗೆ ಬೆಳಕಿಗೆ ಬಂದಿವೆ.

ಎಲ್‌ಎಸಿ ಉದ್ದಕ್ಕೂ ಚೀನಾದ ಪೀಪಲ್ಸ್ ಲಿಬರೇಷನ್ ಆರ್ಮಿ (ಪಿಎಲ್‌ಎ) ಸೈನಿಕರ ಆಕ್ರಮಣಕಾರಿ ವರ್ತನೆಗೆ ಭಾರತೀಯ ಪಡೆಗಳು ಹೇಗೆ ಸಮರ್ಥವಾಗಿ ಪ್ರತಿಕ್ರಿಯಿಸಿದವು ಎಂಬುದರ ಸಂಕ್ಷಿಪ್ತ ವಿವರವನ್ನು ಕಳೆದ ವಾರ ಸೇನೆಯ ವೆಸ್ಟರ್ನ್ ಕಮಾಂಡ್‌ನಲ್ಲಿ ನಡೆದ ಸಮಾರಂಭದಲ್ಲಿ ಓದಲಾಗಿದೆ.

ಸೇನೆಯ ವೆಸ್ಟರ್ನ್ ಕಮಾಂಡ್ ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ, ಶೌರ್ಯ ಪ್ರಶಸ್ತಿಯ ವಿವರಗಳನ್ನು ಒಳಗೊಂಡ ಜನವರಿ 13ರ ಸಮಾರಂಭದ ವಿಡಿಯೊವನ್ನು ಅಪ್‌ಲೋಡ್ ಮಾಡಿತ್ತು. ಆದರೆ ಸೋಮವಾರ ಅದನ್ನು ತೆರವುಗೊಳಿಸಿದೆ.

ಅದರಲ್ಲಿ ಉಲ್ಲೇಖಿಸಲಾದ ಘಟನೆಗಳು 2021ರ ಸೆಪ್ಟೆಂಬರ್ ಮತ್ತು 2022ರ ನವೆಂಬರ್ ನಡುವೆ ನಡೆದಿವೆ. ಆದರೆ ಈ ಬಗ್ಗೆ ಸೇನೆಯಿಂದ ಯಾವುದೇ ತಕ್ಷಣದ ಪ್ರಕ್ರಿಯೆ ದೊರೆತಿಲ್ಲ.

2020ರಲ್ಲಿ ಗಾಲ್ವಾನ್ ಕಣಿವೆಯಲ್ಲಿ ನಡೆದ ಘರ್ಷಣೆಯ ಬಳಿಕ ಭಾರತೀಯ ಸೇನೆಯು 3,488 ಕಿ.ಮೀ ಉದ್ದವೂ ಸನ್ನದ್ಧ ಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. 2020 ಮೇ ತಿಂಗಳಿನಲ್ಲಿ ಪೂರ್ವ ಲಡಾಖ್‌ನಲ್ಲಿ ಭಾರತ– ಚೀನಾ ಸೈನಿಕರ ನಡುವೆ ನಡೆದ ಕಾದಾಟದ ಬಳಿಕ, ಮೂರೂವರೆ ವರ್ಷಗಳಲ್ಲಿ ಎರಡೂ ದೇಶಗಳ ಸೈನಿಕರ ನಡುವೆ ಎಲ್‌ಎಸಿ ಉದ್ದಕ್ಕೂ ಅನೇಕ ಚಕಮಕಿಗಳು ನಡೆದಿವೆ.

ಚೀನಿ ಪಡೆಗಳು 2022ರ ಡಿಸೆಂಬರ್ 9ರಂದು ಎಲ್‌ಎಸಿಯ ತವಾಂಗ್ ಸೆಕ್ಟರ್‌ನಲ್ಲಿ ಗಡಿ ಉಲ್ಲಂಘನೆಗೆ ಯತ್ನಿಸಿದ್ದವು. ಅಲ್ಲದೆ ಏಕಪಕ್ಷೀಯ-ವಾಗಿ ಯಥಾಸ್ಥಿತಿಯನ್ನು ಬದಲಿಸಿದವು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸಂಸತ್ತಿನಲ್ಲಿ ಉತ್ತರಿಸಿದ್ದರು.

ಟಿಇಎಚ್ ನಿಷೇಧ: ನ್ಯಾಯಮಂಡಳಿ ರಚಿಸಿದ ಕೇಂದ್ರ

ನವದೆಹಲಿ (ಪಿಟಿಐ): ಜಮ್ಮು ಕಾಶ್ಮೀರದಲ್ಲಿರುವ ಪಾಕಿಸ್ತಾನ ಪರ ಪ್ರತ್ಯೇಕತಾವಾದಿ ಸಂಘಟನೆ 'ತೆಹ್ರೀಕ್ ಇ ಹುರಿಯತ್' (ಟಿಇಎಚ್) ನಿಷೇಧಿತ ಸಂಘಟನೆ ಎಂದು ಘೋಷಿಸಲು ಪೂರಕ ಆಧಾರವಿದೆ ಎಂಬುದನ್ನು ಪರಿಶೀಲಿಸಿ, ನಿರ್ಧರಿಸಲು ಕೇಂದ್ರ ಸರ್ಕಾರ ನ್ಯಾಯಮಂಡಳಿ ರಚಿಸಿದೆ.

ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸಚಿನ್ ದತ್ತಾ ನೇತೃತ್ವದಲ್ಲಿ ನ್ಯಾಯಮಂಡಳಿ ರಚನೆಯಾಗಿದೆ ಎಂದು ಸರ್ಕಾರ ಮಂಗಳವಾರ ಹೊರಡಿಸಿ ರುವ ಅಧಿಸೂಚನೆಯಲ್ಲಿ ತಿಳಿಸಿದೆ.

ಇದು, ದೇಶವಿರೋಧಿ ಸಂಘಟನೆ ಎಂದು ಕಾನೂನುಬಾಹಿರ ಚಟುವಟಿಕೆ (ನಿಯಂತ್ರಣ) ಕಾಯ್ದೆ 1967ರ ಪ್ರಕಾರ ಕೇಂದ್ರ ಸರ್ಕಾರ ಈಗಾಗಲೇ ಐದು ವರ್ಷದ ಅವಧಿಗೆ ನಿಷೇಧ ಹೇರಿದೆ.

ಈ ಸಂಘಟನೆಯು ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದನೆ ಚಟುವಟಿಕೆಗೆ ಪ್ರಚೋದನೆ ನೀಡುತ್ತಿದೆ. ಭಾರತ ವಿರೋಧಿ ಪ್ರಚಾರಾಂದೋಲ-ನದಲ್ಲಿ ತೊಡಗಿದೆ ಎಂದು ಸಂಘಟನೆ ನಿಷೇಧಕ್ಕೆ ಕೇಂದ್ರ ಸರ್ಕಾರ ಕಾರಣವನ್ನು ನೀಡಿತ್ತು.

ಡೀಸೆಲ್‌ಗೆ ಮುಗಿಬಿದ್ದ ಜನರು!

ತಿಪಟೂರು: ತಾಲ್ಲೂಕಿನ ಹರಿಸಮುದ್ರ ಗೇಟ್ ಬಳಿ ಮಂಗಳವಾರ ಡೀಸೆಲ್ ತುಂಬಿದ ಟ್ಯಾಂಕರ್ ಬೈಕ್‌ಗೆ ಗುದ್ದಿ ರಸ್ತೆಯಲ್ಲಿಯೇ ಉರುಳಿ ಬಿದ್ದಿದೆ.

ತಿಪಟೂರು ಕಡೆಯಿಂದ ವೇಗವಾಗಿ ಬಂದ ಟ್ಯಾಂಕರ್ ಬೈಕ್‌ಗೆ ಡಿಕ್ಕಿ ಹೊಡೆಯಿತು. ಬೈಕ್ ಹಿಂಬದಿಯಲ್ಲಿ ಕುಳಿತಿದ್ದ ಭೈರನಾಯಕನಹಳ್ಳಿ ಗ್ರಾಮದ ಸರ್ವಮಂಗಳ (47) ಸ್ಥಳದಲ್ಲಿಯೇ ಮೃತಪಟ್ಟರು. ಬೈಕ್ ಸವಾರ ಅನಿಲ್ ಗಂಭೀರವಾಗಿ ಗಾಯಗೊಂಡಿದ್ದಾರೆ.

ಲಕ್ಷಾಂತರ ಪುಸ್ತಕಗಳ ಭಂಡಾರ ಸ್ಥಳಾಂತರಿಸಿದ ಹರಿಹರಪ್ರಿಯ

ಬೆಂಗಳೂರಿನಿಂದ ಮಾಲೂರಿಗೆ 'ಪುಸ್ತಕ ಮನೆ'

• ಕೆ. ಓಂಕಾರ ಮೂರ್ತಿ

ಕೋಲಾರ: ಅಪರೂಪದ ಲಕ್ಷಾಂತರ ಪುಸ್ತಕಗಳ ಸಂಗ್ರಹದ ಗಣಿ ಎನಿಸಿರುವ 'ಪುಸ್ತಕ ಮನೆ'ಯನ್ನು ರಾಜಧಾನಿ ಬೆಂಗಳೂರಿನಿಂದ ಕೋಲಾರ ಜಿಲ್ಲೆಯ ಮಾಲೂರಿಗೆ ಸ್ಥಳಾಂತರಿಸಲಾಗಿದೆ.

ಇದು ಬೆಂಗಳೂರಿನ ಓದುಗರಿಗೆ ನಷ್ಟ ಉಂಟು ಮಾಡಿದರೆ ಕೋಲಾರ ಜಿಲ್ಲೆಯ ಓದುಗ ಪ್ರಿಯರಿಗೆ ಖುಷಿಯ ವಿಚಾರವಾಗಿದೆ.

ವಿದ್ವಾಂಸ ಹರಿಹರಪ್ರಿಯ ಐದಾರು ದಶಕಗಳಿಂದ ಈ ಪುಸ್ತಕಗಳನ್ನು ಸಂಗ್ರಹಿಸಿದ್ದು, ಇಷ್ಟು ದಿನ ಬೆಂಗಳೂರಿನ ವಾಜರಹಳ್ಳಿಯ ತಮ್ಮ ನಿವಾಸದಲ್ಲಿ ಇರಿಸಿದ್ದರು. ಐದು ದಿನಗಳ ಹಿಂದೆ ಎಲ್ಲಾ ಪುಸ್ತಕಗಳನ್ನು ಆರು ಲಾರಿಗಳಲ್ಲಿ ಸ್ಥಳಾಂತರಿಸಿದ್ದಾರೆ. ರಾಜಧಾನಿಯ ಪುಸ್ತಕ ಪ್ರಿಯರು ಜಾಲತಾಣದಲ್ಲಿ ತಮ್ಮ ಸಂಕಟ ಹೇಳಿಕೊಂಡಿದ್ದಾರೆ.

ಮಾಲೂರಿನ ಹೊರವಲಯದ ಹೌಸಿಂಗ್ ಬೋರ್ಡ್ ಬಡಾವಣೆ-ಯಲ್ಲಿನ ತಮ್ಮ ಪುತ್ರಿ ಜಾಗೃತಿಪ್ರಿಯ ಸಾತವಲ್ಲಿ ನಿವೇಶನದಲ್ಲಿ ನಿರ್ಮಿಸಿರುವ ಶೆಡ್ಡಿನಾಕಾರದ ಮನೆಯಲ್ಲಿ ಪುಸ್ತ-ಕಗಳನ್ನು ಇರಿಸಿದ್ದಾರೆ. ಇನ್ನೂ ಜೋಡಿಸಬೇಕಿದೆ.

ಮಾಲೂರಿನ ಹೊರವಲಯದಲ್ಲಿ ಹರಿಹರಪ್ರಿಯ ನಿರ್ಮಿಸಿರುವ 'ಪುಸ್ತಕ ಮನೆ'

'ನನ್ನ ಬಳಿ ಸುಮಾರು ಐದು ಲಕ್ಷ ಪುಸ್ತಕಗಳ ಸಂಗ್ರಹವಿದೆ. ಬೆಂಗಳೂರಿನ ನಿವಾಸದ ಮಹಡಿಯಲ್ಲಿ ಇರಿಸಿದ್ದೆ. ಸಂಖ್ಯೆ ಹೆಚ್ಚಳದಿಂದ ತುಸು ಕಷ್ಟ-ವಾಗತೊಡಗಿತು. ಭಾರದಿಂದ ಮನೆಗೆ ತೊಂದರೆ ಆಗಬಹುದೆಂದು ಎಂಜಿನಿಯರ್ ಸ್ನೇಹಿತರು ಹೇಳಿದರು. ಮುನ್ನೆಚ್ಚರಿಕೆ ಕ್ರಮವಾಗಿ ಸ್ಥಳಾಂತರಿಸಿ-ದ್ದೇನೆ. ಜೊತೆಗೆ ಕೋಲಾರ ನನ್ನ ತವರು ಜಿಲ್ಲೆ. ಇಲ್ಲಿಯೇ ಸಾಂಸ್ಕೃತಿಕ ಅಧ್ಯಯನ ಕೇಂದ್ರ ರೂಪಿಸುವ ಯೋಜನೆ ಇದೆ' ಎಂದು ಪುಸ್ತಕಮನೆ ಹರಿಹರಪ್ರಿಯ 'ಪ್ರಜಾವಾಣಿ'ಗೆ ತಿಳಿಸಿದರು.

'ಪುಸ್ತಕ ಭಂಡಾರವು ವಿದ್ವಾಂಸರು, ಸಂಶೋಧಕರು, ಅಧ್ಯಯನಶೀಲರಿ-ಗೆ ಆಕರ ಗ್ರಂಥಾಲಯವಾಗಿದೆ. ಇಲ್ಲಿಗೆ ಬಂದು ಓದಿ ಹೋಗಬಹುದು. ಕೇಳಿದ ಪುಸ್ತಕವನ್ನು ನಾನೇ ಖುದ್ದಾಗಿ ತೆಗೆದು-ಕೊಡುತ್ತೇನೆ. ಕನ್ನಡ, ತೆಲುಗು ಹಾಗೂ ಇಂಗ್ಲಿಷ್ ಪುಸ್ತಕಗಳಿವೆ. ಇದರಲ್ಲಿ ಶೇ 5ರಷ್ಟು ಪುಸ್ತಕಗಳು ಗೆಳೆಯರು ನೀಡಿದ್ದು. ಇನ್ನುಳಿದವನ್ನು ದುಡಿಮೆಯಿಂದ ಖರೀದಿಸಿದ್ದೇನೆ' ಎಂದರು.

ಮುಖ್ಯಾಂಶಗಳು

- ವಿದ್ವಾಂಸರು, ಸಂಶೋಧಕರಿಗೆ ಆಕರ ಗ್ರಂಥಾಲಯ
- ಬೆಂಗಳೂರಿನ ವಾಜರಹಳ್ಳಿಯ ನಿವಾಸದಲ್ಲಿದ್ದ ಪುಸ್ತಕ ಭಂಡಾರ
- ಐದಾರು ದಶಕಗಳಿಂದ ಹರಿಹರಪ್ರಿಯ ಸಂಗ್ರಹಿಸಿರುವ ಪುಸ್ತಕಗಳು

ಕನ್ನಡ ನಾಡು ನುಡಿ ಸಂಸ್ಕೃತಿ ಬಗ್ಗೆ ಅಭಿಮಾನ ಹೊಂದಿರುವ 72 ವಯಸ್ಸಿನ ಹರಿಹರಪ್ರಿಯ, 10ನೇ ವಯಸ್ಸಿನಿಂದಲೇ ಪುಸ್ತಕ ಸಂಗ್ರಹಿಸುತ್ತಿದ್ದಾರೆ. ಬರವಣಿಗೆ, ಉಪನ್ಯಾಸಗಳಲ್ಲಿ ತೊಡಗಿರುವ ಅವರು ಸುಮಾರು 110 ಕೃತಿ ಬರೆದಿದ್ದಾರೆ. ಸಾಹಿತ್ಯ ಕೃತಿಗಳು ಸೇರಿದಂತೆ ತಾವು ಸಂಗ್ರಹಿಸಿದ ಪುಸ್ತಕಗಳನ್ನು 1992ರಿಂದ ಸಾರ್ವಜನಿಕ ವೀಕ್ಷಣೆಗೆ, ಮಾಹಿತಿಗೆ ಮುಕ್ತಗೊಳಿಸಿದ್ದಾರೆ.

'ದುಡ್ಡು ತೆಗೆದುಕೊಂಡು ಭಾಷಣ ಮಾಡುತ್ತೇನೆ. ಅಷ್ಟನ್ನೂ ಪುಸ್ತಕ ಖರೀದಿಸಲು ಬಳಸುತ್ತೇನೆ. ಸರ್ಕಾರದಿಂದ ಯಾವುದೇ ನೆರವು ಪಡೆದಿಲ್ಲ. ಕೋಲಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಗ್ರಾಮ ಪಂಚಾಯಿತಿ ಅಧ್ಯಕ್ಷ ಚಂದ್ರಶೇಖರ್ ಸೇರಿದಂತೆ ಹಲವರು ನೆರವು ನೀಡಲು ಮುಂದೆ ಬಂದಿದ್ದಾರೆ. ಪುಸ್ತಕ ಜೋಡಿಸಿಡಲು 300 ಬೀರುಗಳ ಅಗತ್ಯವಿದೆ. ಇನ್ನೂ ಹೆಚ್ಚಿನ ಜಾಗದ ಅವಶ್ಯವಿದೆ' ಎಂದರು.



ಅರ್ಚಕರ ಮಗನಾದ ನಾನು ಪುಸ್ತಕಪ್ರಿಯ. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಿಸುತ್ತಿದ್ದರೆ, ನಾನು ಮಾಲೂರಿನಲ್ಲಿ ಪುಸ್ತಕ ಮಂದಿರ ಕಟ್ಟುತ್ತಿದ್ದೇನೆ

ಹರಿಹರಪ್ರಿಯ, ವಿದ್ವಾಂಸ

ಟಿಡಿಪಿ ಮುಖ್ಯಸ್ಥರ ಅರ್ಜಿ ಕುರಿತ ಮುಂದಿನ ಕ್ರಮ ಏನು ಎಂಬುದನ್ನು ನಿರ್ಧರಿಸಲಿರುವ ಸಿಜೆಐ

ಚಂದ್ರಬಾಬು ಪ್ರಕರಣ: ಭಿನ್ನ ತೀರ್ಪು

ನವದೆಹಲಿ (ಪಿಟಿಐ): ಕೌಶಲ ಅಭಿವೃದ್ಧಿ ನಿಗಮದ ಹಗರಣದಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಟಿಡಿಪಿ ನಾಯಕ ಎನ್. ಚಂದ್ರಬಾಬು ನಾಯ್ಡು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು ಭಿನ್ನವಾದ ತೀರ್ಪು ನೀಡಿದೆ.

ಭ್ರಷ್ಟಾಚಾರ ನಿಗ್ರಹ ಕಾಯ್ದೆಯ 'ಸೆಕ್ಷನ್ 17ಎ'ಯ ವ್ಯಾಖ್ಯಾನ ಹಾಗೂ ಅದರ ಅನ್ವಯದ ವಿಚಾರದಲ್ಲಿ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರಲ್ಲಿ ಒಮ್ಮತ ಮೂಡಲಿಲ್ಲ.

2018ರ ಜುಲೈನಲ್ಲಿ ಕಾಯ್ದೆಗೆ ತಿದ್ದುಪಡಿ ತಂದು ಸೆಕ್ಷನ್ 17ಎ ಸೇರಿಸಲಾಗಿದೆ. ಸಾರ್ವಜನಿಕ ಸೇವಕನ ವಿರುದ್ಧ ಈ ಕಾಯ್ದೆಯ ಅಡಿಯಲ್ಲಿ ವಿಚಾರಣೆ, ತನಿಖೆ ಆರಂಭಿಸಲು ಪೊಲೀಸ್ ಅಧಿಕಾರಿಯು ಸಕ್ಷಮ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯುವುದು ಕಡ್ಡಾಯ ಎಂದು ಈ ಸೆಕ್ಷನ್ ಹೇಳುತ್ತದೆ.

ನಾಯ್ಡು ಅವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಅಡಿಯಲ್ಲಿ ತನಿಖೆ ನಡೆಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಿತ್ತು ಎಂದು ನ್ಯಾಯಮೂರ್ತಿ ಬೋಸ್ ಹೇಳಿದ್ದಾರೆ. ಆದರೆ ನ್ಯಾಯಮೂರ್ತಿ ತ್ರಿವೇದಿ ಅವರು, ಈ ಸೆಕ್ಷನ್‌ಅನ್ನು ಪೂರ್ವಾನ್ವಯಗೊಳಿಸಲು ಅವಕಾಶ ಇಲ್ಲ ಎಂದು ಹೇಳಿದ್ದಾರೆ.

ನಾಯ್ಡು ಅವರು 2015ರಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿ ಆಗಿದ್ದಾಗ ಕೌಶಲ ಅಭಿವೃದ್ಧಿ ನಿಗಮದ ಹಣವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದಾರೆ.

ಈ ಆರೋಪದ ಅಡಿಯಲ್ಲಿ ಅವರನ್ನು ಕಳೆದ ವರ್ಷ ಸೆಪ್ಟೆಂಬರ್ 9ರಂದು ಬಂಧಿಸಲಾಗಿತ್ತು. ಆರೋಪಗಳನ್ನು ನಾಯ್ಡು ಅಲ್ಲಗಳೆದಿದ್ದಾರೆ.

ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯದೇ ತಮ್ಮ ವಿರುದ್ಧ ಎಫ್‌ಐಆರ್ ದಾಖಲಿಸಿದ್ದ ಕಾರಣ, ತಮ್ಮ ಬಂಧನವು ಕಾನೂನುಬಾಹಿರ ಎಂದು ನಾಯ್ಡು ಅವರು ವಾದಿಸಿದ್ದರು.

ಆದರೆ, ಹೊಸ ಸೆಕ್ಷನ್ ಜಾರಿಗೆ ಬಂದಿದ್ದು 2018ರ ಜುಲೈನಿಂದ. ಸಿಐಡಿ ಅಧಿಕಾರಿಗಳು ನಾಯ್ಡು ವಿರುದ್ಧ 2017ರಿಂದಲೇ ತನಿಖೆ ಆರಂಭಿಸಿದ್ದಾರೆ. ಹೀಗಾಗಿ, ನಾಯ್ಡು ಅವರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ರಾಜ್ಯ ಸರ್ಕಾರದ ಪರವಾಗಿ ಹಾಜರಿದ್ದ ವಕೀಲರು ಪ್ರತಿವಾದ ಮಂಡಿಸಿದ್ದರು.

ಇಬ್ಬರೂ ನ್ಯಾಯಮೂರ್ತಿಗಳು ಭಿನ್ನ ನಿಲುವು ತಾಳಿರುವ ಕಾರಣ ಈ ಪ್ರಕರಣವನ್ನು ಮುಂದಿನ ಕ್ರಮಕ್ಕಾಗಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರ (ಸಿಜೆಐ) ಅವಗಾಹನೆಗೆ ತರಲಾಗುತ್ತದೆ.

ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದ ಕಾರಣ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಅಡಿಯಲ್ಲಿ ಕೈಗೊಂಡ ಕ್ರಮವು ಕಾನೂನುಬಾಹಿರ ಆಗುತ್ತದೆ. ಅನುಮತಿ ಪಡೆದುಕೊಳ್ಳದ ಕಾರಣಕ್ಕೆ, ನಾಯ್ಡು ಅವರ ವಿರುದ್ಧ ಈ ಕಾಯ್ದೆಯ ಅಡಿಯಲ್ಲಿ ಕ್ರಮ ಜರುಗಿಸುವ ಅವಕಾಶ ಇಲ್ಲ. ಆದರೆ ಅನುಮತಿ ಕೋರುವ ಅವಕಾಶವು ರಾಜ್ಯ ಸರ್ಕಾರಕ್ಕೆ ಮುಕ್ತವಾಗಿ ಇದೆ.
ನ್ಯಾಯಮೂರ್ತಿ ಅನಿರುದ್ಧ ಬೋಸ್

2018ರ ಜುಲೈ 26ರಿಂದ ಅನ್ವಯ ಆಗುವಂತೆ ಸೆಕ್ಷನ್ 17ಎ ಜಾರಿಗೆ ಬಂದಿದೆ. ಹೀಗಾಗಿ, ತಿದ್ದುಪಡಿಯು ಆ ದಿನಾಂಕದಿಂದ ಮುಂದಕ್ಕೆ ಅನ್ವಯವಾಗಬೇಕು ಎಂಬುದು ಕಾನೂನಿನ ಆಶಯವೇ ಹೊರತು, ಅದು ಪೂರ್ವಾನ್ವಯ ಆಗಬೇಕು ಎಂಬುದಲ್ಲ. ಮಹತ್ವದ ತಿದ್ದುಪಡಿಯೊಂದನ್ನು ಪೂರ್ವಾನ್ವಯಗೊಳಿಸಲು ಆಗದು. ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಉದ್ದೇಶವು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುವುದು. ಸೆಕ್ಷನ್ 17ಎ ಉದ್ದೇಶ ಪ್ರಾಮಾಣಿಕ ಸಾರ್ವಜನಿಕ ಸೇವಕರನ್ನು ಕಿರುಕುಳಗಳಿಂದ ರಕ್ಷಿಸುವುದು.
ನ್ಯಾಯಮೂರ್ತಿ ಬೇಲಾ ಎಂ. ತ್ರಿವೇದಿ

ಒಣ ಮೀನು
ಮಂಗಳೂರಿನ ಹೊಯ್ಗೆ ಬಜಾರ್‌ನಲ್ಲಿ ಕಾರ್ಮಿಕ ಮಹಿಳೆಯೊಬ್ಬರು ಬಿಸಿಲಿಗೆ ಮೀನು ಒಣಗಿಸುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ/ ಫಕ್ರುದ್ದೀನ್ ಎಚ್

‘ಬಾಲ ಗರ್ಭಿಣಿ: ಆಯೋಗದಿಂದ ಪುನರ್ ಸಮೀಕ್ಷೆ’

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂರು ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ 18 ವರ್ಷ ತುಂಬುವ ಒಳಗೆ 49 ಸಾವಿರಕ್ಕೂ ಹೆಚ್ಚು ಬಾಲಕಿಯರು ಗರ್ಭಿಣಿಯರಾಗಿರುವ ಪ್ರಕರಣಗಳು ದಾಖಲಾಗಿದ್ದು, ಈ ಬಗ್ಗೆ ಪುನರ್ ಸಮೀಕ್ಷೆ ಮಾಡಲಾಗುತ್ತದೆ ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ನಾಗಣ್ಣ ಗೌಡ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ‘ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳ ಮೂಲಕ ಆಯಾ ಜಿಲ್ಲೆಯ ಮಾಹಿತಿ ಸಂಗ್ರಹಿಸಿದಾಗ ಈ ಆಘಾತಕಾರಿ ಮಾಹಿತಿ ಗೊತ್ತಾಗಿದೆ. ಆಯೋಗದ ವತಿಯಿಂದ ಪುನರ್ ಸಮೀಕ್ಷೆ ಮಾಡಲಾಗುತ್ತಿದ್ದು, ಇಂತಹ ಪ್ರಕರಣ ಪತ್ತೆಯಾಗಿರುವ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ, ಆಶಾ, ಅಂಗನವಾಡಿ ಕಾರ್ಯಕರ್ತೆಯರ ಸಹಕಾರ ಪಡೆಯಲಾಗುತ್ತಿದೆ. ಆಯೋಗದ ಸದಸ್ಯರಿಗೆ ಜಿಲ್ಲೆಗಳನ್ನು ಹಂಚಿಕೆ ಮಾಡಲಾಗಿದ್ದು, ಸಂತ್ರಸ್ತ ಬಾಲಕಿಯರನ್ನು ಸದಸ್ಯರೇ ಖುದ್ದು ಭೇಟಿ ಮಾಡಿ, ಸತ್ಯಾಸತ್ಯತೆ ಪರಿಶೀಲಿಸಿ ವರದಿ ಸಿದ್ಧಪಡಿಸಲಿದ್ದಾರೆ. ಈ ತಿಂಗಳ ಕೊನೆಯಲ್ಲಿ ಸಮೀಕ್ಷೆ ಪೂರ್ಣಗೊಂಡು ಸಮಗ್ರ ವರದಿ ಸಿದ್ಧವಾಗುವ ನಿರೀಕ್ಷೆ ಇದೆ’ ಎಂದರು.

‘ಕಲ್ಯಾಣ ಕರ್ನಾಟಕ ಭಾಗದಲ್ಲಿ ಇಂತಹ ಗರಿಷ್ಠ ಪ್ರಕರಣಗಳು ಇದ್ದು, ಉಡುಪಿ ಜಿಲ್ಲೆಯಲ್ಲಿ ಅತಿ ಕಡಿಮೆ ಪ್ರಕರಣಗಳು ಇವೆ. ಸಾಕಷ್ಟು ಜಾಗೃತಿ ಮೂಡಿಸಿದರೂ, ಬಾಲ್ಯ ವಿವಾಹ ನಿಯಂತ್ರಣಕ್ಕೆ ಬಂದಿಲ್ಲ. ಕೆಲವು ಜೈಲುಗಳಲ್ಲಿ ಇರುವವರಲ್ಲಿ ಶೇ 60ರಷ್ಟು 25–30 ವರ್ಷ ವಯಸ್ಸಿನ ಪುರುಷರು ಇದ್ದಾರೆ. ಇವರು ಪೋಕ್ಸೊ ಅಥವಾ ಬಾಲ್ಯ ವಿವಾಹದ ಅಡಿಯಲ್ಲಿ ಆರೋಪಿಗಳಾಗಿ ಜೈಲು ಸೇರಿದವರಾಗಿದ್ದಾರೆ. 18 ವರ್ಷಕ್ಕಿಂತ ಕಿರಿಯ ವಯಸ್ಸಿನ ಬಾಲಕಿಯನ್ನು ಮದುವೆಯಾದಲ್ಲಿ ಆ ವ್ಯಕ್ತಿಯ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗುತ್ತದೆ’ ಎಂದು ಅವರು ಹೇಳಿದರು.

ಸುದ್ದಿ 2 ನಿಮಿಷ

ಅರಣ್ಯ ಪ್ರದೇಶದಲ್ಲಿ ಅದಿರು ಸಾಗಣೆ ಕೋರಿಕೆ: ಅರ್ಜಿ ವಜಾ

ಬೆಂಗಳೂರು: ‘ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಮಾರ್ಗದ ಮೂಲಕ ಕಬ್ಬಿಣದ ಅದಿರು ಸಾಗಣೆಗೆ ಅನುಮತಿ ನೀಡಬೇಕು’ ಎಂದು ಕೋರಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಮೆಸರ್ಸ್ ಠಾಕೂರ್ ಇಂಡಸ್ಟ್ರೀಸ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿದೆ.

‘ಅರಣ್ಯ ಪ್ರದೇಶದಲ್ಲಿ ತೆಗೆದ ಅದಿರು ಸಾಗಣೆ ಮತ್ತು ಅರಣ್ಯ ಇಲಾಖೆ ಅನುಮತಿ ಪಡೆಯಬೇಕಾಗುತ್ತದೆ. ಇದು ಬೇರೆಡೆ ತೆಗೆದಿರುವ ಅದಿರು ಆಗಿದೆ ಎಂಬ ಕಾರಣ ಅರಣ್ಯ ಇಲಾಖೆಯ ಅನುಮತಿ ಅನಗತ್ಯವಲ್ಲ’ ಎಂಬ ಅರ್ಜಿದಾರರ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, ‘ಕರ್ನಾಟಕ ಅಕ್ರಮ ಗಣಿಗಾರಿಕೆ, ಸಾಗಣೆ, ದಾಸ್ತಾನು ನಿಯಮ–2011ರ ನಿಯಮ 3ರ ಪ್ರಕಾರ ಅನುಮತಿಯನ್ನು ಅಗತ್ಯವಾಗಿ ಪಡೆಯಲೇಬೇಕು’ ಎಂದು ಆದೇಶಿಸಿದೆ.

‘ಖನಿಜ ಸಾಗಣೆಯಿಂದ ಉಂಟಾಗುವ ಸಂಭವನೀಯ ಹಾನಿ ಅಥವಾ ನಷ್ಟವನ್ನು ತಪ್ಪಿಸುವುದು ಅರಣ್ಯ ಸಂರಕ್ಷಣೆಯ ಭಾಗವಾಗಿದೆ. ಹೀಗಾಗಿ, ಅರ್ಜಿದಾರರು ಅರಣ್ಯ ಅನುಮತಿ ಪಡೆಯಬೇಕು’ ಎಂದು ಹೇಳಿದೆ.

ಎಸ್‌ಸಿ, ಎಸ್‌ಟಿ ಹಾಸ್ಟೆಲ್ ಸಿಬ್ಬಂದಿ ಕೊರತೆ: ವರದಿ ಸಲ್ಲಿಕೆಗೆ ಆದೇಶ

ಬೆಂಗಳೂರು: ‘ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಯುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ (ಎಸ್‌ಸಿ–ಎಸ್‌ಟಿ) ಬಾಲಕ–ಬಾಲಕಿಯರ ವಸತಿಗೃಹಗಳಲ್ಲಿ ಸಿಬ್ಬಂದಿ ಕೊರತೆಗೆ ಸಂಬಂಧಿಸಿದಂತೆ ಕೈಗೊಂಡಿರುವ ಕ್ರಮಗಳ ಕುರಿತು ಸಮಗ್ರ ವರದಿ ಸಲ್ಲಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಬೆಳಗಾವಿಯ, ‘ತರುಣ ಭಾರತ್’ ಮರಾಠಿ ದಿನಪತ್ರಿಕೆಯಲ್ಲಿ ಪ್ರಕಟವಾದ ವರದಿ ಆಧರಿಸಿ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಕರಣದ ಅಮಿಕಸ್ ಕ್ಯೂರಿ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ನಿತಿನ್ ರಮೇಶ್, ‘ವಿದ್ಯಾರ್ಥಿ ವಸತಿ ಗೃಹಗಳ ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಮಾರ್ಗಸೂಚಿ ಬಿಡುಗಡೆ ಮಾಡಿದೆ’ ಎಂದು ತಿಳಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ಮಾರ್ಗಸೂಚಿಗಳ ಪ್ರಸ್ತಾವಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು ಎಂಬುದನ್ನು ತಿಳಿಸಿ. ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ನೇಮಕಕ್ಕೆ ತ್ವರಿತ ಪ್ರಕ್ರಿಯೆ ಪ್ರಾರಂಭಿಸಿ ಆರು ತಿಂಗಳಲ್ಲಿ ಪೂರ್ಣಗೊಳಿಸಿ ಎಂದು ಕಳೆದ ವರ್ಷವಷ್ಟೇ ಆದೇಶಿಸಲಾಗಿದೆ. ಈ ಸಂಬಂಧ ರಾಜ್ಯ ಸರ್ಕಾರ ಗಮನ ಹರಿಸಬೇಕು’ ಎಂದು ಸರ್ಕಾರದ ಪರ ವಕೀಲರಿಗೆ ತಾಕೀತು ಮಾಡಿ ವಿಚಾರಣೆಯನ್ನು ಎರಡು ವಾರ ಮುಂದೂಡಿತು.

‘ಡೀಪ್‌ಫೇಕ್ ನಿಗ್ರಹಕ್ಕೆ ವಾರದಲ್ಲಿ ಕಠಿಣ ನಿಯಮ’

ನವದೆಹಲಿ: ‘ಡೀಪ್‌ಫೇಕ್’ ಒಡ್ಡಿರುವ ಸವಾಲನ್ನು ಎದುರಿಸಲು ಐ.ಟಿ (ಮಾಹಿತಿ ತಂತ್ರಜ್ಞಾನ) ನಿಯಮಗಳಲ್ಲಿ ತಿದ್ದುಪಡಿ ಮಾಡಲಾಗುತ್ತಿದ್ದು, ಮುಂದಿನ ಏಳು ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಮಂಗಳವಾರ ಹೇಳಿದರು.

‘ಡೀಪ್‌ಫೇಕ್’ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ತಪ್ಪುಮಾಹಿತಿಗಳ ಪ್ರಸರಣ ಕುರಿತು ಕಳವಳ ವ್ಯಕ್ತಪಡಿಸಿದ್ದ ಕೇಂದ್ರ ಸರ್ಕಾರ, ಐ.ಟಿ ನಿಯಮಗಳಿಗೆ ಬದ್ಧರಾಗಿರಬೇಕು ಎಂದು ಸಾಮಾಜಿಕ ಮಾಧ್ಯಮಗಳಿಗೆ ಸೂಚನೆ ನೀಡಿತ್ತು.

ಭೇಟಿಗೆ ಅವಕಾಶ ನೀಡದ ಕೇಂದ್ರ ಸಚಿವರ ವಿರುದ್ಧ ಅಸಮಾಧಾನ

ಕೆಲಸದ ದಿನ ಹೆಚ್ಚಳಕ್ಕೆ ಪ್ರಿಯಾಂಕ್ ಮತ್ತೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ (ನರೇಗ) ಕೆಲಸದ ದಿನಗಳನ್ನು ಕುಟುಂಬವೊಂದಕ್ಕೆ 150 ದಿನಗಳಿಗೆ ಹೆಚ್ಚಿಸುವಂತೆ ಆಗ್ರಹಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಗಿರಿರಾಜ್ ಸಿಂಗ್ ಅವರಿಗೆ ಮತ್ತೆ ಪತ್ರ ಬರೆದಿದ್ದಾರೆ.

ಅಂಕಿ ಅಂಶಗಳು

31,025	3.69 ಲಕ್ಷ	90
100 ದಿನಗಳ ಕೆಲಸ ಪೂರೈಸಿದ ಕುಟುಂಬಗಳು	81ರಿಂದ 99 ದಿನಗಳ ಕೆಲಸ ಪೂರ್ಣಗೊಳಿಸಿದ ಕುಟುಂಬಗಳು	50 ಹೆಚ್ಚುವರಿ ಕೆಲಸಕ್ಕಾಗಿ ಈ ವರ್ಷದಲ್ಲಿ ಇನ್ನೂ ಬಾಕಿ ಉಳಿದಿರುವ ದಿನಗಳು

ಕೇಂದ್ರ ಸಚಿವರನ್ನು ಖುದ್ದಾಗಿ ಭೇಟಿಮಾಡಿ ಬೇಡಿಕೆ ಸಲ್ಲಿಸಲು ಪ್ರಿಯಾಂಕ್ ಅವರು ಕಳೆದ ವಾರದ ದೆಹಲಿ ಪ್ರವಾಸದ ಸಂದರ್ಭದಲ್ಲಿ ಪ್ರಯತ್ನಿಸಿದ್ದರು. ಆದರೆ, ಗಿರಿರಾಜ್ ಸಿಂಗ್ ಅವರು ಭೇಟಿಗೆ ಸಮಯಾವಕಾಶ ನೀಡಿರಲಿಲ್ಲ. ಕೆಲಸದ ದಿನಗಳ ಹೆಚ್ಚಳ ಹಾಗೂ ನರೇಗ ವೇತನದ ಬಾಕಿ ಮೊತ್ತ ಪಾವತಿಸಬೇಕೆಂಬ ಬೇಡಿಕೆಗಳುಳ್ಳ ಪತ್ರವನ್ನು ಕೇಂದ್ರ ಸಚಿವರ ಕಾರ್ಯಾಲಯಕ್ಕೆ ಸಲ್ಲಿಸಿ ಬಂದಿದ್ದಾರೆ.

‘ರಾಜ್ಯದ 223 ಬರಪೀಡಿತ ತಾಲ್ಲೂಕುಗಳಲ್ಲಿ ನರೇಗ ಅಡಿಯಲ್ಲಿ ಕುಟುಂಬವೊಂದಕ್ಕೆ ನೀಡುತ್ತಿರುವ ಕೆಲಸದ ದಿನಗಳನ್ನು 100ರಿಂದ 150ಕ್ಕೆ ಹೆಚ್ಚಿಸುವಂತೆ ಹಾಗೂ ವೇತನ ಬಾಕಿ ಮೊತ್ತ ₹400 ಕೋಟಿ ಬಿಡುಗಡೆ ಮಾಡುವಂತೆ ಒತ್ತಾಯಿಸಲು ಕೇಂದ್ರ ಸಚಿವರನ್ನು ಭೇಟಿಮಾಡಲು ಕಳೆದ ವಾರ ಹಲವು ಬಾರಿ ಪ್ರಯತ್ನಿಸಿದೆ. ಆದರೆ, ಯಾವುದೇ ಪ್ರಯೋಜನವಾಗಲಿಲ್ಲ’ ಎಂದು ಪ್ರಿಯಾಂಕ್ ಅವರು ಪತ್ರವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

ರಾಜ್ಯದ 31 ಜಿಲ್ಲೆಗಳಲ್ಲೂ ಭೀಕರ ಬರಗಾಲ ಇದೆ. 223 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿದೆ. ಇಂತಹ ಸಂಕಷ್ಟದ ಕಾಲದಲ್ಲಿ ನರೇಗಾ ಕೆಲಸದ ದಿನಗಳನ್ನು 100ರಿಂದ 150ಕ್ಕೆ ಹೆಚ್ಚಿಸಿದರೆ ಜನರಿಗೆ ಅನುಕೂಲವಾಗುತ್ತದೆ. ಈ ಕುರಿತು 2023ರ ಸೆಪ್ಟೆಂಬರ್ 20ರಂದೇ ಪತ್ರ ಬರೆದಿದ್ದರೂ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಮಣಿಪುರ: ತೆಂಗ್‌ನೌಪಾಲ್‌ನಲ್ಲಿ ಮತ್ತೆ ಕರ್ಫ್ಯೂ

ಗುವಾಹಟಿ: ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಮೋರೆಹ್‌ನಲ್ಲಿ ನಡೆದಿದ್ದ ಮಾಜಿ ಪೊಲೀಸ್ ಅಧಿಕಾರಿಯೊಬ್ಬರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಕಿ ಸಮುದಾಯದ ಇಬ್ಬರು ಆರೋಪಿಗಳನ್ನು ಬಂಧಿಸಿದ ಬೆನ್ನಲ್ಲೇ, ಮಣಿಪುರದ ತೆಂಗ್‌ನೌಪಾಲ್ ಜಿಲ್ಲೆಯಲ್ಲಿ, ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಹೀಗಾಗಿ ಜಿಲ್ಲೆಯಲ್ಲಿ ಮತ್ತೆ ಕರ್ಫ್ಯೂವನ್ನು ಜಾರಿಗೊಳಿಸಲಾಗಿದೆ.

ಈ ಇಬ್ಬರ ಬಂಧನದ ಬಳಿಕ ಕುಕಿ ಸಮುದಾಯದ ಮಹಿಳೆಯರ ಗುಂಪು ಸೋಮವಾರ ಮೋರೆಹ್‌ನ ಪೊಲೀಸ್ ಠಾಣೆ ಎದುರು ಜಮಾಯಿಸಿ ಪ್ರತಿಭಟನೆ ನಡೆಸಿತು. ಬಂಧನದಲ್ಲಿರುವ ಫಿಲಿಪ್ ಖೈಖೋಲಾಯ್ ಖೋಂಗ್‌ಸಾಯ್ ಮತ್ತು ಹೆಮ್ಖೋಲಾಯ್ ಮೇಟ್ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿತು.

ಕಳೆದ ಅಕ್ಟೋಬರ್ 31ರಂದು ಮೋರೆಹ್‌ನಲ್ಲಿ ಚಿಂಗ್ತಮ್ ಆನಂದ್ ಕುಮಾರ್ ಅವರನ್ನು ಗುಂಡಿಕ್ಕಿ ಕೊಲ್ಲಲಾಗಿತ್ತು. ಈ ಪ್ರಕರಣದ ಮುಖ್ಯ ಶಂಕಿತರಲ್ಲಿ ಇವರಿಬ್ಬರೂ ಸೇರಿದ್ದಾರೆ ಎಂದು ಮಣಿಪುರ ಪೊಲೀಸರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿ ಮಾಹಿತಿ ನೀಡಿದ್ದಾರೆ.

ವಿಐಎಸ್‌ಎಲ್ ಭವಿಷ್ಯ ಅತಂತ್ರ

ಒಂದನೇ ಪುಟದಿಂದ...

ಉತ್ಪಾದನೆ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 25ರಷ್ಟು ಮಾತ್ರ ಆಗುತ್ತಿದೆ. ಪ್ರೈಮರಿ ಮಿಲ್‌ನಲ್ಲಿನ ಉತ್ಪಾದನೆಗೆ 20 ದಿನಗಳಿಗೆ, ಬಾರ್‌ಮಿಲ್‌ಗೆ ಒಂದೂವರೆ ತಿಂಗಳಿಗೆ ಸಾಲುವಷ್ಟು ಮಾತ್ರ ಕಚ್ಚಾ ವಸ್ತು ಇದೆ. ನಂತರ ಮುಂದೇನು’ ಎಂದು ಸುರೇಶ್ ಪ್ರಶ್ನಿಸಿದರು.

ಪೂರ್ವಭಾವಿ ಸಭೆಗೂ ಆಹ್ವಾನವಿಲ್ಲ: ‘ಪ್ರತಿ ವರ್ಷದ ಆರಂಭದಲ್ಲಿ ಜಾರ್ಖಂಡ್‌ನ ರಾಂಚಿಯಲ್ಲಿ ಭಾರತೀಯ ಉಕ್ಕು ಪ್ರಾಧಿಕಾರದ ವಾರ್ಷಿಕ ಆಯವ್ಯಯ ಯೋಜನಾ ಸಭೆ (ಎಬಿಪಿ) ನಡೆಸುತ್ತದೆ. ಅಲ್ಲಿ ಕಾರ್ಖಾನೆಗಳ ವಾರ್ಷಿಕ ಬೇಡಿಕೆ, ಕಚ್ಚಾವಸ್ತು ಪೂರೈಕೆ ಉತ್ಪಾದನೆ ಹಾಗೂ ಖರ್ಚು–ವೆಚ್ಚದ ಕುರಿತು ಯೋಜನಾ ವರದಿ ಸಿದ್ಧಪಡಿಸಲಾಗುತ್ತದೆ. ಅದರ ಪೂರ್ವಭಾವಿ ಸಭೆಗಳಿಗೂ ವಿಐಎಸ್‌ಎಲ್‌ಗೆ ಆಹ್ವಾನ ನೀಡಿಲ್ಲ. ಇದು ನಮ್ಮ ಆತಂಕ ಇನ್ನಷ್ಟು ಹೆಚ್ಚಿಸಿದೆ’ ಎಂದು ಸುರೇಶ್ ತಿಳಿಸಿದರು.

ವರ್ಷದ ಹಿಂದೆ ತೀರ್ಮಾನ: ವಿಐಎಸ್‌ಎಲ್ ಮುಚ್ಚುವ ಬಗ್ಗೆ 2023ರ ಜನವರಿ 16ರಂದು ಉಕ್ಕು ಪ್ರಾಧಿಕಾರದ ನಿರ್ದೇಶಕ ಮಂಡಳಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿತ್ತು. ಈ ತೀರ್ಮಾನಕ್ಕೆ ವರ್ಷ ಸಂದ ಹಿನ್ನೆಲೆಯಲ್ಲಿ ಕಾರ್ಖಾನೆಯ 1,400 ಗುತ್ತಿಗೆ ಕಾರ್ಮಿಕರು ಮಂಗಳವಾರ ರಾತ್ರಿ ಭದ್ರಾವತಿಯಲ್ಲಿ ಕರಾಳ ದಿನ ಆಚರಿಸಿ ಪಂಜಿನ ಮೆರವಣಿಗೆ ನಡೆಸಿದರು. ಭಾರತೀಯ ಉಕ್ಕು ಪ್ರಾಧಿಕಾರದ ನಿರ್ಧಾರ ವಿರೋಧಿಸಿ ಕಾರ್ಮಿಕರು ಆರಂಭಿಸಿದ್ದ ಪ್ರತಿಭಟನೆಗೂ ಜನವರಿ 18ರಂದು ಒಂದು ವರ್ಷ ತುಂಬಲಿದೆ.

ವಿಐಎಸ್‌ಎಲ್ ಸದ್ಯ ಯಥಾಸ್ಥಿತಿಯಲ್ಲಿ ಸಾಗುತ್ತಿದೆ. ಮುಂದೆ ಏನಾಗಬಹುದೋ ಎಂಬ ಊಹಾಪೋಹಗಳು ಕೇಳಿಬರುತ್ತಿವೆ. ಅದಕ್ಕೆ ಪ್ರತಿಕ್ರಿಯಿಸಲು ಆಗುವುದಿಲ್ಲ
ಎಲ್.ಪ್ರವೀಣ್‌ಕುಮಾರ್, ವಿಐಎಸ್‌ಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ

ವಿಧಾನಸಭೆ ಚುನಾವಣೆಗೆ ಮುನ್ನ ರಾಜಕೀಯ ಮುಖಂಡರು ಬಂದು ವಿಐಎಸ್‌ಎಲ್ ಶಾಶ್ವತವಾಗಿ ಉಳಿಸುವ ಭರವಸೆ ನೀಡಿದ್ದರು. ಅದು ಇನ್ನೂ ಈಡೇರಿಲ್ಲ
ಎಚ್.ಜಿ.ಸುರೇಶ್, ವಿಐಎಸ್‌ಎಲ್ ಗುತ್ತಿಗೆ ಕಾರ್ಮಿಕರ ಸಂಘದ ಅಧ್ಯಕ್ಷ

ಗ್ರೀನ್ ಸ್ಟೀಲ್ ಉತ್ಪಾದನೆ: ‘ಸೆಫಿ’ ಸಲಹೆ

‘ವಿಐಎಸ್‌ಎಲ್ ಮುಚ್ಚುವ ಅಗತ್ಯವಿಲ್ಲ. ಈಗ ಇರುವ ಮೂಲ ಸೌಕರ್ಯ ಬಳಸಿ ಅಲ್ಲಿ ₹ 30,000 ಕೋಟಿ ಬಂಡವಾಳ ಹೂಡಿ ಗ್ರೀನ್ ಸ್ಟೀಲ್ ಉತ್ಪಾದನೆ ಮಾಡಬಹುದು ಎಂಬ ಸಲಹೆ ಭಾರತೀಯ ಉಕ್ಕು ಪ್ರಾಧಿಕಾರದ ಅಧೀನದ ಸೆಫಿ ಒಕ್ಕೂಟ (ಸೇಯ್ಲ್ ಎಕ್ಸಿಕ್ಯುಟಿವ್ ಫೆಡರೇಶನ್ ಆಫ್ ಇಂಡಿಯಾ) ನೀಡಿದೆ. ಯೋಜನೆ ಕೂಡ ಸಿದ್ಧಪಡಿಸಿದೆ. ಆದರೆ, ಬಂಡವಾಳ ಹೂಡಿಕೆಗೆ ಕೇಂದ್ರ ಸರ್ಕಾರದ ‘ಶಾಶ್ವತ ಮುಚ್ಚುವ ನಿರ್ಧಾರ’ ಅಡ್ಡಿಯಾಗಿದೆ’ ಎಂದು ಎಚ್.ಜಿ. ಸುರೇಶ್ ಬೇಸರ ವ್ಯಕ್ತಪಡಿಸಿದರು.

‘ಕಾರ್ಖಾನೆ ಶಾಶ್ವತವಾಗಿ ಮುಚ್ಚುವ ನಿರ್ಧಾರವನ್ನು ಕೇಂದ್ರ ಸರ್ಕಾರ ಕೈಬಿಡಬೇಕು. ರಮಣದುರ್ಗದಲ್ಲಿ 65 ಹೆಕ್ಟೇರ್ ಗಣಿ ಇದ್ದು, ಸಂಡೂರಿನಲ್ಲಿ 130 ಎಕರೆ ಗಣಿ ಪ್ರದೇಶವು ಮಂಜೂರಾತಿ ಹಂತದಲ್ಲಿದೆ. ಅದನ್ನು ಬಳಸಿಕೊಂಡು ವಿಐಎಸ್‌ಎಲ್ ಉಳಿಸಬಹುದು’ ಎಂಬ ಆಶಾಭಾವ ವ್ಯಕ್ತಪಡಿಸಿದರು.

ಹುಲ್ಲು ಕತ್ತರಿಸುವ ಕಾರ್ಯಕ್ಕೆ ಬಳಕೆ!

ಕಾರ್ಖಾನೆಯ ಗುತ್ತಿಗೆ ಕಾರ್ಮಿಕರು ವಿಮಾ (ಇಎಸ್‌ಐ) ಯೋಜನೆಯ ವ್ಯಾಪ್ತಿಗೆ ಒಳಪಡಬೇಕಾದರೆ ಕಡ್ಡಾಯವಾಗಿ ಮಾಸಿಕ 13 ದಿನದಂತೆ 6 ತಿಂಗಳಲ್ಲಿ 76 ದಿನ ಕೆಲಸ ಮಾಡಲೇಬೇಕಿದೆ. ಕಾರ್ಮಿಕರಿಗೆ ಈ ಸವಲತ್ತು ತಪ್ಪದಂತೆ ನೋಡಿಕೊಳ್ಳಲು ವಿಐಎಸ್‌ಎಲ್ ಆಡಳಿತ ಶ್ರಮಿಸುತ್ತಿದೆ.

‘13 ದಿನ ಉತ್ಪಾದನಾ ಘಟಕಗಳಲ್ಲಿ ಕೆಲಸವಿಲ್ಲದ ಕಾರಣ ಕಾರ್ಖಾನೆ ಆವರಣದಲ್ಲಿನ ಹುಲ್ಲು ಕತ್ತರಿಸುವ ಕಾರ್ಯಕ್ಕೆ ಬಳಕೆ ಆಗುತ್ತಿದ್ದೇವೆ’ ಎಂದು ಕಾರ್ಮಿಕರೊಬ್ಬರು ಹೇಳಿದರು.

ಸರ್ಕಾರಕ್ಕೆ ₹5 ಲಕ್ಷ ಕೋರ್ಟ್ ದಂಡ

ಒಂದನೇ ಪುಟದಿಂದ...

ಮೆಮೊ ಪರಿಶೀಲಿಸಿ ಕೆಂಡಾಮಂಡಲರಾದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, ‘ಏನು ಕೇಳುತ್ತಿದ್ದೀರಿ ನೀವು? ಪ್ರತಿಯೊಂದು ಪ್ರಕರಣದಲ್ಲಿಯೂ ಸರ್ಕಾರ, ಹೈಕೋರ್ಟ್ ಆದೇಶ ಪಾಲನೆ ಮಾಡುವಲ್ಲಿ ನಿರ್ಲಕ್ಷ್ಯ ತೋರುತ್ತಿದೆ. ನಿಮ್ಮ ಈ ನಡೆಯಿಂದ ನಾವು ರೋಸಿ ಹೋಗಿದ್ದೇವೆ. ಸರಳ ಆದೇಶವೊಂದನ್ನು ಪಾಲನೆ ಮಾಡಲು ಮೂರೂವರೆ ವರ್ಷಗಳಾದರೂ ನಿಮ್ಮ ಕೈಲಿ ಆಗುತ್ತಿಲ್ಲ ಎಂದರೆ ಏನರ್ಥ? ಸರ್ಕಾರ ಅಧಿಕಾರಿಗಳಿಗೆ ಸಂಬಳ ಕೊಡುವುದಿಲ್ಲವೇ’ ಎಂದು ಖಾರವಾಗಿ ಪ್ರಶ್ನಿಸಿದರು.

‘ಕೋರ್ಟ್ ಇರುವುದು ಜನರ ಹಕ್ಕುಗಳನ್ನು ಎತ್ತಿ ಹಿಡಿಯಲು ಮತ್ತು ಅವರಿಗೆ ಪರಿಹಾರ ಕೊಡಲು. ಅವರೇನೂ ಬಯಸಿ ಬಯಸಿ ಕೋರ್ಟ್ ಮೆಟ್ಟಿಲೇರುವುದಿಲ್ಲ. ಮುಖ್ಯ ನ್ಯಾಯಮೂರ್ತಿಗಳ ಪೀಠ ಆದೇಶವೊಂದನ್ನು ನೀಡಿದೆ ಎಂದರೆ ಕಡೆಗೂ ನ್ಯಾಯ ಸಿಕ್ಕಿದೆಯಲ್ಲಾ ಎಂಬ ಸಂತೋಷ ಸಾಮಾನ್ಯ ಕಕ್ಷಿದಾರನಿಗಿರುತ್ತದೆ. ಆದರೆ, ನಿಮ್ಮ ಸರ್ಕಾರ ಅಂತಹ ಸಂತೋಷ ಅನುಭವಿಸಲು ಅನುವು ಮಾಡಿಕೊಡುತ್ತಿಲ್ಲವಲ್ಲಾ? ನಾವು ಇನ್ನೂ ಎಂತಹ ಭಾಷೆಯಲ್ಲಿ ನಿಮಗೆ ಕಿವಿ ಹಿಂಡಬೇಕು? ಸರ್ಕಾರದಲ್ಲಿ ಯಾವ ತಮಾಷೆ ನಡೆಯುತ್ತಿದೆ ಎಂದು ಪ್ರಶ್ನೆಗಳ ಮಳೆಗರೆಯಿತು.

‘ಕೋರ್ಟ್‌ಗಳ ಬಗ್ಗೆ ಜನಸಾಮಾನ್ಯರು ಹಾದಿಬೀದಿಗಳಲ್ಲಿ ಏನು ಮಾತನಾಡುತ್ತಾರೆ ಎಂಬುದನ್ನು ನೀವು ಯಾವತ್ತಾದರೂ ಕಿವಿಗೊಟ್ಟು ಕೇಳಿದ್ದೀರಾ? ಕೇಳಿಲ್ಲ ಎಂದಾದರೆ ಹೋಗಿ ಯಾವುದಾದರೂ ಪಾರ್ಕ್‌ನಲ್ಲಿ ಕೂತು ಅವರ ಮಾತುಗಳನ್ನು ಕೇಳಿಸಿಕೊಂಡು ಬನ್ನಿ. ಆಗ ನಿಮಗೆ ಗೊತ್ತಾಗುತ್ತದೆ. ಒಬ್ಬ ಕಕ್ಷಿದಾರ ಹತ್ತಾರು ವರ್ಷಗಳ ಕಾಲ ಕೋರ್ಟ್, ಕಚೇರಿ ಅಲೆಯುವುದು ಸಾಮಾನ್ಯದ ಮಾತೇ? ಹತ್ತು ವರ್ಷಗಳ ಅವಧಿ ಎಷ್ಟು ಅಮೂಲ್ಯ ಎಂಬುದನ್ನು ಯಾವತ್ತಾದರೂ ಗಂಭೀರವಾಗಿ ಯೋಚಿಸಿದ್ದೀರಾ? ನಿಮ್ಮ ಈ ನಡೆಯಿಂದ ಜನರು ಕೋರ್ಟ್‌ಗಳನ್ನು ಮತ್ತು ನಮ್ಮನ್ನು ಯಾವ ರೀತಿ ಗೌರವಿಸುತ್ತಾರೆ ಎಂಬುದರ ಕಿಂಚಿತ್ ಅರಿವಾದರೂ ನಿಮಗಿದೆಯಾ?’ ಎಂದು ತರಾಟೆಗೆ ತೆಗೆದುಕೊಂಡರು.

ತಪ್ಪೆಸಗಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಆರು ಜನ ಆರೋಪಿಗಳಿಂದ ಎರಡು ವಾರಗಳಲ್ಲಿ ₹5 ಲಕ್ಷ ದಂಡ ವಸೂಲು ಮಾಡುವಂತೆ ಮುಖ್ಯ ನ್ಯಾಯಮೂರ್ತಿ ಯವರು ಆದೇಶಿಸಿದರು. ಆದೇಶದ ಪ್ರತಿಯನ್ನು ಮುಖ್ಯ ಕಾರ್ಯದರ್ಶಿಗೆ ರವಾನಿಸುವಂತೆ ನಿರ್ದೇಶಿಸಿದರು. ಕೋರ್ಟ್ ಆದೇಶ ಪಾಲಿಸಲು ಮೂರು ವಾರಗಳ ಕಾಲಾವಕಾಶ ನೀಡಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ಕೆ.ಗಿರೀಶ್ ವಾದ ಮಂಡಿಸಿದರು.

ಪ್ರಕರಣವೇನು?

ನಗರದ ಕೋನೇನ ಅಗ್ರಹಾರದ ಸರ್.ಎಂ.ವಿಶ್ವೇಶ್ವರಯ್ಯ ಪ್ರೌಢಶಾಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕಿಯಾಗಿ ನಿವೃತ್ತಿ ಹೊಂದಿರುವ ಗ್ರಂಥಪಾಲಕಿ ವಿ.ಎ.ನಾಗಮಣಿ ತಮಗೆ ಗ್ರಂಥಪಾಲಕರ ದರ್ಜೆಯ ವೇತನ ಮಂಜೂರು ಮಾಡಲು ಕೋರಿದ್ದರು.

‘ರಾಜ್ಯದಲ್ಲಿನ ದ್ವಿತೀಯ ದರ್ಜೆ ಸಹಾಯಕರಾಗಿದ್ದ 250ಕ್ಕೂ ಹೆಚ್ಚು ನೌಕರರು ಗ್ರಂಥಪಾಲಕರ ಹುದ್ದೆಯ ವೇತನ ಶ್ರೇಣಿ ಹೊಂದಿದ್ದು ನನಗೂ ಇದೇ ವೇತನ ಶ್ರೇಣಿಯನ್ನು ಅನ್ವಯಿಸಲು ಆದೇಶಿಸಬೇಕು’ ಎಂದು ಮನವಿ ಮಾಡಿದ್ದರು. ಈ ರಿಟ್ ಅರ್ಜಿ ಮಾನ್ಯ ಮಾಡಿದ್ದ ಹೈಕೋರ್ಟ್, ವಿ.ಎ.ನಾಗಮಣಿ ಅವರ ವೇತನ ತಾರತಮ್ಯ ಸರಿಪಡಿಸುವಂತೆ ಸರ್ಕಾರಕ್ಕೆ ಆದೇಶಿಸಿತ್ತು. ಆದರೆ, ಸರ್ಕಾರ ಮೂರೂವರೆ ವರ್ಷಗಳಾದರೂ ಈ ಆದೇಶ ಪಾಲನೆ ಮಾಡಿಲ್ಲ ಎಂದು ಆರೋಪಿಸಿ ನಾಗಮಣಿ ಸಿವಿಲ್ ನ್ಯಾಯಾಂಗ ನಿಂದನೆ ಮೊಕದ್ದಮೆ ದಾಖಲಿಸಿದ್ದರು.

ವೇತನ ಪರಿಷ್ಕರಣೆ: ಆಯೋಗ ವರದಿ ಬಳಿಕವೇ ತೀರ್ಮಾನ– ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳನೇ ವೇತನ ಆಯೋಗದ ಅಂತಿಮ ವರದಿ ಬಂದ ನಂತರ ಸರ್ಕಾರಿ ನೌಕರರ ವೇತನ ಪರಿಷ್ಕರಣೆ ಬಗ್ಗೆ ತೀರ್ಮಾನ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನೇತೃತ್ವದ ನಿಯೋಗವು ಮುಖ್ಯಮಂತ್ರಿಯವರನ್ನು ಮಂಗಳವಾರ ಭೇಟಿ ಮಾಡಿ ಮನವಿ ಸಲ್ಲಿಸಿದಾಗ ಅವರು ಈ ವಿಷಯ ತಿಳಿಸಿದರು.

ಏಳನೇ ವೇತನ ಆಯೋಗ ರಚನೆ ಆಗಿ 12 ತಿಂಗಳಾಗಿದೆ. ಮಾರ್ಚ್‌ವರೆಗೆ ಕಾಲಾವಧಿ ವಿಸ್ತರಿಸಲಾಗಿದ್ದು, ಲೋಕಸಭಾ ಚುನಾವಣಾ ನೀತಿ ಸಂಹಿತೆ ಘೋಷಣೆ ಆಗುವುದಕ್ಕೆ ಮೊದಲೇ ವೇತನ ಪರಿಷ್ಕರಣೆಯನ್ನು ಘೋಷಿಸಬೇಕು ಎಂದು ನಿಯೋಗ ಮನವಿ ಮಾಡಿತು.

ಹೊಸ ಪಿಂಚಣಿ ಯೋಜನೆ ವ್ಯಾಪ್ತಿಯಲ್ಲಿದ್ದ 11,366 ಜನರನ್ನು ಹಳೆ ಪಿಂಚಣಿ ಯೋಜನೆಗೆ ಸೇರ್ಪಡೆಗೊಳಿಸಲಾಗಿದೆ. ಉಳಿದವರನ್ನೂ ಹಳೆ ಪಿಂಚಣಿ ಯೋಜನೆ ವ್ಯಾಪ್ತಿಗೆ ಸೇರಿಸಿ, ಪಿಂಚಣಿಗೆ ನೀಡುತ್ತಿರುವ ಕೊಡುಗೆಯನ್ನು ನಿಲ್ಲಿಸಲು ಆದೇಶಿಸುವಂತೆ ಷಡಾಕ್ಷರಿ ಕೋರಿದರು.

ತೀವ್ರ ಸ್ವರೂಪದ ಏಳು ಕಾಯಿಲೆಗಳಿಗೆ ಚಿಕಿತ್ಸೆ ಒದಗಿಸುವ ಜ್ಯೋತಿ ಸಂಜೀವಿನಿ ಆರೋಗ್ಯ ಯೋಜನೆಗೆ ಚಾಲನೆ ನೀಡಲಾಗಿತ್ತು. ಸರ್ಕಾರಿ ನೌಕರರ ಕುಟುಂಬದವರಿಗೆ ಉಚಿತ ಆರೋಗ್ಯ ಯೋಜನೆಯನ್ನು ಅನುಷ್ಠಾನಗೊಳಿಸಬೇಕು ಎಂದೂ ಅವರು ಮನವಿ ಮಾಡಿದರು. ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ದೌರ್ಜನ್ಯ ತಡೆ ಎಸ್‌ಪಿ ಹೊಣೆ

ಒಂದನೇ ಪುಟದಿಂದ...

‘ಲೋಕಸಭೆ ಚುನಾವಣೆ ಸಮೀಪಿಸುತ್ತಿದ್ದು, ರೌಡಿಗಳನ್ನು ಗುರುತಿಸಿ ಅವರ ಮೇಲೆ ನಿಗಾ ಇಡಬೇಕು. ಕೋಮುಗಲಭೆಗಳು ಆಗದಂತೆ ಎಚ್ಚರವಹಿಸಬೇಕು’ ಎಂದು ಸೂಚಿಸಿದರು.

ಸಿದ್ದರಾಮಯ್ಯ ಅವರು, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳ ಮೊಬೈಲ್ ಲ್ಯಾಬ್, ವಿಧಿ ವಿಜ್ಞಾನ ಮೊಬೈಲ್ ಲ್ಯಾಬ್ ವಾಹನ, ಮೊಬೈಲ್ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ವಾಹನ ಹಾಗೂ ಗರುಡಪಡೆ ಕಾರ್ಯಕ್ಷಮತೆಯ ಬಗ್ಗೆ ಮಾಹಿತಿ ಪಡೆದುಕೊಂಡರು.

‘ವರ್ಗಾವಣೆಗೆ ಜಾತಿ ಬಳಕೆ ಸಲ್ಲ’: ‘ಪೊಲೀಸ್ ಅಧಿಕಾರಿಗಳು ವರ್ಗಾವಣೆಗಾಗಿ ಹಾತೊರೆಯುವುದು, ಇದಕ್ಕಾಗಿ ಜಾತಿ ಬಳಕೆ ಮಾಡಿಕೊಳ್ಳುವುದು ಅತ್ಯಂತ ಕೆಟ್ಟದ್ದು, ಹಾಗೆ ಮಾಡಬಾರದು’ ಎಂದು ಸಿದ್ದರಾಮಯ್ಯ ಹೇಳಿದರು.

‘ನಮ್ಮದು ಜಾತ್ಯತೀತ ರಾಷ್ಟ್ರ. ನಮ್ಮ ಸಂವಿಧಾನದ ಆಶಯಗಳನ್ನು ಬಲಪಡಿಸುವ ದಿಸೆಯಲ್ಲಿ ನಾವೆಲ್ಲ ಕೆಲಸ ಮಾಡಬೇಕು. ಅದನ್ನು ಬಿಟ್ಟು ಜಾತಿ ಹೆಸರಿನಲ್ಲಿ ವರ್ಗಾವಣೆ ಸೇರಿದಂತೆ ಬೇರೆ ಕೆಲಸಗಳನ್ನು ಮಾಡಿಕೊಳ್ಳಲು ಹಾತೊರೆಯುವುದು ಸರಿಯಾದ ಕ್ರಮವಲ್ಲ’ ಎಂದು ಅವರು ಎಚ್ಚರಿಸಿದರು.

ಗೃಹ ಸಚಿವ ಜಿ. ಪರಮೇಶ್ವರ, ಗೃಹ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಉಮಾಶಂಕರ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್, ಮುಖ್ಯಮಂತ್ರಿಗಳ ಕಾರ್ಯದರ್ಶಿ ತ್ರಿಲೋಕ್ ಚಂದ್ರ ಉಪಸ್ಥಿತರಿದ್ದರು.

₹27 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

‘ಕರ್ನಾಟಕ ರಾಜ್ಯವನ್ನು ಮಾದಕವಸ್ತು ಮುಕ್ತ ರಾಜ್ಯವನ್ನಾಗಿ ಮಾಡಬೇಕು. ಕಳೆದ ಆರು ತಿಂಗಳಲ್ಲಿ ರಾಜ್ಯದ ವಿವಿಧೆಡೆ ದಾಳಿ ನಡೆಸಿ ₹27 ಕೋಟಿ ಮೌಲ್ಯದ 4,484 ಕೆ.ಜಿ. ಗಾಂಜಾ, 23 ಕೆ.ಜಿ. ರಾಸಾಯನಿಕ ಮಾದಕ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಫೆಬ್ರವರಿ ಮೊದಲ ವಾರದಲ್ಲಿ ಈ ಮಾದಕ ವಸ್ತುಗಳನ್ನು ನಾಶಪಡಿಸಲು ಅನುಮತಿ ನೀಡಿದ್ದೇನೆ’ ಎಂದು ಸಿದ್ದರಾಮಯ್ಯ ಹೇಳಿದರು.

ರಾಜಧಾನಿಗೆ 8 ಹೆಚ್ಚುವರಿ ಡಿಸಿಪಿ ಹುದ್ದೆ

ಬೆಂಗಳೂರಿನ ಜನಸಂಖ್ಯೆ 1.50 ಕೋಟಿಗೆ ಏರಿದ್ದು, ಕಾನೂನು ಮತ್ತು ಸುವ್ಯವಸ್ಥೆ ಬಲಗೊಳಿಸುವ ಉದ್ದೇಶದಿಂದ ನಗರದಲ್ಲಿ ಹೆಚ್ಚುವರಿಯಾಗಿ ಎಂಟು ಡಿಸಿಪಿ ಹುದ್ದೆಗಳನ್ನು ಸೃಜನೆ ಮಾಡಲಾಗುತ್ತಿದೆ. ನಗರ ಪೊಲೀಸ್ ಘಟಕದಲ್ಲಿ ಎಂಟು ವಿಭಾಗಗಳಿದ್ದು, ಎಂಟು ಡಿಸಿಪಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವಿಭಾಗಕ್ಕೆ ಒಬ್ಬರಂತೆ ಹೆಚ್ಚುವರಿ ಡಿಸಿಪಿಗಳನ್ನು ನಿಯೋಜನೆ ಮಾಡಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ಬಿಬಿಎಂಪಿ: ಫೆಬ್ರುವರಿ 28ರೊಳಗೆ ‘ಶೇ 60ರಷ್ಟು ಬಳಕೆಗೆ’ ಸೂಚನೆ

ನಾಮಫಲಕದಲ್ಲಿ ಕನ್ನಡ: 21 ಸಾವಿರ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗಡಿ, ಕಂಪನಿ ಹಾಗೂ ಇತರೆ ವಾಣಿಜ್ಯ ಮಳಿಗೆಗಳ ಮೇಲೆ ಅಳವಡಿಸುವ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಕೆ ಮಾಡಬೇಕು ಎಂದು ಬಿಬಿಎಂಪಿ 20,977 ನೋಟಿಸ್ ಜಾರಿ ಮಾಡಿದೆ.

‘ವಾಣಿಜ್ಯ ಮಳಿಗೆಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸದಿದ್ದರೆ ಅಂತಹವರಿಗೆ ತಿಳಿವಳಿಕೆ ಪತ್ರ (ನೋಟಿಸ್) ನೀಡಬೇಕು. ಫೆಬ್ರುವರಿ 28ರೊಳಗೆ ನಾಮಫಲಕಗಳಲ್ಲಿ ಕಾನೂನಿನಂತೆ ಕನ್ನಡ ಬಳಸಲು ಸೂಚಿಸಬೇಕು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸೂಚಿಸಿದ್ದರು.

ಎಲ್ಲೆಲ್ಲಿ ಎಷ್ಟೆಷ್ಟು ತಿಳಿವಳಿಕೆ ಪತ್ರ

ವಲಯ	ಸಂಖ್ಯೆ
ಮಹದೇವಪುರ	4,250
ಬೊಮ್ಮನಹಳ್ಳಿ	3,881
ಪಶ್ಚಿಮ	2,718
ಯಲಹಂಕ	2,552
ಪೂರ್ವ	2,477
ದಕ್ಷಿಣ	1,988
ರಾಜರಾಜೇಶ್ವರಿ ನಗರ	1,563
ದಾಸರಹಳ್ಳಿ	1,548
ಒಟ್ಟು	20,977

ಜ.15ರೊಳಗೆ ಸರ್ವೆ ಕಾರ್ಯ ಮುಗಿಸಿ, ನೋಟಿಸ್ ನೀಡಲು ಸೂಚಿಸಲಾಗಿತ್ತು. ಅದರಂತೆ, ಮುಖ್ಯ ಆರೋಗ್ಯಾಧಿಕಾರಿ ನೇತೃತ್ವದಲ್ಲಿ ವಲಯಗಳ ಆರೋಗ್ಯಾಧಿಕಾರಿಗಳು ವಾಣಿಜ್ಯ ಮಳಿಗೆಗಳಿಗೆ ತಿಳಿವಳಿಕೆ ಪತ್ರ ನೀಡುತ್ತಿದ್ದಾರೆ.

‘ಮಳಿಗೆ ಸೇರಿದಂತೆ ನಾಮಫಲಕಗಳನ್ನು ಅಳವಡಿಸಿಕೊಂಡಿರುವವರಿಗೆ ತಿಳಿವಳಿಕೆ ಪತ್ರ ನೀಡಲಾಗುತ್ತಿದೆ. ಶೇ 80ರಷ್ಟು ಮಾಲೀಕರಿಗೆ ನೋಟಿಸ್ ನೀಡಲಾಗಿದ್ದು, ಈ ವಾರದಲ್ಲಿ ಎಲ್ಲರಿಗೂ ನೋಟಿಸ್ ತಲುಪುತ್ತದೆ’ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಸೈಯದ್ ಸಿರಾಜುದ್ದೀನ್ ಮದನಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಮುಖ್ಯರಸ್ತೆಗಳಲ್ಲಿರುವ ಕಂಪನಿಗಳ ನಾಮಫಲಕಗಳಲ್ಲೇ ಕನ್ನಡ ಬಳಸಿಲ್ಲ. ಅವರೂ ಸೇರಿದಂತೆ ವಲಯದ ಎಲ್ಲ ರಸ್ತೆ, ವಸತಿ ಪ್ರದೇಶಗಳಲ್ಲಿರುವ ಮಳಿಗೆ, ವಾಣಿಜ್ಯ ಚಟುವಟಿಕೆಯ ಅಂಗಡಿಗಳಿಗೆ ತಿಳಿವಳಿಕೆ ಪತ್ರ ನೀಡಲಾಗುತ್ತಿದೆ. 15 ದಿನದಲ್ಲಿ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡ ಬಳಸುವಂತೆ ಸೂಚಿಸಲಾಗಿದೆ. ರಾಜ್ಯ ಸರ್ಕಾರದ ಆದೇಶವೂ ಇರುವುದರಿಂದ ಎಲ್ಲರಿಗೂ ಅದರ ಅರಿವಿದೆ. ಫೆಬ್ರುವರಿ 28ರೊಳಗೆ ಅಳವಡಿಸಿಕೊಳ್ಳಲು, ತಯಾರಕರಿಗೆ ಬೇಡಿಕೆಯನ್ನೂ ಇರಿಸಿದ್ದಾರೆ’ ಎಂದು ಯಲಹಂಕ ವಲಯದ ಆರೋಗ್ಯಾಧಿಕಾರಿ ಡಾ. ಸಿದ್ದಪ್ಪಾಜಿ ಮಾಹಿತಿ ನೀಡಿದರು.

‘ನಾಮಫಲಕದಲ್ಲಿ ಕನ್ನಡ ಬಳಕೆ ಮಾಡದಿದ್ದಲ್ಲಿ, ‘ಉದ್ದಿಮೆ ಪರವಾನಗಿ ಏಕೆ ರದ್ದು ಮಾಡಬಾರದು’ ಅಥವಾ ‘ನಾವು ನಿಮ್ಮ ಉದ್ದಿಮೆಯನ್ನು ಏಕೆ ಮುಚ್ಚಬಾರದು’ ಎಂದು ನಮೂದಿಸಿ ತಿಳಿವಳಿಕೆ ಪತ್ರ ಜಾರಿ ಮಾಡಲಾಗಿದೆ. ವಲಯದಲ್ಲಿ ನೀಡಲಾಗಿರುವ ‘ಟ್ರೇಡ್ ಲೈಸೆನ್ಸ್’ ಆಧಾರದಲ್ಲಿ ನೋಟಿಸ್ ನೀಡಲಾಗುತ್ತಿದೆ. ಪರವಾನಗಿ ಪಡೆಯದವರಿಗೆ ನೋಟಿಸ್ ಜಾರಿ ಮಾಡಿ, ಕಾನೂನು ಪ್ರಕಾರ ಎಲ್ಲ ರೀತಿಯ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

ತುಮಕೂರು ಲೋಕಸಭಾ ಕ್ಷೇತ್ರ: ಕುತೂಹಲ ಮೂಡಿಸಿದ ಅಭ್ಯರ್ಥಿಗಳ ಹೆಸರು

ದಿನಕ್ಕೊಂದು ಹೆಸರು: ರಂಗೇರಿದ ಕಣ

• ಕೆ.ಜೆ. ಮರಿಯಪ್ಪ

ತುಮಕೂರು: ಲೋಕಸಭಾ ಚುನಾವಣೆಗೆ ಇನ್ನೂ ಮೂರ್‍ನಾಲ್ಕು ತಿಂಗಳು ಇರುವಾಗಲೇ ತುಮಕೂರು ಕ್ಷೇತ್ರ ನಾನಾ ಕಾರಣಗಳಿಗಾಗಿ ಗಮನ ಸೆಳೆಯುತ್ತಿದೆ.

ಕಳೆದ ಬಾರಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಸ್ಪರ್ಧೆಯಿಂದ ದೇಶದ ಗಮನ ಸೆಳೆದಿದ್ದ ಈ ಕ್ಷೇತ್ರದಿಂದ ಈ ಬಾರಿ ದಿನಕ್ಕೊಂದು ಹೆಸರು ಚಾಲ್ತಿಗೆ ಬರುತ್ತಿದೆ. ಮೂರು ಪಕ್ಷಗಳು ಸರದಿಯಂತೆ ಕೆಲವು ದಿನಗಳಿಂದ ಬೇರೆ, ಬೇರೆ ನಾಯಕರ ಹೆಸರು ತೇಲಿ ಬಿಡುತ್ತಿವೆ. ಇದರಿಂದ ಚುನಾವಣೆಗೂ ಮುಂಚೆಯೇ ಕ್ಷೇತ್ರ ರಂಗೇರಿದೆ.

ಬಿಜೆಪಿ–ಜೆಡಿಎಸ್ ಹೊಂದಾಣಿಕೆ ಮಾಡಿಕೊಂಡಿದ್ದು ಈ ಕ್ಷೇತ್ರ ಯಾರ ಮಡಿಲಿಗೆ ಬೀಳಲಿದೆ ಎಂಬುವುದು ಇನ್ನೂ ನಿರ್ಧಾರವಾಗಿಲ್ಲ. ಬಿಜೆಪಿ ಸಂಸದ ಜಿ.ಎಸ್.ಬಸವರಾಜು ನಿವೃತ್ತಿ ಘೋಷಿಸಿದ್ದಾರೆ.

ಆರಂಭದಲ್ಲಿ ಮಾಜಿ ಸಚಿವ ವಿ.ಸೋಮಣ್ಣ ಹೆಸರು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳಿಂದಲೂ ಕೇಳಿಬಂದಿತ್ತು. ಕಾಂಗ್ರೆಸ್ ಸೇರಬಹುದು ಎಂಬ ವದಂತಿ ದಟ್ಟವಾಗಿತ್ತು. ಕಾಂಗ್ರೆಸ್ ಕಣಕ್ಕಿಳಿಸಲಿದೆ ಎಂದು ಹೇಳಲಾಗಿತ್ತು. ಈಚೆಗೆ ಸೋಮಣ್ಣ ದೆಹಲಿಗೆ ಹೋಗಿ ವರಿಷ್ಠರನ್ನು ಕಂಡು ಬಂದ ನಂತರ ಅವರದೇ ಸಮುದಾಯದ ಜೆ.ಸಿ.ಮಾಧುಸ್ವಾಮಿ ಹೆಸರು ತೇಲಿ ಬಿಡಲಾಗಿದೆ. ಇದಕ್ಕೆ ಪ್ರತಿಯಾಗಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಹೆಸರನ್ನು ಸಂಸದ ಜಿ.ಎಸ್.ಬಸವರಾಜು ಪ್ರಸ್ತಾಪಿಸಿದ್ದಾರೆ.

ಇದಕ್ಕೂ ಮೊದಲು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಹೆಸರನ್ನು ಚರ್ಚೆಗೆ ಎಳೆದು ತರಲಾಯಿತು. ಎಚ್.ಡಿ.ದೇವೇಗೌಡರೇ ಮತ್ತೆ ಇಲ್ಲಿಂದ ಸ್ಪರ್ಧಿಸುತ್ತಾರೆ ಎಂದೂ ಹೇಳಲಾಗುತ್ತಿದೆ.

ಕಾಂಗ್ರೆಸ್ ಪಕ್ಷದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಬಿಜೆಪಿ ತೊರೆದು ಕಾಂಗ್ರೆಸ್ ಸೇರಲು ಸಜ್ಜಾಗಿರುವ ಎಸ್.ಪಿ.ಮುದ್ದಹನುಮೇಗೌಡ ಹೆಸರು ಬಲವಾಗಿ ಕೇಳಿಬರುತ್ತಿದೆ. ಇದಕ್ಕೆ ಪೂರಕವಾಗಿ ಅವರು ಇತ್ತೀಚೆಗೆ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ಮುಖಂಡರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಕೆಪಿಸಿಸಿ ಕಾರ್ಯದರ್ಶಿ ಮುರಳೀಧರ ಹಾಲಪ್ಪ ತಮಗೆ ಟಿಕೆಟ್ ಸಿಗಲಿದೆ ಎಂಬ ಉತ್ಸಾಹದಲ್ಲಿದ್ದಾರೆ.

‘ಎಚ್.ಡಿ.ದೇವೇಗೌಡ ಕುಟುಂಬ ದವರು ಸ್ಪರ್ಧಿಸಿದರೆ ನಾನೂ ಕಣಕ್ಕಿಳಿಯು ತ್ತೇನೆ’ ಎಂದು ಹೇಳುತ್ತಿದ್ದ ಸಚಿವ ಕೆ.ಎನ್.ರಾಜಣ್ಣ ಈಗ ಹಿಂದೆ ಸರಿದಿದ್ದಾರೆ. ‘ಚುನಾವಣೆಗೆ ಸ್ಪರ್ಧಿಸುವುದಿಲ್ಲ. ಹೈಕಮಾಂಡ್ ಹೇಳಿದರೆ ಮಾತ್ರ ಸ್ಪರ್ಧಿಸುವೆ’ ಎನ್ನುತ್ತಿದ್ದಾರೆ.

ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ ಅವರು ತಮ್ಮ ಮಗ ಸಂತೋಷ್ ಜಯಚಂದ್ರಗೆ ಟಿಕೆಟ್ ನೀಡುವಂತೆ ಕೇಳುತ್ತಿದ್ದಾರೆ. ಕಾಂಗ್ರೆಸ್ ವಕ್ತಾರ ನಿಕೇತ್ ರಾಜ್ ಮೌರ್ಯ ಅವರಿಗೆ ಟಿಕೆಟ್ ನೀಡುವಂತೆ ಕುರುಬ ಸಮುದಾಯ ಒತ್ತಾಯಿಸುತ್ತಿದೆ. ಹೀಗೆ ದಿನಕ್ಕೊಂದು ಹೆಸರು ಹೊರ ಬರುತ್ತಿರುವ ಕಾರಣ ಮೂರೂ ಪಕ್ಷಗಳ ಕಾರ್ಯಕರ್ತರು ಗೊಂದಲದಲ್ಲಿ ಬಿದ್ದಿದ್ದಾರೆ.

ಕಾಂಗ್ರೆಸ್ ಹಾಗೂ ಬಿಜೆಪಿ–ಜೆಡಿಎಸ್ ‘ಸಮರ್ಥ’ ಅಭ್ಯರ್ಥಿಗಾಗಿ ಶೋಧ ನಡೆಸಿವೆ. ಈ ಬಾರಿಯೂ ಲಿಂಗಾಯತ, ಒಕ್ಕಲಿಗ ಸಮುದಾಯದ ನಾಯಕರನ್ನೇ ಕಣಕ್ಕಿಳಿಸಲು ಎರಡೂ ಪಕ್ಷಗಳು ಚಿಂತನೆ ನಡೆಸಿವೆ ಎಂದು ಹೇಳಲಾಗುತ್ತದೆ. ಹಾಗಾಗಿಯೇ ಈ ಎರಡು ಸಮುದಾಯದ ಅಭ್ಯರ್ಥಿಗಳ ಹೆಸರುಗಳೇ ಪ್ರಮುಖವಾಗಿ ಚರ್ಚೆಯಾಗುತ್ತಿವೆ.

ಈ ಕ್ಷೇತ್ರದಿಂದ ಕುರುಬ ಸಮುದಾಯದ ಸಿ.ಎನ್.ಭಾಸ್ಕರಪ್ಪ ಜನತಾ ಪಕ್ಷದಿಂದ ಆಯ್ಕೆ ಆಗಿರುವುದನ್ನು ಹೊರತುಪಡಿಸಿದರೆ ಲಿಂಗಾಯತ, ಒಕ್ಕಲಿಗ ಸಮುದಾಯಕ್ಕೆ ಸೇರಿದ ಅಭ್ಯರ್ಥಿಗಳು ಗೆದ್ದಿರುವುದೇ ಹೆಚ್ಚು. ಅದರಲ್ಲೂ ಹೆಚ್ಚಾಗಿ ಲಿಂಗಾಯತ ಸಮುದಾಯದವರೇ ಆಯ್ಕೆಯಾಗುತ್ತಾ ಬಂದಿದ್ದಾರೆ.

ತದ್ವಿರುದ್ಧ ಫಲಿತಾಂಶ!

ತುಮಕೂರು ಲೋಕಸಭಾ ಕ್ಷೇತ್ರದ ಮತದಾರರು ವಿಧಾನಸಭೆಯಲ್ಲಿ ಒಂದು ಪಕ್ಷದ ಕೈ ಹಿಡಿದರೆ, ಲೋಕಸಭೆ ಚುನಾವಣೆಯಲ್ಲಿ ಮತ್ತೊಂದು ಪಕ್ಷದ ಅಭ್ಯರ್ಥಿಯನ್ನು ಬೆಂಬಲಿಸಿದ್ದಾರೆ.

ವಿಧಾನಸಭೆ ಚುನಾವಣೆಯಲ್ಲಿ ಒಂದು ಪಕ್ಷದ ಪರವಾಗಿ ನಿಂತರೆ, ಲೋಕಸಭೆಯಲ್ಲಿ ಮತ್ತೊಂದು ಪಕ್ಷದ ಅಭ್ಯರ್ಥಿಯನ್ನು ಆಯ್ಕೆ ಮಾಡುತ್ತಾ ಬಂದಿರುವುದು ಈ ಕ್ಷೇತ್ರದ ಮತದಾರರ ವಿಶೇಷ.

1991ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಯಾವೊಬ್ಬ ಶಾಸಕರು ಇಲ್ಲದ ಸಮಯದಲ್ಲೂ ಬಿಜೆಪಿಯ ಅಭ್ಯರ್ಥಿ ಎಸ್.ಮಲ್ಲಿಕಾರ್ಜುನಯ್ಯ ಆಯ್ಕೆಯಾಗಿದ್ದರು. 1998ರ ಚುನಾವಣೆಯಲ್ಲಿ ಬಿಜೆಪಿಯ ಇಬ್ಬರು ಶಾಸಕರಷ್ಟೇ ಇದ್ದರೂ ಮಲ್ಲಿಕಾರ್ಜುನಯ್ಯ ಅವರನ್ನು ಆಯ್ಕೆ ಮಾಡುವ ಮೂಲಕ ಪಕ್ಷಕ್ಕಿಂತ ವ್ಯಕ್ತಿ ಹಾಗೂ ಜಾತಿ ಮುಖ್ಯ ಎಂಬುದನ್ನು ಮತದಾರರು ತೋರಿಸಿಕೊಟ್ಟಿದ್ದಾರೆ. ಆ ಕಾರಣಕ್ಕೆ ‘ಶಕ್ತಿ’ ಇಲ್ಲದ ವೇಳೆಯೂ ಬಿಜೆಪಿ ಗೆಲ್ಲುತ್ತಾ ಬಂದಿದೆ.

‘ಯತೀಂದ್ರ ಸ್ಪರ್ಧಿಸುವುದಿಲ್ಲ’

ಚಾಮರಾಜನಗರ: ‘ಲೋಕಸಭಾ ಚುನಾವಣೆಯಲ್ಲಿ ಯತೀಂದ್ರ ಸಿದ್ದರಾಮಯ್ಯ ಅವರು ಮೈಸೂರು–ಕೊಡಗು ಕ್ಷೇತ್ರದಿಂದ ಸ್ಪರ್ಧಿಸುವುದಿಲ್ಲ’ ಎಂದು ರೇಷ್ಮೆ ಮತ್ತು ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಪ್ರತಿಪಾದಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ‘ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಯತೀಂದ್ರ ಸ್ಪರ್ಧಿಸುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ತಮ್ಮ ಮಗ ಸ್ಪರ್ಧಿಸುವುದಿಲ್ಲವೆಂದಿದ್ದಾರೆ. ಯತೀಂದ್ರರೇ ಅಭ್ಯರ್ಥಿ ಎಂದು ಬಿಂಬಿಸುತ್ತಿರುವ ಬಿಜೆಪಿಯರಿಗೆ ಅದೊಂದು ಚಟ’ ಎಂದರು.

‘ನಾನು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ. ಕಳೆದ ವಿಧಾನಸಭಾ ಚುನಾವಣೆಯೇ ನನ್ನ ಕೊನೆಯ ಚುನಾವಣೆ. ವಯಸ್ಸಾಗಿದೆ. ಇನ್ನು ಮುಂದೆ ಸ್ಪರ್ಧಿಸು ವುದಿಲ್ಲ’ ಎಂದರು.

‘ಉತ್ತರ ಕನ್ನಡ ಸಂಸದ ಅನಂತಕುಮಾರ ಹೆಗಡೆ ಸಂಸ್ಕಾರವಿಲ್ಲದ ಮನುಷ್ಯ. ಅವರ ಹೇಳಿಕೆ ಬಗ್ಗೆ ಏನು ಹೇಳಲಿ’ ಎಂದು ಪ್ರಶ್ನಿಸಿದರು.

ಉತ್ತರ ಕನ್ನಡದ ಅಭ್ಯರ್ಥಿ ತೀರ್ಮಾನವಾಗಿದೆ: ಕಾಗೇರಿ

ಪ್ರಜಾವಾಣಿ ವಾರ್ತೆ

ಶಿರಸಿ: ‘ಪ್ರಧಾನಿ ಮತ್ತು ಪಕ್ಷದ ಸೂಚನೆ ಮೇರೆಗೆ ಉತ್ತರ ಕನ್ನಡ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವೆ. ಕ್ಷೇತ್ರದ ಅಭ್ಯರ್ಥಿಯನ್ನು ಪಕ್ಷದ ನಾಯಕರು ಈಗಾಗಲೇ ತೀರ್ಮಾನಿಸಿದ್ದು, ಆದಷ್ಟು ಬೇಗ ಘೋಷಿಸುವರು’ ಎಂದು ಪಕ್ಷದ ಟಿಕೆಟ್ ಆಕಾಂಕ್ಷಿ, ವಿಧಾನಸಭೆ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪಕ್ಷದ ವರಿಷ್ಠರ ಸೂಚನೆಯಂತೆ ಕ್ಷೇತ್ರದಲ್ಲಿ ಪ್ರವಾಸ ಕೈಗೊಂಡು, ತಳ ಮಟ್ಟದಿಂದ ಸಂಘಟಿಸುತ್ತಿರುವೆ. ಪಕ್ಷಕ್ಕಾಗಿ ಕೆಲಸ ಮಾಡುತ್ತಿರುವೆ’ ಎಂದರು.

‘ಹಲವು ವರ್ಷಗಳಿಂದ ಸಂಸದರಾಗಿ ಆಯ್ಕೆಯಾಗುತ್ತಿರುವ ಅನಂತಕುಮಾರ ಹೆಗಡೆ ಹೇಗೆ, ಏನು ಎಂಬುದು ಕ್ಷೇತ್ರದ ಜನರಿಗೆ ಅತ್ಯಂತ ಸ್ಪಷ್ಟವಾಗಿ ಗೊತ್ತಿದೆ. ಅದರ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ’ ಎಂದರು.

‘ರಾಜಶೇಖರನೂ ಟಿಕೆಟ್ ಆಕಾಂಕ್ಷಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಪ್ರಿಯಾಂಕಾ ಗಾಂಧಿ ಬಂದರೆ ಅವರಿಗೆ ಕೆಂಪುಹಾಸಿನ ಸ್ವಾಗತ ನೀಡುತ್ತೇವೆ. ನನ್ನ ತಮ್ಮ ರಾಜಶೇಖರ ಹಿಟ್ನಾಳ್ ಕೂಡ ಈ ಕ್ಷೇತ್ರದ ಟಿಕೆಟ್ ಆಕಾಂಕ್ಷಿ’ ಎಂದು ಶಾಸಕ ರಾಘವೇಂದ್ರ ಹಿಟ್ನಾಳ್ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಮಂಗಳವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕ್ಷೇತ್ರದಲ್ಲಿ ಎಐಸಿಸಿಯಿಂದ ಸಮೀಕ್ಷೆ ನಡೆದಿರುವ ಬಗ್ಗೆ ಮಾಹಿತಿ ಇಲ್ಲ. ಆದರೆ, ತಮ್ಮನಿಗೆ ಟಿಕೆಟ್ ನೀಡುವಂತೆ ನಾಯಕರ ಬಳಿ ಮನವಿ ಮಾಡಿದ್ದೇನೆ’ ಎಂದರು.

ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ರಾಜಶೇಖರ ಹಿಟ್ನಾಳ್ ಟಿಕೆಟ್ ನಿರೀಕ್ಷೆ ಯಲ್ಲಿದ್ದು, ಕ್ಷೇತ್ರದಲ್ಲಿ ಹಿಟ್ನಾಳ್ ಸಹೋದರರು ಈಗಾಗಲೇ ಪ್ರವಾಸ ಮಾಡುತ್ತಿದ್ದಾರೆ. ಪ್ರಿಯಾಂಕಾ ಗಾಂಧಿ ಹೆಸರು ಪ್ರಸ್ತಾಪವಾದ ಕಾರಣ ರಾಘವೇಂದ್ರ ಹಿಟ್ನಾಳ್ ಅವರು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು ಎಂದು ಗೊತ್ತಾಗಿದೆ.

ಶರ್ಮಿಳಾ ಆಂಧ್ರ ಕಾಂಗ್ರೆಸ್ ಅಧ್ಯಕ್ಷೆ

ನವದೆಹಲಿ (ಪಿಟಿಐ): ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಅಧ್ಯಕ್ಷರಾಗಿ ವೈ.ಎಸ್. ಶರ್ಮಿಳಾ ಅವರನ್ನು ಮಂಗಳವಾರ ನೇಮಿಸಲಾಗಿದೆ.

ವೈ ಎಸ್ ಶರ್ಮಿಳಾ

ಆಂಧ್ರಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿ ಅವರ ಸಹೋದರಿಯಾದ ಶರ್ಮಿಳಾ, ವೈಎಸ್‌ಆರ್ ತೆಲಂಗಾಣ ಪಕ್ಷವನ್ನು ಸ್ಥಾಪಿಸಿದ್ದರು. ನಂತರ ತಮ್ಮ ಪಕ್ಷವನ್ನು ಕಾಂಗ್ರೆಸ್‌ನೊಂದಿಗೆ ವಿಲೀನಗೊಳಿಸಿದ್ದರು.

‘ಆಂಧ್ರಪ್ರದೇಶದ ನಿರ್ಗಮಿತ ಪಿಸಿಸಿ ಅಧ್ಯಕ್ಷ ಗಿಡುಗು ರುದ್ರ ರಾಜು ಅವರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ವಿಶೇಷ ಆಹ್ವಾನಿತರನ್ನಾಗಿ ನೇಮಕ ಮಾಡಲಾಗಿದೆ’ ಎಂದು ಪಕ್ಷವು ತಿಳಿಸಿದೆ.

ಪಕ್ಷ ಸಂಘಟನೆ: ’ಆಂಧ್ರಪ್ರದೇಶದಲ್ಲಿ ಪಕ್ಷವನ್ನು ಮತ್ತೆ ಬೇರುಮಟ್ಟದಲ್ಲಿ ಸಂಘಟಿಸಿ ಹಳೆಯ ಗತವೈಭವವನ್ನು ಮರಳಿಸಲು ಯತ್ನಿಸಲಾಗುವುದು’ ಎಂದು ಶರ್ಮಿಳಾ ಅವರು ಪ್ರತಿಕ್ರಿಯಿಸಿದ್ದಾರೆ.

’ಕಾರ್ಯಕರ್ತರ ಜತೆಗೂಡಿ ಬದ್ಧತೆಯಿಂದ ಪಕ್ಷವನ್ನು ಸಂಘಟಿಸಲಾಗುವುದು’ ಎಂದು ಎಕ್ಸ್‌ನಲ್ಲಿ ತಿಳಿಸಿದ್ದಾರೆ.

ಖರ್ಗೆ – ಮುದ್ದಹನುಮೇಗೌಡ ಭೇಟಿ

ಬೆಂಗಳೂರು: ಬಿಜೆಪಿ ಮುಖಂಡ ಹಾಗೂ ತುಮಕೂರು ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ಅವರು ಕಾಂಗ್ರೆಸ್‌ಗೆ ಮರಳಲು ಕಸರತ್ತು ನಡೆಸಿದ್ದಾರೆ.

ರಾಜ್ಯದ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿ ಈಗಾಗಲೇ ಚರ್ಚೆ ನಡೆಸಿರುವ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮಂಗಳವಾರ ಭೇಟಿ ಮಾಡಿದ್ದಾರೆ. ಆ ಮೂಲಕ, ಮುದ್ದಹನುಮೇಗೌಡ ಅವರು ಬಿಜೆಪಿ ತೊರೆದು ವಾಪಸ್ ‘ಕೈ’ ಹಿಡಿಯುವುದು ಬಹುತೇಕ ಖಚಿತವಾಗಿದೆ.

ಅತ್ತ ತುಮಕೂರಿನಲ್ಲಿ ಮಾತನಾಡಿರುವ ಸಚಿವ ಕೆ.ಎನ್. ರಾಜಣ್ಣ ಅವರು, ತುಮಕೂರು ಕ್ಷೇತ್ರದಿಂದ ಮುದ್ದಹನುಮೇಗೌಡ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಲಿದ್ದಾರೆ ಎನ್ನುವ ಸುಳಿವು ನೀಡಿದ್ದಾರೆ. ಇದರ ಬೆನ್ನಲ್ಲೇ ಖರ್ಗೆ ಅವರನ್ನು ಮುದ್ದಹನುಮೇಗೌಡ ಭೇಟಿ ಮಾಡಿದ್ದಾರೆ.

ಬಿಜೆಪಿಯ ಮೋರ್ಚಾಗಳಿಗೆ ನೇಮಕ

ಬೆಂಗಳೂರು: ಬಿಜೆಪಿಯ ವಿವಿಧ ಮೋರ್ಚಾಗಳ ರಾಜ್ಯ ಪ್ರಧಾನ ಕಾರ್ಯದರ್ಶಿಗಳನ್ನು ನೇಮಕ ಮಾಡಲಾಗಿದೆ.



ಮಹಿಳಾ ಮೋರ್ಚಾ–ಶಿಲ್ಪಾ ಜಿ.ಸುವರ್ಣ, ಡಾ.ಶೋಭಾ ಸಂಗನಗೌಡ, ಯುವ ಮೋರ್ಚಾ– ಹರೀಶ್ ಪೂಂಜಾ, ಸಂದೀಪ್ ರವಿ, ಎಸ್.ಟಿ ಮೋರ್ಚಾ– ಕೃಷ್ಣಾ ನಾಯಕ್, ಬಸವರಾಜ ಹುಂದ್ರಿ, ಎಸ್.ಸಿ ಮೋರ್ಚಾ– ಉಮೇಶ ಕಾರಜೋಳ, ಮಹೇಂದ್ರ ಕೌತಾಳ, ಹಿಂದುಳಿದ ವರ್ಗಗಳ ಮೋರ್ಚಾ– ಅವ್ವಣ್ಣ ಮ್ಯಾಕೇರಿ, ರೈತ ಮೋರ್ಚಾ– ಡಾ.ಬಿ.ಸಿ.ನವೀನ್‌ಕುಮಾರ್, ಕಲ್ಮರುಡಪ್ಪ, ಅಲ್ಪಸಂಖ್ಯಾತರ ಮೋರ್ಚಾ– ಇಂದ್ರ ಕುಮಾರ್, ರೌಫುದ್ದೀನ್ ಕಚೇರಿವಾಲೆ.

ಬೀದರ್ ಜಿಲ್ಲೆಯ ಬಸವ ಕಲ್ಯಾಣ ತಾಲ್ಲೂಕಿನ ಹಾರಕೂಡದಲ್ಲಿ ಚನ್ನಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ರಥೋತ್ಸವ ನಡೆಯಿತು.

‘₹50 ಲಕ್ಷ ಲಂಚ ಕೊಡಿಸಿದ್ದೆ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಆಪ್ತರೊಬ್ಬರ ನಿವೇಶನಕ್ಕೆ ಇ–ಸ್ವತ್ತು ಪಡೆಯಲು ಹೊಸದುರ್ಗ ಪುರಸಭೆಯ ಅಧ್ಯಕ್ಷರಿಗೆ ₹ 50 ಲಕ್ಷ ಲಂಚವನ್ನು ನಾನೇ ಕೊಡಿಸಿದ್ದೆ. ಆಗ ಶಾಸಕರಾಗಿದ್ದ ಗೂಳಿಹಟ್ಟಿ ಡಿ.ಶೇಖರ್ ಅವರಿಗೆ ಇದರಲ್ಲಿ ಎಷ್ಟು ಪಾಲು ಹೋಗಿದೆ ಎಂಬುದನ್ನು ಬಹಿರಂಗ ಪಡಿಸಲು ಸಿದ್ಧನಿದ್ದೇನೆ. ಅವರು ಚರ್ಚೆಗೆ ಬರಲಿ’ ಎಂದು ಶಾಸಕ ಬಿ.ಜಿ. ಗೋವಿಂದಪ್ಪ ಸವಾಲೆಸೆದರು.

‘ಗೂಳಿಹಟ್ಟಿ ಶೇಖರ್ ಶಾಸಕರಾಗಿದ್ದ ಅವಧಿಯಲ್ಲಿ ಹೊಸದುರ್ಗ ಪಟ್ಟಣ ವ್ಯಾಪ್ತಿಯಲ್ಲಿ ರಿಯಲ್ ಎಸ್ಟೇಟ್ ದಂಧೆ ಜೋರಾಗಿ ನಡೆಯಿತು. ನನಗೆ ಬೇಕಾದವರೊಬ್ಬರು ₹ 25 ಕೋಟಿ ಬಂಡವಾಳ ಹೂಡಿ ಬಡಾವಣೆ ಅಭಿವೃದ್ಧಿಪಡಿಸಿದ್ದರು. ಇ–ಸ್ವತ್ತು ನೀಡಲು ವಿನಾಕಾರಣ ಆರು ತಿಂಗಳು ಸತಾಯಿಸಲಾಯಿತು.

ಅವರು ಶಾಸಕರಾಗಿದ್ದಾಗ ಎಲ್ಲ ರೀತಿಯ ದಂಧೆಗಳು ನಡೆಯುತ್ತಿದ್ದವು. ಎಲ್ಲೋ ಕುಳಿತು ಆಡಿಯೊ ಬಿಡುಗಡೆ ಮಾಡುವುದು ಯಾವ ಗಟ್ಟಿತನ. ಎದುರಿಗೆ ಬಂದು ಮಾತನಾಡಲಿ.
ಬಿ.ಜಿ.ಗೋವಿಂದಪ್ಪ, ಶಾಸಕ ಹೊಸದುರ್ಗ

ಅಂತಿಮವಾಗಿ ಲಂಚ ನೀಡಬೇಕಾಯಿತು. ಲಂಚ ಕೊಡುವುದು ತಪ್ಪು ಎಂಬುದು ಗೊತ್ತಿದ್ದರೂ ಅನಿವಾರ್ಯತೆ ಸೃಷ್ಟಿಸಲಾಯಿತು’ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

‘ಲಂಚ ಕೊಟ್ಟಿರುವುದು ಗ್ಯಾರಂಟಿ, ಪಡೆದುಕೊಂಡಿದ್ದು ಹಾಗೂ ತಿಂದಿರುವುದು ಗ್ಯಾರಂಟಿ. ಇದರಲ್ಲಿ ಗೂಳಿಹಟ್ಟಿ ಅವರಿಗೆ ಪಾಲಿದೆಯೋ ಇಲ್ಲವೋ ಎಂಬುದನ್ನು ಎದುರಿಗೆ ಬಂದರೆ ಬಹಿರಂಗಪಡಿಸುತ್ತೇನೆ. ನಾನು ಇಂತಹ ಯಾವುದೇ ದಂಧೆಯಲ್ಲಿ ತೊಡಗಿದ್ದನ್ನು ತೋರಿಸಿದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವೆ’ ಎಂದು ಅವರು ಸ್ಪಷ್ಟಪಡಿಸಿದರು.

‘ಕ್ಷೇತ್ರ ವ್ಯಾಪ್ತಿಯಲ್ಲಿ ಅಕ್ರಮ ಮಣ್ಣು ಮತ್ತು ಮರಳು ಗಣಿಗಾರಿಕೆ ಅವ್ಯಾಹತವಾಗಿ ನಡೆಯುತ್ತಿದ್ದರೂ ಶಾಸಕ ಬಿ.ಜಿ. ಗೋವಿಂದಪ್ಪ ಮತ್ತು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ ಅವರು ಮೌನವಾಗಿದ್ದಾರೆ’ ಎಂದು ಮಾಜಿ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಮಾಡಿದ ಆರೋಪದ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಸೋಮವಾರ ಹರಿದಾಡಿದ್ದರಿಂದ ಶಾಸಕ ಗೋವಿಂದಪ್ಪ ಈ ಪ್ರತಿಕ್ರಿಯೆ ನೀಡಿದರು.

ಜೈನ ಅಭಿವೃದ್ಧಿ ನಿಗಮ ಸ್ಥಾಪಿಸದಿದ್ದರೆ ಹೋರಾಟ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಜೈನ ಅಭಿವೃದ್ಧಿ ನಿಗಮ ಸ್ಥಾಪನೆ ಸೇರಿ ವಿವಿಧ ಬೇಡಿಕೆಗಳನ್ನು ಫೆಬ್ರುವರಿ 7ರ ಒಳಗೆ ಈಡೇರಿಸಬೇಕು. ಇಲ್ಲದಿದ್ದರೆ, ಫೆಬ್ರುವರಿ 8ರಂದು ಸಮುದಾಯದ ಒಂದು ಲಕ್ಷ ಜನರೊಂದಿಗೆ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಶಮನೇವಾಡಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು’ ಎಂದು ಹುಬ್ಬಳ್ಳಿಯ ವರೂರಿನ ನವಗ್ರಹ ತೀರ್ಥ ಕ್ಷೇತ್ರದ ಆಚಾರ್ಯ ಗುಣಧರ ನಂದಿ ಮಹಾರಾಜರು ಆಗ್ರಹಿಸಿದರು.

‘ರಾಜಸ್ಥಾನದಲ್ಲಿ ಈಗಾಗಲೇ ನಿಗಮ ಸ್ಥಾಪಿಸಲಾಗಿದ್ದು, ರಾಜ್ಯದಲ್ಲಿಯೂ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಜೈನ ಮುನಿಗಳ ವಿಹಾರ ಸಂದರ್ಭದಲ್ಲಿ ಶಾಲಾ, ಕಾಲೇಜು, ಪ್ರವಾಸಿ ಮಂದಿರಗಳಲ್ಲಿ ವಸತಿಗೆ ವ್ಯವಸ್ಥೆ ಕಲ್ಪಿಸಬೇಕು’ ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

‘ಕಳೆದ ವರ್ಷ ಜುಲೈನಲ್ಲಿ ನವಗ್ರಹತೀರ್ಥ ಕ್ಷೇತ್ರಕ್ಕೆ ಭೇಟಿ ನೀಡಿದ್ದ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು, ಬೇಡಿಕೆಗಳ ಈಡೇರಿಸುವ ಭರವಸೆ ನೀಡಿದ್ದರು. ಆದರೆ, ಈವರೆಗೆ ಈಡೇರಿಲ್ಲ’ ಎಂದು ದೂರಿದರು.

‘ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಕೊಡುವ ವಿದ್ಯಾರ್ಥಿವೇತನದಲ್ಲೂ ಕಡಿತ ಮಾಡಲಾಗಿದ್ದು, ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಅದನ್ನು ಮೊದಲಿನಂತೆ ಮುಂದುವರಿಸಬೇಕು’ ಎಂದು ಆಗ್ರಹಿಸಿದರು.

‘ಅಯೋಧ್ಯೆಯಲ್ಲಿ ಐದು ದಿನ ಜೈನಮುನಿಗಳು ಅಲ್ಲಿ ಅನ್ನಸಂತರ್ಪಣೆ ಸೇವೆ ಸಲ್ಲಿಸುವರು’ ಎಂದರು.

ನೀಲಗಿರಿ ಗಿಡ ನಿಷೇಧ ರದ್ದತಿ ನಿರ್ಧಾರ ಹಿಂಪಡೆಯಲು ಒತ್ತಾಯ

ಧಾರವಾಡ: ‘ನೀಲಗಿರಿ ಗಿಡ ಬೆಳೆಸದಂತೆ ವಿಧಿಸಿದ್ದ ನಿಷೇಧವನ್ನು ರದ್ದುಪಡಿಸುವ ನಿರ್ಧಾರವನ್ನು ರಾಜ್ಯ ಸರ್ಕಾರ ಹಿಂಪಡೆಯಬೇಕು’ ಎಂದು ಸಮಾಜ ಪರಿವರ್ತನಾ ಸಮುದಾಯದ ಅಧ್ಯಕ್ಷ ಎಸ್.ಆರ್. ಹಿರೇಮಠ ಒತ್ತಾಯಿಸಿದರು.


ಎಸ್‌.ಆರ್‌. ಹಿರೇಮಠ

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಾಗದ ಉದ್ದಿಮೆಗೆ ಬಂಡವಾಳ ಆಕರ್ಷಿಸುವ ಉದ್ದೇಶದಿಂದ ಸರ್ಕಾರ ಕೈಗೊಂಡ ಈ ನಿರ್ಧಾರವನ್ನು ವಿರೋಧಿಸುತ್ತೇವೆ. ನೈಸರ್ಗಿಕ ಸಂಪನ್ಮೂಲ ರಕ್ಷಣಾ ರಾಷ್ಟ್ರೀಯ ಸಮಿತಿ, ಜನಾಂದೋಲನ ಮಹಾಮೈತ್ರಿ ಸಂಘಟನೆ ಸೇರಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟಿಸುತ್ತೇವೆ’ ಎಂದರು.

‘ಈ ಹಿಂದೆ ನೀಲಗಿರಿ ಗಿಡ ಕೃಷಿ ಮತ್ತು ಏಕಾಕಾರಿ ಅರಣ್ಯ ಸಂಸ್ಕೃತಿಯ ಬಗ್ಗೆ ಸರ್ಕಾರವು ಕೈಗೊಂಡ ಕ್ರಮವನ್ನು ತೀವ್ರವಾಗಿ ವಿರೋಧಿಸಿ ‘ನೆಡದಿರಿ ನೀಲಗಿರಿ’ ಅಭಿಯಾನ ನಡೆಸಿದ್ದೆವು. ಸಮಾಜ ಪರಿವರ್ತನಾ ಸಮುದಾಯದಿಂದ ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದೆವು. ಇದರ ಪರಿಣಾಮ ನೀಲಗಿರಿ ಮರಗಳ ಕೃಷಿ ಹಾಗೂ ಶೀಘ್ರವಾಗಿ ಬೆಳೆಯುವ ಮರಗಳ ಏಕಾಕಾರಿ ಅರಣ್ಯ ಸಂಸ್ಕೃತಿ ನಿಷೇಧಿಸಿ ಕೋರ್ಟ್ ಆದೇಶಿಸಿತ್ತು’ ಎಂದರು.

‘ನೀಲಗಿರಿ ಗಿಡಗಳನ್ನು ಬೆಳೆಯುವುದರಿಂದ ಭೂಮಿಗೆ ತೀವ್ರ ಅಪಾಯವಾಗುತ್ತದೆ. ನಿರ್ಧಾರ ಕೈಬಿಡುವಂತೆ ಮುಖ್ಯಮಂತ್ರಿಯವರಿಗೆ ವಾರದಲ್ಲಿ ಮನವಿ ಸಲ್ಲಿಸುತ್ತೇವೆ. ಮನವಿ ಪರಿಗಣಿಸದಿದ್ದರೆ ಕೋರ್ಟ್ ಮೆಟ್ಟಿಲು ಏರುತ್ತೇವೆ’ ಎಂದು ಎಚ್ಚರಿಕೆ ನೀಡಿದರು. ವಕೀಲ ಗುರುಪಾದ ಇದ್ದರು.

ಕಲ್ಲುಗಣಿಗಾರಿಕೆ: ಕಾನೂನು ಸಡಿಲಗೊಳಿಸಲು ಮನವಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಭೋವಿ ಜನಾಂಗದ ಕುಲ ಕಸುಬಾಗಿರುವ ಕಲ್ಲು ಗಣಿಗಾರಿಕೆಯನ್ನು ಮುಂದುವರಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಕಾನೂನು ಸಡಿಲಗೊಳಿಸುವಂತೆ ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದ್ದಾರೆ.

ಸ್ವಾಮೀಜಿ ಕೋರಿಕೆಗೆ ಸ್ಪಂದಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಕುರಿತು ಪರಿಶೀಲಿಸುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಸೂಚಿಸಿದ್ದಾರೆ.

‘ಗಣಿಗಳಲ್ಲಿ ದೊಡ್ಡ ಯಂತ್ರಗಳನ್ನು ಬಳಸುವ ಮೂಲಕ ಉಳ್ಳವರು ಭೋವಿ (ಒಡ್ಡರ) ಸಮುದಾಯದ ಕುಲ ಕಸುಬನ್ನು ಕಸಿದುಕೊಳ್ಳುತ್ತಿದ್ದಾರೆ. ಬಡ ಕೂಲಿ ಕಾರ್ಮಿಕರಿಗೆ ಪಾರಂಪರಿಕ ಕೆಲಸ ಮುಂದುವರಿಸಲು ಅವಕಾಶ ಮಾಡಿಕೊಡುವ ಅಗತ್ಯವಿದೆ. ಸ್ಫೋಟಕಗಳ ಬಳಕೆ ರಹಿತ ಗಣಿ ಗಾರಿಕೆ ಕಾರ್ಮಿ ಕರಿಗೆ ಗುರುತಿನ ಚೀಟಿ ನೀಡಲು ಕಾನೂನು ರೂಪಿಸ ಬೇಕಿದೆ’ ಎಂದು ಪತ್ರದಲ್ಲಿ ಕೋರಿದ್ದಾರೆ.

ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ

‘ಭೋವಿ ಜನಾಂಗದ ಅನಾದಿ ಕಾಲದ ಪರಿಶ್ರಮವು ದೇಗುಲ ಹಾಗೂ ಶಾಸನಗಳಲ್ಲಿ ಅಮರವಾಗಿದೆ. ಈ ಜನಾಂಗ ಕಲ್ಲು, ಬಂಡೆ ತೆಗೆಯುವ ಕೌಶಲ ಕಲಿಯದೇ ಇದ್ದಿದ್ದರೆ ಇತಿಹಾಸ, ಸಂಸ್ಕೃತಿಯನ್ನು ಇಂದಿನ ಪೀಳಿಗೆ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಕೆರೆ, ಕಟ್ಟೆ, ಕಾಲುವೆ, ಅಣೆಕಟ್ಟೆ ನಿರ್ಮಾಣದಲ್ಲಿ ಸಮುದಾಯದ ಪಾತ್ರ ಪ್ರಮುಖವಾಗಿದೆ. ಸಮುದಾಯದವರ ಜೀವನ ದುಸ್ತರವಾಗಿದ್ದು, ಕೆಲ ಕಾನೂನು ಬದಲಾವಣೆಯ ಅಗತ್ಯವಿದೆ’ ಎಂದು ಪ್ರತಿಪಾದಿಸಿದ್ದಾರೆ.

ಉದ್ಯೋಗ ವಾಣಿ

ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ
(Karnataka Brain Health Initiative)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ನಿಮ್ಹಾನ್ಸ್, ಬೆಂಗಳೂರು ಸಹಯೋಗದೊಂದಿಗೆ

ಕರ್ನಾಟಕ ಸರ್ಕಾರದ ಅನುದಾನಿತ "ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ (KaBHI)" ಪ್ರೊಜೆಕ್ಟ್‌ಗಾಗಿ ಗುತ್ತಿಗೆ ಆಧಾರದಲ್ಲಿ ಡಾ.ಸುವರ್ಣ ಅಲ್ಲಾಡಿ, ನ್ಯೂರಾಲಜಿ ವಿಭಾಗದ ಪ್ರೊಫೆಸರ್ ಮತ್ತು ಪ್ರಧಾನ ಸಂಶೋಧಕರು ಮತ್ತು ಡಾ.ಗಿರೀಶ್ ಎನ್., ಎಪಿಡೆಮಾಲಜಿ ವಿಭಾಗದ ಪ್ರೊಫೆಸರ್, ಸಹ ಪ್ರಧಾನ ಸಂಶೋಧಕರು ಇವರ ನೇತೃತ್ವದಲ್ಲಿ ಈ ಕೆಳಗಿನ ಹುದ್ದೆಗಳಿಗೆ ನಿಮ್ಹಾನ್ಸ್ ನೇರ ಸಂದರ್ಶನವನ್ನು ನಡೆಸುತ್ತಿದೆ.

ಕ್ರ.ಸಂ.	ಹುದ್ದೆಯ ಹೆಸರು	ಖಾಲಿ ಹುದ್ದೆಯ ಸಂಖ್ಯೆ
1	ನ್ಯೂರಾಲಜಿಸ್ಟ್ / ಫಿಜಿಷಿಯನ್	33
2	ನ್ಯೂರೋ ನರ್ಸ್	1
3	ನರ್ಸ್	30
4	ಕ್ಲಿನಿಕಲ್ ಸೈಕಾಲಜಿಸ್ಟ್	32
5	ವೈದ್ಯಕೀಯ ಸಾಮಾಜಿಕ ಕಾರ್ಯಕರ್ತರು	1
6	ಫಿಸಿಯೋಥೆರಪಿಸ್ಟ್	32
7	ಸ್ಪೀಚ್ ಲ್ಯಾಂಗ್ವೇಜ್ ಪೆಥಾಲಜಿಸ್ಟ್ ಮತ್ತು ಆಡಿಯಾಲಜಿಸ್ಟ್/ ಸ್ಪೀಚ್ ಲ್ಯಾಂಗ್ವೇಜ್ ಪೆಥಾಲಜಿಸ್ಟ್	32

ಖಾಲಿ ಹುದ್ದೆಗಳ ಕುರಿತು ಇನ್ನಷ್ಟು ಮಾಹಿತಿಗಾಗಿ ದಯವಿಟ್ಟು ವೆಬ್‌ಸೈಟ್‌ನಲ್ಲಿ ಅಧಿಸೂಚನೆಯನ್ನು ಪರಿಶೀಲಿಸಿ
https://notifications.nimhans.ac.in/category/vacancy-announcements/
ಸಹಿ/– ರಿಜಿಸ್ಟ್ರಾರ್

ಪ್ರಜಾವಾಣಿ

ಉದ್ಯೋಗಾವಕಾಶದ ಜಾಹೀರಾತಿಗಾಗಿ ಸಂಪರ್ಕಿಸಿ:
ಮೊ: 96069 12220

ಸಮಾಜ ಕಲ್ಯಾಣ ಇಲಾಖೆ
ಪರಿಶಿಷ್ಟ ಜಾತಿ ಮಹಿಳಾ ಪದವೀಧರರಿಗೆ
ಉದ್ಯಮಶೀಲತಾ ತರಬೇತಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಡಾ. ಹೆಚ್.ಸಿ. ಮಹದೇವಪ್ಪ,
ಮಾನ್ಯ ಸಮಾಜ ಕಲ್ಯಾಣ ಸಚಿವರು ಸಭೆಯೊಂದನ್ನು ಉದ್ದೇಶಿಸಿ ಮಾತನಾಡುತ್ತಿರುವುದು

ಸಮಾಜ ಕಲ್ಯಾಣ ಇಲಾಖೆಯಿಂದ 50 ಪರಿಶಿಷ್ಟ ಜಾತಿಯ ಮಹಿಳಾ ಪದವೀಧರರಿಗೆ ಉದ್ಯಮಗಳನ್ನು ಸ್ಥಾಪಿಸಲು ಪೂರಕವಾಗುವಂತೆ ಪ್ರತಿಷ್ಠಿತ ಐ.ಐ.ಎಂ ಬೆಂಗಳೂರು. ಇವರ ಮೂಲಕ ಉದ್ಯಮಶೀಲತಾ ತರಬೇತಿಗಾಗಿ ಅರ್ಜಿಗಳನ್ನು ಇಲಾಖೆಯ ಅಧಿಕೃತ ಜಾಲತಾಣ: www.sw.kar.nic.in ನಲ್ಲಿ ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ.

ಸಾಮಾನ್ಯ ಅರ್ಹತೆಗಳು
- ಅಭ್ಯರ್ಥಿಗಳು ಪರಿಶಿಷ್ಟ ಜಾತಿಗೆ ಸೇರಿದ್ದು, ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ಉದ್ಯಮಗಳನ್ನು ಸ್ಥಾಪಿಸುವ ಉದ್ದೇಶವಿರುವವರು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ವಯೋಮಿತಿ ಕನಿಷ್ಠ - 21 ವರ್ಷಗಳು ಗರಿಷ್ಠ - 45 ವರ್ಷಗಳು.
- ತರಬೇತಿಯ ಅವಧಿ - 5 ರಿಂದ 6 ತಿಂಗಳು.
- 8 ದಿನದ ತರಬೇತಿಯು ಐ.ಐ.ಎಂ-ಬೆಂಗಳೂರು ಸಂಸ್ಥೆ ಕ್ಯಾಂಪಸ್‌ನಲ್ಲಿ ಹಾಗೂ MOOC ಮುಖಾಂತರ ನೀಡಲಾಗುವುದು.
- ಐ.ಐ.ಎಂ - ಬೆಂಗಳೂರು ರವರು ನಡೆಸುವ ಸ್ಕ್ರೀನಿಂಗ್ ಟೆಸ್ಟ್ ಮುಖಾಂತರ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- ಶೇ. 100 ರಷ್ಟು ಹಾಜರಾತಿ ಕಡ್ಡಾಯ.
- ಸ್ಕ್ರೀನಿಂಗ್ ಟೆಸ್ಟ್ ದಿನಾಂಕ 11.02.2024 ರಂದು ಐ.ಐ.ಎಂ-ಬೆಂಗಳೂರು ಕ್ಯಾಂಪಸ್‌ನಲ್ಲಿ ನಡೆಸಲಾಗುವುದು.

ತರಬೇತಿ ಪಡೆಯಲು ಇಚ್ಛಿಸುವವರು ಆನ್‌ಲೈನ್ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ: 17.01.2024 ರಿಂದ ದಿನಾಂಕ: 31.01.2024 ರ ಸಂಜೆ 5 ಗಂಟೆಯ ವರೆಗೆ ಸಲ್ಲಿಸತಕ್ಕದ್ದು.

ಆನ್‌ಲೈನ್ ಅರ್ಜಿಯು ಸಮಾಜ ಕಲ್ಯಾಣ ಇಲಾಖೆಯ ಅಧಿಕೃತ ಜಾಲತಾಣ www.sw.kar.nic.in ನಲ್ಲಿ ಲಭ್ಯವಿರುತ್ತದೆ.

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು" ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ



ಕಾರ್ಬನ್ ಕಬಳಿಸುವ ಹೊಸ ತಂತ್ರ

ಆತಂಕಕ್ಕೆ ಕಾರಣವಾದ ಅನಿಲವನ್ನು ಕಬಳಿಸಿ, ನಾಳೆಗೆ ಅಗತ್ಯವಾದ ನ್ಯಾನೊಕಾರ್ಬನ್ ಎಳೆಗಳನ್ನು ತಯಾರಿಸುವ ಹೊಸದೊಂದು ರಾಸಾಯನಿಕ ತಂತ್ರ ಸಿದ್ಧವಾಗುತ್ತಿದೆ

ಕೊಳ್ಳೇಗಾಲ ಶರ್ಮ

ಒಂದೇ ಕಲ್ಲಿನಿಂದ ಎರಡು ಹಕ್ಕಿಯನ್ನು ಹೊಡೆಯುವ ಮಾತು ತಂತ್ರಜ್ಞಾನದಲ್ಲಿ ಹೊಸತಲ್ಲ. ಒಂದು ಸಮಸ್ಯೆಯನ್ನು ಪರಿಹರಿಸುತ್ತಲೇ ಇನ್ನೊಂದು ಲಾಭವನ್ನೂ ಪಡೆಯುವ ಬಗ್ಗೆ ವಿಜ್ಞಾನಿಗಳು ಉತ್ಸುಕರು. ಅಂತಹುದೊಂದು ಹೊಸ ತಂತ್ರವನ್ನು ಅಮೆರಿಕದ ಬ್ರೂಕ್‌ಹೆವನ್ ಲ್ಯಾಬೊರೇಟರಿಯ ವಸ್ತು ವಿಜ್ಞಾನಿಗಳು ಸಾಧಿಸಿರುವ ಸುದ್ದಿ ಬಂದಿದೆ. ಭೂಮಿಯ ವಾತಾವರಣ ಬಿಸಿಯೇರುವುದಕ್ಕೆ ಕಾರಣವಾಗಿರುವ ಕಾರ್ಬನ್ ಡಯಾಕ್ಸೈಡನ್ನು ಬಳಸಿಕೊಂಡು ಕೊಲಂಬಿಯಾ ವಿಶ್ವವಿದ್ಯಾಲಯದ ಜಿಂಗುವಾನ್ ಶೆನ್ ಅವರ ನೇತೃತ್ವದ ತಂಡ ಬೆಲೆಬಾಳುವ ನ್ಯಾನೊ ಕಾರ್ಬನ್ ಎಳೆಗಳನ್ನೂ ಹಿಂಜಿದೆ.

ಕಾರ್ಬನ್ ಡಯಾಕ್ಸೈಡ್ ಅಂತರರಾಷ್ಟ್ರೀಯವಾಗಿ ಸುದ್ದಿಯಲ್ಲಿರುವ ಅನಿಲ. ಸಾಮಾನ್ಯವಾಗಿ ನಾವು ಉಸಿರಾಡುವ ಗಾಳಿಯಲ್ಲಿ ಸಾವಿರದಲ್ಲಿ ಎರಡು ಪಾಲಿನಷ್ಟು ಅತ್ಯಲ್ಪ ಪ್ರಮಾಣದಲ್ಲಿ ಇದು ಇರುತ್ತದೆ. ಕಳೆದ ಇನ್ನೂರು ವರ್ಷಗಳಲ್ಲಿ ನಮ್ಮ ಕೈಗಾರಿಕಾ ಕ್ರಾಂತಿಯ ಪ್ರಭಾವದಿಂದಾಗಿ ವಾತಾವರಣದಲ್ಲಿರುವ ಕಾರ್ಬನ್ ಡಯಾಕ್ಸೈಡ್‌ನ ಪ್ರಮಾಣ ದುಪ್ಪಟ್ಟಾಗಿದೆ. ಫಲವಾಗಿ ಭೂಮಿಯ ಸರಾಸರಿ ಉಷ್ಣತೆಯೂ ಎಲ್ಲೆಡೆ ಹೆಚ್ಚಿದೆ ಎನ್ನುವುದು ವಿಜ್ಞಾನಿಗಳ ತರ್ಕ. ಇದರಿಂದಾಗಿಯೇ 2023ನೇ ಇಸವಿ ಕಳೆದ ನಾಲ್ಕುನೂರು ವರ್ಷಗಳಲ್ಲಿ ಎಂದೂ ಕಾಣದಷ್ಟು ಬಿಸಿ, ಬಿಸಿಯಾಗಿತ್ತು.

ವಾತಾವರಣದಲ್ಲಿರುವ ಕಾರ್ಬನ್ ಡಯಾಕ್ಸೈಡ್ ಪ್ರಮಾಣ ಕುಗ್ಗಿಸಿದರೆ ಬಂದೊದಗಬಹುದಾದ ಹಲವಾರು ವಿಕೋಪಗಳನ್ನು ತಡೆಯಬಹುದು ಎನ್ನುವುದು ಹವಾಮಾನ ವಿಜ್ಞಾನಿಗಳ ಅಂದಾಜು. ಈ ನಿಟ್ಟಿನಲ್ಲಿ 2030ನೇ ಇಸವಿಗೆ ಆದಷ್ಟೂ ಮಟ್ಟಿಗೆ ಕಾರ್ಬನ್ ಡಯಾಕ್ಸೈಡ್ ಪ್ರಮಾಣವನ್ನು ಕುಗ್ಗಿಸಲು ಪ್ರಪಂಚದ ಎಲ್ಲ ರಾಷ್ಟ್ರಗಳೂ ಪ್ರಯತ್ನಿಸುತ್ತಿವೆ. ಇದಕ್ಕೆ ಇರುವುದು ಎರಡೇ ಉಪಾಯ. ಒಂದೋ ಕಾರ್ಬನ್ ಡಯಾಕ್ಸೈಡ್ ಉತ್ಪಾದನೆ ನಿಲ್ಲಿಸಬೇಕು, ಇಲ್ಲವೇ ಕುಗ್ಗಿಸಬೇಕು. ಅಥವಾ ಈಗಿರುವ ಕಾರ್ಬನ್ ಡಯಾಕ್ಸೈಡನ್ನು ಹೀರಿ, ಬಚ್ಚಿಡಬೇಕು.

ಕಾರ್ಬನ್ ಡಯಾಕ್ಸೈಡನ್ನು ಹಿಡಿದಿಡುವುದರಲ್ಲಿ ಗಿಡ, ಮರಗಳಷ್ಟು ಸಮರ್ಥವಾದ ಯಂತ್ರಗಳಿಲ್ಲ. ಆದರೆ ಇವನ್ನು ನಮಗೆ ಅಗತ್ಯವಾದಷ್ಟು ಪ್ರಮಾಣದಲ್ಲಿ ಬೆಳೆಸುವುದು ಸುಲಭವಲ್ಲ. ಕಾರ್ಬನ್ ಡಯಾಕ್ಸೈಡನ್ನು ಹಿಡಿದಿಡುವ ಕೃತಕ ತಂತ್ರಜ್ಞಾನ ಅಭಿವೃದ್ಧಿಗೆ ಎಲ್ಲ ದೇಶಗಳೂ ಗಮನ ಹರಿಸಿವೆ.



ಕಾರ್ಬನ್ ಹಾಗೂ ಆಕ್ಸಿಜನ್ ಎನ್ನುವ ಎರಡು ಉಪಯುಕ್ತ ವಸ್ತುಗಳ ಸಂಯುಕ್ತ ಕಾರ್ಬನ್ ಡಯಾಕ್ಸೈಡ್. ಅದನ್ನು ಈ ಎರಡು ವಸ್ತುಗಳನ್ನಾಗಿ ಬೇರ್ಪಡಿಸಿದರೆ, ಲಾಭ ಹೆಚ್ಚು. ದುರದೃಷ್ಟವೆಂದರೆ ನೇರವಾಗಿ ಕಾರ್ಬನ್ ಡಯಾಕ್ಸೈಡನ್ನು ಒಡೆಯುವುದಕ್ಕೆ ಬೇಕಾದ ಶಕ್ತಿ, ಅರ್ಥಾತ್ ಉಷ್ಣತೆ ಎಷ್ಟು ಹೆಚ್ಚೆಂದರೆ, ಆನೆ ಮಾರಿ ಅಡಕೆಯನ್ನು ಕೊಂಡಂತೆ ಆಗುತ್ತದೆ. ಹೀಗೆ ಉತ್ಪಾದಿಸಿದ ಕಾರ್ಬನ್ ಕೂಡ ಅಂಟು ಅಂಟಾದ ಟಾರೋ, ಅಥವಾ ಗಟ್ಟಿಯಾದ ಇದ್ದಿಲಿನ ರೂಪದಲ್ಲಿರುತ್ತದೆ. ಅದನ್ನು ಮತ್ತೆ ಉರಿಸಲಷ್ಟೆ ಬಳಸಬಹುದು. ಹಿಡಿದಿಟ್ಟ ಕಾರ್ಬನ್ ಡಯಾಕ್ಸೈಡ್ ಹೊಗೆಯಾಗಿ ಮರಳಿ ಗಾಳಿ ಸೇರುತ್ತದೆ.

ಶೆನ್ ತಂಡ ರೂಪಿಸಿರುವ ವಿಧಾನ ಇದಕ್ಕೊಂದು ಮಾರ್ಗವನ್ನು ಒದಗಿಸಬಲ್ಲುದು. ಈ ತಂತ್ರದಲ್ಲಿ ಒಂದಾದ ನಂತರ ಇನ್ನೊಂದು ರಾಸಾಯನಿಕ ಕ್ರಿಯೆಯನ್ನು ನಡೆಸುವಂತೆ ಯೋಜಿಸಲಾಗಿದೆ. ಮೊದಲನೆಯ ಕ್ರಿಯೆಯಲ್ಲಿ ಕಾರ್ಬನ್ ಡಯಾಕ್ಸೈಡನ್ನು ವಿಶೇಷವಾದ ಕೆಟಲಿಸ್ಟು ಅಥವಾ ಕ್ರಿಯಾವರ್ಧಕದ ನೆರವಿನಿಂದ ಕಾರ್ಬನ್ ಮಾನಾಕ್ಸೈಡಾಗಿ ಪರಿವರ್ತಿಸಲಾಗುತ್ತದೆ. ಇದು ಒಂದು ರೀತಿ ನಿಮ್ಮ ಬೈಕು ಅಥವಾ ಕಾರಿನ ಸೈಲೆನ್ಸರಿನ ಒಳಗೆ ಇರುವ ಕೆಟಲಿಸ್ಟಿನ ಕ್ರಿಯೆಗೆ ವಿರುದ್ಧವಾದಂಥದ್ದು. ಅಲ್ಲಿ ಕೆಟಲಿಸ್ಟು ಇಂಜಿನ್ನಿನಲ್ಲಿ ಉತ್ಪಾದನೆಯಾದ ಕಾರ್ಬನ್ ಮಾನಾಕ್ಸೈಡ್ ಎನ್ನುವ ಅನಿಲವನ್ನು ಕಾರ್ಬನ್ ಡಯಾಕ್ಸೈಡನ್ನಾಗಿ ಪರಿವರ್ತಿಸುತ್ತದೆ. ಶೆನ್ ಅವರ ತಂತ್ರದ ಮೊದಲ ಹಂತ ಇದರ ಉಲ್ಟಾ.

ಶೆನ್ ಅವರ ತಂತ್ರದ ಹೂರಣ ಇದು. ಸಾಮಾನ್ಯವಾಗಿ ಹೀಗೆ ಕಾರ್ಬನ್ ಡಯಾಕ್ಸೈಡಿನಿಂದ ಒಂದು ಆಕ್ಸಿಜನ್ ಪರಮಾಣುವನ್ನು ಕಿತ್ತೊಗೆದು, ಮಾನಾಕ್ಸೈಡನ್ನಾಗಿ ಪರಿವರ್ತಿಸಲು ಅತಿ ಉಷ್ಣತೆಗೆ ಕಾಯಿಸಬೇಕು. ಕೆಟಲಿಸ್ಟು ಇದ್ದರೂ ಕಾಯಿಸುವುದು ಅಗತ್ಯವಾಗಿತ್ತು. ಆದರೆ ಕಾಯಿಸುವುದರ ಬದಲಿಗೆ ವಿದ್ಯುತ್ತನ್ನು ಬಳಸಿದರೆ ಹೇಗೆ? ಹೀಗೆ ವಿದ್ಯುತ್ ಹರಿದಾಗ ಕಾರ್ಬನ್ ಡಯಾಕ್ಸೈಡನ್ನು ಮಾನಾಕ್ಸೈಡನ್ನಾಗಿ ಪರಿವರ್ತಿಸುವ ಕೆಟಲಿಸ್ಟು ಒಂದನ್ನು ಈ ಹಿಂದೆ ಶೆನ್ ತಂಡ ಪತ್ತೆ ಮಾಡಿತ್ತು. ಇದೀಗ ಉತ್ಪಾದಿಸಿದ ಕಾರ್ಬನ್ ಮಾನಾಕ್ಸೈಡನ್ನು ಸರಳವಾಗಿ ಕಾರ್ಬನ್ನನ್ನಾಗಿ ಮಾಡಿದೆ. ಇದು ಎರಡನೆಯ ಹಂತ.

ಮಾನಾಕ್ಸೈಡನ್ನು ಕಾರ್ಬನ್ನನ್ನಾಗಿ ಬದಲಾಯಿಸಲು ಅಗ್ಗದ ಕಬ್ಬಿಣ ಹಾಗೂ ಕೋಬಾಲ್ಟ್ ಮಿಶ್ರಣದ ಲೋಹವನ್ನು ಬಳಸಿದ್ದಾರೆ. ಜೊತೆಗೆ ಸ್ವಲ್ಪ ಕೋಬಾಲ್ಟನ್ನೂ ಸೇರಿಸಿದರೆ ಇನ್ನಷ್ಟು ಉತ್ತಮ ಫಲ ದೊರೆಯುತ್ತದೆ ಎಂದು ಕಂಡುಕೊಂಡಿದ್ದಾರೆ. ಕಾರ್ಬನ್ ಮಾನಾಕ್ಸೈಡನ್ನು ನೀರಿನ ಹಬೆಯೊಟ್ಟಿಗೆ ಸೇರಿಸಿ, ಕರಿಯುವ ಎಣ್ಣೆಯಷ್ಟು ಬಿಸಿಯಾದ ಅಂದರೆ ಸುಮಾರು ನಾಲ್ಕು ನೂರು ಡಿಗ್ರಿ ಉಷ್ಣತೆ ಇರುವಂಥ ಕಬ್ಬಿಣ-ಕೋಬಾಲ್ಟ್ ಮಿಶ್ರಣದ ಮೇಲೆ ಹಾಯಿಸಿದಾಗ ಅದು ಕಾರ್ಬನ್ ಹಾಗೂ ಆಕ್ಸಿಜನ್ ಆಗುತ್ತದೆ. ನೀರಿನಲ್ಲಿರುವ ಹೈಡ್ರೊಜನ್ ಬೇರೆಯಾಗುತ್ತದೆ. ಹೀಗೆ ಒಂದೇ ಏಟಿಗೆ, ಶುದ್ಧವಾದ ಕಾರ್ಬನ್, ಆಕ್ಸಿಜನ್ ಹಾಗೂ ಹೈಡ್ರೊಜನ್ ಅನ್ನು ಉತ್ಪಾದಿಸಬಹುದು.

ಸಣ್ಣ ಪ್ರಮಾಣದ ಪ್ರಯೋಗ ನಡೆಸಿದ ಶೆನ್ ತಂಡ ಉತ್ಪತ್ತಿಯಾದ ಕಾರ್ಬನ್ ಟಾರಿನಂತಲ್ಲದೆ ಎಳೆ, ಎಳೆಯಾಗಿ ಹತ್ತಿಯಂತಿರುವುದನ್ನು ಗಮನಿಸಿದ್ದಾರೆ. ಇದು ನ್ಯಾನೊಕಾರ್ಬನ್ ರೂಪ. ಹಲವಾರು ಉದ್ದಿಮೆಗಳಲ್ಲಿ ಬಳಕೆಯಾಗುವ ವಸ್ತು. ಸದ್ಯಕ್ಕೆ ಇದನ್ನು ಪಾಲಿಮರುಗಳ ಎಳೆಗಳನ್ನು ಸುಟ್ಟು ತಯಾರಿಸಲಾಗುತ್ತಿತ್ತು. ಈಗ ನೇರವಾಗಿ ಬೇಡದ ಕಾರ್ಬನ್ ಡಯಾಕ್ಸೈಡಿನಿಂದಲೇ ಬೇಕಾದ ಕಾರ್ಬನ್ ಅನ್ನು ತಯಾರಿಸಬಹುದು.

ನಿಸರ್ಗ ಸಹಜವಾಗಿ ಗಿಡಗಳಲ್ಲಿ ನಡೆಯುವ ಕಾರ್ಬನ್ ಡಯಾಕ್ಸೈಡನ್ನು ಒಡೆಯುವ ಕ್ರಿಯೆ ಇಷ್ಟು ಕಷ್ಟ ಎನ್ನುವುದು ಎಚ್ಚರಿಕೆಯ ಗಂಟೆಯಾಗಬೇಕು. ಶೆನ್ ತಂಡದ ಸಂಶೋಧನೆಯ ಫಲಾಫಲಗಳನ್ನು ನೇಚರ್ ಕೆಟಲಿಸಿಸ್ ಪತ್ರಿಕೆ ಈ ವಾರ ಪ್ರಕಟಿಸಿದೆ. ❖



ಚಿತ್ರ ಮೂಲ: ಬ್ರೂಕ್‌ಹೆವನ್ ಪ್ರಯೋಗಾಲಯ

ಪರಿಸರಸ್ನೇಹಿ ಯೀಸ್ಟ್ ಶೋಧ

ನೇಸರ ಕಾಡನಕುಪ್ಪೆ

ಅಮೆರಿಕದ ಜಾರ್ಜಿಯಾ ಟೆಕ್ ಜೀವ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಹೊಸ ಬಗೆಯ ಯೀಸ್ಟ್ ಸಂಶೋಧಿಸಿದ್ದಾರೆ. ಈ ಯೀಸ್ಟ್ ಸೂರ್ಯನ ಬೆಳಕನ್ನು ಬಳಸಿಕೊಂಡು ಜೀವಿಸಬಲ್ಲ, ಶಕ್ತಿ ಉತ್ಪಾದಿಸಬಲ್ಲ ಗುಣವನ್ನು ಹೊಂದಿದೆ. ಜೊತೆಗೆ, ಪರಿಸರಮಾಲಿನ್ಯವನ್ನು ಕಡಿಮೆ ಮಾಡುವ ನಿಟ್ಟನಲ್ಲಿ ಮಾಲಿನ್ಯಕಾರಿ ವಸ್ತುಗಳನ್ನು ಕೊಳೆಯುವಂತೆ, ಆಹಾರ ಉತ್ಪನ್ನಗಳನ್ನು ಅತಿ ಬೇಗನೇ ತಯಾರಿಸುವಂತೆ ಕಾರ್ಯನಿರ್ವಹಿಸಬಲ್ಲ ಶಕ್ತಿಯನ್ನು ಈ ಹೊಸ ಬಗೆಯ ಯೀಸ್ಟ್ ಹೊಂದಿದೆ.

ನಾವು ಯೀಸ್ಟ್ (ಬುರುಗು) ಅನ್ನು ಎಲ್ಲೆಲ್ಲಿ ಬಳಸುತ್ತೇವೆ? ಬೇಕರಿಯಲ್ಲಿ ದೊರಕುವ ಬಗೆಬಗೆಯ ಬ್ರೆಡ್, ಕೇಕ್ ಹಾಗೂ ಕುರುಕಲು ತಿಂಡಿಗಳಲ್ಲಿ ಯೀಸ್ಟ್ ಯಥೇಚ್ಛವಾಗಿ ಬಳಕೆಯಾಗುತ್ತದೆ. ವೈನ್ ಇತ್ಯಾದಿ ಪಾನೀಯಗಳ ತಯಾರಿಯಲ್ಲೂ ಬಳಕೆಯಾಗುತ್ತದೆ. ಇವಿಷ್ಟೇ ಅಲ್ಲದೇ, ಔಷಧ ತಯಾರಿ, ನೀರಿನ ಮರುಬಳಕೆಯ ಪ್ರಕ್ರಿಯೆಯಲ್ಲೂ ಯೀಸ್ಟ್ ಪ್ರಧಾನ ಪಾತ್ರ ವಹಿಸುತ್ತದೆ.

ಯೀಸ್ಟ್‌ನ ಮುಖ್ಯ ಕೆಲಸ ಅದು ಸಂಪರ್ಕಕ್ಕೆ ಬರುವ ಯಾವುದೇ ಸಸ್ಯಮೂಲ ಅಥವಾ ಪ್ರಾಣಿಮೂಲ ಜೀವಕೋಶಗಳನ್ನು ಕುಸಿಯುವಂತೆ, ಕಳಿಯುವಂತೆ ಅಥವಾ ಕೊಳೆಯುವಂತೆ ಮಾಡುವುದು. ಇದರಿಂದ ನೊರೆ ಅಥವಾ ಬುರುಗು ಉತ್ಪತ್ತಿಯಾಗಿ ತಾನು ಇರುವ ಮಾಧ್ಯಮ ಮೃದುವಾಗುತ್ತದೆ. ಇದೇ ಕಾರಣಕ್ಕಾಗಿ ಬ್ರೆಡ್ ಇತ್ಯಾದಿ ಆಹಾರ ಉತ್ಪನ್ನಗಳಲ್ಲಿ ಯೀಸ್ಟ್ ಬಳಕೆಯಾಗುತ್ತದೆ. ಅಲ್ಲದೇ, ಆಹಾರ ಪದಾರ್ಥವು ಮೃದುವಾಗುವ, ಅಥವಾ ಪಾನೀಯವು ಬೇಗನೇ ಹುದುಗುವಂತೆ ಮಾಡಲು ಇದನ್ನು ಬಳಸುವುದು ಹೆಚ್ಚು.

ವಾಸ್ತವವಾಗಿ ಯೀಸ್ಟ್ ಒಂದು ಏಕಕೋಶ ಜೀವಿ. ಅಚ್ಚರಿಯೆಂದರೆ, ಭೂಮಿಯ ಮೇಲಿನ ಬಹುತೇಕ ಎಲ್ಲ ಜೀವಿಗಳಿಗೂ ಶಕ್ತಿ ಉತ್ಪಾದನೆಗೆ ಸೂರ್ಯನ ಬೆಳಕಿನ ಅಗತ್ಯವಿರುತ್ತದೆ. ಆದರೆ, ಯೀಸ್ಟ್ ಬೆಳಕಿನ ಅಗತ್ಯವೇ ಇಲ್ಲದೇ ಬದುಕುವ ಹಾಗೂ ಶಕ್ತಿ ಉತ್ಪಾದಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಬದುಕಲು ಬೇರೆ ಜೀವಿ ಅಥವಾ ಮಾಧ್ಯಮವನ್ನು ಅವಲಂಬಿಸುವ ಪರಾವಲಂಬಿ ಜೀವಿ ಇದಾಗಿದೆ. ಆದರೆ, ವಿಜ್ಞಾನಿಗಳು ಇದೀಗ ಸೃಷ್ಟಿಸಿರುವ ಯೀಸ್ಟ್‌ಗೆ ಬದುಕಲು ಒಂದು ಮಾಧ್ಯಮವೇ ಬೇಡ. ಅದಕ್ಕೆ ಶಕ್ತಿ ಮೂಲ ಕೇವಲ ಬೆಳಕು ಮಾತ್ರವೇ ಸಾಕು ಎನ್ನುತ್ತಿದ್ದಾರೆ.

ಏನಿದು ಸಂಶೋಧನೆ?

ಜಾರ್ಜಿಯಾ ಟೆಕ್ ಜೀವ ವಿಜ್ಞಾನ ಸಂಸ್ಥೆಯ ವಿಜ್ಞಾನಿಗಳು ಬ್ರೆಡ್ ತಯಾರಿಸಲು ಬಳಸುವ ಸಾಮಾನ್ಯ ಯೀಸ್ಟ್ ತೆಗೆದುಕೊಂಡು ಅದಕ್ಕೆ ಪ್ರಖರವಾದ ಸೂರ್ಯನ ಬೆಳಕನ್ನು ಹಾಯಿಸಿದ್ದಾರೆ. ಸರಳವಾಗಿ ಹೇಳಬೇಕೆಂದರೆ ಇದಿಷ್ಟೇ ಈ ಸಂಶೋಧನೆಯ ಸಾರಾಂಶ. ಸೂರ್ಯನ ಬೆಳಕು ಬೀಳುತ್ತಲೇ ಯೀಸ್ಟ್ ಅತಿ ಚುರುಕಾಗಿ ಕೆಲಸ ಮಾಡಿದೆ. ತನ್ನ ಕೊಳೆಸುವ ಶಕ್ತಿಯನ್ನು ದುಪಟ್ಟು ಮಾಡಿಕೊಂಡು ತಾನು ಸಂಪರ್ಕಕ್ಕೆ ಬರುವ ಬ್ರೆಡ್ ಮಾದರಿಯ ಹಿಟ್ಟನ್ನು ದುಪಟ್ಟು ವೇಗದಲ್ಲಿ ಬೇಯಿಸಲು ಹದವಾದ ರೂಪಕ್ಕೆ ಸಿದ್ಧಪಡಿಸಿದೆ.

ಇದು ಕೇವಲ ಆಹಾರ ಉತ್ಪಾದನೆಯ ವೇಗವನ್ನು ಹೆಚ್ಚಿಸುವುದು ಮಾತ್ರವಲ್ಲ; ಈ ವಿಜ್ಞಾನಿಗಳಿಗೆ ಈ ಹೊಸ ಸಂಶೋಧನೆ ಪರಿಸರ ಮಾಲಿನ್ಯ ನಿಯಂತ್ರಣಕ್ಕೆ ದೊಡ್ಡ ವರದಾನವಾಗಿ ಕಂಡಿದೆ. ವಿಜ್ಞಾನಿ ಆಂಟನಿ ಬರ್ನಟ ಅವರ ಪ್ರಕಾರ, 'ಭೂಮಿಯ ಮೇಲಿನ ಕೆಲವು ವಸ್ತುಗಳು ಯಾವುದೇ ಕಾರಣಕ್ಕೂ ಕೊಳೆಯುವುದಿಲ್ಲ. ಕೊಳೆತರೂ ಅದರ ವೇಗ ಬಹಳ ಕಡಿಮೆ. ಉದಾಹರಣೆಗೆ ಪ್ಲಾಸ್ಟಿಕ್. ಆದರೆ, ಈ ಹೊಸ ಯೀಸ್ಟ್ ಬಳಸಿಕೊಂಡು ಪ್ಲಾಸ್ಟಿಕ್ ಮಾದರಿಯ ವಸ್ತುಗಳನ್ನು ಬೇಗನೇ ಕೊಳೆಯುವಂತೆ ಮಾಡಬಹುದು. ಹಾಗಾಗಿ, ಪ್ಲಾಸ್ಟಿಕ್‌ನಿಂದ ಉಂಟಾಗುವ ಪರಿಸರ ಮಾಲಿನ್ಯಕ್ಕೆ ಪರಿಹಾರವೇ ಇಲ್ಲ ಎಂಬ ಕೊರಗು ಈ ಯೀಸ್ಟ್‌ನಿಂದ ದೂರವಾಗಲಿದೆ'

ಎಲ್ಲೆಲ್ಲಿ ಇದರ ಬಳಕೆ?

ಬಹುಮುಖ್ಯವಾಗಿ ಎರಡು ಮುಖ್ಯ ಕ್ಷೇತ್ರಗಳಲ್ಲಿ ಈ ಬಗೆಯ ಯೀಸ್ಟ್ ಬಳಸಬಹುದು. ಮೊದಲ ಕ್ಷೇತ್ರ ಆಹಾರ. ಬ್ರೆಡ್ ಮಾದರಿಯ ಆಹಾರದ ಹಿಟ್ಟಿನ ತಯಾರಿಗೆ ಈಗ ಕನಿಷ್ಠವೆಂದರೂ ಎರಡು ಗಂಟೆ ಕಾಲ ಬೇಕಿದೆ. ಈ ಸಮಯವನ್ನು ಕೇವಲ 15 ನಿಮಿಷಕ್ಕೆ ಕುಗ್ಗಿಸಬಹುದಾಗಿದೆ. ಹಾಗಾಗಿ, ಒಟ್ಟಾರೆ ಆಹಾರ ತಯಾರಿಯ ಸಮಯ ಕಡಿಮೆಯಾಗುತ್ತದೆ. ಎರಡನೆಯ ಕ್ಷೇತ್ರ ಕೈಗಾರಿಕೆ ಅಥವಾ ಪರಿಸರ ಮಾಲಿನ್ಯ ನಿಯಂತ್ರಣ. ಕೆಲವು ಪೆಟ್ರೋಲಿಯಂ ಉತ್ಪನ್ನಗಳ ತಯಾರಿಗೆ ಯೀಸ್ಟ್ ಇಂದು ಬಳಕೆಯಾಗುತ್ತಿದೆ. ಉದಾಹರಣೆಗೆ, ವಿವಿಧ ಪೆಟ್ರೋಲಿಯಂ ಉತ್ಪನ್ನಗಳ ವಿಭಜನೆಯ ಕೆಲಸ. ಈ ಕೆಲಸವೂ ಸಾಂಪ್ರದಾಯಿಕ ವಿಧಾನಕ್ಕಿಂತ ಅತಿ ಬೇಗನೇ ಆಗುತ್ತದೆ. ಇನ್ನು ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಪ್ಲಾಸ್ಟಿಕ್ ಮಾತ್ರವೇ ಅಲ್ಲದೇ, ಯಾವುದೇ ಬಗೆಯ ಹಾನಿಕಾರಕ ವಸ್ತುವನ್ನು ಕೊಳೆಯುವಂತೆ ಅಥವಾ ದುರ್ಬಲಗೊಳ್ಳುವಂತೆ ಮಾಡಬಲ್ಲ ಸಾಧ್ಯತೆ ಇದರಿಂದ ಸಿಗುತ್ತದೆ.

ವಿಶೇಷವಾದ ಸಿದ್ಧತೆಗಳು ಬೇಡ

ಈ ಯೀಸ್ಟ್ ತಯಾರಿಗೆ ವಿಶೇಷವಾದ ಸಿದ್ಧತೆಗಳು ಬೇಕಿಲ್ಲ. ಸೂರ್ಯನ ಬೆಳಕನ್ನು ನಿರ್ದಿಷ್ಟ ರೀತಿಯಲ್ಲಿ ಯೀಸ್ಟ್ ಮೇಲೆ ಬೀಳುವಂತೆ ಮಾಡುವುದು. ಈ ವಿಧಾನವನ್ನು ವಿಜ್ಞಾನಿಗಳು ನೀಡುತ್ತಾರೆ. ಬಳಿಕ ಉತ್ಪನ್ನವಾಗುವ ಯೀಸ್ಟ್ ಅನ್ನು ಬೇಕಾದ ಕೆಲಸಕ್ಕೆ ಬಳಸಿಕೊಳ್ಳುವುದು. 'ಪರಿಸರದಲ್ಲಿ ಈಗಾಗಲೇ ಯಥೇಚ್ಛವಾಗಿ ಲಭ್ಯವಿರುವ ಯೀಸ್ಟ್ ಬಳಸಿಕೊಂಡು ಪರಿಸರವನ್ನು ಕಾಪಾಡುವ ಕೆಲಸವನ್ನು ಮಾಡಬಹುದು. ಇದಕ್ಕಾಗಿ ಪ್ರತ್ಯೇಕವಾದ ಸಂಶೋಧನೆಯನ್ನು ಮಾಡಬೇಕಿಲ್ಲ. ಜೊತೆಗೆ, ಈಗಾಗಲೇ ಉತ್ಪಾದನೆ ವೆಚ್ಚ ಕಡಿಮೆ ಇರುವ ಪ್ಲಾಸ್ಟಿಕ್ ಬಳಕೆ ತ್ಯಜಿಸುವ ಅಗತ್ಯವೂ ಇಲ್ಲ. ಏಕೆಂದರೆ, ಅದನ್ನು ಕೊಳೆಯುವಂತೆ ಮಾಡಬಲ್ಲ ವಿಧಾನ ಸಿಕ್ಕಿದೆ' ಎಂದು ವಿಜ್ಞಾನಿ ಆಂಟನಿ ಬರ್ನಟ ವ್ಯಾಖ್ಯಾನಿಸಿದ್ದಾರೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

22) ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಓಮ್‌ನ ನಿಯಮಗಳನ್ನು ನಿರೂಪಿಸಿ (ಜೂನ್ 2019 ಪರೀಕ್ಷೆ)

2) ವಾಹಕ ರೋಧವು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆ ಎಂಬುದನ್ನು ವಿವರಿಸಿ

ಉತ್ತರ:– (1) ಓಮ್‌ನ ನಿಯಮ ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್ ಮಂಡಲದಲ್ಲಿನ ಲೋಹದ ತಂತಿಯ ನಡುವಿನ ವಿಭವಾಂತರ V ಯು ಅದರ ಮೂಲಕ ಹರಿಯುವ ವಿದ್ಯುತ್ ಪ್ರವಾಹಕ್ಕೆ ನೇರಾನುಪಾತದಲ್ಲಿ ಇರುತ್ತದೆ

(2) ವಾಹಕದ ರೋಧವು ಈ ಕೆಳಗಿನ ಅಂಶಗಳ ಮೇಲೆ ಅವಲಂಬಿಸಿದೆ

ಅ) ವಾಹಕದ ಉದ್ದ ಬ) ವಸ್ತುವಿನ ಪ್ರಾಕೃತಿಕ ಗುಣ

ಕ) ವಾಹಕದ ಅಡ್ಡ ಕೊಯ್ತ

ವಾಹಕದ ರೋಧವು ಅದರ ಉದ್ದಕ್ಕೆ ನೇರ ಅನುಪಾತದಲ್ಲಿರುತ್ತದೆ. ವಾಹಕದ ರೋಧವು ಅದರ ಅಡ್ಡ ಕೊಯ್ತಕ್ಕೆ ವಿಲೋಮ ಅನುಪಾತದಲ್ಲಿರುತ್ತದೆ.

23) ನ್ಯೂಲ್ಯಾಂಡ್ಸ್ ಅವರ ಅಷ್ಟಕಗಳ ನಿಯಮದ ಮಿತಿಗಳಾವುವು?

ಉತ್ತರ:– ನ್ಯೂಲ್ಯಾಂಡ್ಸ್ ಅವರ ಅಷ್ಟಕಗಳ ನಿಯಮದ ಮಿತಿಗಳು

1) ಅಷ್ಟಕಗಳ ನಿಯಮವು ಕೇವಲ ಕ್ಯಾಲ್ಸಿಯಂ ಮಾತ್ರ ಅನ್ವಯಿಸುತ್ತದೆ., ಕ್ಯಾಲ್ಸಿಯಂ ನಂತರದ ಪ್ರತಿ ಎಂಟನೇ ಧಾತುವಿನ ಗುಣಗಳು ಮೊದಲನೇ ಧಾತುವಿನ ಗುಣಗಳಂತೆ ಇರುವುದಿಲ್ಲ

2) ನ್ಯೂಲ್ಯಾಂಡ್ಸ್ ರವರು ನಿಸರ್ಗದಲ್ಲಿ ಕೇವಲ 56 ಧಾತುಗಳಿವೆ ಮತ್ತು ಭಾವಿಷ್ಯದಲ್ಲಿ ಯಾವುದೇ ಧಾತುಗಳು ಆವಿಷ್ಕಾರವಾಗುವುದಿಲ್ಲ ಎಂದು ಊಹಿಸಿದ್ದರು, ಆದರೆ ನಂತರದ ದಿನಗಳಲ್ಲಿ ಹಲವಾರು ಧಾತುಗಳು ಆವಿಷ್ಕರಿಸಲಾಯಿತು.

3) ತನ್ನ ಕೋಷ್ಟಕವನ್ನು ಸರಿಹೊಂದಿಸಲು ನ್ಯೂಲ್ಯಾಂಡ್ಸ್‌ರವರು ಒಂದೇ ಸ್ಥಳದಲ್ಲಿ ಎರಡು ಧಾತುಗಳನ್ನು ಇರಿಸಿದರು.

ಅಥವಾ

ಜೀವಿಗಳು ಹೆಚ್ಚು ಸಂಕೀರ್ಣವಾದಂತೆಲ್ಲ ಅಂಗಾಂಶಗಳ ವೈಶಿಷ್ಟ್ಯತೆಯು ಹೆಚ್ಚುತ್ತಾ ಹೋಗುತ್ತದೆ ಈ ಸಮಸ್ಯೆಗೆ ಅನೇಕ ಬಹುಕೋಶೀಯ ಜೀವಿಗಳು ಯಾವ ರೀತಿಯ ಉತ್ತರವನ್ನು ಕಂಡುಕೊಂಡಿವೆ?

ಉತ್ತರ:– ಜೀವಿಗಳು ಹೆಚ್ಚು ಸಂಕೀರ್ಣವಾದಂತೆಲ್ಲ ಅಂಗಾಂಶಗಳ ವೈಶಿಷ್ಟ್ಯತೆಯು ಹೆಚ್ಚುತ್ತಾ ಹೋಗುತ್ತದೆ ಈ ಸಮಸ್ಯೆಗೆ ಅನೇಕ ಬಹುಕೋಶೀಯ ಜೀವಿಗಳು ಒಂದು ಉತ್ತರವನ್ನು ಕಂಡುಕೊಂಡಿವೆ. ಅದೆಂದರೆ ಸಂತಾನೋತ್ಪತ್ತಿ ನಡೆಸದ ದೇಹದಲ್ಲಿನ ಜೀವಕೋಶಗಳಿಗೆ ಹೋಲಿಸಿದರೆ ಕೇವಲ ಅರ್ಧದಷ್ಟು ಸಂಖ್ಯೆಯ ಕ್ರೋಮೋಸೋಮ್‌ಗಳನ್ನು ಮತ್ತು ಅರ್ಧದಷ್ಟು ಪ್ರಮಾಣದ ಡಿಎನ್‌ಎಯನ್ನು ಹೊಂದಿರುವ ಭಿನ್ನವಾದ ವಂಶಾವಳಿಯನ್ನು ಹೊಂದಿರುವ ಜೀವಕೋಶಗಳನ್ನು ವಿಶಿಷ್ಟ ಅಂಗಗಳಲ್ಲಿ ಹೊಂದುವುದು. ಮಿಯಾಸಿಸ್ ಕೋಶವಿಭಜನೆಯ ಮೂಲಕ ಇದನ್ನು ಸಾಧಿಸಲಾಗುತ್ತದೆ. ಲೈಂಗಿಕ ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ಜೀವಿಗಳ ಲಿಂಗ ಕೋಶಗಳು ಸಂಯೋಜಿಸಿ ಹೊಸ ಜೀವಿ ಉಂಟಾಗುತ್ತದೆ. ಇದರ ಪರಿಣಾಮವಾಗಿ ಹೊಸ ಪೀಳಿಗೆಯಲ್ಲಿ ಕ್ರೋಮೋಸೋಮ್‌ಗಳ ಸಂಖ್ಯೆಯಲ್ಲಿ ಮತ್ತು ಡಿಎನ್‌ಎ ಪ್ರಮಾಣದಲ್ಲಿ ಮರುಹೊಂದಾಣಿಕೆ ಉಂಟಾಗುತ್ತದೆ.

24) ಜೀವ ವಿಕಾಸ ಎಂದರೇನು? ಜೀವ ವಿಕಾಸಕ್ಕೆ ಆಧಾರಗಳನ್ನು ವಿವರಿಸಿ (ಮಾರ್ಚ್–2020)

ಉತ್ತರ:– ಸರಳ ರೀತಿಯ ಜೀವಿಗಳು ಸಂಕೀರ್ಣ ಜೀವಿಗಳಾಗಿ ದೀರ್ಘಾವಧಿಯಲ್ಲಿ ರೂಪಾಂತರಗೊಳ್ಳುವ ವಿದ್ಯಮಾನಕ್ಕೆ ಜೀವ ವಿಕಾಸ ಎನ್ನುವರು

ಜೀವ ವಿಕಾಸಕ್ಕೆ ಆಧಾರಗಳು

ಅ) ಸಮರೂಪಿ ಅಂಗ:– ರಚನೆ ಒಂದೇ ಆಗಿದ್ದು ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸುವ ಅಂಗಗಳಿಗೆ ಸಮರೂಪಿ ಅಂಗಗಳು ಎನ್ನುವರು. ವಿವಿಧ ಪ್ರಭೇದಗಳಲ್ಲಿಯೆ ಜೀವಿಗಳು ಒಂದೇ ಪೂರ್ವಜನಿಂದ ಉಗಮವಾಗಿರಬಹುದು ಎಂಬ ಮಾಹಿತಿಯನ್ನು ಒದಗಿಸುತ್ತವೆ.

ಬ) ಕಾರ್ಯಾನುರೂಪಿ ಅಂಗಗಳು:– ಬೇರೆ ಬೇರೆ ರಚನೆಗಳನ್ನು ಹೊಂದಿದ್ದು ಒಂದೇ ಕಾರ್ಯವನ್ನು ನಿರ್ವಹಿಸುವ ಅಂಗಗಳಿಗೆ ಕಾರ್ಯಾನುರೂಪಿ ಅಂಗಗಳು ಎನ್ನುವರು. ವಿವಿಧ ಜೀವಿಗಳಲ್ಲಿ ಅಂಗಗಳ ಕಾರ್ಯ ಒಂದೇ ಆಗಿದ್ದರೂ ಒಂದೇ ಪೂರ್ವಜನಿಂದ ವಿಕಾಸವಾಗದೇ ಇರಬಹುದು.

ಕ) ಪಳೆಯುಳಿಕೆ:– ಹಿಂದೆ ಅಸ್ತಿತ್ವದಲ್ಲಿದ್ದ ಅಳಿದು ಹೋದ ಜೀವಿಗಳ ಅವಶೇಷಗಳನ್ನು ಪಳಿಯುಳಿಕೆ ಎನ್ನುವರು. ಇವು ಅಳಿದುಹೋದ ಜೀವಿಗಳ ಕುರಿತ ಪುರಾವೆಯಾಗಿದೆ. ಹಾಗೂ ವಿವಿಧ ಜೀವಿಗಳ ಪ್ರಭೇದಗಳ ನಡುವಣ ಸಂಬಂಧವನ್ನು ತಿಳಿಸುತ್ತದೆ. ಅಲ್ಲದೇ ಜೀವಿಗಳ ವಿಕಾಸದ ಕಾಲಾನುಕ್ರಮ ಮತ್ತು ವರ್ಗೀಕರಣವನ್ನು ಮಾಡಲು ಸಹಾಯ ಮಾಡುತ್ತವೆ..

25) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಕೊಟ್ಟಿರುವ ಬೀಜದಳದ ಚಿತ್ರದಲ್ಲಿ ಮತ್ತು ಎಂದು ಗುರುತಿಸಲಾದ ಭಾಗಗಳು ಕ್ರಮವಾಗಿ .... (ಮಾರ್ಚ್ 2020)



ಎ) ಹಣ್ಣು ಕಾಂಡ

ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು

ಸಿ) ದ್ವಿತೀಯ ಬೇರು ಮತ್ತು ಪ್ರಥಮ ಕಾಂಡ

ಡಿ) ಮೊಗ್ಗು ಮತ್ತು ಎಲೆ

ಉತ್ತರ:– (ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು

2) ಶಾರ್ಟ್ ಸರ್ಕ್ಯೂಟ್ ಸಂದರ್ಭದಲ್ಲಿ ಮಂಡಲದಲ್ಲಿನ ವಿದ್ಯುತ್ ಪ್ರವಾಹವು..................

ಎ) ಗಣನೀಯವಾಗಿ ಕಡಿಮೆಯಾಗುತ್ತದೆ.

ಬಿ) ಬಹಳ ಹೆಚ್ಚಾಗಿರುತ್ತದೆ.

ಸಿ) ಒಮ್ಮೆ ಹೆಚ್ಚು ಒಮ್ಮೆ ಕಡಿಮೆ ಆಗುತ್ತದೆ

ಡಿ) ವಿದ್ಯುತ್ ಸ್ಥಿರವಾಗಿರುತ್ತದೆ

ಉತ್ತರ:–(ಬಿ) ಬಹಳ ಹೆಚ್ಚಾಗಿರುತ್ತದೆ.

(ಮುಂದುವರಿಯುವುದು..........)

II PUC CHEMISTRY

REVISION and MODEL QUESTIONS

15. What is Lucas reagent? Between primary and tertiary alcohols, which one of these will react faster with Lucas reagent?

Ans:-Lucas reagent is Conc. HCl + $ZnCl_3$. Between primary and tertiary alcohols, the one that will react faster with Lucas reagent is tertiary alcohol.

16. A carboxylic acid is treated with alcohol in presence of conc. H_2SO_4. Name the reaction. Give its general equation.

Ans:- A carboxylic acid is treated with alcohol in presence of conc. H_2SO_4.

The reaction is Esterification .

Give its general equation is –

$$R\text{-}COOH + R^1OH \rightarrow RCOOR^1 + H_2O$$

17. What are food preservatives? Give an example.

Ans:- Food preservatives are the additives added to food to prevent spoilage of food. Eg: Table Salt or sugar or sodium benzoate (any one can be written).

18. Give one example each for – i) antiseptic ii) synthetic detergent

Ans:-. One example each for –

i) antiseptic - dettol

ii) synthetic detergent – Sodium lauryl sulphate

19. Describe the three steps involved in the leaching of bauxite to get pure alumina (equations not expected).

Ans:- The three steps involved in the leaching of bauxite to get pure alumina are –

(i) Bauxite is concentrated by digesting the powdered ore in a concentrated solution of sodium hydroxide at 473 – 573 K and 35 bar pressure. Al_2O_3 is leached as sodium aluminate.

(ii) Aluminate solution is neutralised by passing CO_2. Hydrated Al_2O_3 is precipitated by seeding.

(iii) Hydrated Al_2O_3 is filtered, dried and heated to get pure Al_2O_3.

20. White phosphorus is heated with excess of dry chlorine to get X. X on hydrolysis finally forms an oxoacid of phosphorous Y. What are X and Y? What is the basicity of the acid Y?

Ans:-. White phosphorus is heated with excess of dry chlorine to get X. X on hydrolysis finally forms an oxoacid of phosphorous Y.

Here, X is PCl_5

Y is H_3PO_4

The basicity of the acid Y is 3.

21. Describe the preparation of ozonised oxygen with an equation. Name the oxidized product obtained when ozone reacts with lead sulphide.

Ans:-. Preparation of ozonised oxygen –

A slow dry stream of oxygen is passed through a silent electrical discharge. Some oxygen gets converted into ozone.

$$3O_2 \rightarrow 2O_3$$

The oxidized product obtained when ozone reacts with lead sulphide is lead sulphate.

22. Complete the following equations:

i) $2F_2 + 2H_2O \rightarrow$ ii) $H_2S + Cl_2 \rightarrow$

iii) $8NH_3$ (excess) + $3Cl_2 \rightarrow$

Ans:-. i) $2F_2 + 2H_2O \rightarrow 4HF + O_2$

ii) $H_2S + Cl_2 \rightarrow 2HCl + S$

iii) $8NH_3$ (excess) $+ 3Cl_2 \rightarrow 6NH_4Cl + N_2$

23. Name the metal of the 1st row transition series that (i) has maximum number of unpaired electrons in its ground state. (ii) has zero spin only magnetic moment in its +2 oxidation state. iii) exhibits maximum number of oxidation states.

Ans:. . The metal of the 1st row transition series that

i) has maximum number of unpaired electrons in its ground state is chromium.

ii) has zero spin only magnetic moment in its +2 oxidation state is zinc.

iii) exhibits maximum number of oxidation states is manganese.

24. What is packing efficiency in a crystal? Draw the unit cell of a simple cubic lattice and calculate the packing efficiency in a simple cubic lattice.

Ans:- Packing efficiency in a crystal is the percentage of total space filled by the particles in a crystal.

The unit cell of a simple cubic lattice –



Edge length or side of a cube = a, radius of a particle = r

Particles touch each other along the edge,

$\therefore a = 2r$, volume of the cell $= a^3 = 8r^3$

Simple unit cubic cell contains only 1 atom, volume occupied $= \frac{4}{3}\pi r^3$

$$\text{Packing efficiency} = \frac{\text{Volume of one atom}}{\text{Volume of the unit cell}} \times 100\%$$

$$= \frac{\frac{4}{3}\pi r^3}{8r^3} \times 100 = 52.4\%$$

25. Write ionic equations for the reaction of dichromate ions with i) hydroxyl ions ii) Fe^{+2} ions in acidic medium

In which one of the above two reactions will the oxidation number of chromium remains unchanged?

Ans:- Ionic equations for the reaction of dichromate ions with

i) hydroxyl ions

$$Cr_2O_7^{2-} + 2OH^- \rightarrow 2CrO_4^{2-} + H_2O$$

ii) Fe^{+2} ions in acidic medium

$$Cr_2O_7^{2-} + 14H^+ + 6Fe^{2+} \rightarrow 2Cr^{3+} + 6Fe^{3+} + 7H_2O$$

The oxidation number of chromium remains unchanged in equation (i).

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಬರ– ರಾಜ್ಯದಾದ್ಯಂತ ಹೋರಾಟ: ಅಶೋಕ

ಸುಧಾ, ಮಯೂರ ಓದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ಜನರಿಗೆ ಕರ್ನಾಟಕ ಸರ್ಕಾರ ನಯಾಪೈಸೆ ಪರಿಹಾರ ನೀಡಿಲ್ಲ. ಇದರ ವಿರುದ್ಧ ರಾಜ್ಯದಾದ್ಯಂತ ಪ್ರಬಲ ಹೋರಾಟ ಮಾಡಲಾಗುವುದು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾದ ಬಳಿಕ ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಕಷ್ಟದಲ್ಲಿರುವ ರೈತರಿಗೆ ₹100 ಕೋಟಿ, ಮುಲ್ಲಾಗಳಿಗೆ ₹10 ಸಾವಿರ ಕೋಟಿ ಕೊಡಲು ಮುಂದಾಗಿದ್ದಾರೆ. ರೈತರ ಕಣ್ಣಿಗೆ ಸುಣ್ಣ ಎಂಬಂತೆ ಆಗಿದೆ. ಇಂತಹ ಆಟ ಬಹಳ ದಿನ ನಡೆಯಲ್ಲ' ಎಂದರು.

'ವಿ.ಸೋಮಣ್ಣ ಅಸಮಾಧಾನ ಪ್ರಕರಣ ಸುಖಾಂತ್ಯ ಆಗಿದೆ. ಅವರು ನಮ್ಮ ಜತೆಗೆ ನಿರಂತರ ಸಂಪರ್ಕದಲ್ಲಿದ್ದಾರೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಜತೆಗೆ ಪಕ್ಷದ ವರಿಷ್ಠರು ಚರ್ಚಿಸಿದ್ದಾರೆ. ಅವರ ಜತೆಗೆ ಮತ್ತೊಂದು ಸುತ್ತಿನ ಚರ್ಚೆ ಆಗಬೇಕಿದೆ' ಎಂದು ಅಶೋಕ ಹೇಳಿದರು.

'ಹಾವೇರಿ ಅತ್ಯಾಚಾರ ಪ್ರಕರಣ ಮುಚ್ಚಿ ಹಾಕಲು ಕಾಂಗ್ರೆಸ್ ಸರ್ಕಾರ ಪ್ರಯತ್ನಿಸುತ್ತಿದೆ. ಪ್ರಕರಣಕ್ಕೆ ಸಂಬಂಧವಿಲ್ಲದವರನ್ನು ಬಂಧಿಸಲಾಗುತ್ತಿದೆ. ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು' ಎಂದು ಅವರು ಆಗ್ರಹಿಸಿದರು.

'ಕೆ.ಜೆ.ಹಳ್ಳಿ, ಡಿ.ಜೆ.ಹಳ್ಳಿ ಗಲಭೆ ಪ್ರಕರಣವನ್ನು ವಾಪಸ್ ಪಡೆಯಲು ಕಾಂಗ್ರೆಸ್ ಸರ್ಕಾರ ಸಂಚು ನಡೆಸುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಇದರ ವಿರುದ್ಧ ಹೋರಾಟ ಮಾಡುತ್ತೇವೆ' ಎಂದು ಅವರು ಹೇಳಿದರು.

ಹೆಗಡೆ ಹೇಳಿಕೆ ಸರಿಯಲ್ಲ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಂಸದ ಅನಂತಕುಮಾರ್ ಹೆಗಡೆ ಅವರು ಏಕವಚನದಲ್ಲಿ ಟೀಕಿಸಿರುವುದು ಸರಿಯಲ್ಲ. ಆದರೆ, ಎಲ್ಲರ ವಿರುದ್ಧ ಏಕವಚನ ಬಳಸುವ ಸಿದ್ದರಾಮಯ್ಯ ಅವರೂ ಪಾಠ ಕಲಿಯಬೇಕಿದೆ' ಎಂದು ಅಶೋಕ ಹೇಳಿದರು.

1,500 ಗ್ರಾಮ ಲೆಕ್ಕಾಧಿಕಾರಿಗಳ ನೇಮಕಕ್ಕೆ ಕ್ರಮ

ಪ್ರಜಾವಾಣಿ ವಾರ್ತೆ

ರಾಯಚೂರು: 'ವಿವಿಧ ಜಿಲ್ಲೆಗಳಲ್ಲಿ ಖಾಲಿ ಇರುವ 1,500 ಗ್ರಾಮ ಲೆಕ್ಕಾಧಿಕಾರಿ ಹುದ್ದೆಗಳನ್ನು ಶೀಘ್ರದಲ್ಲೇ ಭರ್ತಿ ಮಾಡಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.



ಕೃಷ್ಣ ಬೈರೇಗೌಡ

'ಸಂಪುಟ ಸಭೆಯಲ್ಲಿ ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡು, ಕ್ಷಿಪ್ರಾವಧಿಯಲ್ಲಿ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು' ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'357 ಸರ್ವೆಯರ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ನಡೆಯುತ್ತಿದೆ. ಇನ್ನೂ 590 ಹುದ್ದೆಗಳ ನೇಮಕಾತಿಗೆ ಸಂಪುಟ ಸಭೆಯಲ್ಲಿ ಅನುಮತಿ ಪಡೆಯಲಾಗುವುದು' ಎಂದರು.

'ನೇಮಕಾತಿಯಾದ 750 ಸರ್ವೆಯರ್‌ಗಳಿಗೆ ತರಬೇತಿ ಕೊಡಲಾಗಿದೆ. ಅವರು ಕಾರ್ಯಾರಂಭ ಮಾಡಲಿದ್ದಾರೆ. ಇದರಿಂದ ಕಂದಾಯ ಜಮೀನುಗಳ ಸಮೀಕ್ಷೆ ಕಾರ್ಯ ಸುಲಭವಾಗಲಿದೆ' ಎಂದು ತಿಳಿಸಿದರು.

ಕುನೊ: 10ನೇ ಚೀತಾ ಸಾವು

ಭೋಪಾಲ್ (ಪಿಟಿಐ): ನಮೀಬಿಯಾದಿಂದ ತರಲಾಗಿದ್ದ ಮತ್ತೊಂದು ಚೀತಾ ಮಧ್ಯ ಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಮಂಗಳವಾರ ಮೃತಪಟ್ಟಿದೆ. ಅದಕ್ಕೆ ಶೌರ್ಯ ಎಂದು ಹೆಸರಿಡಲಾಗಿತ್ತು.

ಚೀತಾ ಸಾವಿಗೆ ಕಾರಣ ತಕ್ಷಣಕ್ಕೆ ತಿಳಿದುಬಂದಿಲ್ಲ. ಮರಣೋತ್ತರ ಪರೀಕ್ಷೆಯ ಬಳಿಕವಷ್ಟೇ ಈ ಕುರಿತು ತಿಳಿಯಲು ಸಾಧ್ಯ ಎಂದು ಅರಣ್ಯ ಇಲಾಖೆ ಪ್ರಕಟಣೆ ತಿಳಿಸಿದೆ.

'ಚೀತಾ ಅಸ್ವಸ್ಥ ಮತ್ತು ನಿಶ್ಶಕ್ತಿಯಿಂದ ಬಳಲುತ್ತಿರುವುದನ್ನು ಬೆಳಿಗ್ಗೆ 11 ಗಂಟೆ ಸುಮಾರಿಗೆ ನಮ್ಮ ತಂಡ ಗಮನಿಸಿತು. ಕೂಡಲೇ ಚಿಕಿತ್ಸೆ ನೀಡಲು ಆರಂಭಿಸಲಾಯಿತು. ಆದರೆ ಅದು ಫಲಿಸಲಿಲ್ಲ. ಮಧ್ಯಾಹ್ನ 3.17 ಗಂಟೆಗೆ ಚೀತಾ ಮೃತಪಟ್ಟಿತು' ಎಂದು ಪ್ರಕಟಣೆ ತಿಳಿಸಿದೆ.

ಕಳೆದ ವರ್ಷದಿಂದ ಇಲ್ಲಿಯವರೆಗೆ ಕುನೊದಲ್ಲಿ ಒಟ್ಟು 10 ಚೀತಾಗಳು ಮೃತಪಟ್ಟಿವೆ. ಅವುಗಳಲ್ಲಿ ಏಳು ವಯಸ್ಕ ಚೀತಾಗಳಾಗಿದ್ದರೆ, ಮೂರು ಮರಿ ಚೀತಾಗಳು. ಕಳೆದ ವರ್ಷ ಆಗಸ್ಟ್ 2ರಿಂದ ಈಚೆ ಚೀತಾ ಮೃತಪಟ್ಟಿತ್ತು.

ಶೌರ್ಯ ಚೀತಾವನ್ನು ಮೊದಲ ಬ್ಯಾಚ್‌ನಲ್ಲಿ ಇಲ್ಲಿಗೆ ತರಲಾಗಿತ್ತು. ಇದರ ಸಾವಿನ ಬಳಿಕ, ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಒಟ್ಟು 17 ಚೀತಾಗಳು (13 ವಯಸ್ಕ ಮತ್ತು 4 ಮರಿಗಳು) ಇವೆ.

'ಕರ್ಮಯೋಗಿ'ಗೆ ಅನುಮತಿ ಬೇಕಿಲ್ಲ

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರಿ ನೌಕರರು ಮಿಷನ್ ಕರ್ಮಯೋಗಿ ಕೋರ್ಸ್ ಅನ್ನು ಆನ್‌ಲೈನ್‌ನಲ್ಲಿ ಕಲಿಯಲು ಯಾವುದೇ ಅನುಮತಿ ಪಡೆಯುವ ಅವಶ್ಯಕತೆ ಇಲ್ಲ' ಎಂದು ಸಿಬ್ಬಂದಿ ಸಚಿವಾಲಯ ಹೇಳಿದೆ.

'ಸಚಿವಾಲಯಗಳು, ಇಲಾಖೆಗಳು, ಇತರ ಸಂಸ್ಥೆಗಳಲ್ಲಿನ ಸರ್ಕಾರಿ ನೌಕರರು ಐಜಿಒಟಿ ಕರ್ಮಯೋಗಿ (ಸಮಗ್ರ ಸರ್ಕಾರಿ ಆನ್‌ಲೈನ್ ತರಬೇತಿ) ಲಭ್ಯ ಕೋರ್ಸ್‌ಗಳಿಗೆ ದಾಖಲಾಗಲು ಅನುಮತಿಯ ಅಗತ್ಯವಿದೆ' ಎಂದು ಹಿಂದಿನ ಆದೇಶ ನಿರ್ದೇಶನವನ್ನು ನಮೂದಿಸಿತ್ತು. ಇದರ ಬೆನ್ನಲ್ಲೇ ಸಚಿವಾಲಯ ಈ ಸ್ಪಷ್ಟನೆ ನೀಡಿದೆ.

ರಾಜಸ್ಥಾನ: ಇ.ಡಿ ಶೋಧ

ಜೈಪುರ (ಪಿಟಿಐ): ರಾಜಸ್ಥಾನದ ಮಾಜಿ ಸಚಿವ ಮಹೇಶ್ ಜೋಶಿ ಹಾಗೂ ಇತರರಿಗೆ ಸೇರಿದ ತಾಣಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಮಂಗಳವಾರ ಶೋಧ ನಡೆಸಿದರು.

ಜಲಜೀವನ್ ಮಿಷನ್ ಹಗರಣಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣ ಕುರಿತಂತೆ ಈ ಶೋಧ ಕಾರ್ಯ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಕೇಂದ್ರದ ಯೋಜನೆಗೆ ಸಂಬಂಧಿಸಿ ಇ.ಡಿ ಅಧಿಕಾರಿಗಳು ಕಳೆದ ವರ್ಷ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸುಬೋಧ್ ಅಗರವಾಲ್ ಸೇರಿ ಹಲವರಿಗೆ ಸೇರಿದ ತಾಣಗಳಲ್ಲಿ ಶೋಧ ನಡೆಸಿದ್ದರು.

ಇ–ಆಡಳಿತ ಕೇಂದ್ರ CeG CENTRE FOR e-GOVERNANCE e-Enabling Government

ಕೊಠಡಿ ಸಂಖ್ಯೆ: 141, ಒಂದನೇ ಮಹಡಿ, ಎರಡನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು–560001. ದೂ: 080–22371090

ಸಂಖ್ಯೆ: CEG 20011/5/2020-CeG-ADMIN ದಿನಾಂಕ: 16.01.2024

ಅಧಿಸೂಚನೆ

ಇ–ಆಡಳಿತ ಕೇಂದ್ರದ ಉಪಯೋಗಕ್ಕಾಗಿ **ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ** ನೊಂದಾಯಿತ ಸಂಸ್ಥೆಗಳಿಂದ ಪಡೆದುಕೊಳ್ಳಲು ಟೆಂಡರ್ ಪ್ರಕಟಣೆಯನ್ನು ದಿನಾಂಕ: 11.01.2024ರಂದು ಪ್ರಕಟಿಸಲಾಗಿದೆ. ಹೆಚ್ಚಿನ ವಿವರಗಳು **https://kppp.karnataka.gov.in** ದಲ್ಲಿ ಲಭ್ಯವಿದೆ.

ಸಹಿ/– ಆಡಳಿತಾಧಿಕಾರಿಗಳು, ಇ–ಆಡಳಿತ ಕೇಂದ್ರ

DIPR/CP/YC/3056/2023-24

CENTRAL SLIVER PLANT
KHADI AND VILLAGE INDUSTRIES COMMISSION
Ministry of Micro, Small & Medium Enterprises, Govt. of India
No.9, 10 &11, KELAKOTE INDUSTRIAL AREA,CHITRADURGA -577 501. Karnataka State, Mob: 9448455466

No:KNT/CSP/Chitradurga/Refurbishment/Architecture Engg/2023-24 Dt:16.01.2024

NOTIFICATION

Applications from candidates with at least ten years of experience as architects in the fields of industry, multi-story buildings, temples, etc. are being accepted in order to hire them as consultants for the CSP Chitradurga Plant's facelift. For the aim of creating the front elevation, estimate, plan, and 3D drawing; creating the tender documents; and completing the tender. Additionally, CSP Chitradurga's whole face-lifting operation to be supervised.

The interested candidates with fulfilling the eligibility criteria cell submit their applications **on or before 23.01.2024.**

Sd/- Project Manager, CSP, KVIC, CHITRADURGA

ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ
ಆಯುಕ್ತರ ಕಾರ್ಯಾಲಯ, 7ನೇ ಮಹಡಿ, ಕೆ.ಹೆಚ್.ಬಿ ಸಂಕೀರ್ಣ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009

ಸಂಖ್ಯೆ: WDD/JDH/BT-FPOs/GL/05/2023–24. ದಿನಾಂಕ: 10.01.2024

ರೈತ ಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕುಗಳ 100 ರೈತ ಉತ್ಪಾದಕರ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ ರೂ.20.00ಲಕ್ಷ ವರೆಗಿನ ಸಾಲಕ್ಕೆ ಶೇ.4% ರ ಬಡ್ಡಿ ಸಹಾಯಧನ ನೀಡುವ ಕುರಿತು.

ಜಲಾನಯನ ಅಭಿವೃದ್ಧಿ ಇಲಾಖೆ ವತಿಯಿಂದ ರಾಜ್ಯದ ಹಿಂದುಳಿದ ತಾಲ್ಲೂಕಿನಲ್ಲಿ ಕಂಪನಿ ಕಾಯ್ದೆ 2013 ಅಡಿಯಲ್ಲಿ ನೋಂದಾಯಿಸಿ, ಕನಿಷ್ಠ 600 ರೈತ/ಷೇರುದಾರರನ್ನು ಹೊಂದಿ, 2022–23ನೇ ಸಾಲಿನಲ್ಲಿ ವಾರ್ಷಿಕ ಕನಿಷ್ಠ ರೂ.20.00 ಲಕ್ಷಗಳ ವರೆಗೆ ವ್ಯಾಪಾರ ವಹಿವಾಟು ಮಾಡಿ, ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳ ಮೂಲಕ ದಿನಾಂಕ : 01.04.2023ರಿಂದ ಗರಿಷ್ಠ ರೂ. 20.00 ಲಕ್ಷಗಳ ವರೆಗೆ ರೈತ ಉತ್ಪಾದಕರ ಸಂಸ್ಥೆ (FPO) ಗಳು ಪಡೆದ ಸಾಲಕ್ಕೆ ಶೇ.4% ರಷ್ಟು ಬಡ್ಡಿ ಸಹಾಯಧನ ನೀಡಲು ರೈತ ಉತ್ಪಾದಕರ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿರುತ್ತದೆ. ಹಿಂದುಳಿದ ತಾಲ್ಲೂಕುಗಳ ಆಸಕ್ತಿಯುಳ್ಳ ಅರ್ಹ ರೈತ ಉತ್ಪಾದಕರ ಸಂಸ್ಥೆಗಳು ಅರ್ಜಿಯನ್ನು ಜಲಾನಯನ ಅಭಿವೃದ್ಧಿ ಇಲಾಖೆಯ ಪೋರ್ಟಲ್ ನಲ್ಲಿ ಅಥವಾ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರ/ಉಪ ಕೃಷಿ ನಿರ್ದೇಶಕರ/ಸಹಾಯಕ ಕೃಷಿ ನಿರ್ದೇಶಕರ/ರೈತ ಸಂಪರ್ಕ ಕೇಂದ್ರದ ಕಛೇರಿಗಳಲ್ಲಿ ದೊರೆಯುವ ಅರ್ಜಿಯನ್ನು ಭರ್ತಿಮಾಡಿ ಕೋರಿರುವ ದಾಖಲೆಗಳೊಂದಿಗೆ ಜಿಲ್ಲೆಗಳಲ್ಲಿ ನಿಗದಿ ಪಡಿಸಿರುವ ದಿನಾಂಕದ ಒಳಗಾಗಿ ಜಂಟಿ ಕೃಷಿ ನಿರ್ದೇಶಕರು ರವರ ಕಛೇರಿಯಲ್ಲಿ ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಸಹಿ/– ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು

DIPR/CP/3064/Zenkar/2023-24

ಅಲ್ಪಸಂಖ್ಯಾತರ ನಿರ್ದೇಶನಾಲಯ
ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಅಸಂನಿ/ಅ/ಆಯವ್ಯಯ ಕಂಡಿಕೆ–173(ಸಿ.ಎ)/ಸಿಆರ್–24/2023–24 ದಿನಾಂಕ: 16–01–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿಗೆ CLAT/CA FOUNDATION ಹಾಗೂ ಇತರೆ ಪ್ರವೇಶ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಅಲ್ಪಸಂಖ್ಯಾತರ ವಸತಿ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ತರಬೇತಿ ನೀಡಲು ಮಾನ್ಯತೆ ಪಡೆದ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್‌ನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

1) ಟೆಂಡರ್ ಪ್ರಕಟಣೆಯ ದಿನಾಂಕ: **16.01.2024.** 2) ಟೆಂಡರ್ ಮೊತ್ತ: **ರೂ.400.00 ಲಕ್ಷಗಳು.** 3) ಇಎಂಡಿ ಮೊತ್ತ: **ರೂ. 6 ಲಕ್ಷಗಳು.** 4) ಪೂರ್ವಭಾವಿ ಸಭೆ: **23.01.2024 ಬೆಳಿಗ್ಗೆ 11:30 ಗಂಟೆಗೆ.** 5) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: **31.01.2024 ಸಂಜೆ 5:30 ಗಂಟೆಯೊಳಗೆ.** 6) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **02.02.2024 ಬೆಳಿಗ್ಗೆ 11:30 ಗಂಟೆಗೆ.** 7) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **05.02.2024 ಬೆಳಿಗ್ಗೆ 11:30 ಗಂಟೆಗೆ.** 8) ಟೆಂಡರ್ ತೆರೆಯುವ ಸ್ಥಳ ಮತ್ತು ಸಂಪರ್ಕಿಸುವ ವಿಳಾಸ: ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್‌ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು–560052. 9) ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–22535902/ 080–22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ https://dom.karnataka.gov.in ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/– ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/3019/ಎಂಎಎ/2023–24

ಕರ್ನಾಟಕ ನೀರಾವರಿ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ಕನೀನಿನಿ ಎಂ.ಬಿ.ಸಿ ವಿಭಾಗ ನಂ. 1, ಗದ್ದನಕೇರಿ ಕ್ಯಾಂಪ್:ಬಾಗಲಕೋಟೆ.ಕಚೇರಿ ದೂರವಾಣಿ ಸಂ:08354–297046, ಇ–ಮೇಲ್: eeknnlbgk@gmail.com

ಸಂ: ಕನೀನಿನಿ/ವಿ–1/ಪಿಬಿ/ಟಿಎನ್‌ಡಿ/2023–24/2078 & 2079 ದಿನಾಂಕ:16.01.2024

ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ (2701 ಲೆಕ್ಕ ಶೀರ್ಷಿಕೆ (ಮರು ಟೆಂಡರ್)– ಕಾಲುವೆ ಹಾಗೂ ಕಾಲೊನಿ ನಿರ್ವಹಣೆ ಹಾಗೂ ಕನ್ಸಲ್ಟೆನ್ಸಿ ಕಾಮಗಾರಿಗಳು)(ಕೆ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ಎಂ.ಬಿ.ಸಿ ವಿಭಾಗ ನಂ. 1, ಗದ್ದನಕೇರಿ ಕ್ಯಾಂಪ್ : ಬಾಗಲಕೋಟೆ ಕಚೇರಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ಪ್ರಕಾರ act 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಕೆ.ಡಬ್ಲ್ಯು–1 & ಕೆ.ಸಿ–2 ನಿಯಮದನ್ವಯ ಅರ್ಹ ಗುತ್ತಿಗೆದಾರರು/ ಕನ್ಸಲ್ಟೆನ್ಸಿ ಇಂದ ಕೆ.ಪಿ.ಪಿ ಪೋರ್ಟಲ್ ಮುಖಾಂತರ ಶೇಕಡಾವಾರು ಪ್ರತಿಶತ ದರಗಳ (Percentage Rate) ಆಧಾರದ ಮೇಲೆ (ಒಂದು/ಎರಡು ಲಕೋಟೆ ಪದ್ಧತಿಯಲ್ಲಿ) ಕೆ.ಪಿ.ಪಿ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಟೆಂಡರ ಕರೆಯಲಾಗಿದೆ.

2701 ಲೆಕ್ಕ ಶೀರ್ಷಿಕೆ: ಇಂಡೆಂಟ್ ಸಂ. 653, 651 (SC) ಹಾಗೂ 664 (ST) (ಕೆ.ಡಬ್ಲ್ಯು–1) (03 ಸಂಖ್ಯೆ – ಒಂದು ಲಕೋಟೆ ಪದ್ಧತಿ)

ಟೆಂಡರಿಗೆ ಇಡಲಾದ ಕಾಮಗಾರಿಯ ಮೊತ್ತ (ಜಿ.ಎಸ್.ಟಿ ಯೊಂದಿಗೆ) : ರೂ. 3.81 ಲಕ್ಷ ದಿಂದ 10.00 ಲಕ್ಷದವರೆಗೆ. ಇ.ಎಂ.ಡಿ ಮೊತ್ತ : ರೂ. 5,000/– ರಿಂದ 12,500/– ರವರೆಗೆ. 1) ಟೆಂಡರ್ ಕುರಿತು ವಿಚಾರಣೆ ನಡೆಸಲು ಕೊನೆಯ ದಿನಾಂಕ: 22.01.2024, 16.00 ಘಂಟೆಯವರೆಗೆ 2)ಟೆಂಡರಗಳನ್ನು ದಿ: 23.01.2024 ರಂದು 16.00 ಘಂಟೆಯವರೆಗೂ ಸಲ್ಲಿಸಬಹುದಾಗಿದೆ. 3) ಬಿಡ ತೆರೆಯುವ ದಿ: 25.01.2024, 11.00 ಘಂಟೆ

ಕನ್ಸಲ್ಟೆನ್ಸಿ: ಇಂಡೆಂಟ್ ಸಂ. 622 (ಕೆ.ಸಿ–2) (01 ಸಂಖ್ಯೆ–ಎರಡು ಲಕೋಟೆ ಪದ್ಧತಿ) ಟೆಂಡರಿಗೆ ಇಡಲಾದ ಕಾಮಗಾರಿಯ ಮೊತ್ತ (ಜಿ.ಎಸ್.ಟಿ ಯೊಂದಿಗೆ) : ರೂ. 49.98 ಲಕ್ಷ. ಇ.ಎಂ.ಡಿ ಮೊತ್ತ:ರೂ. 1,00,000/–. 1)ಟೆಂಡರ್ ಕುರಿತು ವಿಚಾರಣೆ ನಡೆಸಲು ಕೊನೆಯ ದಿನಾಂಕ:25.01.2024, 16.00 ಘಂಟೆಯವರೆಗೆ. 2)ಟೆಂಡರಗಳನ್ನು ದಿ:29.01.2024 ರಂದು 16.00 ಘಂಟೆಯವರೆಗೂ ಸಲ್ಲಿಸಬಹುದಾಗಿದೆ. 3)ತಾಂತ್ರಿಕ ಬಿಡ ತೆರೆಯುವ ದಿ:31.01.2024, 11.00 ಘಂಟೆ 4)ಆರ್ಥಿಕ ಬಿಡ್ ತೆರೆಯುವ ದಿ: 02.02.2024, 11 ಘಂಟೆ ಅಥವಾ ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ.

ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ https://kppp.karnataka.gov.in ವೈಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಇಂಜೀನಿಯರು, ಕನೀನಿನಿ, ಎಂ.ಬಿ.ಸಿ ವಿಭಾಗ ನಂ.1, ಗದ್ದನಕೇರಿ, ಕ್ಯಾಂಪ್:ಬಾಗಲಕೋಟೆ.

DIPR/BGK/RO-NO-307/KSMCA/2023-24

ಕೆನರಾ ಬ್ಯಾಂಕ್ Canara Bank ಸಿಂಡಿಕೇಟ್ Syndicate (ಭಾರತ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಆಡಳಿತ ವಿಭಾಗ, ಕೆನರಾ ಬ್ಯಾಂಕ್, ವೃತ್ತ ಕಚೇರಿ, ಮಂಗಳೂರು– 575001. ಫೋನ್: 0824–2441811, ಇ–ಮೇಲ್: pecomlr@canarabank.com

ಚಿಕ್ಕಮಗಳೂರು ಜಿಲ್ಲೆ, ಪಂಚನಹಳ್ಳಿಯಲ್ಲಿ ಬ್ಯಾಂಕ್ ಶಾಖೆಯ ಕಟ್ಟಡ ನಿರ್ಮಾಣಕ್ಕಾಗಿ ಟೆಂಡರ್

ಕರ್ನಾಟಕ– 577182, ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲೂಕು, ಪಂಚನಹಳ್ಳಿ ಗ್ರಾಮದ ಪ್ಲೋಟ್ ನಂ. 7/2ಪಿ ರಲ್ಲಿರುವ ಬ್ಯಾಂಕ್‌ನ ಸ್ವಂತ ಆಸ್ತಿಯಲ್ಲಿ ಶಾಖೆಯ ಕಟ್ಟಡವನ್ನು ನಿರ್ಮಿಸಲು ಎರಡು ಬಿಡ್ಡ್ ವ್ಯವಸ್ಥೆಯಲ್ಲಿ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ವಿವರ ಮತ್ತು ಟೆಂಡರ್ ಫಾರ್ಮ್‌ಗಳಿಗಾಗಿ ಬ್ಯಾಂಕಿನ ವೆಬ್‌ಸೈಟ್ https://www.canarabank.com., https://eprocure.gov.in ಅಥವಾ ನಮ್ಮ ಕಚೇರಿಯಿಂದ ಪಡೆಯಬಹುದು.

ಟೆಂಡರ್ ಫಾರ್ಮ್‌ನ್ನು ಸಲ್ಲಿಸಲು ಕೊನೆಯ ದಿನಾಂಕ **29.01.2024 ಸಂಜೆ 3.00 ಗಂಟೆ.** ಮುಂದಿನ ಸಂವಹನ, ತಿದ್ದುಪಡಿ ಮತ್ತು ಬದಲಾವಣೆಗಳಿದ್ದಲ್ಲಿ ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ನೀಡಲಾಗುವುದು. ಅಪೂರ್ಣ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

ಸ್ಥಳ: ಮಂಗಳೂರು, ದಿನಾಂಕ: 16.01.2024 ಸಹಿ/– ಸಹಾಯಕ ಮಹಾಪ್ರಬಂಧಕರು, ವೃತ್ತ ಕಚೇರಿ, ಮಂಗಳೂರು

ಕರ್ನಾಟಕ ಸರ್ಕಾರ
ಜಲ ಸಂಪನ್ಮೂಲ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ
ನಂ.1, ನೀರಾವರಿ ತನಿಖಾ ವಿಭಾಗ, ಕಾವೇರಿ ಭವನ ಸಂಕೀರ್ಣ, ಗೋಕುಲಂ 4ನೇ ಹಂತ, ಮೈಸೂರು–570020
ದೂರವಾಣಿ & ಫ್ಯಾಕ್ಸ್ : 0821-2411420 e-mail : no1eeiid@gmail.com

e-Procurement Tender Notification no-08/2023-24 dated : 12-01-2024
NATIONAL HYDROLOGY PROJECT (World Bank Aided)

ಕಾರ್ಯಪಾಲಕ ಇಂಜಿನಿಯರ್, ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು, ಕರ್ನಾಟಕ – 570020. ಇವರು ಎರಡು ಲಕೋಟೆಯಲ್ಲಿ IFB No: KA NHP-SW/08/2023-24 dated : 12-01-2024; ಬಿಡ್ ಅನ್ನು ಕರೆದಿರುತ್ತಾರೆ. ಕಾಮಗಾರಿಯ ಹೆಸರು : Supply and installation of IT equipment for FY 2023-2024 under NHP(WRD/2023-24/IND0006) ಬಿಡ್ ವಿವರಗಳನ್ನು e-procurement platform https://kppp.karnataka.gov.in/ ನಲ್ಲಿ ದಿನಾಂಕ : 12–01–2024 ರಿಂದ ಪಡೆಯ ಬಹುದಾಗಿರುತ್ತದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 29–01–2024 ಮ. 4.00 ಗಂಟೆವರೆಗೆ, ಬಿಡ್ ತೆರೆಯುವ ದಿನಾಂಕ : 30–01–2024 ಸಂಜೆ 4.30 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾ.ಇಂ, ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು

ಪಟ್ಟಣ ಪಂಚಾಯತ ಕಾರ್ಯಾಲಯ, ಶಿರಹಟ್ಟಿ–582120
ಕ್ರಸಂ:ಪಪಂಶಿ/15ನೇಹಸಾಮೂಅ/ಟೆಂಡರ/2023–24 ದಿನಾಂಕ: 16–01–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮೂಲಕ)

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಶಿರಹಟ್ಟಿ ಇವರಿಂದ ಶಿರಹಟ್ಟಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ–2000ರ ಪ್ರಕಾರ "ಕರ್ನಾಟಕ ಪಬ್ಲಿಕ–ಪ್ರೊಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಸನ್ 2023–24 ನೇ ಸಾಲಿನ 15ನೇ ಹಣಕಾಸು ಅನುದಾನ **ಅನುದಾನದ ಇಂಡೆಂಟ್ ನಂ-12527,12529,12530(SC),12531,12533(ST)** ಈ ಕೆಳಗೆ ನಮೂದಿಸಿದ ಕಾಮಗಾರಿಗಳ ಒಟ್ಟು ಮೊತ್ತ ರೂ. **99.00** ಲಕ್ಷ ನಿರ್ವಹಣೆಗಾಗಿ ಕೆ.ಡಬ್ಲ್ಯು–1 & 2 ದಸ್ತಾವೇಜ್‌ನಲ್ಲಿ ಕರ್ನಾಟಕ ಪಬ್ಲಿಕ ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ ಇಂದನ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಪ್ರೊಕ್ಯೂರಮೆಂಟ್ ದಾಖಲೆಗಳಿಗಾಗಿ **https://kppp.karnataka.gov.in/#/portal/portal-home** ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ ಸಲ್ಲಿಸುವುದು.

(1) ಇ–ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **01–02–2024** ಸಂಜೆ 5–00 ರ ವರೆಗೆ (2) ಟೆಂಡರನ್ನು ತೆರೆಯುವ ದಿನಾಂಕ ಮತ್ತು ಸಮಯ : **02–02–2024** ರಂದು ಸಾಯಂಕಾಲ 5–30 ಗಂಟೆಗೆ

ನಿಗದಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನೀತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಛೇರಿಯ ವೆಬ್‌ಸೈಟ್ **www.shirahattitown.gov.in.** ಹಾಗೂ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ–ಪ್ರೋಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/– ಶ್ರೀ ಸಿದ್ದರಾಯ ಕಟ್ಟಿಮನಿ, ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಶಿರಹಟ್ಟಿ
ಸಹಿ/– ಶ್ರೀ ಅನೀಲ ಬಡಿಗೇರ, ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ ಶಿರಹಟ್ಟಿ

ವಾಸಾಸಂಇ/ಗದಗ/ಕೆಎಸ್ಎಂಸಿಎ/467/2023–24

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001.
ಫೋನ್ ಸಂ. 080–22265383 ವೆಬ್‌ಸೈಟ್: www.kiadb.in
ಇ–ಮೇಲ್: cdoce1@kiadb.in or jdtp@kiadb.in

ಸಂ.ಐಎಡಿಬಿ/ಇಎನ್‌ಜಿಜಿ/ಇಐಎ/ಇಟಿಎನ್‌ಡಿ/ಇಸಿ–23/17977/2023–24 ದಿನಾಂಕ: 16.01.2024

ಅರ್ಧವಾರ್ಷಿಕ ಅನುಸರಣಾ ವರದಿಗಳನ್ನು ಸಲ್ಲಿಸಲು ಸಲಹಾ ಸೇವೆಗಳನ್ನು ಒದಗಿಸಲು ಟೆಂಡರ್ ಆಹ್ವಾನ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ದ್ವಿಲಕೋಟೆ ಪದ್ಧತಿಯಲ್ಲಿ ಕೆಳಗೆ ತಿಳಿಸಲಾದ ಯೋಜನೆಗಾಗಿ ಅಪಾರ ಅನುಭವ ಮತ್ತು ಕೆಲಸದ ಸಮಾನ ಸ್ವರೂಪದ ಸಾಬೀತಾದ ದಾಖಲೆಯೊಂದಿಗೆ ಬೆಂಗಳೂರಿನಲ್ಲಿ ಕಚೇರಿಯನ್ನು ಹೊಂದಿರುವ NABL ಮಾನ್ಯತೆ ಪಡೆದ ಸಲಹೆಗರರಿಂದ ಟೆಂಡರ್ ಅನ್ನು ಆಹ್ವಾನಿಸುತ್ತಿದೆ.

ಕ್ರ ಸಂ	ಕೆಲಸದ ಹೆಸರು	ಇ.ಎಂ.ಡಿ. (ರೂ.ಲಕ್ಷಗಳು)
1.	ಈ ಕೆಳಕಂಡ ಕೈಗಾರಿಕಾ ಪ್ರದೇಶಗಳಿಗೆ ಪರಿಸರ ವಿಮೋಚನಾ ಮತ್ತು ಸ್ಥಾಪನ ಸಮ್ಮತಿ ಪತ್ರಗಳ ನಿಬಂಧನೆಗಳಂತೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ಹಾಗೂ ಮೂಲ ದತ್ತಾಂಶಗಳೊಂದಿಗೆ Environmental Statement ತಯಾರಿಸಿ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ (Regional Office, MoEF&CC), ವಲಯ ಕಛೇರಿ, ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ವಲಯ ಕಛೇರಿಗೆ 3 ವರ್ಷಗಳವರೆಗೆ ಸಲ್ಲಿಸುವ ಸಂಬಂಧ ಸಮಾಲೋಚಕ ಸೇವೆ ಒದಗಿಸಲು.	2.00

ಕ್ರ ಸಂ	ಕೈಗಾರಿಕಾ ಪ್ರದೇಶಗಳು
1.	ಮಾಲೂರು ಕೈಗಾರಿಕಾ ಪ್ರದೇಶ, 4ನೇ ಹಂತ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ (ವಿಸ್ತೀರ್ಣ 412–06ಎ).
2.	ನರಸಾಪುರ ಕೈಗಾರಿಕಾ ಪ್ರದೇಶ, 1ನೇ ಹಂತ, ಕೋಲಾರ ಜಿಲ್ಲೆ (ವಿಸ್ತೀರ್ಣ–700.75ಎ).
3.	ವೇಮಗಲ್ ಕೈಗಾರಿಕಾ ಪ್ರದೇಶ, ಕೋಲಾರ ಜಿಲ್ಲೆ (ವಿಸ್ತೀರ್ಣ–666.13ಎ).
4.	ಜಕ್ಕಸಂದ್ರ ಕೈಗಾರಿಕಾ ಪ್ರದೇಶ, ಕೋಲಾರ ಜಿಲ್ಲೆ (ವಿಸ್ತೀರ್ಣ–627.47ಎ).
5.	ಗೌರಿಬಿದನೂರು ಕೈಗಾರಿಕಾ ಪ್ರದೇಶ, 1 & 2ನೇ ಹಂತ, ಚಿಕ್ಕಬಳ್ಳಾಪುರ ಜಿಲ್ಲೆ (ವಿಸ್ತೀರ್ಣ–724.12ಎ).

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು **https://kppp.karnataka.gov.in** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು: (1) ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸಲು ಕಡೆಯ **ದಿನಾಂಕ: 23–01–2024 ಸಂಜೆ 5.00 ಗಂಟೆಯವರೆಗೆ.** (2) ಬಿಡ್ ಪೂರ್ವ ಸಭೆ ನಡೆಯುವ **ದಿನಾಂಕ: 25–01–2024 ಬೆಳಿಗ್ಗೆ 11.30 ಗಂಟೆಗೆ.** (3) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 09–02–2024ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ ಮತ್ತು ಸಮಯ: 13–02–2024 ಬೆಳಿಗ್ಗೆ 11.30 ಗಂಟೆಯ** ನಂತರ.

ಸಹಿ/– ಮುಖ್ಯ ಅಭಿಯಂತರರು–1, ಕ.ಕೈ.ಪ್ರ.ಮಂ, ಬೆಂಗಳೂರು.

DIPR/CP/RO3063/AAPL/2023-24

National Dairy Development Board
PB No. 40, Anand - 388001. Gujarat, India. Tel : 02692 - 260148 / 260149 / 260160, Fax : 02692 - 260159 Website : http://www.nddb.coop, Email : purchase@nddb.coop

INVITATION FOR BIDS (IFB) / LOCAL COMPETITIVE BIDDING (LCB)
Bids are invited on behalf of Service Recipients from eligible bidders for the works listed below :

Sr. No.	Description of Works / Bid Reference	Estd. Cost (₹) Incl GST / Duration	Event Start/ Close Date	Bid Submission / Opening date & time
I	**Design, Supply, Installation, Testing & Commissioning works for the following :-**			
A	4 LLPD UHT Plant at AMULFED II Dairy, Rajkot, Gujarat **NDDB/HO/Purchase/87/23-24/ET/87 (UHT RAJKOT)**	5880 Lakh/ 16 Months	17.01.24/ 07.02.24	07.02.24 15:00 hrs. 07.02.24 15:30 hrs.
B	ASRS with minimum 6600 pallet storage for UHT milk at AMULFED II Dairy, Rajkot, Gujarat **NDDB/HO/Purchase/88/23-24/ET/88 (ASRS RAJKOT)**	2000 Lakh/ 15 Months	19.01.24/ 09.02.24	09.02.24 15:00 hrs. 09.02.24 15:30 hrs.
C	Water & Murky Condensate Treatment Plant for AMULFED II Dairy, Rajkot, Gujarat **NDDB/HO/Purchase/89/23-24/ET/89 (WTP RAJKOT)**	856 Lakh/ 10 Months	19.01.24/ 09.02.24	09.02.24 15:00 hrs. 09.02.24 15:30 hrs.
D	100 TPD Butter Plant at AMULFED II Dairy, Rajkot, Gujarat **NDDB/HO/Purchase/90/23-24/ET/90 (BUTTER RAJKOT)**	1960 Lakh/ 16 Months	19.01.24/ 09.02.24	09.02.24 15:00 hrs. 09.02.24 15:30 hrs.
E	40 MTPD Automated Continuous Ghee Plant at AMULFED II Dairy, Rajkot, Gujarat. **NDDB/HO/Purchase/91/23-24/ET/91 (GHEE RAJKOT)**	2432 Lakh/ 16 Months	19.01.24/ 09.02.24	09.02.24 15:00 hrs. 09.02.24 15:30 hrs.
F	20 LLPD ETP for AMULFED II Dairy, Rajkot, Gujarat. **NDDB/HO/Purchase/92/23-24/ET/92 (ETP RAJKOT)**	1900 Lakh/ 16 Months	23.01.24/ 13.02.24	13.02.24 15:00 hrs. 13.02.24 15:30 hrs.
G	25 TLPD UHT Processing, Packing Plant including accessories at Bhilwara Dairy, Bhilwara, Rajasthan. **NDDB/HO/Purchase/93/23-24/ET/93 (UHT BHILWARA)**	3200 Lakh/ 10 Months	22.01.24/ 12.02.24	12.02.24 15:00 hrs. 12.02.24 15:30 hrs.
H	2 x 6 TPH Oil cum Gas fired boiler with other accessories at Verka Dairy, Mohali, Punjab **NDDB/HO/Purchase/94/23-24/ET/94 (BOILER MOHALI)**	664 Lakh/ 10 Months	20.01.24/ 12.02.24	12.02.24 15:00 hrs. 12.02.24 15:30 hrs.
I	HVAC & allied MEP works at CEAH Hessaraghatta, Karnataka **NDDB/HO/Purchase/95/23-24/ET/95 (MEP HESSARGHATTA)**	385 Lakh/ 10 Months	18.01.24/ 08.02.24	08.02.24 15:00 hrs. 08.02.24 15:30 hrs.
J	150 TPD Cattle Feed Plant with Silo system, molasses storage tanks & weighbridge at Gulabpura, Bhilwara, Rajasthan. **NDDB/HO/Purchase/96/23-24/ET/96 (CFP BHILWARA)**	2100 Lakh/ 14 Months	20.01.24/ 12.02.24	12.02.24 15:00 hrs. 12.02.24 15:30 hrs.

For further details pertaining to IFB and for downloading the bid document, please visit these websites : **www.nddb.coop and** www.mstcecommerce.com/eprocn/ For any clarification please contact **Group Head (Purchase), NDDB, Anand-388001.**
NB: Any corrigendum/modification etc. will be posted only on these website.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ
GSTIN:29BLR002252F1DR

ಸಂ.ಕಾನಿಅ/ಲೋಇ/ಯಾವಿ/ತಾಶಾ–1/ಇ–ಟೆಂಡರ್ ಪ್ರಕಟಣೆ/2023–24/ 2226 ದಿನಾಂಕ: 12.01.2024

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಈ ಕಚೇರಿ ಇ–ಟೆಂಡರ್ ಪ್ರಕಟಣೆ ಸಂಖ್ಯೆಃ 7537/2022–23, ದಿನಾಂಕಃ 20–03–2023 ರ ಮೂಲಕ (ಇ–ಪ್ರಾಕ್ ತಂತ್ರಾಂಶದಲ್ಲಿ (ಹಳೆಯ) ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಏಕೈಕ ಬಿಡ್ ಸ್ವೀಕೃತಿಯಾಗಿರುವುದರಿಂದ ಸರಕಾರದ ಸುತ್ತೋಲೆ ದಿನಾಂಕಃ 20–03–2017 ರ ನಿರ್ದೇಶನದಂತೆ ಮರು ಟೆಂಡರ್ ಕರೆಯಲು ಹಾಗೂ ಇ–ಪ್ರಾಕ್ ವರ್ಷಿಯನ್ 2.0 ಆದ ಪ್ರಯುಕ್ತ ವರ್ಕ ಇಂಡೆಂಟನ್ನು ಹೊಸದಾಗಿ ಸೃಜಿಸಿ ಇ–ಪ್ರಾಕ್ ವರ್ಷಿಯನ್ ಕೆಪಿಪಿ 2.0 ರಲ್ಲಿ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–3 & 4 ರಂತೆ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2022–23 ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆ ಅಡಿಯಲ್ಲಿ ವರ್ಕ ಇಂಡೆಂಟ್ ಸಂಖ್ಯೆ: (1)7105 ಮರು ಟೆಂಡರ್ ಆಹ್ವಾನಿಸಲಾಗಿದೆ ಹಾಗೂ 2020–21ನೇ ಕೆಕೆಆರ್‌ಡಿಬಿ ಇಂಡೆಂಟ್ (1)6929 (ಎಸ್.ಸಿ.ಮೀಸಲು), 2022–23 ನೇ ಸಾಲಿನ ಕೆಕೆಆರ್‌ಡಿಬಿ ಯೋಜನೆ ಇಂಡೆಂಟ್ ಸಂಖ್ಯೆಃ (1)7491 ಮತ್ತು 2023–24ನೇ ಸಾಲಿನ ಕೆಕೆಆರ್‌ಡಿಬಿಡಿ ಇಂಡೆಂಟ್ ಸಂಖ್ಯೆಃ (1)7038 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. **2) ಕಾಮಗಾರಿ ಅಂದಾಜು ಮೊತ್ತ:** ಕನಿಷ್ಠ ರೂ:55.60 ಲಕ್ಷಗಳು ಹಾಗೂ ಗರಿಷ್ಠ ರೂ:237.08 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** 3ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ–ಬಿಡ್ ಮೀಟಿಂಗ್ ದಿನಾಂಕ:** 20.01.2024 (11.30 ರ ನಂತರ)(ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 22.01.2024 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 25.01.2024 (16.00 ಗಂಟೆವರೆಗೆ), **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 29.01.2024 (11.30 ಗಂಟೆ ನಂತರ), **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 31.01.2024 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಮಾಡಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/275/ಕೆ.ಎಸ್.ಎಂ.ಸಿ.&ಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಿ.ಯು. ಕಟ್ಟಡ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01.

ಸಂಖ್ಯೆ: ಕಾಪಾಅ(ಸನ)/ಇ–ಪ್ರೊಕ್/ಟೆಂಡರ್/09/2023–24 ದಿನಾಂಕ: 16.01.2024

ಟೆಂಡರ್‌ಗಾಗಿ ಆಹ್ವಾನ (ಎನ್‌ಐಟಿ) ದ್ವಿಲಕೋಟೆ ಪದ್ಧತಿ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಸರ್ವಜ್ಞನಗರ ವಿಭಾಗ), ಪೂರ್ವ ವಲಯ, ಇವರು, ಬೃ.ಬೆಂ.ಮ.ಪಾ/ಕೆ.ಪಿ.ಡಬ್ಲ್ಯೂ.ಡಿ /ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **(ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ ಕೆಡಬ್ಲ್ಯೂ–3)**

ಕ್ರ ಸಂ.	ಕಾಮಗಾರಿಗಳ ಹೆಸರು/ವರ್ಗೀಕರಣ	ಕಾಮಗಾರಿಗಿಟ್ಟ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹.ಗಳಲ್ಲಿ)
1.	ವಾರ್ಡ್ ಸಂಖ್ಯೆ–23/95 ನಾಗವಾರದ ಉಮರ್‌ನಗರ, ಕುಪ್ಪುಸ್ವಾಮಿ ಬಡಾವಣೆ, ಗೋವಿಂದಪುರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಪರಿಶಿಷ್ಟ ಪಂಗಡ)	95.00	95,000/-
2.	ವಾರ್ಡ್ ಸಂಖ್ಯೆ–23/95 ನಾಗವಾರದ ರಷದ್‌ನಗರ ಹೆಚ್‌ಬಿಆರ್ 30ಕೆಜಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	95.00	1,90,000/-
3.	ವಾರ್ಡ್ ಸಂಖ್ಯೆ–23/95 ನಾಗವಾರದ ವೈಯಾಲಿಕಾವಲ್ ಬಡಾವಣೆಯ 7ನೇ ಮುಖ್ಯರಸ್ತೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	95.00	1,90,000/-
4.	ವಾರ್ಡ್ ಸಂಖ್ಯೆ–23/95 ನಾಗವಾರದ ವೀರಣ್ಣಪಾಳ್ಯ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	95.00	1,90,000/-
5.	ವಾರ್ಡ್ ಸಂಖ್ಯೆ–23/95 ನಾಗವಾರದ ಟೀಚರ್ಸ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	95.00	1,90,000/-
6.	ವಾರ್ಡ್ ಸಂಖ್ಯೆ–23/95 ನಾಗವಾರದ ಭೈರಪ್ಪ ಬಡಾವಣೆ, ಚರ್ಚ್ ಸ್ಟ್ರೀಟ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಪರಿಶಿಷ್ಟ ಜಾತಿ)	95.00	95,000/-
7.	ವಾರ್ಡ್ ಸಂಖ್ಯೆ–23/95 ನಾಗವಾರದ ಕುಪ್ಪುಸ್ವಾಮಿ ಬಡಾವಣೆ, ಟೀಚರ್ಸ್ ಬಡಾವಣೆ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	95.00	1,90,000/-
8.	ವಾರ್ಡ್ ಸಂಖ್ಯೆ–24/94 ಹೆಣ್ಣೂರಿನ ಹೆಚ್‌ಬಿಆರ್ ಬಡಾವಣೆಯ 4ನೇ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	95.00	1,90,000/-
9.	ವಾರ್ಡ್ ಸಂಖ್ಯೆ–24/94 ಹೆಣ್ಣೂರಿನ ಹೆಚ್‌ಬಿಆರ್ ಬಡಾವಣೆಯ 5ನೇ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು.	95.00	1,90,000/-
10.	ವಾರ್ಡ್ ಸಂಖ್ಯೆ–24/98 ಕಾಚರಕನಹಳ್ಳಿಯ ಹೆಚ್‌ಬಿಆರ್ ಬಡಾವಣೆಯ 2ನೇ ಬ್ಲಾಕ್ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳನ್ನು ಸುಧಾರಣೆ ಮಾಡುವುದು. (ಪರಿಶಿಷ್ಟ ಜಾತಿ)	95.00	95,000/-

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **23.01.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **06.02.2024**ರ ಸಂಜೆ **4:00** ಗಂಟೆಯವರೆಗೆ. (3) ಟೆಂಡರ್‌ಗಳನ್ನು ದಿನಾಂಕ **07.02.2024**ರ ಸಂಜೆ **4:30** ಗಂಟೆಗೆ ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **30.01.2024**ರ ಸಂಜೆ **4:30** ಗಂಟೆಗೆ ಕಾರ್ಯಪಾಲಕ ಅಭಿಯಂತರರು, 7ನೇ ಮಹಡಿ, ಪಬ್ಲಿಕ್ ಯುಟಿಲಿಟಿ ಕಟ್ಟಡ, ಎಂ.ಜಿ. ರಸ್ತೆ, ಬೃ.ಬೆಂ.ಮ.ಪಾಲಿಕೆ ಇವರ ಕಚೇರಿಯಲ್ಲಿ ತೆರೆಯಲಾಗುವುದು. (4) ಈ ಟೆಂಡರ್ ಪ್ರಕಟಣೆಯನ್ನು ಬೃ.ಬೆಂ.ಮ.ಪಾಲಿಕೆ ವೆಬ್‌ಸೈಟ್ **www.bbmp.gov.in.** ನಲ್ಲಿಯು ಕೂಡ ವೀಕ್ಷಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಶಾಂತಿಯನ್ನು ಅರಸುವುದೆಂದರೆ ಮೀಸೆಯಿರುವ ಆಮೆಯನ್ನು ಹುಡುಕುತ್ತಾ ಹೊರಟಂತೆ. ನಿಮಗೆ ಅದು ಸಿಗುವುದೇ ಇಲ್ಲ. ಆದರೆ ನಿಮ್ಮ ಹೃದಯ ಸಿದ್ಧವಾಗಿದ್ದಾಗ, ಶಾಂತಿಯೇ ನಿಮ್ಮನ್ನು ಅರಸಿಕೊಂಡು ಬರುತ್ತದೆ.

–ಅಜನ್ ಚಾ

ಚುನಾವಣೆ ಸಮಯದಲ್ಲಿ ಬಾಯಿಚಪಲ ಕೂಗುಮಾರಿಗಳ ಬಗ್ಗೆ ಇರಲಿ ಎಚ್ಚರ

ಅಯೋಧ್ಯೆಯಲ್ಲಿನ ಬಾಬರಿ ಮಸೀದಿ ಕೆಡವಿದಂತೆ ರಾಜ್ಯದ ಕೆಲವು ಕಡೆಗಳಲ್ಲಿನ ಮಸೀದಿಗಳನ್ನು ನೆಲಸಮ ಮಾಡಬೇಕು ಎಂದು ಹೇಳಿರುವ ಸಂಸದ ಅನಂತಕುಮಾರ ಹೆಗಡೆ ಅವರ ಮಾತು ಕಿಡಿಗೇಡಿತನದ್ದು ಹಾಗೂ ಕೋಮುದ್ವೇಷಕ್ಕೆ ಕುಮ್ಮಕ್ಕು ಕೊಡುವಂತಹದ್ದು. ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿರುವ ಅವರು, ಮಸೀದಿಗಳನ್ನು ಕೆಡವಿಹಾಕುವ ಮೂಲಕ ಹಿಂದೂಗಳಿಗೆ ಆಗಿರುವ ಅವಮಾನಕ್ಕೆ ಸೇಡು ತೀರಿಸಿಕೊಳ್ಳಬೇಕು ಎಂದು ಪ್ರಚೋದನಕಾರಿಯಾಗಿ ಮಾತನಾಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ದೇಶದ ಸಂವಿಧಾನದ ಬಗ್ಗೆ ಗೌರವವಿರುವ ಯಾವುದೇ ವ್ಯಕ್ತಿ ಇಂಥ ಮಾತುಗಳನ್ನು ಆಡಬಹುದೆಂದು ಕಲ್ಪಿಸಿಕೊಳ್ಳುವುದೂ ಕಷ್ಟ. ಕೋಮು ಸಾಮರಸ್ಯವನ್ನು ಕಾಪಾಡುವ ದಿಸೆಯಲ್ಲಿ ಕೆಲಸ ಮಾಡಬೇಕಾದ ಪ್ರಜಾಪ್ರತಿನಿಧಿ, ಸಮಾಜದಲ್ಲಿ ಒಡಕು ಉಂಟುಮಾಡುವ ರೀತಿ ಮಾತನಾಡಿರುವುದು ದುರದೃಷ್ಟಕರ. ಮಸೀದಿಗಳನ್ನು ಒಡೆದುಹಾಕುವವರೆಗೂ ಸುಮ್ಮನೆ ಕೂರಬಾರದು ಎಂದು ಕರೆ ಕೊಟ್ಟಿರುವ ಸಂಸದರು, ಭಟ್ಕಳ, ಶಿರಸಿ ಹಾಗೂ ಶ್ರೀರಂಗಪಟ್ಟಣದಲ್ಲಿನ ಮಸೀದಿಗಳು ಒಂದು ಕಾಲದಲ್ಲಿ ಹಿಂದೂ ದೇವಾಲಯಗಳಾಗಿದ್ದವು ಎಂದು ಹೇಳಿದ್ದಾರೆ. ಈ ಹೇಳಿಕೆ ಹೊಸ ವಿವಾದಗಳನ್ನು ಸೃಷ್ಟಿಮಾಡುವ ಕಿಡಿಗೇಡಿತನ ಮಾತ್ರವಲ್ಲದೆ, ಜನಸಾಮಾನ್ಯರು ಕಾನೂನನ್ನು ಕೈಗೆ ತೆಗೆದುಕೊಳ್ಳಲು ಪ್ರಚೋದನೆ ನೀಡುವಂತಿದೆ. ಕೋಮು ಸಾಮರಸ್ಯಕ್ಕೆ ಧಕ್ಕೆಯುಂಟು ಮಾಡುವಂತೆ ಮಾತನಾಡುವುದರ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಬಗ್ಗೆಯೂ ಸಂಸದರು ಅಸಭ್ಯವಾಗಿ ಮಾತನಾಡಿದ್ದಾರೆ. ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಹಿಂದೂ ಸಮಾಜವನ್ನು ಮುರುಕುರಾಮಯ್ಯನಂಥವರು ಒಡೆಯುತ್ತಿದ್ದಾರೆ ಎಂದು ನಿಂದಿಸಿದ್ದಾರೆ. ಪ್ರಧಾನಿ, ಮುಖ್ಯಮಂತ್ರಿಯಂತಹ ಸಾಂವಿಧಾನಿಕ ಹುದ್ದೆಗಳಲ್ಲಿ ಇರುವ ವ್ಯಕ್ತಿಗಳ ಕುರಿತು ಪ್ರಜಾಪ್ರತಿನಿಧಿಯೊಬ್ಬರು ಬೈಗುಳದ ಭಾಷೆಯಲ್ಲಿ ಮಾತನಾಡುವುದು ಅವರು ಪ್ರತಿನಿಧಿಸುವ ಸ್ಥಾನಕ್ಕೆ ಮಾಡುವ ಅವಮಾನ ಹಾಗೂ ಮತದಾರರಿಗೆ ತೋರುವ ಅಗೌರವ. ಯಾವುದೇ ಪಕ್ಷದ ಜನಪ್ರತಿನಿಧಿ ಹೀಗೆ ವರ್ತಿಸಿದರೂ ಅದು ಖಂಡನೀಯ.

ಕೋಮು ಸಾಮರಸ್ಯಕ್ಕೆ ಧಕ್ಕೆ ತರುವಂತೆ ಮಾತನಾಡುವ ವ್ಯಕ್ತಿ ಯಾರೇ ಆಗಿರಲಿ, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಹಿಂಜರಿಯಬಾರದು

ಹಿಂದುತ್ವದ ಹೆಸರಿನಲ್ಲಿ ಪ್ರಚೋದನಕಾರಿ ಮಾತುಗಳನ್ನಾಡುವುದರಲ್ಲಿ ಕುಖ್ಯಾತಿ ಪಡೆದಿರುವ ರಾಜಕೀಯ ಮುಖಂಡರಲ್ಲಿ ಅನಂತಕುಮಾರ ಹೆಗಡೆ ಅವರೂ ಒಬ್ಬರು. ನಾಲ್ಕೂವರೆ ವರ್ಷಗಳಿಂದ ನೇಪಥ್ಯದಲ್ಲಿ ಇದ್ದಂತಿದ್ದ ಅವರು ಇದ್ದಕ್ಕಿದ್ದಂತೆ ಪ್ರಚೋದನಕಾರಿ ಮಾತುಗಳ ಮೂಲಕ ಸುದ್ದಿಗೆ ಬರಲು ಹವಣಿಸುತ್ತಿದ್ದಾರೆ; ಮತದಾರರೊಂದಿಗೆ ಸಂಪರ್ಕವನ್ನು ಕಳೆದುಕೊಂಡಿದ್ದವರು ಒಮ್ಮಿಂದೊಮ್ಮೆಗೆ ಕಾರ್ಯಕರ್ತರನ್ನು ನೆನಪಿಸಿಕೊಂಡಿದ್ದಾರೆ. ಲೋಕಸಭೆ ಚುನಾವಣೆ ಸನ್ನಿಹಿತವಾಗಿರುವ ಸಂದರ್ಭದಲ್ಲಿ ಸಂಸದರಿಗೆ ತಮ್ಮ ಕ್ಷೇತ್ರದ ಮತದಾರರು ಹಾಗೂ ಪಕ್ಷದ ಕಾರ್ಯಕರ್ತರ ನೆನಪಾದಂತಿದೆ. ಚುನಾವಣೆ ಸಂದರ್ಭದಲ್ಲಿ ಪ್ರಜಾಪ್ರತಿನಿಧಿಗಳಿಗೆ ತಮ್ಮ ಕ್ಷೇತ್ರದ ನಾಗರಿಕರ ನೆನಪಾಗುವುದು ಸಹಜ. ಆದರೆ, ಜನರಿಗೆ ತಮ್ಮ ನೆನಪು ಮರುಕಳಿಸುವಂತೆ ಮಾಡಲು ಅನಂತಕುಮಾರ ಹೆಗಡೆ ಆರಿಸಿಕೊಂಡಿರುವ ದಾರಿ ಪ್ರಜಾಸತ್ತಾತ್ಮಕವಾದುದಲ್ಲ. ತನ್ನ ರಾಜಕೀಯ ಅಸ್ತಿತ್ವವನ್ನು ಸಮಾಜಕ್ಕೆ ನೆನಪಿಸಲು ಜನಪರ ಕೆಲಸಗಳು ಇಲ್ಲದೆ ಹೋದಾಗ ರಾಜಕಾರಣಿಯೊಬ್ಬ ಅಡ್ಡದಾರಿ ಹಿಡಿಯಲು ಪ್ರಯತ್ನಿಸುವಂತೆ, ಚುನಾವಣೆ ಸಂದರ್ಭದಲ್ಲಿ ಕೋಮು ರಾಜಕಾರಣದ ಮೂಲಕ ಪ್ರಚಾರ ಗಿಟ್ಟಿಸಿಕೊಳ್ಳಲು ಅವರು ಪ್ರಯತ್ನಿಸುತ್ತಿರುವಂತಿದೆ. ಹಿಂದುತ್ವದ ಹೆಸರಿನಲ್ಲಿ ಎಷ್ಟು ಬೇಕಾದರೂ ಬಾಯಿ ಹರಿಯಬಿಡಬಹುದೆಂದು ಭಾವಿಸಿರುವ ಕೆಲವು ರಾಜಕಾರಣಿಗಳ ಸಾಲಿಗೆ ಅವರು ಸೇರಿದ್ದಾರೆ. ದುರದೃಷ್ಟವಶಾತ್, ಅಂಥ ರಾಜಕಾರಣಿಗಳ ನಾಲಿಗೆಗೆ ಲಗಾಮು ಹಾಕುವ ಕೆಲಸವನ್ನು ಅವರು ಪ್ರತಿನಿಧಿಸುವ ಪಕ್ಷ ಮಾಡುತ್ತಿಲ್ಲ. ಪ್ರಚೋದನಕಾರಿಯಾಗಿ ಮಾತನಾಡುವವರಿಗೆ ಬುದ್ಧಿ ಹೇಳಬೇಕಾದ ನಾಯಕರು, ಕೂಗುಮಾರಿಗಳನ್ನು ಅವರ ಪಾಡಿಗೆ ಕೂಗಲು ಬಿಟ್ಟು, ಸಂಸ್ಕೃತಿ–ಪರಂಪರೆಯ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನು ಆಡುತ್ತಿದ್ದಾರೆ. ಅನಂತಕುಮಾರ ಹೆಗಡೆ ಅವರ ಮಾತುಗಳಿಗೆ ಪ್ರತಿಕ್ರಿಯೆ ಎನ್ನುವಂತೆ ಕಾಂಗ್ರೆಸ್ ನಾಯಕರು ಕೂಡ ಬೀದಿಜಗಳದ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಕ್ಷುಲ್ಲಕ ಪೈಪೋಟಿಯ ಪ್ರದರ್ಶನಗಳಂತೆ ಕಾಣಿಸುವ ಇಂಥ ರಾಜಕೀಯ ಪ್ರಹಸನಗಳು ನಾಡಿನ ಘನತೆ ಹಾಗೂ ಬಹುತ್ವ ಪರಂಪರೆಯ ಹಿರಿಮೆಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಗ್ಗಿಸುವಂತಿವೆ. ಜವಾಬ್ದಾರಿಯುತ ಸ್ಥಾನದಲ್ಲಿ ಇರುವವರು ಆಡುವ ಬೇಜವಾಬ್ದಾರಿಯ ಮಾತುಗಳು ಸಮಾಜದಲ್ಲಿ ಆತಂಕವನ್ನು ಹುಟ್ಟುಹಾಕುತ್ತವೆ. ಕೋಮು ಸಾಮರಸ್ಯಕ್ಕೆ ಧಕ್ಕೆ ತರುವಂತೆ ಮಾತನಾಡುವ ವ್ಯಕ್ತಿ ಯಾರೇ ಆಗಿರಲಿ, ಅವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರ ಹಿಂಜರಿಯಬಾರದು. ಕೋಮು ರಾಜಕಾರಣದ ಷಡ್ಯಂತ್ರಗಳನ್ನು ಅರಿಯುವ ವಿವೇಚನಾಶಕ್ತಿಯನ್ನು ಪ್ರಕಟಪಡಿಸುವ ಮೂಲಕ, ಕೋಮು ರಾಜಕಾರಣದ ವಿರುದ್ಧದ ಪ್ರತಿರೋಧವನ್ನು ವ್ಯಕ್ತಪಡಿಸುವ ಇಚ್ಛಾಶಕ್ತಿಯನ್ನು ಜನಸಾಮಾನ್ಯರೂ ತೋರಿಸಬೇಕಾಗಿದೆ. ಜನಪರ ಕೆಲಸದಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಂಡವರಿಗೆ ಕೂಗುಮಾರಿಗಳಂತೆ ವರ್ತಿಸುವ ಅಗತ್ಯವಿರುವುದಿಲ್ಲ, ನಾಲಿಗೆ ಹರಿಯಬಿಡುವುದಕ್ಕೆ ವ್ಯವಧಾನವೂ ಇರುವುದಿಲ್ಲ ಎನ್ನುವುದನ್ನು ಮತದಾರರು ಅರಿಯಬೇಕಾಗಿದೆ.

ದಿನದ ಟ್ವೀಟ್

ಪ್ರಾಣಿ ಹಿಂಸೆ ಸಲ್ಲ

ಜಲ್ಲಿಕಟ್ಟನ್ನು ಒಂದು ಕ್ರೀಡೆ ಎಂದು ಕರೆಯುವುದು ಭಯಾನಕ. ಇದು, ಮನುಷ್ಯರು ತಾವು ಶ್ರೇಷ್ಠ ಎಂಬ ಒಂದೇ ಕಾರಣಕ್ಕೆ, ಮೂಕಪ್ರಾಣಿಯ ಮೇಲೆ ತಮ್ಮ ಇಚ್ಛೆಯನ್ನು ಹೇರುವ ಕೆಲಸವಲ್ಲದೆ ಬೇರೇನೂ ಅಲ್ಲ. ಗುಲಾಮರು ಪರಸ್ಪರ ಕಾದಾಡುವಂತೆ ಮಾಡುತ್ತಿದ್ದ ರೋಮನ್ನರಿಗೂ ಮನರಂಜನೆಗೆ ಪ್ರಾಣಿಗಳನ್ನು ಬಳಸುವುದಕ್ಕೂ ಯಾವುದೇ ವ್ಯತ್ಯಾಸವಿಲ್ಲ. ಮನುಷ್ಯರಿಗೆ ನಾಚಿಕೆಯಾಗಬೇಕು.

ಸಹನಾ

ಕಿಡಿನುಡಿ

ಹಿರಿಯರಿಗೆ ಮತ್ತು ಅವರ ಸ್ಥಾನಕ್ಕೆ ಗೌರವ ಕೊಡಬೇಕು. ರಾಮ ಎಂದರೆ ಎಲ್ಲರನ್ನೂ ಜೋಡಿಸಿಕೊಂಡು ಹೋಗುವವನು. ಅನಂತಕುಮಾರ ಹೆಗಡೆ ಅವರ ಕಾರ್ಯಶೈಲಿ ಭಿನ್ನವಾಗಿದೆ. ಹಾಗೆಂದಮಾತ್ರಕ್ಕೆ ಮತ್ತೊಬ್ಬರಿಗೆ ನೋವುಂಟು ಮಾಡುವ ಹೇಳಿಕೆಯನ್ನು ನಾವು ಸಮರ್ಥಿಸುವುದಿಲ್ಲ.

(ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸಂಸದ ಅನಂತಕುಮಾರ ಹೆಗಡೆ ಅವರು ಏಕವಚನದಲ್ಲಿ ಟೀಕೆ ಮಾಡಿರುವುದಕ್ಕೆ ಪ್ರತಿಕ್ರಿಯೆ)

ಸಿ.ಟಿ.ರವಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಭಾನುವಾರ, 17-1-1999

• ಶಂಕರ್ ಬದಲಾವಣೆಯಿಂದ ದಳದಲ್ಲಿ ಹೊಸ ಬಿಕ್ಕಟ್ಟು

ಬೆಂಗಳೂರು, ಜ. 16– ಜನತಾದಳ ರಾಜ್ಯ ಘಟಕದ ಅಧ್ಯಕ್ಷ ಬಿ.ಎಲ್. ಶಂಕರ್ ಅವರನ್ನು ದಿಢೀರನೆ ಬದಲಿಸಿ ಉಪಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಧ್ಯಕ್ಷ ಸ್ಥಾನದ ಹೆಚ್ಚುವರಿ ಹೊಣೆಗಾರಿಕೆ ಕೊಟ್ಟಿರುವುದು ದಳದ ಹೊಸ ಬಿಕ್ಕಟ್ಟಿಗೆ ಹಾಗೂ ರಾಜ್ಯ ಕಾಂಗ್ರೆಸ್ ಅಧ್ಯಕ್ಷರ ಬದಲಾವಣೆಯ ಪ್ರಸ್ತಾವಕ್ಕೆ ಹೊಸ ಚಾಲನೆ ನೀಡಿರುವಂತಿದೆ.

ಭಿನ್ನಮತೀಯ ಶಾಸಕರೊಂದಿಗೆ ಗುರುತಿಸಿಕೊಂಡು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ 'ಹೊಸ ಶಿಷ್ಯ'ರಾಗಿ ದೀಕ್ಷೆ ಪಡೆದ ಸಿದ್ದರಾಮಯ್ಯನವರಿಗೆ ಅಧ್ಯಕ್ಷ ಸ್ಥಾನ ದೊರೆತಿರುವುದು ಅವರ ಪಾಲಿಗೆ ಸಂಕ್ರಾಂತಿಯ ಉಡುಗೊರೆ.

ಆದರೆ ಇದರಿಂದ ಭಿನ್ನಮತ ಪೂರ್ತಿ ತಣ್ಣಗಾಗುವ ಬದಲು ಮತ್ತೆ ತಲೆ ಎತ್ತುತ್ತಿರುವುದು ಜನತಾದಳ 'ಜಗಳದ ಪಕ್ಷ'ವೆಂಬ ಜನಾಭಿಪ್ರಾಯವನ್ನು ಮತ್ತೊಮ್ಮೆ ಸಾಬೀತು ಮಾಡುತ್ತಿದೆ. ಪಕ್ಷದಲ್ಲಿ ಎಲ್ಲರ ಮೆಚ್ಚುಗೆ ಗಳಿಸಿದ್ದ ಉತ್ಸಾಹಿ ಯುವ ನಾಯಕ ಶಂಕರ್ ಅವರನ್ನು ವಿನಾಕಾರಣ ಪದಚ್ಯುತಗೊಳಿಸಿರುವುದು ಒಕ್ಕಲಿಗ ನಾಯಕರನ್ನು ಕೆರಳಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 17-1-1974

• ರಷ್ಯಾದಿಂದ ಈ ವರ್ಷ ಭಾರಿ ಪ್ರಮಾಣದಲ್ಲಿ ಸೀಮೆಎಣ್ಣೆ, ಗೊಬ್ಬರ

ನವದೆಹಲಿ, ಜ. 16– ಭಾರತದಲ್ಲಿ ಈಗ ಕೊರತೆ ಇರುವ ನಾನಾ ವಸ್ತುಗಳ ಜತೆಗೆ ಈ ವರ್ಷ ಸೀಮೆಎಣ್ಣೆ ಹಾಗೂ ಸೀಮೆಗೊಬ್ಬರವನ್ನೂ ಗಣನೀಯ ಪ್ರಮಾಣದಲ್ಲಿ ಸರಬರಾಜು ಮಾಡುವುದಾಗಿ ರಷ್ಯಾವು ಇಂದು ಮತ್ತೆ ಭಾರತ ಸರ್ಕಾರಕ್ಕೆ ಆಶ್ವಾಸನೆ ನೀಡಿತು.

ಇದಕ್ಕೆ ವಿನಿಮಯವಾಗಿ ಭಾರತದಿಂದ ಸಾಂಪ್ರದಾಯಿಕ ಹಾಗೂ ಸಾಂಪ್ರದಾಯಿಕ ಅಲ್ಲದ ವಸ್ತುಗಳ ಆಮದನ್ನು ತಾನು ಹೆಚ್ಚಿಸಿಕೊಳ್ಳುವುದಕ್ಕೂ ರಷ್ಯಾ ಸಮ್ಮತಿಸಿತು.

ಭಾರತದ ವಾಣಿಜ್ಯ ಮಂತ್ರಿ ಪ್ರೊ. ಡಿ.ಸಿ. ಚಟ್ಟೋಪಾಧ್ಯಾಯ ಅವರ ಜತೆ ರಷ್ಯಾ ವಾಣಿಜ್ಯ ನಿಯೋಗದ ನಾಯಕ ಐ.ಟಿ. ಗ್ರಿಷಿನ ಅವರು ಈ ಮಧ್ಯಾಹ್ನ ನಡೆಸಿದ ಮಾತುಕತೆಯಲ್ಲಿ ಈ ಭರವಸೆ ದೊರೆಯಿತು.

ಸೀಮೆಎಣ್ಣೆ ಮತ್ತು ಗೊಬ್ಬರದ ಜೊತೆಗೆ ಈಗ ಉಂಟಾಗಿರುವ ನ್ಯೂಸ್ ಪ್ರಿಂಟ್ ಹಾಗೂ ಉಕ್ಕಿನ ತಗಡುಗಳ ಕೊರತೆ ನಿವಾರಿಸಿಕೊಳ್ಳಲು ಅವುಗಳನ್ನೂ ಸರಬರಾಜು ಮಾಡುವುದಾಗಿ ಈ ಮೊದಲು ರಷ್ಯಾವು ಭಾರತಕ್ಕೆ ಆಶ್ವಾಸನೆ ನೀಡಿತ್ತು.

ಸುಸ್ಥಿರ ಬದುಕಿನ ಮಾದರಿ ಅನುಸರಿಸಿದವರಿಗೆ ಸಿಗಲಿದೆ ಆರ್ಥಿಕ ಅನುಕೂಲ

ಪರಿಸರಸ್ನೇಹಿ ಬದುಕಿಗೆ ಹಸಿರು 'ಇನಾಮು'

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಸುಸ್ಥಿರ ಅಭಿವೃದ್ಧಿ ಕುರಿತು ಬೆಂಗಳೂರಿನ ಪದವಿ ಕಾಲೇಜೊಂದರಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಾತನಾಡುವಾಗ, 'ನಿಮ್ಮಲ್ಲಿ ಎಷ್ಟು ಜನ ಇಕೊ ಮಾರ್ಕ್ ಇರುವ ವಸ್ತುಗಳನ್ನು ಬಳಸುತ್ತಿದ್ದೀರಿ ಕೈಎತ್ತಿ' ಎಂದಾಗ, ಇದ್ದ 200 ಮಂದಿ ವಿದ್ಯಾರ್ಥಿ- ಅಧ್ಯಾಪಕರಲ್ಲಿ ಯಾರೊಬ್ಬರ ಕೈ ಸಹ ಮೇಲೆ ಬರಲಿಲ್ಲ. 'ನನ್ನ ಪ್ರಶ್ನೆ ಅರ್ಥವಾಗಲಿಲ್ಲವೇ?' ಎಂದದ್ದಕ್ಕೆ, 'ಇಕೊ ಮಾರ್ಕ್ ಎಂದರೆ ಏನೆಂದು ನಮಗೆ ತಿಳಿದಿಲ್ಲ. ಹಾಗಿರುವಾಗ, ಆ ಉತ್ಪನ್ನಗಳನ್ನು ಬಳಸುವ ಮಾತು ಎಲ್ಲಿಂದ ಬರುತ್ತದೆ?' ಎಂದು ಮರುಪ್ರಶ್ನೆ ಹಾಕಿದರು. ಆಶ್ಚರ್ಯವಾದರೂ ಪರದೆಯ ಮೇಲೆ ಇಕೊ ಮಾರ್ಕ್‌ನ ಚಿತ್ರ ತೋರಿಸಿದೆ ಮತ್ತು 'ಈ ಚಿಹ್ನೆ ಇರುವ ವಸ್ತುಗಳನ್ನು ಖರೀದಿಸಿ ಬಳಸಿದರೆ ನೀವು ಸುಸ್ಥಿರ ಬದುಕಿನ ಭಾಗವಾಗುತ್ತೀರಿ, ಇಲ್ಲದಿದ್ದರೆ ಇಲ್ಲ' ಎಂದೆ. 'ಇಂಥ ಚಿತ್ರವಿರುವ ವಸ್ತು ಮಾರುಕಟ್ಟೆಯಲ್ಲಿ ಲಭ್ಯವಿದೆ ಎಂಬುದೇ ನಮಗೆ ಗೊತ್ತಿಲ್ಲ' ಎಂಬ ಉತ್ತರ ಬಹುತೇಕ ವಿದ್ಯಾರ್ಥಿಗಳಿಂದ ಬಂತು.

ಇದನ್ನು ಗಮನಿಸಿದಾಗ, ನಾವು ಸುಸ್ಥಿರ ಬದುಕಿನ ಕ್ರಮಗಳಿಂದ ನೂರಾರು ಮೈಲಿ ದೂರ ಇದ್ದೇವೆ ಅನ್ನಿಸಿತು. ಪರಿಸರ ಲೇಖಕರು, ಸಂಘಟನೆಗಳು, ಸರ್ಕಾರ ಮತ್ತು ಸ್ವಯಂಸೇವಾ ಸಂಸ್ಥೆಗಳು ಈ ದಿಸೆಯಲ್ಲಿ ಬಹಳಷ್ಟು ಪ್ರಯತ್ನ ಮಾಡುತ್ತಿದ್ದರೂ ಜನಸಾಮಾನ್ಯರಲ್ಲಿ ಇದರ ಬಗ್ಗೆ ಹೆಚ್ಚಿನ ತಿಳಿವಳಿಕೆಯಾಗಲೀ ಮಾಹಿತಿಯಾಗಲೀ ಇಲ್ಲ. ಹೀಗೆ ಮಾಡಿ, ಹಾಗೆ ಮಾಡಿ ಎಂದು ಹೇಳಿದರೆ ಜನ ಅಷ್ಟಾಗಿ ಪಾಲಿಸುವುದಿಲ್ಲ ಎಂಬುದನ್ನು ಚೆನ್ನಾಗಿ ಅರಿತಿರುವ ಕೇಂದ್ರ ಸರ್ಕಾರವು ಸುಸ್ಥಿರ ಬದುಕಿನ ಮಾದರಿಗಳನ್ನು ಅನುಸರಿಸಿದವರಿಗೆ ಆರ್ಥಿಕ ಅನುಕೂಲ ಕಲ್ಪಿಸುವ ಉದ್ದೇಶದ ಹಸಿರು ಕ್ರೆಡಿಟ್ ಯೋಜನೆಯನ್ನು ಈ ತಿಂಗಳ ಕೊನೆಗೆ ಜಾರಿಗೊಳಿಸಲಿದೆ.

ದೇಶದಲ್ಲಿ ಹೆಚ್ಚಾಗುತ್ತಿರುವ ವಿವಿಧ ಪ್ರಾಕೃತಿಕ ಮಾಲಿನ್ಯಗಳನ್ನು ಕಡಿಮೆ ಮಾಡುವ ದಿಸೆಯಲ್ಲಿ ಸಾರ್ವಜನಿಕರನ್ನು ಆಕರ್ಷಿಸಲು ಜಾರಿಗೆ ತರುತ್ತಿರುವ ಯೋಜನೆ ಇದು. ಪ್ರಾರಂಭದ ಹಂತವಾಗಿ ನೀರಿನ ಸಂರಕ್ಷಣೆ ಮತ್ತು ಅರಣ್ಯೀಕರಣಕ್ಕೆ ಒತ್ತು ನೀಡಿರುವ ಈ ಯೋಜನೆಯು ಇಂಡಿಯನ್ ಕೌನ್ಸಿಲ್ ಫಾರ್ ಫಾರೆಸ್ಟ್ರಿ ರಿಸರ್ಚ್ ಆ್ಯಂಡ್ ಎಜುಕೇಷನ್ ಸಂಸ್ಥೆಯ ನೇತೃತ್ವದಲ್ಲಿ ನಡೆಯುತ್ತದೆ. ತಾವು ಮಾಡುತ್ತಿರುವ ಕೆಲಸ ಅಥವಾ ತಯಾರಿಸುತ್ತಿರುವ ಉತ್ಪನ್ನ ಯಾವುದು ಮತ್ತು ಅದಕ್ಕಾಗಿ ಯಾವ ಕ್ರಮ ಬಳಸುತ್ತಿದ್ದೇವೆ ಎಂಬುದನ್ನು ಸರ್ಕಾರವು ಗ್ರೀನ್ ಕ್ರೆಡಿಟ್‌ಗಾಗಿ ಸ್ಥಾಪಿಸಿರುವ ವೆಬ್‌ಸೈಟ್‌ನಲ್ಲಿ ಸಂಬಂಧಿಸಿದ ವ್ಯಕ್ತಿಗಳು ನೋಂದಾಯಿಸಿಕೊಳ್ಳಬೇಕು. ಆಸಕ್ತ ಜನ, ಉದ್ಯಮಗಳು, ಸ್ಥಳೀಯ ಸಂಸ್ಥೆ, ಸಂಘಟನೆಗಳು ತಾವು ಮಾಡುವ ಕೆಲಸಗಳ ಮೂಲಕ ವಾತಾವರಣದ ಮೇಲೆ ಸಕಾರಾತ್ಮಕ ಪರಿಣಾಮ ಉಂಟು ಮಾಡಿದರೆ ಅವರಿಗೆ ಗ್ರೀನ್ ಕ್ರೆಡಿಟ್ ಕೊಡಲಾಗುವುದು.

ಜನ ಎಲ್ಲೆಲ್ಲಿ ಮಾಲಿನ್ಯದ ಪ್ರಮಾಣವನ್ನು ಕಡಿಮೆ ಮಾಡಿಕೊಂಡು ಬದುಕು ಸಾಗಿಸಬಹುದು ಎಂಬ ದಿಸೆಯಲ್ಲಿ ಎಂಟು ವಿವಿಧ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಗಿಡ ನೆಡುವುದು, ಸುಸ್ಥಿರ ಕಟ್ಟಡ ನಿರ್ಮಾಣ ಮತ್ತು ಮೂಲಸೌಕರ್ಯ ಒದಗಿಸುವುದು, ನೀರಿನ ಮೂಲಗಳನ್ನು ಸಂರಕ್ಷಿಸುವುದು, ಸುಸ್ಥಿರ ಕೃಷಿ, ಕಸ ನಿರ್ವಹಣೆ, ವಾಯುಮಾಲಿನ್ಯ ನಿಯಂತ್ರಣ, ಕಾಂಡ್ಲಾ ಕಾಡಿನ ಸಂರಕ್ಷಣೆ ಮತ್ತು ಪುನರ್‌ಸ್ಥಾಪನೆ, ಇಕೊ ಮಾರ್ಕ್‌ಗಳಿಗೆ ಸಂಬಂಧಿಸಿದ ಕೆಲಸ ಮಾಡುವವರು ಮತ್ತು ಈ ಕ್ಷೇತ್ರಗಳಲ್ಲಿ ದುಡಿಯುವವರಿಗೆ ಗ್ರೀನ್ ಕ್ರೆಡಿಟ್ ಕೊಡಲಾಗುವುದು ಎಂದು ಸರ್ಕಾರ ಹೇಳಿದೆ.

ಈ 8 ಕ್ಷೇತ್ರಗಳಲ್ಲಿ ಪರಿಸರಕ್ಕೆ ಅನುಕೂಲವಾಗುವ ರೀತಿಯಲ್ಲಿ ಕೆಲಸ ಮಾಡಿದರೆ ಹಣಕಾಸಿನ ಅನುಕೂಲ ಸಿಗಲಿದೆ ಎಂಬ ಭರವಸೆಯು ಪರಿಸರ ಸಂರಕ್ಷಣೆಯ ಕೆಲಸಗಳಿಗೆ ಹೊಸ ಆಯಾಮ ತರಲಿದೆಯೋ ಅಥವಾ ಹೊಸ ಸಮಸ್ಯೆಗಳನ್ನು ತಂದೊಡ್ಡಲಿದೆಯೋ ಎಂಬುದನ್ನು ಕಾದು ನೋಡಬೇಕು. ಜನ ತಮ್ಮ ಆಸಕ್ತಿ, ವೈಯಕ್ತಿಕ ತೃಪ್ತಿಗಾಗಿ ಪರಿಸರಸ್ನೇಹಿ ಕೆಲಸ ಮಾಡಿದ ಉದಾಹರಣೆಗಳು ಬಹಳಷ್ಟಿವೆ. ವಿವಿಧ ಸಂಸ್ಥೆಗಳು ಜವಾಬ್ದಾರಿಯುತವಾಗಿ ಕೆಲಸ ಮಾಡುತ್ತವೆ. ಸಾಲುಮರದ ತಿಮ್ಮಕ್ಕ ಅವರು ತಮಗೆ ಮಕ್ಕಳಿರದ ಕೊರತೆಯನ್ನು ರಸ್ತೆಬದಿಯ ಸಾಲುಮರಗಳಲ್ಲಿ ತುಂಬಿಕೊಂಡು ಇಡೀ ವಿಶ್ವಕ್ಕೆ ಮಾದರಿಯಾದರು. ಛತ್ತೀಸಗಢ ರಾಜ್ಯದ ಅಂಬಿಕಾಪುರದ ಅಕ್ಕಂದಿರು, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಅಲಂಕಾರು, ಅರಂತೋಡು ಪಂಚಾಯಿತಿಗಳು ಪರಿಸರಸ್ನೇಹಿ ವೈಜ್ಞಾನಿಕ ಕಸ ನಿರ್ವಹಣೆ ಹಾಗೂ ವಿಲೇವಾರಿಗೆ ಸಂಬಂಧಿಸಿದಂತೆ ಹೊಸ ವಿಧಾನಗಳನ್ನೇ ಹುಟ್ಟುಹಾಕಿರುವ ನಿದರ್ಶನಗಳಿವೆ.

ನೀರಿನ ಮೂಲಗಳ ಸಂರಕ್ಷಣೆ, ನೆಲದ ಫಲವತ್ತತೆ ಕಾಯ್ದುಕೊಳ್ಳುವುದು, ಮಣ್ಣು ಸವಕಳಿ ತಡೆ, ತ್ಯಾಜ್ಯ ನಿರ್ವಹಣೆ, ಇಂಗಾಲದ ಡೈಯಾಕ್ಸೈಡ್ ಹೊಮ್ಮುವಿಕೆಯನ್ನು ಕಡಿಮೆ ಮಾಡುವ ಕೆಲಸಗಳಿಗೆ ಸರ್ಕಾರದಿಂದಲೇ ನೇರ ಉತ್ತೇಜನ ದೊರಕುತ್ತಿರುವುದು ಜನರಲ್ಲಿ ಇಮ್ಮಡಿ ಉತ್ಸಾಹ ಮೂಡಿಸಿದೆ. ನಗರ ಪ್ರದೇಶ, ತರಿಭೂಮಿ, ಹುಲ್ಲುಗಾವಲು ಪ್ರದೇಶಗಳಿಗೆ ಅನ್ವಯವಾಗುವಂತೆ ಅನೇಕ ಪರಿಸರಸ್ನೇಹಿ ಕೆಲಸಗಳು ನಿರಂತರವಾಗಿ ನಡೆಯುತ್ತಿವೆ. ಈ ಕೆಲಸಗಳೆಲ್ಲ ಇದುವರೆಗೂ ಪಾರಿಸರಿಕ ದೃಷ್ಟಿಯಿಂದ ನಡೆಯುತ್ತಿದ್ದವು. ಇನ್ನುಮುಂದೆ ಇವೆಲ್ಲ ಮಾರುಕಟ್ಟೆ ಅಗತ್ಯಗಳಿಗೂ ಸಲ್ಲಬೇಕಾದ ಅನಿವಾರ್ಯ ಸೃಷ್ಟಿಯಾಗುವುದರಿಂದ ಸಂರಕ್ಷಣೆಯ ಕ್ರಮ ಮತ್ತು ಕೆಲಸದ ವಿಧಾನಗಳು ಬದಲಾಗಲಿವೆ. ಇದುವರೆಗೂ ಮನೆ ಕಟ್ಟಲು, ಭೂಮಿ ಸಾಗುವಳಿ ಮಾಡಲು, ವಾಹನ ಕೊಳ್ಳಲು ಸಾಲ ಕೊಡುತ್ತಿದ್ದ ಬ್ಯಾಂಕುಗಳು, ಇನ್ನುಮುಂದೆ ಹಸಿರು ಕ್ರೆಡಿಟ್‌ನ ಕೆಲಸಗಳಿಗೂ ಸಾಲ ನೀಡಬೇಕಾಗುತ್ತದೆ ಎಂಬುದು ತಜ್ಞರ ಅಭಿಮತ.



ಯೋಜನೆಯನ್ನು ಯಶಸ್ವಿಗೊಳಿಸುವ ದಿಸೆಯಲ್ಲಿ, ವಾಯುಗುಣ ವೈಪರೀತ್ಯ ನಿಯಂತ್ರಣಕ್ಕಾಗಿ ಜನಸಾಮಾನ್ಯರು ಏನೇನು ಮಾಡಬಹುದು ಎಂಬುದನ್ನು ಸ್ಪಷ್ಟವಾಗಿ ಹೇಳುವ, ಕಲಿಸುವ ವ್ಯವಸ್ಥೆ ಇರಬೇಕು. ಮಾಡುವ ಕೆಲಸಗಳನ್ನು ಸ್ಥಳೀಯವಾಗಿ ವಿವಿಧ ಹಂತಗಳಲ್ಲಿ ಗುರುತಿಸುವಂತಾದರೆ ಸಂರಕ್ಷಣೆ ಕೆಲಸಗಳು ಮತ್ತಷ್ಟು ಚೆನ್ನಾಗಿ ನಡೆಯುತ್ತವೆ. ಬೃಹತ್ ಜನಸಂಖ್ಯೆಯ ನಮ್ಮ ದೇಶದಲ್ಲಿ ಈ ಕೆಲಸಗಳಿಂದ ಪರಿಸರಕ್ಕೆ ಅನುಕೂಲ ಮತ್ತು ಜನರಿಗೆ ಲಾಭವಾಗಬೇಕೆಂದರೆ, ಗ್ರಾಮ ಮಟ್ಟದಿಂದ ಹಿಡಿದು ಬೃಹತ್ ನಗರದವರೆಗೆ ಯೋಜನೆಯು ವ್ಯವಸ್ಥಿತವಾಗಿ ಅನುಷ್ಠಾನಗೊಳ್ಳಬೇಕು. ಮೇಲೆ ವಿಂಗಡಿಸಿರುವ ಅನೇಕ ಕ್ಷೇತ್ರಗಳು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಡುವುದರಿಂದ, ಅಲ್ಲಿ ನಡೆಯುವ ಕೆಲಸಗಳನ್ನು ಸರಿಯಾಗಿ ನಿರ್ವಹಿಸಲು ಕಾನೂನಾತ್ಮಕ ತೊಡಕುಗಳನ್ನು ಮೊದಲು ನಿವಾರಿಸಬೇಕು. ಉದಾಹರಣೆಗೆ, ತರಿ ಭೂಮಿ ಸಂರಕ್ಷಣೆ ಎಂದಾಕ್ಷಣ ನೀರಾವರಿ, ಅರಣ್ಯ, ಕಂದಾಯ, ನದಿ ಪ್ರಾಧಿಕಾರ ಹೀಗೆ ಮೂರ್ನಾಲ್ಕು ವಿಭಾಗಗಳಿಗೆ ಸಂಬಂಧಪಡುವುದರಿಂದ, ಜನರು ಮಾಡುವ ಕೆಲಸವನ್ನು ಯಾರು ಗುರುತಿಸಬೇಕು ಎಂಬ ಗೊಂದಲ ಸಹಜವಾಗಿ ಏರ್ಪಡುತ್ತದೆ.

ಕೆಲಸ ಸಮರ್ಪಕವಾಗಿದೆಯೇ ಎಂದು ನಿರ್ಧರಿಸಲು ತಜ್ಞರು ರೂಪಿಸಿದ ಮಾನದಂಡಗಳು ಬೇಕು. ಪರಿಸರ ಸಂಬಂಧಿ ಕೆಲಸಗಳಿಗಾಗಿ ಪ್ರತ್ಯೇಕ ಬ್ಯೂರೊ ಸ್ಥಾಪಿಸುವುದು ಒಳ್ಳೆಯದು ಎಂಬುದು ಕ್ಷೇತ್ರದಲ್ಲಿರುವವರ ಮಾತು. ಕೆಲಸ ಶುರು ಮಾಡುವುದಕ್ಕಿಂತ ಮುಂಚೆ ಹೀಗೆ ಮಾಡಬೇಕು ಎಂದು ಸೂಕ್ತ ಸಲಹೆ, ಮಾರ್ಗದರ್ಶನ ನೀಡುವ ಸ್ಥಳೀಯ ಸಂಸ್ಥೆಯ ಘಟಕಗಳ ಅವಶ್ಯಕತೆ ತುಂಬಾ ಇರುತ್ತದೆ. ಈಗಾಗಲೇ ಜನರು ಮಾಡುತ್ತಿರುವ ಪರಿಸರಸ್ನೇಹಿ ಕೆಲಸಗಳಿಗೆ ಸಲಹೆ, ಸಹಕಾರ ನೀಡಿದಲ್ಲಿ ಗ್ರೀನ್ ಕ್ರೆಡಿಟ್ ಪಡೆಯಲು ಇಚ್ಛಿಸುವವರು ತಪ್ಪುತಪ್ಪಾದ ಕ್ರಮಗಳನ್ನು ಅನುಸರಿಸಿ ಅನಗತ್ಯವಾಗಿ ಸಮಯ ವಿಳಂಬ ಮಾಡುವುದು ತಪ್ಪುತ್ತದೆ.

ಆದರೆ ಇದರ ಕುರಿತು ಕಾನೂನು ತಜ್ಞರ ಅಭಿಪ್ರಾಯ ಬೇರೆಯೇ ಇದೆ. ದೇಶದ ಯಾವುದೇ ನಾಗರಿಕರು ಪರಿಸರಸ್ನೇಹಿಯಾಗಿ ಬದುಕಬೇಕಾದದ್ದು ಸಹಜಕ್ರಿಯೆ. ಅದರಲ್ಲೂ ಉದ್ಯಮಗಳು, ಉತ್ಪಾದನೆ ವಲಯಗಳು, ಅರಣ್ಯ, ನೀರಾವರಿ ಇಲಾಖೆಗಳು ಪರಿಸರಕ್ಕೆ ತೊಂದರೆಯಾಗದಂತೆ ಕೆಲಸ ಮಾಡಬೇಕಾದದ್ದು ಮೂಲಭೂತ ಕರ್ತವ್ಯ ಆಗಿರುವುದರಿಂದ, ಅದಕ್ಕಾಗಿ ಬಹುಮಾನ ನೀಡುವುದು ಎಷ್ಟು ಸರಿ ಎಂಬ ಪ್ರಶ್ನೆ ಎದ್ದಿದೆ. ಇನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಕೆಲಸವಾದರೂ ಏನು? ಮಾಲಿನ್ಯ ನಿಯಂತ್ರಣವನ್ನು ಹೇಗೆ ಮಾಡಬೇಕು, ಏಕೆ ಮಾಡಬೇಕು ಎಂಬುದನ್ನು ಹೇಳುತ್ತಲೇ ತಾನೇ ಮುಂದೆ ನಿಂತು ಮಾದರಿ ಕೆಲಸಗಳನ್ನು ಮಾಡಿ ತೋರಿಸಬೇಕು. ಎಲ್ಲೆಲ್ಲಿ ಉದ್ಯಮಗಳಿಂದ ಕಾನೂನಿನ ಉಲ್ಲಂಘನೆ ಆಗುತ್ತದೆಯೋ ಅಲ್ಲಿ ಶಿಕ್ಷೆ ವಿಧಿಸಲು ಮುಂದಾಗಬೇಕು. ಪರಿಸರಸ್ನೇಹಿ ವಿಧಾನಗಳನ್ನು ಅನುಸರಿಸಿ ಕಟ್ಟಡ ಕಟ್ಟಬೇಕೆಂಬ ನಿಯಮವಿದೆ. ಅದನ್ನು ಪಾಲಿಸುವಂತೆ ತಾಕೀತು ಮಾಡಬೇಕು. ಅದಕ್ಕೆ ಬಹುಮಾನವೇಕೆ? ಕಾನೂನುಬದ್ಧವಾಗಿ ಮಾಡಬೇಕಾದ ಕೆಲಸಗಳಿಗೆ ಪ್ರತ್ಯೇಕ ಇನಾಮು ಬೇಕೆ?

ಚುರುಮುರಿ



ರೈತ ಕಲ್ಯಾಣ

• ಮಣ್ಣೆ ರಾಜು

ಚಟ್ನಹಳ್ಳಿಯಲ್ಲಿ ಧಾನ್ಯಮೇಳ ಏರ್ಪಾಡಾಗಿತ್ತು. ಧಾನ್ಯರಾಶಿಗೆ ಪೂಜೆ ಸಲ್ಲಿಸಿ ಶಾಸಕರು ಸುಗ್ಗಿಹಬ್ಬ ಉದ್ಘಾಟಿಸಿದರು.

'ಅನ್ನದಾತರಾದ ನೀವು ರೈತರೆಂದು ಹೆಮ್ಮೆಪಡಿರಿ. ರೈತರು ದೇಶದ ಬೆನ್ನೆಲುಬು, ರೈತರ ಬೆನ್ನಿಗೆ ಸರ್ಕಾರ ಸದಾ ಇರುತ್ತದೆ. ರೈತರಿಗೆ ಸರ್ಕಾರ ಸಾಲಸೌಲಭ್ಯ ಕೊಟ್ಟು, ಮನ್ನಾ ಮಾಡುತ್ತದೆ. ನಿಮ್ಮ ಬ್ಯಾಂಕ್ ಖಾತೆಗೆ ನಗದು ಜಮಾ ಮಾಡುತ್ತದೆ. ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ, ಬೆಂಬಲ ಬೆಲೆ ನೀಡುತ್ತದೆ...' ಶಾಸಕರು ಭಾಷಣ ಮಾಡಿದರು.

'ಉತ್ಪನ್ನಗಳಿಗೆ ಬೆಲೆ ಕೊಟ್ಟರೆ ಸಾಕೆ? ರೈತರಿಗೂ ಬೆಂಬಲ, ಬೆಲೆ ಸಿಗಬೇಕು' ನಂಜಪ್ಪ ಒತ್ತಾಯಿಸಿದ.

'ವ್ಯವಸಾಯಕ್ಕೆ ರಾಜೀನಾಮೆ ನೀಡಿ ರೈತರ ಮಕ್ಕಳು ಉದ್ಯೋಗ ಹುಡುಕಿಕೊಂಡು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ನಮ್ಮ ಮಕ್ಕಳನ್ನು ಉಳಿಸಿ' ತಿಮ್ಮಜ್ಜ ಕೋರಿದ.

'ರೈತರ ಮಕ್ಕಳಲ್ಲಿ ಜಾಗೃತಿ ಮೂಡಿಸಲು 'ಮರಳಿ ಬನ್ನಿ ಹಳ್ಳಿಗೆ' ಎಂಬ ಆಂದೋಲನ ರೂಪಿಸಲು ಸರ್ಕಾರಕ್ಕೆ ಮನವಿ ಮಾಡ್ತೀನಿ' ಶಾಸಕರು ಹೇಳಿದರು.

'ರೈತರ ಮಕ್ಕಳನ್ನು ಕಾಪಾಡದಿದ್ದರೆ ನಾವೂ ವ್ಯವಸಾಯಕ್ಕೆ ರಾಜೀನಾಮೆ ನೀಡುತ್ತೇವೆ' ತಿಮ್ಮಜ್ಜ ನಿರ್ಧಾರ ಹೇಳಿದ.

'ಹಾಗೆ ಮಾಡಬೇಡಿ, ರೇಷನ್ ಬೆಳೆಯುವ ರೈತರು ರಾಜೀನಾಮೆ ಕೊಟ್ಟರೆ ದೇಶದ ಗತಿಯೇನು?! ನಿಮ್ಮ ಏಳಿಗೆಗೆ ಸರ್ಕಾರ ರೈತ ಕಲ್ಯಾಣ ಕಾರ್ಯಕ್ರಮ ಜಾರಿಗೆ ತರುತ್ತದೆ'.

'ರೇಷನ್ ಬೆಳೆಯುವ ರೈತರ ಜನರೇಷನ್ನೂ ಬೆಳೆಯಬೇಕಲ್ವಾ ಸಾರ್? ನಮ್ಮ ಮಕ್ಕಳು ಮದುವೆಯಾಗಲು ವಧುಗಳು ಸಿಗುತ್ತಿಲ್ಲ, ಸರ್ಕಾರವೇ ಹೆಣ್ಣು ಹುಡುಕಿ ಯುವ ರೈತರಿಗೆ ಕಲ್ಯಾಣ ಮಾಡಬೇಕು...' ತಿಮ್ಮಜ್ಜ ಒತ್ತಾಯಿಸಿದ.

ಶಾಸಕರು ಗಾಬರಿಯಾದರು. 'ಸರ್ಕಾರದಿಂದ ಮದ್ವೆ ಖರ್ಚು ಕೊಡಿಸಬಹುದು, ಹೆಣ್ಣು ಕೊಡಿಸಿ ಅಂದ್ರೆ ಸಾಧ್ಯನಾ?' ಎಂದ ಶಾಸಕರು, ಜನರನ್ನು ಸಮಾಧಾನಪಡಿಸಲು, 'ಈ ಬಗ್ಗೆ ಅಸೆಂಬ್ಲಿಯಲ್ಲಿ ಚರ್ಚೆ ಮಾಡ್ತೀನಿ...' ಎಂದು ಹೇಳಿ ಕಾರು ಹತ್ತಿ ಹೊರಟರು.

ಸಂಗತ

ಪ್ರಶ್ನಿಸುವ ಮನೋಭಾವ ಮುಕ್ತವಾಗಿದೆಯೇ?

ಮಕ್ಕಳಿಗೆ ಆಸ್ತಿಕರಾಗಿ ರೂಪುಗೊಳ್ಳಲು ಸಿಗುವಷ್ಟೇ ಮಾರ್ಗದರ್ಶನ ಮತ್ತು ಪ್ರೋತ್ಸಾಹ, ಅವರು ವೈಚಾರಿಕವಾಗಿ ಚಿಂತಿಸುವಂತೆ ಮಾಡುವಲ್ಲಿಯೂ ಸಿಗುತ್ತಿದೆಯೇ?

• ಎಚ್.ಕೆ.ಶರತ್

ಉದ್ಯಾನವೊಂದರಲ್ಲಿ ಏರು-ಇಳಿ ಬಂಡಿ ಮೇಲೆ ಕುಳಿತು ಆಟವಾಡುತ್ತಿದ್ದ ಏಳೆಂಟರ ವಯೋಮಾನದ ಮಕ್ಕಳಿಬ್ಬರ ನಡುವಿನ ಮಾತು, ಅಲ್ಲೇ ಸಮೀಪದಲ್ಲಿ ಪುಟ್ಟ ಮಗುವನ್ನು ಆಡಿಸಿಕೊಂಡು ನಿಂತಿದ್ದ ನನ್ನ ಗಮನ ಸೆಳೆಯಿತು. ಒಬ್ಬ 'ತುಂಬಾ ಮೇಲಕ್ಕೆ ನನ್ನ ಏರಿಸಬೇಡ. ಆಮೇಲೆ ನಾನು ದೇವರ ಹತ್ರ ಹೋಗ್ಬಿಡ್ತೀನಿ' ಅಂದ. ಮಾತು ಮುಂದುವರಿಸಿ, 'ಏರಿದ ಮೇಲೆ ಮತ್ತೆ ಇಳೀತೀನಲ್ವಾ... ಅಂದ್ರೆ ದೇವರ ಹತ್ರಕ್ಕೆ ಹೋಗಿ ಮತ್ತೆ ವಾಪಸ್ ಇಲ್ಲಿಗೇ ಬರ್ತೀನಿ ಅಲ್ವಾ' ಅಂತ, ಎದುರು ಕುಳಿತಿದ್ದ ಸ್ನೇಹಿತನ ಬಳಿ ವಿಚಾರಿಸಿದ. ಸ್ನೇಹಿತ ಅವನಿಗೆ ಉತ್ತರ ನೀಡುವ ಬದಲು ತನ್ನಲ್ಲಿರುವ ಗೊಂದಲಗಳನ್ನು ಹಂಚಿಕೊಳ್ಳತೊಡಗಿದ. 'ಎಷ್ಟು ಎತ್ತರಕ್ಕೆ ಹೋದ್ರೆ ನಾವು ದೇವರನ್ನ ಕಾಣಬಹುದು?'

ದೇವರಿಗೆ ಸಂಬಂಧಿಸಿದಂತೆ ತಮ್ಮಲ್ಲಿ ಮೂಡುತ್ತಿರುವ ಪ್ರಶ್ನೆಗಳಿಗೆ ಇಬ್ಬರ ಬಳಿಯೂ ಸೂಕ್ತ ಉತ್ತರ ಇರದಿದ್ದರೂ ಮಾತು ವಿಷಯಾಂತರಗೊಳ್ಳದೆ ಮುಂದುವರಿಯಿತು.

'ಅಲ್ಲ, ನಾವು ಮನಸ್ಸಿನಲ್ಲಿ ಬೇಡಿಕೊಳ್ಳೋದು ದೇವರಿಗೆ ಹೇಗೆ ಕೇಳುಸ್ತೆ?'

'ದೇವರಿಗೆ ಅಷ್ಟು ದೊಡ್ಡ ಕಿವಿ ಇದ್ಯಾ? ಗಣೇಶನ್ನ ಬಿಟ್ರೆ ಉಳಿದ ದೇವರ ಕಿವಿಗಳೆಲ್ಲ ನಮ್ಮಷ್ಟೇ ಇರೋದನ್ನ ಫೋಟೊದಲ್ಲಿ ನೋಡಿಲ್ವಾ?'

'ಹಾಗಾದ್ರೆ ದೇವ್ರು ಎಲ್ಲಿರಬಹುದು? ನಿಜವಾಗ್ಲೂ ದೇವರನ್ನ ನೋಡ್ಬೇಕು ಅಂದ್ರೆ ನಾವು ಎಲ್ಲಿಗೆ ಹೋಗ್ಬೇಕು?'

ಹೀಗೆ ದೇವರ ಕುರಿತ ಚರ್ಚೆ ಮುಂದುವರಿಸಿದ ಮಕ್ಕಳಿಬ್ಬರಲ್ಲೂ ಪ್ರಶ್ನೆಗಳು ಹುಟ್ಟಿಕೊಳ್ಳುತ್ತಾ ಹೋದವೇ ವಿನಾ ಅವರ ಗೊಂದಲವನ್ನು ಬಗೆಹರಿಸುವ ಉತ್ತರ ಮಾತ್ರ ಸಿಗಲಿಲ್ಲ. ಕೊನೆಗೆ, 'ಈ ಆಟ ಬೋರಾಗ್ತಿದೆ, ಬೇರೆ ಆಡೋಣ' ಅಂತ ಏರು-ಇಳಿ ಬಂಡಿಯಿಂದ ಕೆಳಗಿಳಿದು ಬೇರೆಡೆಗೆ ತೆರಳಿದರು.

'ಇನೊವೇಷನ್ ಆ್ಯಂಡ್ ಡಿಸೈನ್ ಥಿಂಕಿಂಗ್' ಎಂಬ ಕೋರ್ಸು ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಇದೆ. ನೈಜ ಸಮಸ್ಯೆಯನ್ನು ಆರಿಸಿಕೊಂಡು, ಅದನ್ನು ಪರಿಹರಿಸಲು ಹೊಸ ದಾರಿ ಕಂಡುಕೊಳ್ಳಲು ಪ್ರಯತ್ನಿಸುವುದು ಈ ಕೋರ್ಸಿನ ಆಶಯ. ವಿದ್ಯಾರ್ಥಿಗಳಲ್ಲಿ ಸಮಸ್ಯೆ ಪರಿಹರಿಸುವ ಕೌಶಲವನ್ನು ಮೈಗೂಡಿಸುವುದು ಇದರ ಉದ್ದೇಶ.

ಇದರ ಭಾಗವಾಗಿ, ಧಾರ್ಮಿಕ ಚಟುವಟಿಕೆಗಳಿಂದ ಉಂಟಾಗುತ್ತಿರುವ ಶಬ್ದದಿಂದ ಎಂಬಿಬಿಎಸ್ ಓದುತ್ತಿರುವ ತನ್ನ ಸ್ನೇಹಿತನಿಗೆ ಆಗುತ್ತಿರುವ ತೊಂದರೆಯ ವಿಷಯವನ್ನು ವಿದ್ಯಾರ್ಥಿಯೊಬ್ಬ ಆರಿಸಿಕೊಂಡಿದ್ದ. ಅವನು ಇದನ್ನು ತರಗತಿಯಲ್ಲಿ ಹೇಳಿದ ಕೂಡಲೇ ಮತ್ತೊಬ್ಬ ವಿದ್ಯಾರ್ಥಿ ಎದ್ದು ನಿಂತು, 'ಇದೂ ಒಂದು ಸಮಸ್ಯೆನಾ? ಧಾರ್ಮಿಕ ಚಟುವಟಿಕೆಗಳಿಂದ ಹೊರಹೊಮ್ಮುವ ಸದ್ದಿನಲ್ಲಿ ಚಿಕಿತ್ಸಕ ಅಂಶಗಳಿವೆ (ಮ್ಯೂಸಿಕ್ ಥೆರಪಿ) ಎಂದು ಈಗಾಗಲೇ ಸಾಬೀತಾಗಿಲ್ವಾ?' ಅಂತ ಅಸಮಾಧಾನ ವ್ಯಕ್ತಪಡಿಸಿದ.

'ಇದು ನನ್ನ ಸ್ನೇಹಿತ ಅನುಭವಿಸುತ್ತಿರುವ ಸಮಸ್ಯೆ. ಅವನು ನೆಲೆಸಿರುವ ಕೊಠಡಿಗೆ ಸಮೀಪವೇ ಧಾರ್ಮಿಕ ಶ್ರದ್ಧಾಕೇಂದ್ರ ಇರೋದ್ರಿಂದ ಅವನ ಓದಿಗೆ ತೊಂದರೆ ಆಗ್ತಿರೋದು ನಿಜ' ಎಂದು, ತಾನು ಆರಿಸಿಕೊಂಡಿರುವುದು ನೈಜ ಸಮಸ್ಯೆಯನ್ನೇ ಎಂದು ವಿದ್ಯಾರ್ಥಿ ನಿರೂಪಿಸಿದ.

ಎಂಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕರನ್ನು ಒಳಗೊಂಡಿರುವ ವಾಟ್ಸ್‌ಆ್ಯಪ್ ಗುಂಪಿಗೆ ಇತ್ತೀಚೆಗೆ ಒಬ್ಬರು, 3-ಡಿ ಮುದ್ರಣಯಂತ್ರ ಬಳಸಿ ತಮ್ಮ ಕಾಲೇಜಿನ ಲ್ಯಾಬ್‌ನಲ್ಲಿ ತೆಗೆದ, ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರದ ಮಾದರಿಯ ಫೋಟೊವನ್ನು ಹಾಕಿದ್ದರು. ಅದಕ್ಕೆ ಉಳಿದ ಅಧ್ಯಾಪಕರು ಮೆಚ್ಚುಗೆ ಸೂಚಿಸಿದರು.

ದೇವರ ಬಗೆಗಿನ ಪ್ರಶ್ನೆಗಳನ್ನು ನಿಭಾಯಿಸುವುದು, ಧಾರ್ಮಿಕ ಆಚರಣೆಗಳ ಭಾಗವಾಗಬೇಕೊ ಬೇಡವೊ ಎನ್ನುವುದನ್ನು ವ್ಯಕ್ತಿಗತ ನೆಲೆಯಲ್ಲಿ ನಿರ್ಧರಿಸಲು ಬೇಕಿರುವ ಪೂರಕ ವಾತಾವರಣವನ್ನು ಒದಗಿಸುವುದು ಕೂಡ ಆರೋಗ್ಯಪೂರ್ಣ ಸಮಾಜವೊಂದರ ಆದ್ಯತೆ ಆಗಬೇಕಲ್ಲವೇ? ದೇವರ ಅಸ್ತಿತ್ವಕ್ಕೆ ಸಂಬಂಧಿಸಿದಂತೆ ಮಕ್ಕಳಲ್ಲಿ ಮೂಡುವ ಪ್ರಶ್ನೆಗಳಿಗೆ ಸಂಯಮದಿಂದ ಉತ್ತರಿಸುವ, ವೈಜ್ಞಾನಿಕತೆಗೂ ಧಾರ್ಮಿಕ ನಂಬಿಕೆಗಳಿಗೂ ಇರುವ ವ್ಯತ್ಯಾಸವನ್ನು ತಿಳಿಸಿಕೊಡುವ ಮುತುವರ್ಜಿ ತೋರಬೇಕಲ್ಲವೇ?

ಮಕ್ಕಳಲ್ಲಿ ದೈವಶ್ರದ್ಧೆ ಮೂಡುವಂತೆ ನೋಡಿಕೊಳ್ಳಲು ತೋರುವಷ್ಟೇ ಕಾಳಜಿಯನ್ನು ಅವರು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಚಿಂತಿಸುವಂತೆ ಮಾಡಲೂ ತೋರುತ್ತೇವೆಯೇ? ಉದ್ಯಾನದಲ್ಲಿ ಆಡುತ್ತಿದ್ದ ಮಕ್ಕಳ ಮಾತುಕತೆಯಲ್ಲಿ ಇಣುಕುತ್ತಿದ್ದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡಲು ಬೇಕಿರುವ ಮುಕ್ತ ಮನಸ್ಸು ಹೊಂದುವುದರೆಡೆಗೆ ಸಮಾಜ ಹೊರಳುತ್ತಿದೆಯೇ? ಮಕ್ಕಳಿಗೆ ಆಸ್ತಿಕರಾಗಿ ರೂಪುಗೊಳ್ಳಲು ಸಿಗುವಷ್ಟೇ ಮಾರ್ಗದರ್ಶನ ಮತ್ತು ಪ್ರೋತ್ಸಾಹ, ಅವರು ವೈಚಾರಿಕವಾಗಿ ಚಿಂತಿಸುವಂತೆ ಮಾಡುವಲ್ಲಿಯೂ ಸಿಗುತ್ತಿದೆಯೇ? ಧಾರ್ಮಿಕ ಪರಿಕಲ್ಪನೆ ಹಾಗೂ ವೈಜ್ಞಾನಿಕ ಚಿಂತನೆ ಇವುಗಳಲ್ಲಿ ತಮಗೆ ಸರಿಕಂಡದ್ದು, ಸೂಕ್ತವೆನಿಸಿದ್ದನ್ನು ಆರಿಸಿಕೊಳ್ಳುವ, ಒಪ್ಪಿಕೊಳ್ಳುವ ಸ್ವಾತಂತ್ರ್ಯವನ್ನು ಮಕ್ಕಳ ಎದುರಿಗೆ ಮುಕ್ತವಾಗಿ ಇಟ್ಟಿದ್ದೇವೆಯೇ?

ಧಾರ್ಮಿಕ ನಂಬಿಕೆಗಳಿಗೆ ವೈಜ್ಞಾನಿಕತೆಯ ಪೋಷಾಕು ತೊಡಿಸಿ, ಕಾಲ್ಪನಿಕ ಘಟನೆಗಳಿಗೆ ಇತಿಹಾಸದ ಹಣೆಪಟ್ಟಿ ಹಾಕಿ ಮೆರೆಸುವುದೇ ಸಮಾಜದ ಪಾಲಿಗೆ ಹಿತವಾಗಿ ತೋರತೊಡಗಿದಾಗ, ವೈಜ್ಞಾನಿಕ ಚಿಂತನೆ ಮತ್ತು ಪ್ರಶ್ನಿಸುವ ಮನೋಭಾವ ಹಿನ್ನೆಲೆಗೆ ಸರಿಯುವುದು ಸಹಜ ತಾನೆ?

ವಾಚಕರ ವಾಣಿ

ಸ್ಪರ್ಧಾತ್ಮಕ ಪರೀಕ್ಷೆ: ಅಧಿಕಾರದ ಕೇಂದ್ರೀಕರಣ?

ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಅರ್ಹತಾ ಪರೀಕ್ಷೆ (ಕೆ-ಸೆಟ್) ಬರೆಯಲು ಬೆಂಗಳೂರಿಗೆ ತೆರಳಿದ್ದ ಕಲ್ಯಾಣ ಕರ್ನಾಟಕದ ನೂರಾರು ಅಭ್ಯರ್ಥಿಗಳು, ಸೀಟು ಸಿಗದೆ ರೈಲಿನ ಶೌಚಾಲಯದಲ್ಲಿ ಕುಳಿತು ಪ್ರಯಾಣಿಸಿ ಪರೀಕ್ಷೆ ಬರೆದಿರುವ ಕುರಿತ ವರದಿ (ಪ್ರ.ವಾ., ಜ. 16) ಓದಿ ದಿಗ್ಭ್ರಮೆ ಆಯಿತು. ಶೌಚಾಲಯದಲ್ಲಿ 11 ಗಂಟೆಗಳ ಕಾಲ ಅವರು ಪ್ರಯಾಣಿಸಿದ್ದನ್ನು ಊಹಿಸಿಕೊಳ್ಳಲೂ ಭಯವಾಗುತ್ತದೆ. ಈ ಭಾಗದಲ್ಲಿ ಎಷ್ಟೆಲ್ಲಾ ಪ್ರಭಾವಿ ಸಚಿವರಿದ್ದರೂ ಇಂತಹ ಗೋಳನ್ನು ಯಾರಿಂದಲೂ ತಪ್ಪಿಸಲಾಗಲಿಲ್ಲ. ವಿಭಾಗೀಯ ಕೇಂದ್ರವಾದ ಕಲಬುರಗಿಯು ಕೆ-ಸೆಟ್ ಪರೀಕ್ಷೆ ನಡೆಸಲಾರದಷ್ಟು ಅಸುರಕ್ಷಿತವಾಯಿತೇ? ನಗರದ ಕಾಲೇಜುಗಳನ್ನು ಹೊರತುಪಡಿಸಿ, ದೂರದ ಗುಲ್ಬರ್ಗಾ ವಿಶ್ವವಿದ್ಯಾಲಯ, ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಯೋಜಿಸಬೇಕಿತ್ತು. ಪ್ರತಿಯೊಂದಕ್ಕೂ ಬೆಂಗಳೂರಿನ ಮೇಲೆ ಅವಲಂಬನೆ ಎಷ್ಟು ನ್ಯಾಯೋಚಿತ? ಇದು ಅಧಿಕಾರದ ಕೇಂದ್ರೀಕರಣವಲ್ಲವೇ?

ಆಶ್ಚರ್ಯಕರ ಸಂಗತಿ ಎಂದರೆ, ಆಡಳಿತಪಕ್ಷ ಹಾಗೂ ವಿರೋಧಪಕ್ಷಗಳಾದಿಯಾಗಿ ಯಾರೊಬ್ಬರೂ ಪ್ರಾಧಿಕಾರದ ಈ ನಿಲುವಿನ ವಿರುದ್ಧ ತುಟಿ ಬಿಚ್ಚದಿರುವುದು. ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ಇಂತಹ ಪರೀಕ್ಷೆಗಳು ಆಕಾಂಕ್ಷಿಗಳ ಜೇಬಿಗೆ ಹೊರೆಯಾಗಬಾರದು. ಪ್ರಾಧಿಕಾರವು ಇನ್ನು ಮುಂದಾದರೂ ವಿಭಾಗೀಯ ಕೇಂದ್ರಗಳಲ್ಲಿ ಇಂತಹ ಪರೀಕ್ಷೆಗಳನ್ನು ನಡೆಸುವಂತೆ ಸರ್ಕಾರ ಕಟ್ಟುನಿಟ್ಟಿನ ಸೂಚನೆ ನೀಡಲಿ.

ವೆಂಕಟೇಶ್ ಮುದಗಲ್, ಕಲಬುರಗಿ

ಏಕೀ ಪ್ರಯೋಗ?

ರಾಜಕೀಯದಲ್ಲಿ
ಕಿಚ್ಚು ಹಚ್ಚಿದೆ
ಏಕವಚನದ ಪ್ರಯೋಗ,
ನಾಯಕರು ಎನಿಸಿಕೊಂಡವರಿಗೆ
ಬಹುಬೇಗ ಗುಣವಾಗಬೇಕು
ಈ ರೋಗ!

ಮಹಾಂತೇಶ ಮಾಗನೂರ
ಬೆಂಗಳೂರು

ಪೈಲಟ್ ಮೇಲೆ ಹಲ್ಲೆ ಅಮಾನವೀಯ

ಪರಸ್ಪರ ತಾಳ್ಮೆ, ಸಂಯಮ ಕಾಯ್ದುಕೊಳ್ಳುವುದು, ಕೆಲಸಕ್ಕೆ ತಕ್ಕ ಗೌರವ ಕೊಡುವುದು, ಇತರರ ಮನನೋಯಿಸದಂತೆ ನಡೆದುಕೊಳ್ಳುವುದು ನಾಗರಿಕ ಸಮಾಜದಲ್ಲಿನ ಪ್ರತಿಯೊಬ್ಬರ ಜವಾಬ್ದಾರಿಯಾಗಿರುತ್ತದೆ. ಆದರೆ ನವದೆಹಲಿಯ ವಿಮಾನ ನಿಲ್ದಾಣದಲ್ಲಿ ಇತ್ತೀಚೆಗೆ ದಟ್ಟ ಮಂಜು ಕವಿದಿದ್ದ ಕಾರಣದಿಂದ ವಿಮಾನ ಟೇಕಾಫ್ ಆಗುವುದು ವಿಳಂಬವಾಗಲಿದೆ ಎಂದು ಘೋಷಣೆ ಮಾಡುತ್ತಿದ್ದ ವೇಳೆ, ಇಂಡಿಗೊ ವಿಮಾನದ ಸಹಪೈಲಟ್ ಮೇಲೆ ಪ್ರಯಾಣಿಕರೊಬ್ಬರು ಹಲ್ಲೆ ನಡೆಸಿರುವುದು ಅಮಾನವೀಯವಾಗಿದೆ. ದೆಹಲಿಯಲ್ಲಿ ಹದಗೆಟ್ಟ ವಾತಾವರಣದಿಂದ ಬಹುತೇಕ ವಿಮಾನಗಳ ಹಾರಾಟ ವಿಳಂಬವಾಗಿದ್ದಲ್ಲದೆ, ಇನ್ನು ಕೆಲವು ವಿಮಾನಗಳ ಸೇವೆ ರದ್ದಾಯಿತು. ಇದಕ್ಕೆ ಪೈಲಟ್‌ಗಳಾಗಲೀ ವಿಮಾನದ ಸಿಬ್ಬಂದಿಯಾಗಲೀ ಕಾರಣರಲ್ಲ. ಹೀಗಿರುವಾಗ, ಪ್ರಯಾಣಿಕರು ವಿಮಾನ ಸಿಬ್ಬಂದಿಯ ಮೇಲೆ ಕೋಪ ವ್ಯಕ್ತಪಡಿಸುವುದು ಸರಿಯಾದ ಕ್ರಮವಲ್ಲ.

ಪ್ರತಿಕೂಲ ವಾತಾವರಣದಲ್ಲಿ ವಿಮಾನ ಚಲಾಯಿಸುವುದು ಅಪಾಯಕಾರಿಯಾಗಿರುತ್ತದೆ. ವಿಮಾನದಲ್ಲಿನ ನೂರಾರು ಪ್ರಯಾಣಿಕರ ಜೀವಕ್ಕೆ ಹಾನಿ ಉಂಟಾಗುವ ಸಾಧ್ಯತೆ ಇರುತ್ತದೆ. ಆ ಕಾರಣದಿಂದ ಪ್ರಯಾಣಿಕರ ಸಹಕಾರಕ್ಕೆ ಮನವಿ ಮಾಡುತ್ತಿದ್ದ ಸಂದರ್ಭದಲ್ಲಿ ಸಹಪೈಲಟ್ ಮೇಲೆ ಏಕಾಏಕಿ ಹಲ್ಲೆ ನಡೆಸಿರುವ ವ್ಯಕ್ತಿಗೆ ಸರಿಯಾದ ಶಿಕ್ಷೆ ವಿಧಿಸಬೇಕಾಗಿದೆ. ಯಾವುದೇ ವ್ಯವಸ್ಥೆಯಲ್ಲಿ ಲೋಪದೋಷಗಳಿದ್ದರೆ, ಅವನ್ನು ಬಗೆಹರಿಸಿಕೊಳ್ಳಲು ಹಲವಾರು ಮಾರ್ಗಗಳಿವೆ. ಹಲ್ಲೆ ಮಾಡುವುದು ಒಪ್ಪುವಂತಹದ್ದಲ್ಲ. ಈ ವಿಷಯವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ಕ್ರಮ ಜರುಗಿಸಬೇಕು.

ರಾಸುಮ ಭಟ್, ಚಿಕ್ಕಮಗಳೂರು

ಎಟಿಎಂ: ಹೆಸರಿಗೆ ತಕ್ಕಂತಿರಲಿ!

ತಾಲ್ಲೂಕು ಕೇಂದ್ರ ಹಾಗೂ ಸಣ್ಣ ಪಟ್ಟಣಗಳ ಅನೇಕ ಬ್ಯಾಂಕುಗಳ ಎಟಿಎಂ ಯಂತ್ರಗಳಲ್ಲಿ ಎಷ್ಟೋ ಬಾರಿ ಹಣವಿಲ್ಲದೇ ಗ್ರಾಹಕರು ಪರದಾಡುವಂತೆ ಆಗುತ್ತದೆ. ಆಗ ಅವರು ಅನಿವಾರ್ಯವಾಗಿ ಅನ್ಯ ಬ್ಯಾಂಕುಗಳ ಎಟಿಎಂಗಳಲ್ಲಿ ಹಣ ತೆಗೆಯಲು ಮುಂದಾಗುತ್ತಾರೆ. ಇದರಿಂದ ಬೇರೆ ಬ್ಯಾಂಕುಗಳಲ್ಲಿ ಹಣ ತೆಗೆಯುವ ಗರಿಷ್ಠಮಿತಿ ಮೀರಿ, ಹೆಚ್ಚಿನ ವಹಿವಾಟಿಗೆ ಅನವಶ್ಯವಾಗಿ ಹಣ ಕಟ್ಟಬೇಕಾಗುತ್ತದೆ. ಈ ದಿಸೆಯಲ್ಲಿ ಬ್ಯಾಂಕುಗಳು ತಮ್ಮ ಎಟಿಎಂಗಳಲ್ಲಿ ಕಡ್ಡಾಯವಾಗಿ ಹಣ ಇರುವಂತೆ ನೋಡಿಕೊಳ್ಳಬೇಕು.

ಅಶೋಕ ಚನ್ನಳ್ಳಿ, ಹಿರೇಕೆರೂರು

ಬಹುಕೋಟಿ ವೆಚ್ಚದ ಸಮ್ಮೇಳನ ಅಗತ್ಯವೇ?

ಹಾವೇರಿಯಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ವ್ಯಯವಾದ ₹ 25 ಕೋಟಿ ಮೊತ್ತದ ಬಗೆಗೆ ಬಹಳಷ್ಟು ಟೀಕೆಗಳು ಒಳಗೊಂಡಂತೆ ವ್ಯಾಪಕ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದರೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಈ ಬಾರಿ ಮಂಡ್ಯದಲ್ಲಿ ನಡೆಯಲಿರುವ ಸಮ್ಮೇಳನಕ್ಕೆ ಈಗ ₹ 25 ಕೋಟಿ ಅನುದಾನ ಒದಗಿಸಲು ಸರ್ಕಾರವನ್ನು ಕೋರುವುದಾಗಿ ಹೇಳಿರುವುದು (ಪ್ರ.ವಾ., ಜ. 14) ಮತ್ತೊಮ್ಮೆ ವಿವಾದಕ್ಕೆ ಆಸ್ಪದ ನೀಡಿದೆ. ಇಂದು ಸಾಹಿತ್ಯ ಸಮ್ಮೇಳನಗಳು ತಮ್ಮ ಉದ್ದೇಶ ಹಾಗೂ ಔಚಿತ್ಯವನ್ನು ಕಳೆದುಕೊಂಡಿವೆ. ಶತಮಾನಗಳ ಹಿಂದೆ ಕನ್ನಡನಾಡು ಹರಿದು ಹಂಚಿಹೋಗಿತ್ತು. ಕನ್ನಡ ಭಾಷೆಯ ಮೇಲೆ ತೆಲುಗು, ಮರಾಠಿ, ಉರ್ದುವಿನಂತಹ ಭಾಷೆಗಳ ಪ್ರಭಾವ ವಿಪರೀತ ಇತ್ತು. ಕನ್ನಡ ಭಾಷೆಯನ್ನು ರೂಪಿಸಲು ಹಾಗೂ ಕನ್ನಡ ಪ್ರದೇಶಗಳನ್ನು ಒಟ್ಟುಗೂಡಿಸಲು ನಾಡಿನ ಅಂದಿನ ಮೇಧಾವಿಗಳು ಪ್ರಚಾರ, ಪ್ರಕಟಣೆ, ಸಮ್ಮೇಳನಗಳನ್ನು ಆಯೋಜಿಸುವ ಮೂಲಕ ಕನ್ನಡವನ್ನು ಕಟ್ಟಲು ಮುಂದಾದರು. ಈ ದಿಸೆಯಲ್ಲಿ ಅಂದು ಸಾಹಿತ್ಯ ಪರಿಷತ್ತನ್ನು ಹುಟ್ಟುಹಾಕಿದ ಗಣ್ಯರ ಉದ್ದೇಶ ಇಂದು ಸಫಲವಾಗಿದೆ.

ಇಂದಿನ ಕನ್ನಡಪರ ಸಂಸ್ಥೆಗಳು ಸಭೆ, ಸಮಾರಂಭಗಳನ್ನು ಆಯೋಜಿಸಿ ಕನ್ನಡದ ಮಹತ್ವವನ್ನು ಸಾರುತ್ತಿವೆ. ಹೀಗಿರುವಾಗ, ಶತಮಾನದ ಹಿಂದಿನ ಉದ್ದೇಶವನ್ನು ಪೂರೈಸಿರುವ ಸಾಹಿತ್ಯ ಪರಿಷತ್ತು ಈಗಲೂ ಬಹುಕೋಟಿ ವೆಚ್ಚದಲ್ಲಿ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸುವುದರಲ್ಲಿ ಯಾವುದೇ ಅರ್ಥವಿಲ್ಲ ಮತ್ತು ಅದರ ಅಗತ್ಯವೂ ಇಲ್ಲ ಎನಿಸುತ್ತದೆ.

ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಮಾನ ಹಾರಾಟದಲ್ಲಿ ಭಾರಿ ವ್ಯತ್ಯಯ

ವಿಳಂಬಕ್ಕೆ ಹತ್ತಾರು ಕಾರಣ

● ಜಯಸಿಂಹ ಆರ್., ಸುಕೃತ ಎಸ್.

ಉತ್ತರ ಭಾರತದಲ್ಲಿ ದಟ್ಟಮಂಜಿನ ಕಾರಣದಿಂದ ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗಿರುವುದು ಭಾರಿ ಕೋಲಾಹಲವನ್ನು ಉಂಟು ಮಾಡಿದೆ. 15–20 ಗಂಟೆ ವಿಮಾನದಲ್ಲೇ, ಟರ್ಮಿನಲ್ ಕೋಣೆಗಳಲ್ಲೇ ಪ್ರಯಾಣಿಕರು ಕಳೆಯಬೇಕಾದ, ಪೈಲಟ್ ಮೇಲೆ ಪ್ರಯಾಣಿಕರೊಬ್ಬರು ಹಲ್ಲೆ ನಡೆಸಿದ, ವಿಮಾನ ನಿಲ್ದಾಣದ ಟ್ರ್ಯಾಕ್‌ವೇನಲ್ಲೇ ಪ್ರಯಾಣಿಕರು ಕುಳಿತು ಊಟ ಮಾಡಿದಂತಹ ಘಟನೆಗಳಿಗೆ ದೇಶವು ಒಂದೆರಡು ದಿನಗಳಲ್ಲಿ ಸಾಕ್ಷಿಯಾಗಿದೆ. ಇದನ್ನು ಭಾರತದ ವಿಮಾನಯಾನ ಕ್ಷೇತ್ರದಲ್ಲೇ ಅತ್ಯಂತ ಇರಿಸುಮುರಿಸಿನ ಬೆಳವಣಿಗೆ ಎಂದು ವಿಶ್ಲೇಷಿಸಲಾಗುತ್ತಿದೆ. ವಿಮಾನಯಾನ ಸಚಿವಾಲಯ ಈ ಎಲ್ಲದಕ್ಕೂ ದಟ್ಟಮಂಜೇ ಕಾರಣ ಎಂದು ಹೇಳುತ್ತಿದೆ. ಆದರೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯದ (ಡಿಜಿಸಿಎ) ಮಾಸಿಕ ಬುಲೆಟಿನ್‌ಗಳು, ಮೂಲಸೌಕರ್ಯದ ಕೊರತೆಯೇ ಇದಕ್ಕೆ ಕಾರಣ ಎಂದು ಬೊಟ್ಟು ಮಾಡುತ್ತವೆ.

2023ರ ಡಿಸೆಂಬರ್‌ನಲ್ಲಿ ದೇಶದಾದ್ಯಂತ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ವಿಮಾನಗಳ ವಿಳಂಬ ಹಾರಾಟಗಳಿಗೆ ಸಂಬಂಧಿಸಿದ ವರದಿಯನ್ನು ಗಮನಿಸಿದರೆ, ಮೂಲಸೌಕರ್ಯಗಳ ಕೊರತೆಯೇ ಇದಕ್ಕೆ ಕಾರಣ ಎಂಬುದು ಗೊತ್ತಾಗುತ್ತದೆ. ಆ ತಿಂಗಳಲ್ಲಿ ವಿಮಾನಗಳು ವಿಳಂಬವಾದ ಎಲ್ಲಾ ಪ್ರಕರಣಗಳಲ್ಲಿ ದಟ್ಟಮಂಜು, ಬಿರುಗಾಳಿ ಮತ್ತು ಮಳೆಯಂತಹ ಪ್ರಾಕೃತಿಕ ಅಂಶಗಳು ಕಾರಣವಾಗಿದ್ದು ಶೇ 4ರಷ್ಟು ಪ್ರಕರಣಗಳಲ್ಲಿ ಮಾತ್ರ. ಆದರೆ ವಿಮಾನಯಾನ ಕಂಪನಿಗಳ ಕಾರ್ಯಾಚರಣೆಯಲ್ಲಿನ ವ್ಯತ್ಯಯದ ಕಾರಣದಿಂದ ವಿಮಾನಗಳು ವಿಳಂಬವಾದ ಪ್ರಕರಣಗಳ ಪ್ರಮಾಣವೇ ಹೆಚ್ಚು (ಶೇ 66). ನಿಲ್ದಾಣದಲ್ಲಿ ಜಾಗ ಇಲ್ಲದೇ ಇರುವುದು, ಟೇಕಾಫ್ ಮತ್ತು ಲ್ಯಾಂಡಿಂಗ್ ರನ್‌ವೇ ಲಭ್ಯವಿಲ್ಲದೇ ಇರುವಂತಹ ಕಾರಣದಿಂದ ವಿಮಾನಗಳು ವಿಳಂಬವಾದ ಪ್ರಕರಣಗಳ ಪ್ರಮಾಣ ಶೇ 13.

ಈಗಿನ ಪರದಾಟಕ್ಕೆ ಕಾರಣವಾಗಿರುವುದು ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ. ದಟ್ಟಮಂಜು ಮತ್ತು ಶೂನ್ಯ ಗೋಚರತೆಯ ಕಾರಣಕ್ಕೆ ವಿಮಾನಗಳನ್ನು ಇಲ್ಲಿ ಇಳಿಸಲು ಆಗುತ್ತಿಲ್ಲ, ಇಲ್ಲಿಂದ ಹಾರಿಸಲು ಆಗುತ್ತಿಲ್ಲ. ಆದರೆ ಶೂನ್ಯ ಗೋಚರತೆ ಸಂದರ್ಭದಲ್ಲೂ ವಿಮಾನಗಳ ಕಾರ್ಯಾಚರಣೆ ಸಾಧ್ಯವಾಗಿಸುವ ವ್ಯವಸ್ಥೆ ಇಲ್ಲದೇ ಇರುವುದೇ ಈ ಪರದಾಟಕ್ಕೆ ಪ್ರಮುಖ ಕಾರಣ ಎಂದು ವಿಶ್ಲೇಷಿಸಲಾಗಿದೆ. ದಟ್ಟಮಂಜಿನಂತಹ ಪ್ರತಿಕೂಲ ಹವಾಮಾನದ ಸಂದರ್ಭದಲ್ಲೂ ಸುರಕ್ಷಿತವಾಗಿ ಲ್ಯಾಂಡ್ ಮಾಡುವ ವ್ಯವಸ್ಥೆಯನ್ನು 'ಇನ್‌ಸ್ಟ್ರುಮೆಂಟ್ ಲ್ಯಾಂಡಿಂಗ್ ಸಿಸ್ಟಂ' ಎಂದು ಕರೆಯಲಾಗುತ್ತದೆ. ದಿಕ್ಸೂಚಿ, ಎತ್ತರಮಾಪಕ, ಅಕ್ಷಾಂಶ-ರೇಖಾಂಶ ಮಾಪಕ, ವೇಗಮಾಪಕದಂತಹ ಹಲವು ಉಪಕರಣಗಳನ್ನು ಬಳಸಿಕೊಂಡು ಶೂನ್ಯ ಗೋಚರತೆ ಸಂದರ್ಭಗಳಲ್ಲೂ ವಿಮಾನವನ್ನು ಲ್ಯಾಂಡ್ ಮಾಡುವ ವ್ಯವಸ್ಥೆಯಿದು. ಇಂತಹ ವ್ಯವಸ್ಥೆ ಇರುವ ರನ್‌ವೇಗಳನ್ನು 'ಸಿಎಟಿ-III' ರನ್‌ವೇ ಎಂದು ಕರೆಯಲಾಗುತ್ತದೆ. ಇದರಲ್ಲೂ ಮೂರು ಭಿನ್ನ ವರ್ಗೀಕರಣವಿದೆ. ಸಿಎಟಿ-IIIಎ, ಸಿಎಟಿ-IIIಬಿ ಮತ್ತು ಸಿಎಟಿ-IIIಸಿ.

ದೆಹಲಿ ವಿಮಾನ ನಿಲ್ದಾಣದಲ್ಲಿ ಇದ್ದ ಎರಡು ಸಿಎಟಿ-IIIಬಿ ರನ್‌ವೇಗಳು ಬೇರೆ-ಬೇರೆ ಕಾರಣಗಳಿಂದ ಕಾರ್ಯಾಚರಣೆಯಲ್ಲಿ ಇರಲಿಲ್ಲ. ದುರಸ್ತಿ, ನಿರ್ವಹಣೆ ಕಾರಣದಿಂದ ಅವುಗಳನ್ನು ಹಲವು ತಿಂಗಳಿಂದ ಸ್ಥಗಿತಗೊಳಿಸಲಾಗಿತ್ತು. 2023ರ ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದ ಜಿ-20 ಶೃಂಗಸಭೆಯ ಸಂದರ್ಭದಲ್ಲಿ ದೂಳು ಏಳಬಾರದು ಎಂದು ಸಿಎಟಿ-IIIಬಿ ರನ್‌ವೇಗಳ ದುರಸ್ತಿ ಕಾರ್ಯವನ್ನೂ ಸ್ಥಗಿತಗೊಳಿಸಲಾಗಿತ್ತು. ಇಲ್ಲದಿದ್ದಲ್ಲಿ ಈವೇಳೆಗೆ ಎರಡೂ ರನ್‌ವೇಗಳು ಕಾರ್ಯಾಚರಣೆಯಲ್ಲಿ ಇರುತ್ತಿದ್ದವು. ಆದರೆ ಈಗ ತುರ್ತು ಸಂದರ್ಭಕ್ಕೆ ಎಂದು ಅಂತಹ ಒಂದು ರನ್‌ವೇಯಲ್ಲಿ ವಿಮಾನಯಾನ ಸಚಿವಾಲಯದ ಆದೇಶದ ಮೇರೆಗೆ ಮಂಗಳವಾರ ರಾತ್ರಿಯಿಂದ ಕಾರ್ಯಾಚರಣೆ ಆರಂಭಿಸಲಾಗಿದೆ. ಉತ್ತರ ಭಾರತದ ಹಲವು ವಿಮಾನ ನಿಲ್ದಾಣಗಳಲ್ಲಿ ಇಂತಹ ವ್ಯವಸ್ಥೆಯೂ ಇಲ್ಲ. ಇಂತಹ ಅತ್ಯಗತ್ಯವಾದ ಮೂಲಸೌಕರ್ಯ ಅಭಿವೃದ್ಧಿ ಮತ್ತು ಅವುಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿರುವುದೇ ಇಂದಿನ ಪರದಾಟಕ್ಕೆ ಕಾರಣವಾಗಿದೆ. ದೆಹಲಿ ವಿಮಾನ ನಿಲ್ದಾಣದ ಅಧಿಕಾರಿಗಳು ಪಿಟಿಐಗೆ ನೀಡಿರುವ ಮಾಹಿತಿಗಳೂ ಇದನ್ನೇ ಪುಷ್ಟೀಕರಿಸುತ್ತವೆ.

ಸಿಎಟಿ-III ಎಂಬ ಆಪದ್ಬಾಂಧವ ವ್ಯವಸ್ಥೆ



'ಬೇಕಿಲ್ಲ ಸಿಎಟಿ-IIIಸಿ ರನ್‌ವೇ'

ಶೂನ್ಯ ಗೋಚರತೆ ಸಂದರ್ಭದಲ್ಲೂ ಸುರಕ್ಷಿತವಾಗಿ ಲ್ಯಾಂಡ್ ಮಾಡಲು ಸಾಧ್ಯವಾಗುವ ಸಿಎಟಿ-IIIಸಿ ರನ್‌ವೇಗಳು ನಮಗೆ ಅಗತ್ಯವಿಲ್ಲ ಎಂದು 2016ರಲ್ಲಿ ಡಿಜಿಸಿಎ ಹೇಳಿತ್ತು. ಶೂನ್ಯ ಗೋಚರತೆ ಸಂದರ್ಭದಲ್ಲಿ ಸಿಎಟಿ-IIIಸಿ ರನ್‌ವೇಗಳಲ್ಲಿ ಲ್ಯಾಂಡ್ ಮಾಡುವುದು ಅಪಾಯಕಾರಿ. ಪ್ರಯಾಣಿಕರ ಜೀವವೇ ನಮಗೆ ಮುಖ್ಯ. ಹೀಗಾಗಿ ಅಂತಹ ವ್ಯವಸ್ಥೆಗಳು ನಮಗೆ ಬೇಡ ಎಂದು ಡಿಜಿಸಿಎ ಹೇಳಿತ್ತು. ವಿಮಾನಯಾನ ಕಂಪನಿಗಳ ಮತ್ತು ಕ್ಷೇತ್ರ ಪರಿಣತರ ಬೇಡಿಕೆಯನ್ನು ಈ ಮೂಲಕ ತಿರಸ್ಕರಿಸಿತ್ತು.

* ಗ್ರಾಫಿಕ್ಸ್‌ನಲ್ಲಿ ಅಳತೆ ಪ್ರಮಾಣಬದ್ಧವಲ್ಲ

ಪ್ರಜಾವಾಣಿ ಗ್ರಾಫಿಕ್ಸ್: ಶಶಿಕಿರಣ್ ದೇಸಾಯಿ ಬಿ.

ವಿಪರೀತ ಆಕ್ರೋಶ

'ಅದೊಂದು ದುಃಸ್ವಪ್ನ. ಭಾನುವಾರ ಸಂಜೆ 4 ಗಂಟೆಯಿಂದ ನಾವು ವಿಮಾನ ನಿಲ್ದಾಣದಲ್ಲಿ ಇದ್ದೇವೆ. ಮೊದಲಿಗೆ ರಾತ್ರಿ 9.55ಕ್ಕೆ ವಿಮಾನ ಟೇಕ್‌ಆಫ್ ಆಗುವುದಾಗಿ ಹೇಳಲಾಯಿತು. ನಂತರ, 10–10.30ರ ಹೊತ್ತಿಗೆ ಹೊರಡುವುದಾಗಿ ಹೇಳಿದರು. ಎಷ್ಟು ಹೊತ್ತಿಗೆ ವಿಮಾನ ಟೇಕ್‌ಆಫ್ ಆಗಲಿದೆ ಎಂದು ವಿಮಾನ ಸಿಬ್ಬಂದಿಯನ್ನು ಪದೇ ಪದೇ ಕೇಳಿದಾಗ, ನಾಳೆ ಬೆಳಿಗ್ಗೆ 7.35ಕ್ಕೆ ವಿಮಾನ ಹೊರಡುತ್ತದೆ ಎಂದರು. ಹೀಗೆ ಹೇಳುತ್ತಲೆ ವಿಮಾನ ನಿಲ್ದಾಣದಿಂದ ಹೊರನಡೆಯಿರಿ ಎಂದರು. ರಾತ್ರಿ ಉಳಿದುಕೊಳ್ಳುವ ವ್ಯವಸ್ಥೆಯನ್ನು ಸಹ ಅವರು ಮಾಡಲಿಲ್ಲ. ಕಾಡಿಬೇಡಿ ಎಲ್ಲಿಯೋ ಉಳಿದುಕೊಳ್ಳುವ ವ್ಯವಸ್ಥೆ ಮಾಡಿಕೊಂಡೆವು'

ಅನ್ವಿಕಾ ವರ್ಮಾ ಅವರ ಈ ಮಾತುಗಳು, ದೇಶದ ವಿಮಾನಯಾನದ ಅವ್ಯವಸ್ಥೆಯನ್ನು ತೆರೆದಿಡುತ್ತವೆ. ಇವರು ಕೋಯಿಕ್ಕೋಡಿನಿಂದ ಮುಂಬೈಗೆ ಹೊರಟಿದ್ದರು. ಅವರ ವಿಮಾನವು ಸಂಜೆ 6:50ಕ್ಕೆ ಟೇಕಾಫ್ ಆಗಬೇಕಿತ್ತು.

ಕೆಲವೊಮ್ಮೆ 10–13 ತಾಸುಗಳಷ್ಟು ತಡವಾಗಿ ವಿಮಾನಗಳು ಟೇಕ್‌ಆಫ್ ಆಗುತ್ತಿವೆ. ಇಂಥ ಪರಿಸ್ಥಿತಿಯಲ್ಲಿ ಪ್ರಯಾಣಿಕರ ಪಾಡು ಹೇಳತೀರದಂತಾಗಿದೆ. ತಮ್ಮ ಪ್ರಯಾಣಿಕರನ್ನು ವಿಮಾನಯಾನ ಸಂಸ್ಥೆಗಳು ತೀರಾ ಕೀಳಾಗಿ ನೋಡಿಕೊಳ್ಳುತ್ತಿರುವುದು ಕೆಲವು ದಿನಗಳ ಬೆಳವಣಿಗೆಗಳಿಂದ ತಿಳಿದುಬರುತ್ತಿದೆ. 'ಎಕ್ಸ್' ವೇದಿಕೆಯ ತುಂಬೆಲ್ಲಾ ವಿಮಾನಯಾನ ಸಂಸ್ಥೆಗಳ ದುರ್ವರ್ತನೆಗಳ ಬಗ್ಗೆ ದೂರುಗಳದ್ದೇ ಪೋಸ್ಟ್‌ಗಳು ಕಾಣುತ್ತಿವೆ. ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರ ಖಾತೆಯನ್ನು ಟ್ಯಾಗ್ ಮಾಡಿ, ಪ್ರಯಾಣಿಕರು ದೂರುಗಳನ್ನು ಮುಂದಿಡುತ್ತಿದ್ದಾರೆ.

ಪ್ರಯಾಣಿಕರ ಹಕ್ಕುಗಳು

ಒಂದುವೇಳೆ ವಿಮಾನ ಹಾರಾಟ ರದ್ದಾದರೆ, ವಿಳಂಬವಾದರೆ ಪ್ರಯಾಣಿಕರನ್ನು ಯಾವ ರೀತಿಯಲ್ಲಿ ನೋಡಿಕೊಳ್ಳಬೇಕು ಎನ್ನುವ ಬಗ್ಗೆ ನಿಯಮಗಳು ಇವೆ. ಆದರೆ, ವಿಮಾನಯಾನ ಸಂಸ್ಥೆಗಳು ಈ ನಿಯಮಗಳನ್ನು ಪಾಲಿಸುತ್ತಿಲ್ಲ ಎಂಬುದನ್ನು ಇತ್ತೀಚಿನ ಘಟನೆಗಳೇ ಹೇಳುತ್ತಿವೆ. ಇದೇ ಕಾರಣದಿಂದಾಗಿ ಡಿಜಿಸಿಎ ಸೋಮವಾರ ಎಲ್ಲ ವಿಮಾನಯಾನ ಸಂಸ್ಥೆಗಳಿಗೆ ತಕ್ಷಣದಲ್ಲಿಯೇ ಪಾಲನೆ ಮಾಡುವಂತೆ ಹೊಸದಾದ ಎಸ್‌ಒಪಿಯನ್ನು ಬಿಡುಗಡೆ ಮಾಡಿದೆ.

'ಒಂದು ವೇಳೆ ವಿಮಾನ ಹಾರಾಟವು ಮೂರು ತಾಸುಗಳಿಗೂ ಹೆಚ್ಚು ವಿಳಂಬವಾಗುವ ಸಂಭವವಿದ್ದರೆ, ಅಂಥ ವಿಮಾನವನ್ನು ರದ್ದು ಮಾಡಬೇಕು' ಎಂದು ಅದು ಹೇಳಿದೆ. ಜೊತೆಗೆ, 'ವಿಮಾನವು ಎಷ್ಟು ಗಂಟೆಗಳವರೆಗೆ ವಿಳಂಬವಾಗಲಿದೆ. ಎಷ್ಟು ಹೊತ್ತಿಗೆ ವಿಮಾನ ಹೊರಡಲಿದೆ, ಎಷ್ಟು ಹೊತ್ತಿಗೆ ನಿಗದಿತ ನಗರ ತಲುಪಲಿದೆ ಎಂಬೆಲ್ಲಾ ನಿಖರ ಮಾಹಿತಿಯನ್ನು ಪ್ರಯಾಣಿಕರಿಗೆ ನೀಡಬೇಕು. ವಿಮಾನ ವಿಳಂಬವಾಗುವ ಸಂದರ್ಭಗಳಲ್ಲಿ ಪ್ರಯಾಣಿಕರ ರಕ್ಷಣೆಗೆ ಸಂಸ್ಥೆಗಳು ಮುಂದಾಗಬೇಕು' ಎಂದೂ ಹೇಳಿದೆ.

● **1.** ವಿಮಾನ ಹಾರಾಟದ ಸಮಯವು (ಬ್ಲಾಕ್ ಟೈಮ್) ಎರಡೂವರೆ ತಾಸುಗಳಷ್ಟಿದ್ದರೆ, ವಿಮಾನದ ಟೇಕಾಫ್ ಎರಡು ಅಥವಾ ಅದಕ್ಕೂ ಹೆಚ್ಚಿನ ಸಮಯದಷ್ಟು ವಿಳಂಬವಾದರೆ,
2. ವಿಮಾನ ಹಾರಾಟವು ಎರಡೂವರೆ ತಾಸುಗಳಿಗೂ ಹೆಚ್ಚಿನ ಸಮಯದ್ದಾಗಿದ್ದರೆ, ವಿಮಾನದ ಟೇಕಾಫ್ ಮೂರು ಅಥವಾ ಅದಕ್ಕೂ ಹೆಚ್ಚಿನ ಸಮಯದಷ್ಟು ವಿಳಂಬವಾದರೆ,
3. ಮೇಲಿನ ಎರಡೂ ಸನ್ನಿವೇಶದಲ್ಲಿ, ವಿಮಾನದ ಟೇಕಾಫ್ ನಾಲ್ಕು ಅಥವಾ ಅದಕ್ಕಿಂತಲೂ ಹೆಚ್ಚಿನ ಸಮಯದಷ್ಟು ವಿಳಂಬವಾದರೆ, ಕಾಯುವಿಕೆಯ ವೇಳೆಯಲ್ಲಿ ಪ್ರಯಾಣಿಕರಿಗೆ ಉಚಿತ ಊಟ, ಉಪಹಾರ ನೀಡಬೇಕು

● ಒಂದು ವೇಳೆ ದೇಶೀಯ ವಿಮಾನದ ಟೇಕಾಫ್ ಆರು ಗಂಟೆಗಳಿಗೂ ಹೆಚ್ಚು ಸಮಯದಷ್ಟು ವಿಳಂಬಗೊಂಡರೆ, ವಿಮಾನ ಟೇಕ್‌ಆಫ್ ಆಗುವ ಸಮಯಕ್ಕೂ 24 ಗಂಟೆಗಳ ಮೊದಲೇ ವಿಳಂಬದ ಕುರಿತು ಪ್ರಯಾಣಿಕರಿಗೆ ಮಾಹಿತಿ ನೀಡಬೇಕು. ಜೊತೆಗೆ, ಒಂದೋ ಬೇರೆ ವಿಮಾನದ ವ್ಯವಸ್ಥೆ ಮಾಡಿಕೊಡಬೇಕು ಅಥವಾ ಟಿಕೆಟ್ ಮೊತ್ತವನ್ನು ಮರುಪಾವತಿ ಮಾಡಬೇಕು

● ಒಂದು ವೇಳೆ ವಿಮಾನ ಹಾರಾಟವು ಮರುದಿನಕ್ಕೆ ನಿಗದಿಯಾದರೆ, ಪ್ರಯಾಣಿಕರು ರಾತ್ರಿ ಇಡೀ ಕಾಯಬೇಕು ಎನ್ನುವ ಪರಿಸ್ಥಿತಿ ನಿರ್ಮಾಣವಾದರೆ, ಪ್ರಯಾಣಿಕರಿಗೆ ಹೋಟೆಲ್‌ನಲ್ಲಿ ಉಚಿತವಾಗಿ ಉಳಿದುಕೊಳ್ಳುವ ವ್ಯವಸ್ಥೆಯನ್ನು ಮಾಡಲೇಬೇಕು

● ವಿಮಾನ ಹಾರಾಟವು ವಿಳಂಬವಾಗಲಿ ಅಥವಾ ರದ್ದಾಗಲಿ, ಎಲ್ಲ ಮಾಹಿತಿಯನ್ನು ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಡೇಟ್ ಮಾಡಬೇಕು. ಜೊತೆಗೆ, ತನ್ನ ನೀತಿಗಳು, ಮರುಪಾವತಿಯ ಕುರಿತ ನಿಯಮಗಳು, ಟೇಕಾಫ್ ವಿಳಂಬವಾದರೆ ಅಥವಾ ರದ್ದಾದರೆ, ವಿಮಾನಯಾನ ಸಂಸ್ಥೆಯು ತನ್ನ ಪ್ರಯಾಣಿಕರಿಗೆ ಒದಗಿಸುವ ವ್ಯವಸ್ಥೆಯ ಕುರಿತೂ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕು. ವಿಮಾದ ಟಿಕೆಟ್‌ನಲ್ಲಿಯೂ ಈ ಎಲ್ಲಾ ಮಾಹಿತಿಗಳನ್ನು ನಮೂದಿಸಬೇಕು

'ಸಿಬ್ಬಂದಿಯ ಆಕ್ಷೇಪಾರ್ಹ ವರ್ತನೆ'

ಭಾನುವಾರ ದೆಹಲಿ ವಿಮಾನ ನಿಲ್ದಾಣದಲ್ಲಿ ವಿಮಾನದ ಟೇಕಾಫ್ 13 ತಾಸು ವಿಳಂಬಗೊಂಡಿದೆ. ಈ ವೇಳೆಯಲ್ಲಿ ಇಂಡಿಗೊ ವಿಮಾನದ ಸಹ ಪೈಲಟ್‌ಯೊಬ್ಬರ ಮೇಲೆ ಸಾಹಿಲ್ ಕಟಾರಿಯಾ ಎನ್ನುವ ಪ್ರಯಾಣಿಕ ಹಲ್ಲೆ ನಡೆಸಿದ್ದಾರೆ ಎಂದು ದೂರು ದಾಖಲಾಗಿದೆ. ಇದೇ ವಿಮಾನದಲ್ಲಿ ರಷ್ಯಾದ ರೂಪದರ್ಶಿ ಇವೆಗ್ನಿಯಾ ಬೆಲಸ್ಕಾಯ, ತಮ್ಮ ತಂಡದೊಂದಿಗೆ ಪ್ರಯಾಣಿಸುತ್ತಿದ್ದರು. ಪ್ರಯಾಣಿಕ ಸಾಹಿಲ್ ಪೈಲಟ್ ಮೇಲೆ ಹಲ್ಲೆ ಮಾಡಿದ ವಿಡಿಯೊವನ್ನು ಸೆರೆ ಹಿಡಿದವರು ಇವರೇ. ತಮ್ಮ ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಘಟನೆಯ ವಿವರಗಳನ್ನು ಅವರು ಹಂಚಿಕೊಂಡಿದ್ದಾರೆ. 'ಕುಡಿಯುವ ನೀರು, ತಿನ್ನಲು ಆಹಾರ ಕೂಡ ಕೊಟ್ಟಿಲ್ಲ' ಎಂದು ದೂರಿದ್ದಾರೆ.

'ದೆಹಲಿಯಿಂದ ಗೋವಾಕ್ಕೆ ಹೊರಟಿದ್ದೆವು. ವಿಮಾನವು ಬೆಳಿಗ್ಗೆ 7.40ಕ್ಕೆ ನಿಗದಿಯಾಗಿತ್ತು. ಆದರೆ, ಹೊರಡಲಿಲ್ಲ. ಒಂದು ತಾಸು ತಡವಾಗಿ ಹೊರಡುವುದಾಗಿ ಹೇಳಿದರು. 10 ತಾಸು ಕಾಯುವಿಕೆಯ ಬಳಿಕ ವಿಮಾನ ಹೊರಡುವುದಾಗಿ ಹೇಳಿದರು. ನಾವು ವಿಮಾನ ಏರಿದೆವು. ಈ ಬಳಿಕ ವಿಮಾನವು ಮತ್ತೆ ಎರಡು ತಾಸು ತಡವಾಗಿ ಹೊರಡುವುದಾಗಿ ಸಿಬ್ಬಂದಿ ತಿಳಿಸಿದರು. ಎಲ್ಲ ಪ್ರಯಾಣಿಕರು ಸಿಬ್ಬಂದಿಯನ್ನು ಪ್ರಶ್ನೆ ಮಾಡತೊಡಗಿದರು. ಕೆಲಹೊತ್ತಿನ ನಂತರ ಪ್ರಯಾಣಿಕರ ಸಿಟ್ಟು ಹೆಚ್ಚಾಯಿತು. ಇನ್ನಷ್ಟು ಪ್ರಶ್ನೆ ಕೇಳಲು ಆರಂಭಿಸಿದರು. ಹೀಗಾಗುತ್ತಿದ್ದಂತೆಯೇ, 'ನೀವು ಅತಿಯಾಗಿ ಪ್ರಶ್ನಿಸುತ್ತಿದ್ದೀರಿ. ಅದಕ್ಕಾಗಿ ವಿಮಾನವು ತಡವಾಗಿ ಹೊರಡುವಂತಾಗುತ್ತಿದೆ' ಎಂದು ಸಹ ಪೈಲಟ್ ಕೇಳಿದರು. ಆಗ ಆ ವ್ಯಕ್ತಿಯು ಸಿಟ್ಟಿಗೆದ್ದು ಸಹ ಪೈಲಟ್ ಮೇಲೆ ಕೈಮಾಡಿದರು. ಸಿಬ್ಬಂದಿ ಸ್ವಲ್ಪವೂ ಪ್ರಯಾಣಿಕ ಸ್ನೇಹಿಯಾಗಿ ವರ್ತಿಸಲಿಲ್ಲ. ಆದರೆ, ಏನೇ ಇದ್ದರೂ ಪೈಲಟ್ ಮೇಲೆ ಕೈಮಾಡಬಾರದಾಗಿತ್ತು' ಎಂದು ಅವರು ಹೇಳಿಕೊಂಡಿದ್ದಾರೆ. ಈ ಘಟನೆಯ ಕಾರಣದಿಂದಲೇ ಡಿಜಿಸಿಎ ತನ್ನ ಹೊಸ ಎಸ್‌ಒಪಿಯಲ್ಲಿ, 'ವಿಮಾನಯಾನ ವಿಳಂಬದಂಥ ಸಂದರ್ಭಗಳಲ್ಲಿ ವಿಮಾನಯಾನ ಸಂಸ್ಥೆಯ ಸಿಬ್ಬಂದಿ ಪ್ರಯಾಣಿಕರೊಂದಿಗೆ ಉತ್ತಮವಾಗಿ ವರ್ತಿಸಬೇಕು' ಎಂದು ಹೇಳಿದೆ.

ಆಧಾರ: ನಾಗರಿಕ ವಿಮಾನಯಾನ ಸಚಿವಾಲಯ, ಡಿಜಿಸಿಎ ಮಾಸಿಕ ಬುಲೆಟಿನ್‌ಗಳು, ಸಂಸತ್ತಿಗೆ ವಿಮಾನಯನ ಸಚಿವಾಲಯ ನೀಡಿದ ಉತ್ತರ, ಪಿಟಿಐ

ಸಿನಿ ಬಿಟ್ಸ್

ಮ್ಯಾಕ್ಸ್: ಶೂಟಿಂಗ್ ಜೊತೆಜೊತೆಗೇ ಡಬ್ಬಿಂಗ್



ಕಿಚ್ಚ ಸುದೀಪ್ ನಟನೆಯ 46ನೇ ಸಿನಿಮಾ 'ಮ್ಯಾಕ್ಸ್'ನ ಕ್ಲೈಮ್ಯಾಕ್ಸ್ ಶೂಟಿಂಗ್ ಸಂಕ್ರಾಂತಿ ಬಳಿಕ ಪುನರಾರಂಭಗೊಂಡಿದೆ. ಚಿತ್ರೀಕರಣದ ಕುರಿತು ತಮ್ಮ 'ಎಕ್ಸ್' ಖಾತೆಯಲ್ಲಿ ಸುದೀಪ್ ಅಪ್‌ಡೇಟ್ ನೀಡಿದ್ದಾರೆ.

ವಿಜಯ್ ಕಾರ್ತಿಕೇಯ ಆ್ಯಕ್ಷನ್, ಕಟ್ ಹೇಳಿರುವ ಈ ಸಿನಿಮಾದ ಚಿತ್ರೀಕರಣ ತಮಿಳುನಾಡಿನ ಮಹಾಬಲಿಪುರಂನಲ್ಲಿ ಹಾಕಿರುವ ಸೆಟ್‌ನಲ್ಲಿ ನಡೆಯುತ್ತಿದೆ. ಸಂಕ್ರಾಂತಿ ಹಬ್ಬ ಆಚರಿಸಿ ಮಂಗಳವಾರ(ಜ.16) ಬೆಳಿಗ್ಗೆ ಚೆನ್ನೈಗೆ ಪ್ರಯಾಣ ಬೆಳೆಸಿರುವ ಸುದೀಪ್, ಅಭಿಮಾನಿಗಳ ಜೊತೆ 'ಎಕ್ಸ್'ನಲ್ಲಿ ಮಾತುಕತೆ ನಡೆಸಿದ್ದಾರೆ. 'ಮ್ಯಾಕ್ಸ್ ಸಿನಿಮಾದ ಕ್ಲೈಮ್ಯಾಕ್ಸ್ ಭಾಗದ ಚಿತ್ರೀಕರಣ ಪುನರಾರಂಭವಾಗುತ್ತಿದ್ದು, ಇದರಲ್ಲಿ ಭಾಗವಹಿಸಲು ತೆರಳುತ್ತಿದ್ದೇನೆ. ಈಗಾಗಲೇ ಚಿತ್ರೀಕರಣ ಪೂರ್ಣಗೊಂಡಿರುವ ಭಾಗದ ಡಬ್ಬಿಂಗ್ ಅನ್ನು ಎಲ್ಲ ಕಲಾವಿದರು ಪೂರ್ಣಗೊಳಿಸಿದ್ದಾರೆ. ಉಳಿದ ಭಾಗದ ಚಿತ್ರೀಕರಣ ನಡೆಯುತ್ತಿದೆ' ಎಂದಿರುವ ಸುದೀಪ್, ಸಿನಿಮಾದ ಶೂಟಿಂಗ್ ಜೊತೆಜೊತೆಗೇ ಪೋಸ್ಟ್ ಪ್ರೊಡಕ್ಷನ್ ಕೆಲಸ ಆರಂಭವಾಗಿರುವುದರ ಸುಳಿವು ನೀಡಿದ್ದಾರೆ. ಅಲ್ಲದೆ, ಶೀಘ್ರದಲ್ಲೇ ಸಿನಿಮಾದ ಬಿಡುಗಡೆ ದಿನಾಂಕ ಘೋಷಣೆಯಾಗಲಿದೆ ಎಂದಿದ್ದಾರೆ.

'ನವೆಂಬರ್‌ನಲ್ಲಿ ಸುರಿದ ಭಾರಿ ಮಳೆಯಿಂದಾಗಿ ಕೆಲ ವಾರ ಚಿತ್ರೀಕರಣ ಸಾಧ್ಯವಾಗಲಿಲ್ಲ. ಇದೀಗ ಚಿತ್ರೀಕರಣ ಯಾವುದೇ ಅಡ್ಡಿಯಿಲ್ಲದೆ ಸಾಗುತ್ತಿದೆ. ಸಿನಿಮಾದ ಚಿತ್ರೀಕರಣ ಪೂರ್ಣವಾಗದೇ ಇರುವಾಗ ಹೊಸ ಅಪ್‌ಡೇಟ್‌ಗಳನ್ನು ಹೇಗೆ ನೀಡಲಿ' ಎಂದು ಅಭಿಮಾನಿಗಳನ್ನು ಕಿಚ್ಚ ಪ್ರಶ್ನಿಸಿದ್ದಾರೆ.

2024ಕ್ಕೆ 'BRB': 'ವಿಕ್ರಾಂತ್ ರೋಣ' ಸಿನಿಮಾದ ಬಳಿಕ ನಿರ್ದೇಶಕ ಅನೂಪ್ ಭಂಡಾರಿ ಜೊತೆಗೆ ಮತ್ತೊಂದು ಸಿನಿಮಾ ಮಾಡಲು ಸುದೀಪ್ ಸಜ್ಜಾಗಿದ್ದಾರೆ. ಇದೇ ವರ್ಷದಲ್ಲಿ 'ಬಿಲ್ಲಾ ರಂಗ ಬಾಷಾ'(BRB) ಸೆಟ್ಟೇರಲಿದೆ ಎಂದು ಸುದೀಪ್ ತಿಳಿಸಿದ್ದಾರೆ. ಅನೂಪ್ ನಿರ್ದೇಶನದ 4ನೇ ಸಿನಿಮಾ ಇದಾಗಿರಲಿದೆ.

ಗಾಯಕಿಯಾದ ನಟಿ ಪ್ರೇಮಾ

ನಟಿ ಪ್ರೇಮಾ ಈಗ ಹಿನ್ನೆಲೆ ಗಾಯಕಿಯಾಗಿದ್ದಾರೆ. ತಮ್ಮದೇ ನಟನೆಯ 'ವರಾಹಚಕ್ರಂ' ಸಿನಿಮಾದ ದೇಶಭಕ್ತಿ ಗೀತೆಯೊಂದಕ್ಕೆ ಪ್ರೇಮಾ ಧ್ವನಿಯಾಗಿದ್ದಾರೆ. ಮಂಜು ಮಸ್ಕಲ್ ಮಟ್ಟಿ ನಿರ್ದೇಶನದ ಈ ಚಿತ್ರದಲ್ಲಿ ಪ್ರೇಮಾ, ಸಾಯಿಕುಮಾರ್ ಮುಖ್ಯ ಪಾತ್ರದಲ್ಲಿದ್ದಾರೆ. 'ಬೆಂಗಳೂರಿನಲ್ಲಿ ನಡೆಯುತ್ತಿರುವ ಅವ್ಯವಸ್ಥಿತ ಪದ್ಧತಿಗಳು, ಸಂಸ್ಕೃತಿಯ ಕಗ್ಗೊಲೆ, ದೌರ್ಜನ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಕಥಾಹಂದರ ಒಳಗೊಂಡ ಚಿತ್ರವಿದು. ವಾರಾಣಸಿಯಲ್ಲಿ ಚಿತ್ರೀಕರಿಸಲಾಗಿರುವ ಈ ಹಾಡು ಗಣರಾಜ್ಯೋತ್ಸವದಂದು ಬಿಡುಗಡೆಯಾಗಲಿದೆ. ಪ್ರೇಮಾ ಅವರು ಶೂಟಿಂಗ್ ವೇಳೆ ಹಾಡಿದ್ದನ್ನು ಕೇಳಿದ ಬಳಿಕ ಅವರ ಬಳಿಯೇ ಹಾಡಿಸಲು ನಿರ್ಧರಿಸಿದೆ' ಎಂದರು ನಿರ್ದೇಶಕ ಮಂಜು ಮಸ್ಕಲ್ ಮಟ್ಟಿ.

ಈ ಗೀತೆಗೆ ವಿ.ನಾಗೇಂದ್ರಪ್ರಸಾದ್ ಅವರ ಸಾಹಿತ್ಯ, ಸ್ವರ ಸಂಯೋಜನೆ ಇದೆ. ಮನ್ವಂತರಿ ಮೂವಿ ಮೇಕರ್ಸ್ ಅಡಿಯಲ್ಲಿ ಈ ಚಿತ್ರ ನಿರ್ಮಾಣವಾಗುತ್ತಿದೆ. ಅರ್ಜುನ್ ದೇವ ಚಿತ್ರದ ನಾಯಕನಾಗಿ ನಟಿಸಿದ್ದು, ರಾಣಾ, ಇಮ್ರಾನ್ ಷರೀಫ್, ಆರ್ಯನ್, ಪ್ರತೀಕ್ ಗೌಡ ಉಳಿದ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಸಾಂಗ್ ರೆಕಾರ್ಡಿಂಗ್‌ನಲ್ಲಿ ಪ್ರೇಮಾ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜನವರಿ 17, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ಸಪ್ತಮಿ ಗಂ. 22-07 ನಕ್ಷತ್ರ: ರೇವತಿ ಗಂ. 27-34 ಯೋಗ: ಶಿವ ಗಂ. 17-13 ಕರಣ: ಗರ ಗಂ. 10-59, ಮಕರ ಮಾಸದ 02 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 2. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 07-01 ಸೂರ್ಯಾಸ್ತ : 06-20
ಮುಸ್ಲಿಂ ದಿನಾಂಕ : 05 ರಜಬ್
ಅದೃಷ್ಟ ಸಂಖ್ಯೆ : 4, 6

ಮೇಷ: ಕೆಲಸಗಳಿಗೆ ಅರ್ಜಿ ತುಂಬಲು ಇಂದು ಬಹಳ ಸೂಕ್ತ ಸಮಯ. ಈ ದಿನದ ನಿಮ್ಮ ಕೆಲಸ ಕಾರ್ಯಗಳು ಯೋಚನೆಯ ವಿರುದ್ಧವಾಗಿ ನಡೆಯಲಿದೆ. ಆದರೆ ಗಾಬರಿಯಾಗುವ ಅವಶ್ಯಕತೆ ಇಲ್ಲ.

ವೃಷಭ: ಈ ದಿನದ ದೂರ ಪ್ರಯಾಣವನ್ನು ಸಾಧ್ಯವಾದಲ್ಲಿ ಮುಂದೂಡುವುದು ಉತ್ತಮ. ರಾಹುಕಾಲದಲ್ಲಿ ಸಂಚರಿಸಬೇಡಿ. ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಹೆಚ್ಚಿನ ಮನ್ನಣೆ ದೊರೆಯುವುದು.

ಮಿಥುನ: ಸರ್ಕಾರಿ ಕಚೇರಿಗಳಿಗೆ ಅಲೆದಾಟವಾದರೂ ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುವುದು. ಮನೆ ಖರೀದಿ ಅಥವಾ ನಿವೇಶನ ಖರೀದಿಯ ಯೋಜನೆ ಈಡೇರುವುದು. ಮಕ್ಕಳಿಂದ ಸಂತೋಷವಾಗುವುದು.

ಕರ್ಕಾಟಕ: ಕಟ್ಟಡದ ರಿಪೇರಿ ಸಾಮಗ್ರಿಗಳ ಖರೀದಿಗೆ ಹೆಚ್ಚಿನ ಖರ್ಚು ಉಂಟಾಗುತ್ತದೆ. ಆರಂಭದಲ್ಲಿ ಕೆಲಸಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವುದರಿಂದ ಧೈರ್ಯ ಹೆಚ್ಚುತ್ತದೆ. ಆದರೆ ಮುಕ್ತಾಯದ ಹಂತದ ಬಗ್ಗೆ ಗಮನವಿರಲಿ.

ಸಿಂಹ: ಕೇವಲ ವ್ಯಾವಹಾರಿಕವಾಗಿರುವುದು ಸರಿಯಲ್ಲ. ಮಾನವೀಯತೆ ಬೆಳೆಸಿಕೊಳ್ಳಿರಿ. ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡುಬರುತ್ತದೆ. ಅಧಿಕಾರಿಗಳಿಗೆ ಕೆಲಸದಲ್ಲಿನ ಒತ್ತಡವು ಹೆಚ್ಚಲಿದೆ.

ಕನ್ಯಾ: ಸ್ವಂತ ಉದ್ಯಮಿಗಳಿಗೆ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಎಲ್ಲಾ ರೀತಿಯ ಸಹಕಾರ ಒದಗಿ ಬರುವುದು. ಹಣಕಾಸಿನ ಮಧ್ಯಸ್ಥಿಕೆಯಲ್ಲಿ ಸಿಕ್ಕಿಹಾಕಿಕೊಳ್ಳಬೇಡಿ. ಮಾರಾಟ ಪ್ರತಿನಿಧಿಗಳಿಗೆ ಉತ್ತಮ ಸ್ಪಂದನೆ ಸಿಗುವುದು.

ತುಲಾ: ಅಳವಡಿಸಿಕೊಂಡ ಹೊಸ ಯೋಜನೆಗಳಿಂದ ಜೀವನದಲ್ಲಿ ಉತ್ತಮ ಪ್ರಗತಿ ಕಾಣಲು ಸಾಧ್ಯವಿದೆ. ವಿವಾದಕ್ಕೆ ಆಸ್ಪದವಾಗದಂತೆ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಫಲರಾಗುವಿರಿ.

ವೃಶ್ಚಿಕ: ಯೋಗ್ಯತೆ ಇಲ್ಲದ ವ್ಯಕ್ತಿಗೆ ಉದಾರತೆ ತೋರುವುದರಿಂದ ದಡ್ಡತನದ ಪ್ರದರ್ಶನ ಆಗುವುದು. ಮಹಿಳೆಯರಿಗೆ ತಮ್ಮ ನೌಕರಿಯಲ್ಲಿ ಸಣ್ಣ-ಪುಟ್ಟ ಸಮಸ್ಯೆ ಎದುರಾಗಬಹುದು. ಕೌಟುಂಬಿಕವಾದ ಶುಭ ಸಮಾಚಾರ ಕೇಳಿಬರಲಿದೆ.

ಧನು: ಧನ ಹೂಡಿಕೆಯಲ್ಲಿ ಶುದ್ಧ ಹಸ್ತವಾಗಿರುವುದು ಶ್ರೇಯಸ್ಸಿಗೆ ಮೂಲ ಕಾರಣವಾಗುತ್ತದೆ. ಬಾಳಸಂಗಾತಿಯ ಆಯ್ಕೆಯ ವಿಚಾರದಲ್ಲಿ ಸೌಂದರ್ಯಕ್ಕಿಂತ ಗುಣ, ನಡತೆಗೆ ಪ್ರಾಮುಖ್ಯ ನೀಡುವುದು ಉತ್ತಮ.

ಮಕರ: ವ್ಯವಹಾರಿಕವಾಗಿ ಕೆಲವರು ನಿಮ್ಮನ್ನು ಇಕ್ಕಟ್ಟಿಗೆ ಸಿಲುಕಿಸುವ ಪ್ರಯತ್ನವನ್ನು ನಡೆಸಲಿದ್ದಾರೆ. ಹಣಕಾಸಿನ ಪರಿಸ್ಥಿತಿ ನಿದ್ದೆಗೆಡಿಸಲಿದೆ. ಸಾಹಿತಿ ಹಾಗೂ ಕಲಾವಿದರಿಗೆ ಇಂದು ಉತ್ತಮವಾದ ಗೌರವ ದೊರಕಲಿದೆ.

ಕುಂಭ: ಹೆಚ್ಚಿನ ಯಶಸ್ಸು ಪಡೆಯಲು ಕೆಲವು ಶೀಘ್ರ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುವುದು. ಮಕ್ಕಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವುದು ಸರಿಯಲ್ಲ. ಗೊಂದಲದಲ್ಲಿರುವ ನಿಮಗೆ ಒಳಿತಿನ ದಾರಿ ಸಿಗಲಿದೆ.

ಮೀನ: ಅಧಿಕಾರಿಗಳ ಕೈಗೊಂಬೆಯಾಗಿರುವ ನಿಮಗೆ ಈ ದಿನ ಜವಾಬ್ದಾರಿಗಳು ಹೆಚ್ಚುವುದು. ಕೆಟ್ಟ ಮಾತಿಗೆ ಮಾತನ್ನು ಬೆಳೆಸುವ ಕಾರಣದಿಂದ ಸಂಬಂಧಗಳು ಒಡೆದುಹೋಗುವ ಸಂಭವವಿದೆ. ಖರ್ಚಿನಲ್ಲಿ ಹಿಡಿತವಿರುವುದು ಉತ್ತಮ.

ನುಡಿ ಬೆಳಗು

ಮುಚ್ಚಿದ ಬಾಗಿಲ ತೆರೆದು ಬಂದವರು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಅವತ್ತು ಗೆಳೆಯರ ಗುಂಪು ಒಂದು ಹೋಟೆಲ್‌ನಲ್ಲಿ ಸೇರಿತ್ತು. ಎಲ್ಲರೂ ದೋಸೆ ಸವಿಯುತ್ತಿದ್ದರು. ಅಷ್ಟರಲ್ಲಿ ನಾಗರಾಜ್ ಎನ್ನುವವರಿಗೆ ತುತ್ತು ಗಂಟಲಲ್ಲಿ ಸಿಕ್ಕು ನೆತ್ತಿಗೇರಿತು. ತಕ್ಷಣ ಕುಡಿಯುವ ನೀರು ಬೇಕಿತ್ತು. ಅಲ್ಲೇ ಇದ್ದ ಗೆಳೆಯನ ಪುಟಾಣಿ ಮಗಳು ಕೈಗೆ ಸಿಕ್ಕ ನೀರಿನ ಬಾಟಲಿ ತಂದು ಕೊಟ್ಟಳು. ಅದರಲ್ಲಿದ್ದ ನೀರು ಗಕ್ಕನೆ ಕುಡಿದಾಗ ವಿಚಿತ್ರ ಹಿಂಸೆ ಹುಟ್ಟಿತು. ಮೂಗಿನಲ್ಲಿ ಉರಿ, ಗಂಟಲಲ್ಲಿ ಕೆರೆತ ಶುರುವಾಯಿತು. ನಂತರ ವಿಚಾರಿಸಿದಾಗ ಅದು ಟೈಲ್ಸ್ ಕ್ಲೀನ್ ಮಾಡುವ ನೀರಿನಂತಿರುವ ಆ್ಯಸಿಡ್ ಎಂದು ಗೊತ್ತಾಯಿತು.

ವೈದ್ಯರಿಗೆ ತೋರಿಸಿ ಸಲಹೆ, ಔಷಧಿ ಪಡೆದರು. ಒಂದು ತಿಂಗಳ ತನಕ ಯಾವ ಸಮಸ್ಯೆಯೂ ಇರಲಿಲ್ಲ. ನಂತರ ನಿಧಾನಕ್ಕೆ ಮೈಯೆಲ್ಲಾ ಕಡಿತ, ಮೂತ್ರ ಉರಿ, ಆಯಾಸ, ಸುಸ್ತು ಚಾಲೂ ಆದವು. ಮೊದಲು ಜಾಂಡೀಸ್ ಕಾಯಿಲೆ ಇರಬಹುದು ಎಂದುಕೊಂಡರು. ಮತ್ತೊಂದು ಪರೀಕ್ಷೆಯಲ್ಲಿ ಡಯಾಬಿಟಿಸ್ ಕಾಣಿಸಿಕೊಂಡಿರುವುದು ಗೊತ್ತಾಯಿತು. ಹಾಗೆಯೇ ಲಿವರ್ ಕೂಡ ಸಮಸ್ಯೆಯಲ್ಲಿತ್ತು. ಅದಕ್ಕೂ ಚಿಕಿತ್ಸೆ ಶುರುವಾಯಿತು. ಪರಿಣಾಮ ಏನೂ ಆಗಲಿಲ್ಲ. ಎರಡೂವರೆ ತಿಂಗಳಲ್ಲಿ ದೇಹ ಸಣ್ಣಗಾಯಿತು. ಅನೇಕ ವೈದ್ಯರನ್ನು ಕಂಡರು. 'ನೀವು ಬದುಕುವುದೇ ಕಷ್ಟವಿದೆ. ಪ್ಯಾಂಕ್ರಿಯಾಸ್ ಹಾಳಾಗಿದೆ. ಇರುವಷ್ಟು ದಿನ ಮಜ್ಜಿಗೆ ಅನ್ನ ತಿಂದುಕೊಂಡಿರಿ' ಎಂದರು ಎಲ್ಲರು.

ಅಂತಿಮ ದಿನಗಳು ಬಂದವು. ಅಷ್ಟರಲ್ಲಿ ಗೆಳೆಯರೊಬ್ಬರು ತಾವು ಬಲ್ಲ ನಾಟಿ ವೈದ್ಯರೊಬ್ಬರು ಇರುವುದಾಗಿಯೂ, ಅಲ್ಲಿಗೆ ಹೋದರೆ ಬದುಕುವ ಒಂದು ಸಾಧ್ಯತೆ ಇದೆಯೆಂದು ಹೇಳಿದರು. ಕೊನೆಯ ಒಂದು ಛಾನ್ಸ್ ತೆಗೆದುಕೊಳ್ಳುವುದರಲ್ಲಿ ತಪ್ಪೇನಿದೆ ಎನ್ನಿಸಿತು. ಆದರೆ ಅಲ್ಲಿಗೆ ಹೋದರೆ, ಆ ನಾಟಿ ವೈದ್ಯರು ತೀರಿಕೊಂಡು ವರ್ಷಗಳೇ ಕಳೆದಿದ್ದವು ಎನ್ನುವುದು ತಿಳಿಯಿತು. ಬೇಸರದಿಂದ ವಾಪಸ್ ಹೊರಟಾಗ ಆ ನಾಟಿ ವೈದ್ಯರ ಮಗಳು 'ನೀವು ನಂಬಿದರೆ ನಾನು ಪ್ರಯತ್ನಿಸಬಲ್ಲೆ. ಒಪ್ಪಿಗೆ ಇದ್ದರೆ ನಾಳೆ ಬೆಳಿಗ್ಗೆ ಹಸುವಿನ ಹಾಲು ತನ್ನಿ' ಎಂದಳು.

'ನಾನು ಉಳಿದರೆ ಬಂದೇನು ನೀವು ಇಲ್ಲಿರುವುದು ಬೇಡ' ಎಂದು ಮನೆಯವರನ್ನು ನಾಗರಾಜ್ ಕಳಿಸಿದರು.

ತಿಂಗಳು ಉರುಳಿದವು. ಪ್ರಕೃತಿಯ ನಡುವೆ ಇದ್ದ ನಾಗರಾಜ್ ಅವರಲ್ಲಿ ಭಾರಿ ಬದಲಾವಣೆ ಬಂದಿತು. ಔಷಧಿ, ನಂಬಿಕೆ, ಕಾಡಿನ ನಡಿಗೆ, ಶಾಂತಚಿತ್ತ ಕೆಲಸ ಮಾಡಿದ್ದವು. ಮತ್ತೊಮ್ಮೆ ಪರೀಕ್ಷಿಸಿದ ಲ್ಯಾಬ್‌ನವರಿಗೂ ಆಶ್ಚರ್ಯ. ಇದು ಹೇಗೆ ಸಾಧ್ಯವಾಯಿತು?

ಅವರೀಗ ಯುವಕನಂತಾಗಿ ಚಾರಣ, ಪ್ರವಾಸ, ಓಡಾಟಗಳಲ್ಲಿ ಬಿಝಿ. 'ನನಗೀಗ ಕೋಪ, ಚಿಂತೆ, ಹಟ, ನಿರೀಕ್ಷೆಗಳಿಲ್ಲ. ನಾನು ಸತ್ತ ಮೇಲೆ ನಮ್ಮ ಮನೆಯವರಿಗೆ ಬರಬಾರದ ಕಷ್ಟ ಬರುತ್ತದೆ ಎಂದು ಯೋಚಿಸುವುದೇ ಶುದ್ಧ ಮುಠ್ಠಾಳತನ. ನಮ್ಮ ನಂತರ ಅವರು ನಿಜವಾಗಿಯೂ ಹೊಸ ಬದುಕನ್ನು ಕಟ್ಟಿಕೊಂಡು ಖುಷಿಯಾಗಿರುತ್ತಾರೆ. ನೋಡಿ ಹೆಚ್ಚು ಆಸೆಗಳಿಲ್ಲದೆ ನಾನೀಗ ಸಂತಸವಾಗಿದ್ದೇನೆ' ಎಂದು ತಾವು ಕಂಡುಕೊಂಡ ಸತ್ಯವನ್ನು ನಾಗರಾಜ್ ವಿವರಿಸಿದರು.

ಪದಬಂಧ 5563

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರತಿ ಇದ್ದಾಗಿನ ವರ್ತಮಾನಕಾಲ (3)
3.ಕಟ ಕಟ ಶಬ್ದ ಮಾಡುವ ಬಂಡಿ (3)
5.ಆರಾಮಾಗಿದ್ದಾನಲ್ಲಾ ಈ ದುಷ್ಟ? (3)
6.ಉಚಿತವಾಗಿದ್ದರೂ ತಕ್ಕಂತಹದ್ದು !(4)
8.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)
10.ಆ ಹೊತ್ತು ಒದಗಿದ ತೊಂದರೆ (3)
11.ಚಿಲಿಪಿಲಿಯಲ್ಲಿರುವ ಅಕ್ಷರವನ್ನು ಹುಡುಕಿ! (2)
13. ಅದೇ ತಾನೆ ಕಡೆದಿರುವ ಬೆಣ್ಣೆ (4)
15.ವೈರಿಯೊಡನಿದ್ದಾಳಲ್ಲಾ ಈ ಒನಪುಗಾತಿ! (3)
16.ಓಣಿಯಲ್ಲೆಲ್ಲಾ ಬಲು ಅಚ್ಚುಕಟ್ಟು (3)
17.ಹಸಿರು ಬಣ್ಣವಿದು (3)

ಮೇಲಿಂದ ಕೆಳಕ್ಕೆ
2.ಪ್ರಮಥರೆಲ್ಲಾ ಸೇರಿದ್ದು ಇದೇ ಮೊದಲು! (3)
4.ಬಾಗಿಲಿನ ಕೊಂಡಿ ತಿರುವುಮುರುವಾಗಿ-ದೆಯಾ? (3)
5.ಹರನ ಬಳಿಯಿರುವ ಮಣ್ಣಿನ ಬಾನಿ (3)
6.ಯಜ್ಞ ಮಾಡುವವ ಧರಿಸಿರುವ ಜನಿವಾರ(5)
7.ಬಲಿ ನೀಡುವ ಜಾಗದಲ್ಲಿದ್ದಾನೆ ಈ ಪರದೇಶಿ! (3)
9.ಇದೇ ಪ್ರಮುಖವಾದುದು (3)
12.ತೂರಿಕೊಂಡು ಹೆಣೆದ ತಂತ್ರ (3)
14.ಅನೇಕ ಚಿಕ್ಕ ಚಿಕ್ಕ ಮನೆಗಳ ಪ್ರದೇಶ (3)
15.ವೈಯಾರಿಯ ಶೈಲಿ! (3)



5562ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರಂಬ 3.ಭಟ್ಟಂಗಿ
5.ಸಂಕೇತ 6.ವಚನ
8.ವಜ್ರ 9.ಕುಟಿಲ
10.ರಂಪ 13.ಮರ್ಕಟ
15.ಪ್ರತ್ಯಕ್ಷ 16.ಜರಡಿ
17.ರುಧಿರ

ಮೇಲಿಂದ ಕೆಳಕ್ಕೆ:
1.ಆಘಾತ 2.ಬಡವ
3.ಭವನ 4.ಗಿರಾಕಿ
5.ಸಂಭವ 7.ಚಪಲ
9.ಕುತರ್ಕ 11.ಪರೋಕ್ಷ
12.ಕಣಜ 13.ಮಹಡಿ
14.ಟಗರು 15.ಪ್ರವರ

ಸುಡೊಕು 5948

9		3		6				2
							5	
	1	2		5		6		4
	8			1		4		
3		4	2		7		8	
	9		4		3			6
6		5					2	
				7		3		1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5947 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಷೇರುಪೇಟೆ ವಹಿವಾಟು 199



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,097
ಇಂದಿನ ಅಂತ್ಯ	22,032
▼	65
ದಿನದ ಕನಿಷ್ಠ	21,969

ವಿನಿಮಯ ದರ

$ ಡಾಲರ್	83.12
£ ಪೌಂಡ್	105.60
€ ಯುರೊ	90.82
¥ ಯೆನ್ (100ಕ್ಕೆ)	57

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹72
ಮೈಸೂರು	
100ಕ್ಕೆ	₹550

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹905 (905)
ಸೂರ್ಯಕಾಂತಿ (ರಿಫೈನ್ಡ್)	₹930 (930)
ಪಾಮೋಲಿನ್	₹844 (845)

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹13900
ಎಸಿ	₹7840
ಆರ್‌ಪಿ	₹11000
ಆರ್‌ಸಿ	₹7100

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹8500-10140
ಕೆ.ಆರ್.ಪೇಟೆ	₹8209-8209
ಪುತ್ತೂರು	₹5500-9200
ತುರುವೇಕೆರೆ	₹9800-9800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹156.50
ಆರ್‌ಎಸ್‌ಎಸ್-5	₹150
ಗುಡ್ ಲಾಟ್	₹133

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹306-453
ದ್ವಿತಳಿ (ಬಿ.ವಿ)	₹333-568

ಹವಾಮಾನ ಬಿಕ್ಕಟ್ಟು: ಆರ್ಥಿಕತೆಗೆ ಆಪತ್ತು

ದಾವೋಸ್ (ಪಿಟಿಐ): ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿರುವ ಹವಾಮಾನ ಬಿಕ್ಕಟ್ಟಿನ ಪರಿಹಾರಕ್ಕೆ ಸಂಬಂಧಿಸಿದಂತೆ ಎಲ್ಲಾ ರಾಷ್ಟ್ರಗಳ ನಡುವೆ ಒಮ್ಮತ ಮೂಡಬೇಕಿದೆ ಎಂದು ವಿಶ್ವ ಆರ್ಥಿಕ ವೇದಿಕೆಯ ವರದಿ ಪ್ರತಿಪಾದಿಸಿದೆ.

ಇಲ್ಲವಾದರೆ 2050ರ ವೇಳೆಗೆ ಜಾಗತಿಕ ಆರ್ಥಿಕತೆಗೆ ₹1,039 ಲಕ್ಷ ಕೋಟಿ ನಷ್ಟವಾಗಲಿದೆ. 14.5 ದಶಲಕ್ಷ ಸಾವುಗಳಿಗೂ ಕಾರಣವಾಗಬಹುದು ಎಂದು ಎಚ್ಚರಿಕೆ ನೀಡಿದೆ. ಹವಾಮಾನ ಬದಲಾವಣೆಯಿಂದ ಆರೋಗ್ಯದ ಮೇಲಾಗುವ ಪರಿಣಾಮ ಬಹಳಷ್ಟು ತಗ್ಗಿಸಬೇಕಿದೆ. ಇದರ ವಿರುದ್ಧ ಕಾರ್ಯತಂತ್ರದ ಕ್ರಮ ಅನುಸರಿಸಲು ಜಾಗತಿಕ ಮಧ್ಯಸ್ಥಗಾರರಿಗೆ ಇನ್ನೂ ಸಮಯವಿದೆ ಎಂದು ಹೇಳಿದೆ. ಜಾಗತಿಕ ಆರ್ಥಿಕತೆ ಮತ್ತು ವಿಶ್ವದಾದ್ಯಂತ ಆರೋಗ್ಯ ವ್ಯವಸ್ಥೆ ಮೇಲೆ ಪರೋಕ್ಷವಾಗಿ ಹವಾಮಾನ ಬದಲಾವಣೆಯು ಬೀರುವ ಪರಿಣಾಮ ಕುರಿತು ವರದಿಯಲ್ಲಿ ವಿವರಿಸಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಕೋಕ	33989-33989	ಚಾಲಿ	37239-40738
ಕೋಕ	18000-28500	ಕೆಂಪುಗೋಟು	36439-36439	ಕೆಂಪುಗೋಟು	30218-37099
ಹೊಸತು	28500-37000	ರಾಶಿ	45009-49149	ರಾಶಿ	45608-49109
ಹಳತು	42000-44500	ಸಿಪ್ಪೆಗೋಟು	21099-21099	ಯಲ್ಲಾಪುರ	
ಕಾರ್ಕಳ		ಶಿವಮೊಗ್ಗ		ಅಪಿ	58269-60595
ಹೊಸತು	25000-37000	ಬೆಟ್ಟೆ	42800-55599	ಬಿಳಿಗೋಟು	24899-34691
ಹಳತು	30000-44500	ಗೊರಬಲು	16559-39199	ಚಾಲಿ	34399-40511
ಪುತ್ತೂರು		ರಾಶಿ	34009-49998	ಕೋಕ	18869-31160
ಕೋಕ	11000-25000	ಸರಕು	53600-80896	ಕೆಂಪುಗೋಟು	26899-37009
ಹೊಸತು	27000-36500	ಶಿರಸಿ		ರಾಶಿ	48019-54437
ಸಾಗರ		ಬೆಟ್ಟೆ	38699-46119	ತಟ್ಟಿಬೆಟ್ಟೆ	36919-47309
ಬಿಳಿಗೋಟು	27739-27739	ಬಿಳಿಗೋಟು	30499-35208		
ಚಾಲಿ	32989-38019				

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ದ್ವಿತೀಯ ವರ್ಷದ ಪುಣ್ಯಸ್ಮರಣೆ

ನಿಧನ : 17-01-2022
ದೇವನಹಳ್ಳಿ
ಶ್ರೀ ಕೆ.ಹೆಚ್. ರಾಮಕೃಷ್ಣಪ್ಪ
ಶ್ರೀ ಮಾರುತಿ ಫಾರಂ
ಕೊಡಿಗೇಹಳ್ಳಿ, ಬೆಂಗಳೂರು-560092
ನಿಮ್ಮ ಆತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಸದಾ ನಿಮ್ಮ ಸ್ಮರಣೆಯಲ್ಲಿರುವೆಂದು ಪ್ರಾರ್ಥಿಸುವೆ.
ಇಂತಿ ದುಃಖತಪ್ತರು: ಶ್ರೀ ಕೆ.ಆರ್.ರಾಜು ಸಹೋದರರು ಮತ್ತು ಸಹೋದರಿಯರು ಹಾಗೂ ಕುಟುಂಬ ವರ್ಗದವರು

ಚಿರಸ್ಮರಣೆ

ಶ್ರೀಮತಿ ಗೀತಾಲಕ್ಷ್ಮೀ ಆರ್.
ನಿಧನ : 17-1-1994
ನೀವು ನಮ್ಮನ್ನಗಲಿ ಇಂದಿಗೆ ಮೂವತ್ತು ವರ್ಷಗಳಾದವು.
ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ
ಎ. ರವೀಂದ್ರನಾಥ್ ಮತ್ತು ಎ. ಆರ್. ಅಶ್ವಥ್ ಹಾಗೂ ಕುಟುಂಬವರ್ಗದವರು
ರಾಜ್‌ಹನ್ಸ್ ಎಂಟರ್‌ಪ್ರೈಸಸ್, ರಾಜ್‌ಹನ್ಸ್ ಪಬ್ಲಿಕೇಷನ್, ಪ್ರಿಯಾಂಕ ಮತ್ತು ಚಿತ್ರ ಪತ್ರಿಕೆಗಳು
ಬೆಂಗಳೂರು – 560 044.

ರಸ್ತೆ ಅಪಘಾತ: ಗಂಟೆಗೆ 19 ಸಾವು

ನವದೆಹಲಿ (ಪಿಟಿಐ): 'ದೇಶದಲ್ಲಿ ರಸ್ತೆ ಅಪಘಾತ ಮತ್ತು ಜನರ ಸಾವಿನ ಪ್ರಕರಣಗಳನ್ನು 2030ರೊಳಗೆ ಶೇ 50ರಷ್ಟಕ್ಕೆ ತಗ್ಗಿಸುವುದು ಕೇಂದ್ರ ಸರ್ಕಾರದ ಪ್ರಧಾನ ಆದ್ಯತೆಯಾಗಿದೆ' ಎಂದು ಕೇಂದ್ರ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟವು (ಸಿಐಐ) ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಪ್ರತಿ ಗಂಟೆಗೆ 53 ರಸ್ತೆ ಅಪಘಾತಗಳು ಸಂಭವಿಸುತ್ತಿದ್ದು, 19 ಮಂದಿ ಮೃತಪಡುತ್ತಿದ್ದಾರೆ' ಎಂದು ತಿಳಿಸಿದರು.

ನಿತಿನ್ ಗಡ್ಕರಿ

ರಸ್ತೆ ಸುರಕ್ಷತಾ ಪಾಲನೆಯಲ್ಲಿ ರಸ್ತೆ ಮತ್ತು ವಾಹನಗಳು, ಜಾರಿ ಮತ್ತು ನಿಯಮದ ಅನುಷ್ಠಾನ, ಚಾಲಕರಿಗೆ ಶಿಕ್ಷಣ ಹಾಗೂ ತುರ್ತು ವೈದ್ಯಕೀಯ ಸೇವೆಯ ಪಾತ್ರ ಹಿರಿದು. ಇವುಗಳ ಬಲವರ್ಧನೆಗೆ ಕ್ರಮವಹಿಸಲಾಗುವುದು ಎಂದರು.

ಸಾರಿಗೆ ಸಚಿವಾಲಯದ ಅಂಕಿಅಂಶದ ಪ್ರಕಾರ 2022ರಲ್ಲಿ ದೇಶದಲ್ಲಿ 4.6 ಲಕ್ಷ ರಸ್ತೆ ಅಪಘಾತಗಳು ಸಂಭವಿಸಿದ್ದು, 1.68 ಲಕ್ಷ ಮಂದಿ ಮೃತಪಟ್ಟಿದ್ದಾರೆ. 4 ಲಕ್ಷ ಜನರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದರು.

ಅಲ್ಲದೆ, ಆ ವರ್ಷದಲ್ಲಿ ಅಪಘಾತಗಳ ಸಂಖ್ಯೆ ಶೇ 12ರಷ್ಟು ಹಾಗೂ ಸಾವಿನ ಪ್ರಕರಣಗಳು ಶೇ 10ರಷ್ಟು ಏರಿಕೆಯಾಗಿವೆ. ಮೃತಪಟ್ಟವರಲ್ಲಿ ಶೇ60ರಷ್ಟು 18ರಿಂದ35 ವಯೋಮಾನದವರು ಇದ್ದಾರೆ. ಇದರಿಂದ ದೇಶದ ಜಿಡಿಪಿಗೆ ಶೇ 3.14ರಷ್ಟು ನಷ್ಟವಾಗಿದೆ ಎಂದು ಹೇಳಿದರು.

ಮೊಲಾಸಿಸ್ ರಫ್ತಿನ ಮೇಲೆ ಶೇ 50ರಷ್ಟು ಸುಂಕ

ನವದೆಹಲಿ (ಪಿಟಿಐ): ದೇಶದಲ್ಲಿ ಎಥೆನಾಲ್ ಉತ್ಪಾದನೆಗೆ ಉತ್ತೇಜನ ನೀಡುವ ಉದ್ದೇಶದಿಂದ ಮೊಲಾಸಿಸ್ (ಕಾಕಂಬಿ) ರಫ್ತಿನ ಮೇಲೆ ಕೇಂದ್ರ ಸರ್ಕಾರವು ಶೇ 50ರಷ್ಟು ಸುಂಕ ವಿಧಿಸಿದೆ. ಈ ಆದೇಶವು ಜನವರಿ 18ರಿಂದ ಜಾರಿಗೆ ಬರಲಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

2023-24ರ ಮಾರುಕಟ್ಟೆ ಋತುವಿನಲ್ಲಿ (ಅಕ್ಟೋಬರ್–ಸೆಪ್ಟೆಂಬರ್) ದೇಶದಲ್ಲಿ ಸಕ್ಕರೆ ಉತ್ಪಾದನೆಯು ಇಳಿಕೆಯಾಗುವ ಸಾಧ್ಯತೆಯಿದೆ. ಹಾಗಾಗಿ, ಮದ್ಯ ಉತ್ಪಾದನೆಗೆ ಕಚ್ಚಾ ವಸ್ತುವಾಗಿ ಬಳಸುವ ಕಬ್ಬಿನ ಉಪ ಉತ್ಪನ್ನವಾದ ಮೊಲಾಸಿಸ್ ರಫ್ತಿಗೆ ಸುಂಕ ವಿಧಿಸಲಾಗಿದೆ ಎಂದು ಹೇಳಲಾಗಿದೆ.

ದೇಶೀಯ ಡಿಸ್ಟಿಲರಿಗಳಿಗೆ ಮೊಲಾಸಿಸ್‌ನ ಲಭ್ಯತೆ ಹೆಚ್ಚಿಸಲು ಮತ್ತು ಪೆಟ್ರೋಲ್ ಜೊತೆಗೆ ಎಥೆನಾಲ್ ಮಿಶ್ರಣದ ಗುರಿ ಸಾಧನೆಗೆ ಸರ್ಕಾರದ ಈ ಕ್ರಮ ಸಹಕಾರಿಯಾಗಲಿದೆ. ವಿಯೆಟ್ನಾಂ, ದಕ್ಷಿಣ ಕೊರಿಯಾ, ನೆದರ್‌ಲೆಂಡ್ಸ್ ಮತ್ತು ಫಿಲಿಪ್ಪೀನ್ಸ್‌ಗೆ ಭಾರತವು ಮೊಲಾಸಿಸ್ ರಫ್ತು ಮಾಡುತ್ತದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ಗುಜರಾತ್‌ನಿಂದ ಹೆಚ್ಚಿನ ಪ್ರಮಾಣದಲ್ಲಿ ರಫ್ತು ಆಗುತ್ತದೆ.

ಮುಂಬೈ ಧಾರಣೆ

ಶೇಂಗಾ

16-01-2024

ಜಾವಾ 70/80(ಹೊಸ)	12100-12200
ಜಾವಾ 80/90(ಹೊಸ)	11500-11600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	875 (870)
ಪಾಮ್ ವಾರದ ಡೆಲಿವರಿ	848 (842)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,350 (62,500)
ಬೆಳ್ಳಿ ಕೆ.ಜಿ ₹71,650 (72,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಇರಾನ್‌ನ ಇಸ್ಲಾಮಿಕ್ ರೆವ್ಯೂಲುಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ನಡೆಸಿದ ದಾಳಿಯಿಂದ ಮಂಗಳವಾರ ಕುರ್ದ್ ವಲಯದ ಅರ್ಬಿಲ್‌ನಲ್ಲಿ ಜಖಂಗೊಂಡ ಕಟ್ಟಡದ ಅವಶೇಷವನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸಿದರು. – ಎಎಫ್‌ಪಿ ಚಿತ್ರ

ಉಗ್ರ ಸಂಘಟನೆಗಳ ನೆಲೆ ಗುರಿಯಾಗಿಸಿ ಇರಾನ್ ದಾಳಿ

ಇರ್ಬಿಲ್ (ಇರಾಕ್) (ಎ.ಪಿ): ಇರಾನ್ ವಿರೋಧಿ ಭಯೋತ್ಪಾದಕ ಸಂಘಟನೆಗಳ ನೆಲೆ ಹಾಗೂ ಗುಪ್ತದಳದ ಮುಖ್ಯ ಕಚೇರಿಯನ್ನು ಗುರಿಯಾಗಿಸಿ ವಾಯುದಾಳಿ ಆರಂಭಿಸಲಾಗಿದೆ ಎಂದು ಇರಾನ್ ಮಂಗಳವಾರ ಘೋಷಿಸಿದೆ.

ಕುರ್ದ್ ವಲಯದ ಇರ್ಬಿಲ್‌ನಲ್ಲಿ ಇರುವ ಅಮೆರಿಕ ಕಾನ್ಸುಲೇಟ್ ಕಚೇರಿಯ ಸಮೀಪ ಕ್ಷಿಪಣಿ ದಾಳಿ ನಡೆದ ಹಿಂದೆಯೇ ಈ ಪ್ರತಿದಾಳಿ ಆರಂಭಿಸಲಾಗಿದೆ ಎಂದು ಇರಾನ್ ತಿಳಿಸಿದೆ.

ಕುರ್ದ್ ಪ್ರಾದೇಶಿಕ ಸರ್ಕಾರದ ಭದ್ರತಾ ಸಮಿತಿಯು ಈ ಕುರಿತಂತೆ ಹೇಳಿಕೆ ನೀಡಿದೆ. ಈ ದಾಳಿಯಿಂದ ನಾಲ್ವರು ನಾಗರಿಕರು ಮೃತಪಟ್ಟಿದ್ದು, ಇತರೆ ಆರು ಜನರು ಗಾಯಗೊಂಡಿದ್ದಾರೆ ಎಂದು ತಿಳಿಸಿದೆ.

ಸ್ಥಳೀಯ ಉದ್ಯಮಿ ಪೇಶ್ರಾ ದಿಜಾಯಿ ಮತ್ತು ಅವರ ಕುಟುಂಬ ಸದಸ್ಯರು ಮೃತಪಟ್ಟಿದ್ದಾರೆ ಎಂದು ಇರಾಕ್ ಸಂಸತ್ತಿನ ಮಾಜಿ ಸದಸ್ಯ ಮಶನ್ ಅಲ್ ಜಬೌರಿ ಅವರು 'ಎಕ್ಸ್' ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಕ್ಷಿಪಣಿಯೊಂದು ಇವರ ಮನೆ ಮೇಲೇ ಬಿದ್ದಿದೆ ಎಂದು ತಿಳಿಸಿದರು.

ಸಿರಿಯಾದ ಇಸ್ಲಾಮಿಕ್ ಸ್ಟೇಟ್‌ನ ನೆಲೆ ಗುರಿಯಾಗಿಸಿ ಹಲವು ಕ್ಷಿಪಣಿ ದಾಳಿ ನಡೆಸಿದ್ದು, ನೆಲೆಯನ್ನು ನಾಶಪಡಿಸಲಾಗಿತ್ತು. ಗುಪ್ತದಳ ಏಜೆನ್ಸಿ ಕಚೇರಿ ಮೇಲೂ ದಾಳಿ ನಡೆದಿದೆ ಎಂದು ಇರಾನ್ ಇಸ್ಲಾಮಿಕ್ ರೆವ್ಯೂಲುಷನರಿ ಕೋರ್ ಹೇಳಿಕೆ ನೀಡಿದೆ.

ಈ ತಿಂಗಳ ಆರಂಭದಲ್ಲಿ ಇರಾನ್‌ನಲ್ಲಿ ನಡೆದಿದ್ದ ಎರಡು ಆತ್ಮಾಹುತಿ ದಾಳಿಯ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ ಹೊತ್ತುಕೊಂಡಿತ್ತು. ಈ ದಾಳಿಯಲ್ಲಿ ಕನಿಷ್ಠ 84 ಜನರು ಸತ್ತಿದ್ದು, 284 ಜನರು ಗಾಯಗೊಂಡಿದ್ದರು.

ಇರಾನ್‌ನಿಂದ ಉಪ ರಾಯಭಾರಿ ಹಿಂದಕ್ಕೆ ಕರೆಸಿದ ಇರಾಕ್: ಇರಾನ್ ನಡೆಸಿದ ದಾಳಿಯನ್ನು ಖಂಡಿಸಿರುವ ಇರಾಕ್, ತನ್ನ ಉಪ ರಾಯಭಾರಿಯನ್ನು ಹಿಂದಕ್ಕೆ ಕರೆಸಿಕೊಂಡಿದೆ. ಅಲ್ಲದೆ ಬಾಗ್ದಾದ್‌ನಲ್ಲಿರುವ ಇರಾನ್‌ನ ರಾಯಭಾರಿ ಅನ್ನು ಕರೆಸಿಕೊಂಡು, ಪ್ರತಿಭಟನೆ ದಾಖಲಿಸಿದೆ. ರಾತ್ರೋರಾತ್ರಿ ದಾಳಿ ನಡೆಸಿ ಹಲವು ನಾಗರಿಕರನ್ನು ಕೊಂದಿರುವ ಇರಾನ್‌ನ ಕ್ರಮವನ್ನು ತೀವ್ರವಾಗಿ ಖಂಡಿಸುವುದಾಗಿ ಇರಾಕ್ ವಿದೇಶಾಂಗ ಸಚಿವಾಲಯ ತಿಳಿಸಿದೆ.

'ಇರಾನಿನ ದಾಳಿಯು ಇರಾಕ್ ಗಣರಾಜ್ಯದ ಸಾರ್ವಭೌಮತ್ವದ ಸ್ಪಷ್ಟ ಉಲ್ಲಂಘನೆಯಾಗಿದೆ. ಅಲ್ಲದೆ ಇದು ಉತ್ತಮ ನೆರೆಹೊರೆ ಸಂಬಂಧ ಮತ್ತು ಅಂತರರಾಷ್ಟ್ರೀಯ ಕಾನೂನಿನ ತತ್ವಗಳಿಗೆ ವಿರುದ್ಧವಿದೆ. ಜೊತೆಗೆ ಇದು ಈ ಪ್ರದೇಶದ ಭದ್ರತೆಗೆ ಬೆದರಿಕೆ ಹಾಕಿದಂತಾಗಿದೆ' ಎಂದು ಸಚಿವಾಲಯ ಹೇಳಿಕೆಯಲ್ಲಿ ಉಲ್ಲೇಖಿಸಿದೆ. 'ಇರಾನ್ ನಡೆಸಿದ ದಾಳಿಗೆ ಕಾರಣವಿಲ್ಲ. ಅದನ್ನು ಕ್ಷಮಿಸಲಾಗದು' ಎಂದು ಕುರ್ದ್ ಪ್ರದೇಶದ ಪ್ರಧಾನಿ ಮಸ್ರೂರ್ ಬರ್ಜಾನಿ ತಿಳಿಸಿದ್ದಾರೆ.

ತೈವಾನ್ ಅಧ್ಯಕ್ಷರಿಗೆ ಫಿಲಿಪ್ಪೀನ್ಸ್ ಅಭಿನಂದನೆ: ಆಕ್ಷೇಪ

ಬೀಜಿಂಗ್ (ಎ.ಪಿ): ತೈವಾನ್‌ನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಲಾಯ್ ಚಿಂಗ್ ಟೆ ಅವರಿಗೆ ಫಿಲಿಪ್ಪೀನ್ಸ್ ಅಧ್ಯಕ್ಷ ಫರ್ಡಿನಾಂಡ್ ಮ್ಯಾರ್ಕೊ ಜೂನಿಯರ್ ಅವರು ಅಭಿನಂದನಾ ಸಂದೇಶ ಕಳುಹಿಸಿದ್ದಕ್ಕೆ ಚೀನಾ ಆಕ್ಷೇಪ ವ್ಯಕ್ತಪಡಿಸಿದೆ.

ಫಿಲಿಪ್ಪೀನ್ಸ್‌ನರಾಯಭಾರಿಯನ್ನುಕರೆಯಿಸಿಕೊಂಡ ಚೀನಾದ ವಿದೇಶಾಂಗ ಸಚಿವಾಲಯವು ತನ್ನ ಆಕ್ಷೇಪ ದಾಖಲಿಸಿತು ಎಂದು ಸಚಿವಾಲಯದ ವಕ್ತಾರ ಮಾವೊ ನಿಂಗ್ ಸುದ್ದಿಗಾರರಿಗೆ ತಿಳಿಸಿದರು.

ಈ ಮೂಲಕ ಫಿಲಿಪ್ಪೀನ್ಸ್ ಚೀನಾಗೆ ನೀಡಿದ್ದ ರಾಜಕೀಯ ಬದ್ಧತೆಯನ್ನು ಉಲ್ಲಂಘಿಸಿದಂತಾಗಿದೆ ಎಂದು ಚೀನಾ ಆಕ್ಷೇಪಿಸಿದೆ. ತೈವಾನ್ ತನ್ನ ಭೂಭಾಗವಾಗಿದ್ದು, ಅಗತ್ಯಬಿದ್ದಲ್ಲಿ ಸೇನಾ ಬಲದ ನೆರವಿನಿಂದ ವಶಕ್ಕೆ ಪಡೆಯಲಾಗುವುದು ಚೀನಾ ಪ್ರತಿಪಾದಿಸುತ್ತಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸುರೇಶ್ ನಾರಾಯಣ್ ನಾಯ್ಕ, ಕುಮಟಾ.

• **ಪ್ರಶ್ನೆ:** ನಾನು 2020ರ ಮೇ ತಿಂಗಳಿನಲ್ಲಿ ಸಾರ್ವಜನಿಕ ವಲಯದ ಕಂಪನಿಯಿಂದ ನಿವೃತ್ತಿಯಾದೆ. ಈ ಸಂದರ್ಭದಲ್ಲಿ ನಾನು ರಜಾ ನಗದೀಕರಣದ ಮೊತ್ತ ಪಡೆದೆ. ಕಂಪನಿಯವರು ಈ ಮೊತ್ತ ಪಾವತಿಸುವಾಗ ಆದಾಯ ತೆರಿಗೆಯ ಸೆಕ್ಷನ್ 10(10ಎಎ) ಅನ್ವಯ ತೆರಿಗೆ ಕಡಿತಗೊಳಿಸಿದ್ದರು. ಈ ಸಂದರ್ಭದಲ್ಲಿ ಸಾರ್ವಜನಿಕ ವಲಯದ ಕಂಪನಿಯ ಉದ್ಯೋಗಿಗಳಿಗೆ ವಿನಾಯಿತಿ ಮಿತಿ ₹3 ಲಕ್ಷ ಮಾತ್ರ ಇತ್ತು. ಈ ವರ್ಷಕ್ಕೆ ಸಂಬಂಧಿಸಿ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ ರಜಾ ನಗದೀಕರಣಕ್ಕೆ ಸಂಬಂಧಿತ ಸಂಪೂರ್ಣ ಮೊತ್ತಕ್ಕೆ ವಿನಾಯಿತಿ ಸಿಗುವಂತೆ ನಾನು ರಿಫಂಡ್ ಕ್ಲೈಂ ಮಾಡಿದ್ದೆ. ತದನಂತರ ನನ್ನ ರಿಟರ್ನ್ಸ್ ಡಿಮಾಂಡ್ ಸಹಿತ ಅಸೆಸ್ ಆದ ಮಾಹಿತಿ ಬಂತು. ಇದರ ಬಗ್ಗೆ ಅಪೀಲ್ ಸಲ್ಲಿಸಿದ್ದು ಮಾನ್ಯವಾಗದೆ, ಬಡ್ಡಿ ಸಮೇತ (ತೆರಿಗೆ ಡಿಮಾಂಡ್) ತೆರಿಗೆ ಇಲಾಖೆಯು ತಿಳಿಸಿರುವಂತೆ ಪಾವತಿಸಿದೆ. ಇದಾದ ನಂತರವೂ ಆದಾಯ ತೆರಿಗೆ ಇಲಾಖೆಯ ಪೋರ್ಟಲ್‌ನಲ್ಲಿ ಈ ಮೊತ್ತ ಇನ್ನೂ ಬಾಕಿ ಇದೆ ಎಂದು ಕಾಣಿಸುತ್ತಿದೆ. ಇದನ್ನು ಕಂಡು ಮತ್ತೆ ನಾನು ಐಟಿಆರ್-ಯು ರಿಟರ್ನ್ಸ್ ಶೇ 25ರ ದಂಡಸಹಿತ ಪಾವತಿಸಿದೆ. 2023ರ ಡಿಸೆಂಬರ್‌ನಲ್ಲಿ ಆದಾಯ ತೆರಿಗೆ ಇಲಾಖೆಯು ಮತ್ತೆ ಡಿಮಾಂಡ್ ಹಾಗೂ ಬಡ್ಡಿ ಹಾಕಿ ನೋಟಿಸ್ ಜಾರಿ ಮಾಡಿದೆ. ಇದು ಸರಿಯಲ್ಲ ಎನ್ನುವುದು ನನ್ನ ಅಭಿಪ್ರಾಯ.

ಪ್ರಸ್ತುತ ಎರಡನೆಯ ವರ್ಷವಾದ್ದರಿಂದ, ಹಿಂದೆ ಸಲ್ಲಿಸಿದ್ದ ಐಟಿಆರ್- ಯು ರಿಟರ್ನ್ಸ್ ಅನ್ನು ಮತ್ತೆ ಪರಿಷ್ಕರಿಸಿ ಶೇ 50ರ ದಂಡಸಹಿತ ಪಾವತಿಸಿ ಈ ತೊಂದರೆ ನಿವಾರಿಸಿಕೊಳ್ಳಬಹುದೆ? ಐ.ಟಿ ಪೋರ್ಟಲ್‌ನಲ್ಲಿ ಮಾಹಿತಿ ಸರಿಯಾಗಿ ಕಾಣುವಂತಾಗಲು ಹಾಗೂ ಈ ಸಮಸ್ಯೆ ಬಗೆಹರಿಸಿಕೊಳ್ಳಲು ಮುಂದೇನು ಮಾಡಬೇಕು.

ಉತ್ತರ: ನಿಮ್ಮ ಸುದೀರ್ಘ ಪ್ರಶ್ನೆಯಲ್ಲಿ ಉಲ್ಲೇಖಿಸಿದ ಅನೇಕ ವಿವರಗಳನ್ನು ನೋಡಿದಾಗ ಈ ಬಗ್ಗೆ ಸಾಕಷ್ಟು ವಿವರವನ್ನು ಅವಲೋಕಿಸಿ ನಿಮ್ಮ ರಿಟರ್ನ್ಸ್ ಬಗೆಗಿನ ಅಸೆಸ್ಮೆಂಟ್ ವಿವರಗಳನ್ನು ಸಲ್ಲಿಸಬೇಕಿತ್ತು ಎನ್ನುವುದು ಮೊದಲ ಹಂತದಲ್ಲಿ ತಿಳಿಯುತ್ತದೆ. ನೀವು ಸಲ್ಲಿಸಿದ್ದ ಪ್ರಥಮ ಹಂತದ ರಿಟರ್ನ್ಸ್ ಮಿತಿಗಿಂತ ಹೆಚ್ಚುವರಿ ವಿನಾಯಿತಿ ಪಡೆದಾಗ ಅಥವಾ ಉದ್ಯೋಗಿಯ ಕಂಪನಿ ಸಲ್ಲಿಸಿದ್ದ ಫಾರಂ 16ಕ್ಕೆ ವ್ಯತ್ಯಸ್ಥವಾದ ವಿವರ ತೆರಿಗೆದಾರನಿಂದ ಸಲ್ಲಿಕೆಯಾಗಿದ್ದರೂ ಇಂತಹ ಸಮಸ್ಯೆ ಮೂಲ ಹಂತದಲ್ಲಿ ಉದ್ಭವಿಸಬಹುದು.

ಒಂದು ವೇಳೆ ಈ ವ್ಯತ್ಯಾಸವನ್ನು ತೆರಿಗೆ ಇಲಾಖೆ ಕಂಡು ಹಿಡಿದ ಬಳಿಕವೂ ತೆರಿಗೆದಾರನಿಗೆ ನೋಟಿಸ್ ಜಾರಿ ಮಾಡಿ ಡಿಮಾಂಡ್ ಚಲನ್ ಸಹಿತ ತೆರಿಗೆ ಪಾವತಿಗೆ ಅವಕಾಶ ಮಾಡಿಕೊಡುತ್ತದೆ. ಈ ಹಂತದಲ್ಲಿ ನಿಮ್ಮ ಅಪೀಲ್ ಇದ್ದರೂ ಅದು ಮಾನ್ಯವಾಗದ ಕಾರಣ ಕೊನೆಗೆ ನೀವು ತೆರಿಗೆ ಹಾಗೂ ಬಡ್ಡಿ ಕಟ್ಟಿ ಸಮಸ್ಯೆಯಿಂದ ಹೊರಬರುವ ಪ್ರಯತ್ನ ಮಾಡಿದ್ದೀರಿ. ಆದರೆ, ಕಟ್ಟಿದ ತೆರಿಗೆ ಪೋರ್ಟಲ್‌ನಲ್ಲಿ ಕಾಣದ ಕಾರಣಕ್ಕೆ ಮತ್ತೆ ಐಟಿಆರ್- ಯು ಸಹಿತ ಶೇ 25ರ ತೆರಿಗೆಯನ್ನೂ ಕಟ್ಟಿದ್ದೀರಿ. ಕೊನೆಗೆ ಈ ಹಂತದಲ್ಲೂ ಹೊಸ ಡಿಮಾಂಡ್ ಬಂದಿದೆ ಎಂಬುದಾಗಿ ತಿಳಿಸಿರುತ್ತೀರಿ.

ಇಲ್ಲಿ ಕೆಲವೆಲ್ಲ ಮೂಲ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದಾಯ ತೆರಿಗೆಯ ನಿಯಮ 139(8ಎ) ಅನ್ವಯ ಮೊದಲನೆಯದಾಗಿ, ಆದಾಯ ತೆರಿಗೆ ಇಲಾಖೆಯು ನಿರ್ದಿಷ್ಟ ವರ್ಷದ ಆದಾಯವನ್ನು ಪರಿಶೀಲಿಸಿ ನೋಟಿಸ್ ಜಾರಿ ಮಾಡಿ ಅಸೆಸ್ಮೆಂಟ್ ಮುಗಿಸಿರುವಾಗ ಅದೇ ವರ್ಷದ ಆದಾಯಕ್ಕೆ ನಾವೇ ತಿದ್ದುಪಡಿ 'ಐಟಿಆರ್- ಯು' ಸಲ್ಲಿಸುವ ಅವಕಾಶ ಇರುವುದಿಲ್ಲ. ಮಾತ್ರವಲ್ಲ ಒಂದು ವರ್ಷಕ್ಕೆ ಸಂಬಂಧಿಸಿ ಐಟಿಆರ್- ಯು ಇದನ್ನು ಒಂದೇ ಬಾರಿ ಸಲ್ಲಿಸಬಹುದಾಗಿರುತ್ತದೆ. ಇದಲ್ಲದೆ, ನೀವು ಆದಾಯ ತೆರಿಗೆಯ ಡಿಮಾಂಡ್ ನೋಟಿಸ್‌ಗೆ ಸಂಬಂಧಿಸಿ ಸಂಪೂರ್ಣ ತೆರಿಗೆ ಪಾವತಿಸಿದ ನಂತರವೂ ತೆರಿಗೆ ಸಂದಾಯವಾದ ಮಾಹಿತಿ ಪೋರ್ಟಲ್‌ನಲ್ಲಿ ದಾಖಲಾಗದಿದ್ದರೆ ಈ ಬಗ್ಗೆ ಲಿಖಿತ ಮಾಹಿತಿಯನ್ನು ನಿಮ್ಮ ಸಂಬಂಧಿತ ಆದಾಯ ತೆರಿಗೆ ಕಚೇರಿಗೆ ನೀಡುವ ಅವಕಾಶವಿದೆ ಅಥವಾ ಈ ಬಗ್ಗೆ ಆನ್‌ಲೈನ್‌ನಲ್ಲಿ ಈ ಸಮಸ್ಯೆ ದಾಖಲಿಸಿ ಪರಿಹರಿಸಿಕೊಳ್ಳಲು ಅವಕಾಶಗಳಿವೆ.

ನೀವು ಒಂದು ಹಂತ ಮುಂದುವರಿದು ಶೇ 25ರಷ್ಟು ಹೆಚ್ಚುವರಿ ತೆರಿಗೆಯನ್ನೂ ಪಾವತಿಸಿದ್ದೀರಿ ಹಾಗೂ ಇನ್ನೂ ಹೆಚ್ಚಿನ ತೆರಿಗೆ ಪಾವತಿಸುವ ಹಂತದ ಬಗ್ಗೆಯೂ ಯೋಚಿಸುತ್ತಿದ್ದೀರಿ.

ಪ್ರಸ್ತುತ ನಿಮ್ಮ ಎಲ್ಲಾ ಪಾವತಿ ವಿವರಗಳನ್ನು ನಿಮಗೆ ಸಂಬಂಧಪಟ್ಟ ಆದಾಯ ತೆರಿಗೆ ಕಚೇರಿಗೆ ಖುದ್ದು ಭೇಟಿ ಮಾಡಿ ಬಗೆಹರಿಸಿಕೊಳ್ಳಬಹುದು. ಅಗತ್ಯ ಬಿದ್ದಲ್ಲಿ ಸಮೀಪದ ತೆರಿಗೆ ಸಲಹೆಗಾರರ ನೆರವನ್ನೂ ಪಡೆದುಕೊಳ್ಳಿ. ಕೆಲವೊಮ್ಮೆ ಸಂಪೂರ್ಣ ತೆರಿಗೆ ಕಟ್ಟಿದ ಮೇಲೂ ವಿವರಗಳು ಸರಿಯಾಗಿ ಮೂಡಿ ಬಾರದಿರುವುದಕ್ಕೆ ತಾಂತ್ರಿಕ ಕಾರಣ, ಪಾವತಿ ಚಲನ್ ಹಾಗೂ ಡಿಮಾಂಡ್ ವಿವರ ಜೋಡಣೆ ಇತ್ಯಾದಿಯಲ್ಲಿನ ಸಮಸ್ಯೆಯೂ ಕಾರಣವಾಗಿರಬಹುದು.

ಆದರೆ, ಯಾವುದೇ ಆದಾಯಕ್ಕೆ ಸಮರ್ಪಕ ತೆರಿಗೆ ಪಾವತಿಯಾಗದೆ ಇದ್ದಾಗ ನೋಟಿಸ್ ಬಂದ ಹಂತದಲ್ಲಿ ಒಂದು ಬಾರಿ ಎಲ್ಲಾ ತೆರಿಗೆ, ಬಡ್ಡಿ ಪಾವತಿಸಿದ ಮೇಲೆ ಮತ್ತೆ ಅದನ್ನು ಬೇರೆ ಹಂತದಲ್ಲಿ ಕಟ್ಟುವ ಅಗತ್ಯ ಇಲ್ಲ ಎನ್ನುವುದನ್ನು ಮೊದಲು ಮನನ ಮಾಡಿಕೊಳ್ಳಿ ಹಾಗೂ ನಿಮ್ಮ ಪ್ರತಿ ಪಾವತಿಯೂ ಸಕಾರಣ ಹೊಂದಿರಲಿ.

ವೀಣಾ ಪ್ರಸಾದ್, ಮಂಗಳೂರು

• **ಪ್ರಶ್ನೆ:** ನಾನು ಈ ವರ್ಷದಿಂದ ಹೊಸ ತೆರಿಗೆ ಪದ್ಧತಿ ಅನುಸರಿಸುತ್ತಿದ್ದೇನೆ. ನನ್ನ ವಾರ್ಷಿಕ ವೇತನ ₹7.60 ಲಕ್ಷ. ಇದರಿಂದ ₹50 ಸಾವಿರ ಸ್ಟ್ಯಾಂಡರ್ಡ್ ಡಿಡೆಕ್ಷನ್ ಕಳೆದು ಉಳಿದ ₹7.10 ಲಕ್ಷಕ್ಕೆ ₹27,040 (ಶೇ 4 ಸೆಸ್ ಸೇರಿ) ತೆರಿಗೆ ಬರುತ್ತದೆ ಎಂದು ಹೊಸ ತೆರಿಗೆ ಪದ್ಧತಿಯ ಸ್ಲ್ಯಾಬ್ ದರದಂತೆ ಲೆಕ್ಕ ಹಾಕಿದಾಗ ತಿಳಿದೆ. ಆದರೆ, ನಾನು ಹೆಚ್ಚುವರಿ ₹10,000 ಆದಾಯ ಗಳಿಸಿದ್ದಕ್ಕೆ, ಈ ಹೆಚ್ಚುವರಿ ಆದಾಯಕ್ಕಿಂತ ಸುಮಾರು ಮೂರು ಪಾಲು ತೆರಿಗೆ ಪಾವತಿಸಬೇಕಾಗಿ ಬಂದಿರುವುದು ಸರಿಯೇ. ಇದಕ್ಕಿಂತ ₹10 ಸಾವಿರ ವೇತನ ಕಡಿಮೆ ಮಾಡಿಸಿ ತೆರಿಗೆ ಶೂನ್ಯ ಮಾಡಲು ಕೋರಿಕೆ ಸಲ್ಲಿಸಲೇ. ನಾನು ವೃತ್ತಿಯಲ್ಲಿ ಶಿಕ್ಷಕಿಯಾಗಿದ್ದೇನೆ.

ಉತ್ತರ: ಹೊಸ ತೆರಿಗೆ ಪದ್ಧತಿಯನ್ನು ಸೆಕ್ಷನ್ 115ಬಿಎಸಿ(1ಎ) ಅಡಿ ಆಯ್ಕೆ ಮಾಡಿಕೊಳ್ಳುವ ತೆರಿಗೆದಾರರಿಗೆ 2023ರ ಏಪ್ರಿಲ್ 1ರಿಂದ (ಆರ್ಥಿಕ ವರ್ಷ 2023-24) ಅನ್ವಯಿಸಿ ಕನಿಷ್ಠ ತೆರಿಗೆ ಪರಿಹಾರ (ಮಾರ್ಜಿನಲ್ ರಿಲೀಫ್) ಲಭ್ಯವಿದೆ. ಇದರಂತೆ ₹7 ಲಕ್ಷಕ್ಕಿಂತ ಅಧಿಕ ಆದಾಯ ಇದ್ದಾಗ ಮತ್ತು ಪಾವತಿಸಬೇಕಾದ ತೆರಿಗೆ, ಗಳಿಸಿದ ತೆರಿಗೆ ಆದಾಯ ಹಾಗೂ ₹7 ಲಕ್ಷದ ವ್ಯತ್ಯಾಸಕ್ಕಿಂತ ಅಧಿಕ ಇದ್ದಾಗ, ಹೆಚ್ಚುವರಿ ಆದಾಯಕ್ಕಿಂತ ಅಧಿಕ ತೆರಿಗೆ ಏನಿರುತ್ತದೋ ಅದು ಕನಿಷ್ಠ ತೆರಿಗೆ ಪರಿಹಾರವಾಗಿ ಲಭ್ಯವಾಗುತ್ತದೆ. ಈ ಅವಕಾಶವನ್ನು ಪ್ರಸ್ತುತ ವರ್ಷದಿಂದ ಕೊಡಲಾಗಿದೆ.

ಹೀಗಾಗಿ ನಿಮ್ಮ ವಿಚಾರದಲ್ಲಿ ತೆರಿಗೆ ₹26,000 ಹಾಗೂ ಹೆಚ್ಚುವರಿ ಆದಾಯ ₹10,000 ಇವುಗಳ ವ್ಯತ್ಯಾಸ ₹16,000 ರಿಲೀಫ್ ರೂಪದಲ್ಲಿ ಸಿಗುತ್ತದೆ. ಹೀಗಾಗಿ ₹27,040ರ ಬದಲು ಸೆಸ್ ಸೇರಿ ತೆರಿಗೆ ₹10,400 ಆಗಲಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ದೇಶದಲ್ಲಿ 1.17 ಲಕ್ಷ ದಾಟಿದ ಸ್ಟಾರ್ಟ್‌ಅಪ್ ಸಂಖ್ಯೆ

ಜಿಲ್ಲೆಗೊಂದು ನವೋದ್ಯಮ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಪ್ರತಿ ಜಿಲ್ಲೆಯಲ್ಲಿಯೂ ಸರ್ಕಾರದಿಂದ ಅಂಗೀಕೃತವಾದ ಒಂದು ನವೋದ್ಯಮ (ಸ್ಟಾರ್ಟ್‌ಅಪ್) ಸ್ಥಾಪನೆಗೆ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (ಡಿಪಿಐಐಟಿ) ನಿರ್ಧರಿಸಿದೆ.

'ದೇಶದ 125 ಜಿಲ್ಲೆಗಳಲ್ಲಿ ಒಂದು ನವೋದ್ಯಮವೂ ಇಲ್ಲ. ಆ ಜಿಲ್ಲೆಗಳಲ್ಲಿ ಸ್ಟಾರ್ಟ್‌ಅಪ್ ಸ್ಥಾಪನೆಗೆ ಕೇಂದ್ರ ಸರ್ಕಾರ ನಿರ್ಧರಿಸಿದೆ. ಶೀಘ್ರವೇ, ಈ ನಿಟ್ಟಿನಲ್ಲಿ ಕ್ರಮವಹಿಸಲಾಗುವುದು' ಎಂದು ಡಿಪಿಐಐಟಿ ಜಂಟಿ ಕಾರ್ಯದರ್ಶಿ ಸಂಜೀವ್ 'ಪ್ರಜಾವಾಣಿ'ಗೆ ತಿಳಿಸಿದರು.

ತ್ವರಿತಗತಿಯಲ್ಲಿ ನವೋದ್ಯಮ ಸ್ಥಾಪನೆ ಸಂಬಂಧ ಕಾರ್ಯತತ್ಪರವಾಗುವಂತೆ ಆಯಾ ರಾಜ್ಯಗಳ ಕೈಗಾರಿಕಾ ಇಲಾಖೆಗಳು ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗುವುದು. ಇದಕ್ಕೆ ಅಗತ್ಯ ಇರುವ ನೆರವು ಕೋರಲಾಗುವುದು ಎಂದು ತಿಳಿಸಿದರು.

ಸ್ಟಾರ್ಟ್‌ಅಪ್‌ಗಳು ವ್ಯಾಪಾರ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡಲಿವೆ. ಜಿಲ್ಲೆಗಳಲ್ಲಿ ಸ್ಥಾಪನೆಯಾದರೆ ಅಲ್ಲಿರುವ ಹೊಸ ಉದ್ದಿಮೆದಾರರಿಗೂ ಪ್ರೇರಣೆ ಸಿಗಲಿದೆ ಎಂದರು.

ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಐಎಸಿ ಅಡಿಯಲ್ಲಿ 3 ಸಾವಿರಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ತೆರಿಗೆ ವಿನಾಯಿತಿ ಸೌಲಭ್ಯ ಪಡೆಯುತ್ತಿವೆ. ಸರ್ಕಾರದ ಸಾಲ ವಿತರಣಾ ಯೋಜನೆಯಡಿಯೂ ಅವುಗಳಿಗೆ ಆರ್ಥಿಕ ನೆರವು ಲಭಿಸುತ್ತಿದೆ ಎಂದು ತಿಳಿಸಿದರು.

ಮಹಾರಾಷ್ಟ್ರದಲ್ಲಿ ಅತಿಹೆಚ್ಚು ತೆರಿಗೆ ವಿನಾಯಿತಿ ಸೌಲಭ್ಯ ಪಡೆಯುತ್ತಿರುವ ಸ್ಟಾರ್ಟ್‌ಅಪ್‌ಗಳಿವೆ. ಆ ನಂತರದ ಸ್ಥಾನದಲ್ಲಿ ಕರ್ನಾಟಕ ಇದೆ ಎಂದರು.

2016ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸ್ಟಾರ್ಟ್‌ಅಪ್ ಇಂಡಿಯಾಕ್ಕೆ ಚಾಲನೆ ನೀಡಿದರು. ಆ ವೇಳೆ ದೇಶದಲ್ಲಿ ಕೇವಲ 400 ಇದ್ದ ಇವುಗಳ ಸಂಖ್ಯೆ 2023ರ ಡಿಸೆಂಬರ್ ಅಂತ್ಯಕ್ಕೆ 1.17 ಲಕ್ಷ ದಾಟಿದೆ ಎಂದರು.

112 ಯೂನಿಕಾರ್ನ್ ಸ್ಟಾರ್ಟ್‌ಅಪ್

ಒಂದು ಬಿಲಿಯನ್ ಅಮೆರಿಕನ್ ಡಾಲರ್‌ಗಿಂತ (ಅಂದಾಜು ₹ 8,300 ಕೋಟಿ) ಹೆಚ್ಚಿನ ಮಾರುಕಟ್ಟೆ ಮೌಲ್ಯ ಹೊಂದಿರುವ ನವೋದ್ಯಮ ಕಂಪನಿಯನ್ನು 'ಯೂನಿಕಾರ್ನ್' ಎಂದು ಗುರುತಿಸಲಾಗುತ್ತದೆ. ದೇಶದಲ್ಲಿ 112 ಯೂನಿಕಾರ್ನ್ ಸ್ಟಾರ್ಟ್ ಅಪ್‌ಗಳಿದ್ದು, ಅವುಗಳ ಮಾರುಕಟ್ಟೆ ಮೌಲ್ಯ ₹29 ಲಕ್ಷ ಕೋಟಿ ಇದೆ ಎಂದು ಡಿಪಿಐಐಟಿ ತಿಳಿಸಿದೆ.

ಅಯೋವಾ ಚುನಾವಣೆಯಲ್ಲಿ ಟ್ರಂಪ್‌ಗೆ ಭಾರಿ ಬೆಂಬಲ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷೀಯ ಚುನಾವಣೆಗೆ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಆಯ್ಕೆಗೆ ಅಯೋವಾ ರಾಜ್ಯದಲ್ಲಿ ನಡೆದ ಚುನಾವಣೆಯಲ್ಲಿ, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಜಯಗಳಿಸಿದ್ದಾರೆ. ಈ ಮೂಲಕ ಪಕ್ಷದ ಅಭ್ಯರ್ಥಿಯಾಗುವಲ್ಲಿ ಮುನ್ನಡೆ ಕಾಯ್ದುಕೊಂಡಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ಅಭ್ಯರ್ಥಿಯಾಗುವ ಸ್ಪರ್ಧೆಯಲ್ಲಿದ್ದ ಭಾರತ ಮೂಲದ ಅಮೆರಿಕದ ಉದ್ಯಮಿ ವಿವೇಕ್ ರಾಮಸ್ವಾಮಿ ಅವರು, ಸ್ಪರ್ಧೆಯಿಂದ ಹಿಂದೆ ಸರಿದಿದ್ದು ಟ್ರಂಪ್ ಅವರಿಗೇ ಬೆಂಬಲವನ್ನು ಘೋಷಿಸಿದ್ದರು.

ಅಧ್ಯಕ್ಷೀಯ ಚುನಾವಣೆಗೆ ಪಕ್ಷದ ಅಧಿಕೃತ ಆಯ್ಕೆಗೆ ಪೂರ್ವಭಾವಿಯಾಗಿ ರಾಜ್ಯವಾರು ಚುನಾವಣೆ ನಡೆಯಲಿದೆ. ಅಯೋವಾ ಹೀಗೆ ಚುನಾವಣೆ ನಡೆದ ಮೊದಲ ರಾಜ್ಯ. ರಾಜ್ಯವಾರು ಚುನಾವಣೆ ಮೂಲಕ ಅಧ್ಯಕ್ಷೀಯ ಚುನಾವಣೆಯಲ್ಲಿ ಜೋ ಬೈಡನ್ ವಿರುದ್ಧ ಸ್ಪರ್ಧಿಸಲಿರುವ ಅಭ್ಯರ್ಥಿಯ ಆಯ್ಕೆ ನಡೆಯಲಿದೆ.

77 ವರ್ಷದ ಟ್ರಂಪ್ ಶೇ 51ರಷ್ಟು ಮತ ಗಳಿಸಿ ಜಯಭೇರಿ ಬಾರಿಸಿದರೆ, ಫ್ಲಾರಿಡಾದ ಗವರ್ನರ್ ರೊನ್ ಡೆಸ್ಯಾಂಟಿಸ್ ಅವರು ಗಣನೀಯ ಮತಗಳಿಸಿ, ಎರಡನೇ ಸ್ಥಾನ ಪಡೆದರು. ಇದು, ಅಯೋವಾ ರಾಜ್ಯದಲ್ಲಿನ ಗರಿಷ್ಠ ಅಂತರದ ಗೆಲುವಾಗಿದೆ.

ಡೋನಾಲ್ಡ್ ಟ್ರಂಪ್

ಈ ಹಿಂದೆ ಸೆನೆಟ್ ಸದಸ್ಯ, ದಿವಂಗತ ಬಾಬ್ ಡೋಲ್ ಅವರು 1988ರಲ್ಲಿ ಶೇ 12.8ರಷ್ಟು ಅಂತರದಿಂದ ಗೆದ್ದಿದ್ದು ಇದುವರೆಗಿನ ಗರಿಷ್ಠ ಅಂತರದ ದಾಖಲೆಯಾಗಿತ್ತು.

ಅಧ್ಯಕ್ಷೀಯ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಲು ಆಕಾಂಕ್ಷಿಗೆ ಒಟ್ಟು 1,215 ಪ್ರತಿನಿಧಿಗಳ ಬೆಂಬಲ ಅಗತ್ಯ. ಅಯೋವಾ ಚುನಾವಣೆಯಲ್ಲಿ, ರಾಜ್ಯದ 40 ಪ್ರತಿನಿಧಿಗಳ ಪೈಕಿ ಟ್ರಂಪ್ 20 ಪ್ರತಿನಿಧಿಗಳ ಬೆಂಬಲ ಗಳಿಸಿದರು. ಸ್ಪರ್ಧೆಯಲ್ಲಿದ್ದ ಡೆಸ್ಯಾಂಟಿಸ್ ಅವರು 8, ಹ್ಯಾಲೆ 7 ಮತ್ತು ವಿವೇಕ್ ರಾಮಸ್ವಾಮಿ ಇಬ್ಬರು ಪ್ರತಿನಿಧಿಗಳ ಬೆಂಬಲ ಗಳಿಸಿದರು. ಮೂವರು ಪ್ರತಿನಿಧಿಗಳ ಬೆಂಬಲ ನಿಗದಿಯಾಗಿಲ್ಲ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಬೆಂಗಳೂರಿನಲ್ಲಿ SLVಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18 ರಿಂದ 45) ಊಟ ವಸತಿಯೊಂದಿಗೆ ಟ್ರೇನಿಂಗ ಕೊಟ್ಟು ಸಂಬಳ 12,000/ ರಿಂದ 20,000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆಮಾಡಿ. 7019869181, 9071106371

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ:9035492999/ 9663563555

ವ್ಯಾಪಾರ

Business Offers

Business For Sale

ಮಹಿಳಾ ಸಬಲೀಕರಣ ಸಂಸ್ಥೆವತಿಯಿಂದ,ಸ್ವಯಂಉದ್ಯೋಗ ಬಯಸುವ,ಮಹಿಳೆಯರಿಗೆ ಮಹಿಳೆಯರಿಂದಲೇ ತಯಾರಾದ ಪೆಟ್ಟಿಕೋಟಗಳು, ಹೋಲ್ ಸೇಲ್ ಬೆಲೆಯಲ್ಲಿ.ದೊರಕುತ್ತವೆ. ಮಹಿಳಾಸಂಘದವರು ಮಹಿಳಾವ್ಯಾಪಾರಸ್ಥರು ಬಟ್ಟೆಅಂಗಡಿಯರು,ಸಂಪರ್ಕಿಸಿ ನಮ್ಮ,ಬಟ್ಟೆಗಳನ್ನು ವ್ಯಾಪಾರ ಮಾಡುವಮೂಲಕ ಮಹಿಳಾ, ಸಬಲೀಕರಣಕ್ಕೆ,ಸಂಪರ್ಕಿಸಿ: 6366197165.

ಭವಿಷ್ಯ

Astrology

★ಮಹಾಮಾಂತ್ರಿಕ ಜ್ಯೋತಿಷ್ಯ★ ವಿದ್ವಾನ್.ಗುರು ಶ್ರೀ.ದೇವಾನಂದ್ ರವರಿಂದ ಅಂಡ,ಪಿಂಡ,ಬ್ರಹ್ಮಾಂಡದ 100008 ಅತೀಂದ್ರಿಯ 888 ಚಾರಣಮಾರಣ ಸಂಮೋಹನ ಸ್ತಂಭನ,ವಶೀಕರಣ,ಉಚ್ಚಾಟನಾ ಕ್ರಿಯಾಕರ್ಮಗಳಿಂದ ಸಂಸಾರಿಕ ವೈಯಕ್ತಿಕ,ಆರ್ಥಿಕ,ಆರೋಗ್ಯ ಸಂಬಂಧಿಕ ಕರ್ಮಗಳ ಇಂದೇ ಪರಿಹಾರಕ್ಕೆ ಸಂಪರ್ಕಿಸಿ:9845005009

ಪ್ರವಾಸ

Holiday Package Tours

ರಾಮಕಮಲ್ ಟೂರಿಸಮ್ 25.01.2024 ಮಧುರೈ, ರಾಮೇಶ್ವರ, ಕನ್ಯಾಕುಮಾರಿ, 23.02.2024 ಕಾಶಿ, ಪ್ರಯಾಗರಾಜ್, ಅಯೋಧ್ಯೆ, 8.02.2024 ಅಹೋಬಲ, ಮಂತ್ರಾಲಯ, ಶ್ರೀಶೈಲ. 9481226296

Pilgrimage Tours

★ಆರ್.ಗಾಂಧಿ ಟೂರ್ಸ್★ 1.02.2024 13ದಿನಗಳು ಕಾಶಿ ಹರಿದ್ವಾರ, 9ದಿನಗಳು ಆಂಧ್ರ ಭದ್ರಾಚಲಂ. 22.02.2024 10ದಿನಗಳು ಗುಜರಾತ್ ಉಜ್ಜೈನ್,ಓಂಕಾರೇಶ್ವರ. 9945445809/ 9902433500

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 25/1 ಪುರಿ ಜಗನ್ನಾಥ್, ಭುನೇಶ್ವರ. 25/01 ಶಿರಡಿ,3ಜ್ಯೋತಿರ್ಲಿಂಗ. 25/1 ಹೈದರಬಾದ್ 5 ದಿನಗಳು. 9591017782, 9964527782

ಇತರೆ

Medical

ಸಂಪೂರ್ಣ ಉಚಿತ ಚಿಕಿತ್ಸೆ ಕೊಡಲಾಗುವುದು. 19/01/2024 ರಿಂದ ಪ್ರಾರಂಭ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೆನ್ಸ್,ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿ ಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಶ್ರೀ ಶಕ್ತಿ ಹೆಲ್ತ್ ಕೇರ್ ಶೇಷಾದ್ರಿಪುರಂ ಪೊಲೀಸ್ ಸ್ಟೇಷನ್ ಎದುರು, ಬೆಂಗಳೂರು. ಮೊಬೈಲ್: 9019626612. ಸಮಯ ಮಧ್ಯಾಹ್ನ 3 ರಿಂದ ಸಂಜೆ 5 ರವರೆಗೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ನೀವು ನಿಮ್ಮ ಮನೆ/ಸೈಟ್ ಮಾರಾಟ/ ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
ರಿಯಲ್ ಎಸ್ಟೇಟ್
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ! ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಸಡಗರದಿಂದ ಸಜ್ಜಾಗುತ್ತಿದೆ ಅಯೋಧ್ಯೆ

ಪೂರ್ವಭಾವಿ ಧಾರ್ಮಿಕ ಆಚರಣೆಗೆ ಚಾಲನೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಅಯೋಧ್ಯೆ: ರಾಮ ಮಂದಿರದಲ್ಲಿ ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಗೆ ದಿನಗಣನೆ ಶುರುವಾಗಿದ್ದು, ಪೂರ್ವಭಾವಿ ಧಾರ್ಮಿಕ ಆಚರಣೆಗಳಿಗೆ ಮಂಗಳವಾರ ಚಾಲನೆ ದೊರೆತಿದೆ.

ಏಳು ದಿನಗಳ ಧಾರ್ಮಿಕ ವಿಧಿಗಳು ಜನವರಿ 22ರಂದು ನಡೆಯಲಿರುವ ಪ್ರಾಣ ಪ್ರತಿಷ್ಠಾಪನೆಯೊಂದಿಗೆ ಕೊನೆಗೊಳ್ಳಲಿವೆ. '11 ಮಂದಿ ಅರ್ಚಕರು ವಿವಿಧ ಆಚರಣೆಗಳಲ್ಲಿ ತೊಡಗಿಸಿಕೊಂಡಿದ್ದಾರೆ' ಎಂದು ರಾಮ ಮಂದಿರದ ಪ್ರಧಾನ ಅರ್ಚಕ ಸತ್ಯೇಂದ್ರ ದಾಸ್ ತಿಳಿಸಿದರು.

ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯರಾದ ಅನಿಲ್ ಮಿಶ್ರಾ ಮತ್ತು ಅವರ ಪತ್ನಿ ಉಷಾ ಮಿಶ್ರಾ ಅವರು ಧಾರ್ಮಿಕ ವಿಧಿಗಳ 'ಯಜಮಾನ' ಸ್ಥಾನದಲ್ಲಿ ಇದ್ದಾರೆ. ಮಿಶ್ರಾ ಅವರು ಪ್ರಾಣ ಪ್ರತಿಷ್ಠಾಪನೆ ಸೇರಿದಂತೆ ಎಲ್ಲ ಆಚರಣೆಗಳಲ್ಲಿ ಪಾಲ್ಗೊಳ್ಳುವರು. ವಾರಾಣಸಿಯ ಗಣೇಶ್ವರ ಶಾಸ್ತ್ರಿ ದ್ರಾವಿಡ್ ಅವರು ಧಾರ್ಮಿಕ ವಿಧಿಗಳ ಮೇಲ್ವಿಚಾರಣೆ ವಹಿಸಿಕೊಂಡಿದ್ದಾರೆ.

ಟ್ರಸ್ಟ್ ಬಿಡುಗಡೆ ಮಾಡಿರುವ ವೇಳಾಪಟ್ಟಿಯ ಪ್ರಕಾರ ಮಂಗಳವಾರ ಸರಯೂ ತಟದಲ್ಲಿ ದಶವಿಧ ಸ್ನಾನ, 'ಪ್ರಾಯಶ್ಚಿತ' ಆಚರಣೆ ಮತ್ತು 'ಕರ್ಮಕುಟಿ ಪೂಜೆ' ನೆರವೇರಿದವು. ಪುರೋಹಿತರು ಸರಯೂ ನದಿಯಲ್ಲಿ ಪುಣ್ಯಸ್ನಾನ ಮಾಡಿದ ಬಳಿಕ ಪೂಜಾ ಸಾಮಗ್ರಿಗಳೊಂದಿಗೆ ಇಲ್ಲಿನ ವಿವೇಕ ಸೃಷ್ಟಿ ಆಶ್ರಮಕ್ಕೆ ತೆರಳಿ ಧಾರ್ಮಿಕ ವಿಧಿಗಳಿಗೆ ಚಾಲನೆ ನೀಡಿದರು.

ರಾಮಮಂದಿರದ ಗರ್ಭಗುಡಿಯಲ್ಲಿ ಇರಿಸಲಾಗುವ ವಿಗ್ರಹವನ್ನು ಕೆತ್ತಿರುವ ಮೈಸೂರಿನ ಶಿಲ್ಪಿ ಅರುಣ್ ಯೋಗಿರಾಜ್ ಅವರೂ ಇದರಲ್ಲಿ ಪಾಲ್ಗೊಂಡರು.

ಅಯೋಧ್ಯೆಯ ರಾಮ ಮಂದಿರದ ಗರ್ಭಗುಡಿಗೆ ಬಾಗಿಲು ಅಳವಡಿಸುವ ಕೆಲಸ ಮಂಗಳವಾರ ನಡೆಯಿತು –ಪಿಟಿಐ ಚಿತ್ರ

> **500 ವರ್ಷಗಳ ಕಾಯುವಿಕೆಯ ಬಳಿಕ ಮಂದಿರ ನಿರ್ಮಾಣ ಆಗಿದೆ. ವಿರೋಧ ಪಕ್ಷಗಳು ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಕುರಿತ ಟೀಕೆಗಳನ್ನು ನಿಲ್ಲಿಸಬೇಕು**
> **ಅನುರಾಗ್ ಠಾಕೂರ್**, ಕೇಂದ್ರ ಸಚಿವ

> **ರಾಮ ಮಂದಿರ ನಿರ್ಮಾಣವನ್ನು ಕಾಂಗ್ರೆಸ್ ಯಾವತ್ತೂ ವಿರೋಧಿಸಿಲ್ಲ. ಬಿಜೆಪಿ, ಆರ್‌ಎಸ್‌ಎಸ್ ಬಾಬರಿ ಮಸೀದಿ ವಿವಾದವನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡಿವೆ**
> **ದಿಗ್ವಿಜಯ್ ಸಿಂಗ್,** ಕಾಂಗ್ರೆಸ್ ಮುಖಂಡ

'ರಾಜಕೀಯ ಬಣ್ಣ ನೀಡಿದ್ದರಿಂದ ಸಮಾರಂಭಕ್ಕೆ ಗೈರು'

ಕೊಹಿಮಾ (ಪಿಟಿಐ): ರಾಮನ ವಿಗ್ರಹ ಪ್ರಾಣ ಪ್ರತಿಷ್ಠಾಪನೆ ಸಮಾರಂಭವನ್ನು 'ಪ್ರಧಾನಿ ನರೇಂದ್ರ ಮೋದಿ ಕೇಂದ್ರಿತ ರಾಜಕೀಯ ಕಾರ್ಯಕ್ರಮ'ವನ್ನಾಗಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ಮಾರ್ಪಾಡು ಮಾಡಿರುವ ಕಾರಣಕ್ಕೆ ಆ ಸಮಾರಂಭದಲ್ಲಿ ಪಾಲ್ಗೊಳ್ಳಲು ತಮ್ಮ ಪಕ್ಷದ ನಾಯಕರಿಗೆ ಕಷ್ಟವಾಗುತ್ತದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ಹೇಳಿದರು.

ಭಾರತ್ ಜೋಡೊ ನ್ಯಾಯ ಯಾತ್ರೆ ವೇಳೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಪ್ರಮುಖ ಎದುರಾಳಿಗಳಾದ ಆರ್‌ಎಸ್‌ಎಸ್ ಮತ್ತು ಬಿಜೆಪಿಯು ವಿಗ್ರಹ ಪ್ರತಿಷ್ಠಾಪನೆ ಸಮಾರಂಭವನ್ನು ಕೈವಶ ಮಾಡಿಕೊಂಡು, ಅದನ್ನು ಚುನಾವಣಾ ಕಾರ್ಯಕ್ರಮ-ವಾಗಿಸಿವೆ' ಎಂದರು. ಸಮಾರಂಭದಲ್ಲಿ ಭಾಗವಹಿಸದೇ ಇರಲು ನಿರ್ಧರಿಸಿರುವುದಾಗಿ ಕಾಂಗ್ರೆಸ್ ನಾಯಕತ್ವ ಘೋಷಿಸಿರುವುದರ ಹಿನ್ನೆಲೆಯಲ್ಲಿ ರಾಹುಲ್ ಹೀಗೆ ಹೇಳಿದರು.

ಮುಂದಿನ ಲೋಕಸಭೆ ಚುನಾವಣೆಗಾಗಿ 'ಇಂಡಿಯಾ' ಮೈತ್ರಿಕೂಟದ ನಡುವಣ ಸೀಟುಹಂಚಿಕೆ ಮಾತುಕತೆಯು ಸೌಹಾರ್ದಯುತವಾಗಿ ನಡೆಯುತ್ತಿದೆ ಎಂದು ಅವರು ಈ ವೇಳೆ ಹೇಳಿದರು.

ಶಾಸ್ತ್ರೀಯ ಸಂಗೀತ ಕಾರ್ಯಕ್ರಮ: ಪ್ರಾಣ ಪ್ರತಿಷ್ಠಾಪನಾ ಸಮಾರಂಭದಲ್ಲಿ ಉತ್ತರ ಪ್ರದೇಶದ ಪಖಾವಜ್‌ನಿಂದ ಹಿಡಿದು ಕರ್ನಾಟಕದ ವೀಣೆಯವರೆಗೆ ದೇಶದ ವಿವಿಧ ಭಾಗಗಳ ಶಾಸ್ತ್ರೀಯ ಸಂಗೀತ ವಾದ್ಯಗಳು ನಾದ ಹೊಮ್ಮಿಸಲಿವೆ.

'ಸಂಗೀತ ಕಾರ್ಯಕ್ರಮ ನೀಡಲು ದೇಶದ ವಿವಿಧ ಭಾಗಗಳ ಸಂಗೀತ-ಗಾರರನ್ನು ಆಯ್ಕೆ ಮಾಡಲಾಗಿದೆ' ಎಂದು ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರು ಮಾಹಿತಿ ನೀಡಿದರು.

ಉತ್ತರ ಪ್ರದೇಶದ ಬಾನ್ಸುರಿ ಮತ್ತು ಡೊಳ್ಳು, ಮಹಾರಾಷ್ಟ್ರದ ಸುಂದರಿ, ಪಂಜಾಬ್‌ನ ಅಲ್ಗೋಜಾ, ಒಡಿಶಾದ ಮೃದಂಗ, ಮಧ್ಯಪ್ರದೇಶದ ಸಂತೂರ್, ಮಣಿಪುರದ ಪುಂಗ್, ಛತ್ತೀಸಗಢ ತಂಬೂರಿ, ದೆಹಲಿಯ ಶಹನಾಯ್, ಆಂಧ್ರ ಪ್ರದೇಶದ ಘಟಂ, ಜಾರ್ಖಂಡ್‌ನ ಸಿತಾರ್, ತಮಿಳುನಾಡಿನ ನಾದಸ್ವರಂ ಮತ್ತು ಮೃದಂಗ ಸೇರಿದಂತೆ ಹಲವು ವಾದ್ಯಗಳ ಸಂಗೀತಗಾರರು ಪಾಲ್ಗೊಳ್ಳಲಿದ್ದಾರೆ ಎಂದು ಅವರು ವಿವರಿಸಿದರು.

ಯಾವುದೇ ಧಾರ್ಮಿಕ ವಿಧಿಗಳು ನಡೆಯದ ಸಮಯದಲ್ಲಿ ಹಾಗೂ ಅತಿಥಿಗಳ ಭಾಷಣದ ಮಧ್ಯೆ ವಿರಾಮದ ಅವಧಿಯಲ್ಲಿ ಸಂಗೀತ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

108 ಅಡಿ ಉದ್ದದ ಅಗರಬತ್ತಿ!

ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಅಯೋಧ್ಯೆಯಲ್ಲಿ ಮಂಗಳವಾರ 108 ಅಡಿ ಉದ್ದದ ಅಗರಬತ್ತಿಯನ್ನು ಬೆಳಗಲಾಯಿತು. ನೂರಾರು ಭಕ್ತರ 'ಜೈಶ್ರೀರಾಮ್' ಘೋಷಣೆಯ ನಡುವೆ ಟ್ರಸ್ಟ್ ಅಧ್ಯಕ್ಷ ಮಹಂತ ನೃತ್ಯ ಗೋಪಾಲ ದಾಸ್ ಅವರು ಅಗರಬತ್ತಿಯನ್ನು ಬೆಳಗಿದರು.

ಈ ದೈತ್ಯ ಅಗರಬತ್ತಿ ಹೊರಸೂಸುವ ಸುಗಂಧ ಸುಮಾರು 50 ಕಿ.ಮೀ. ವರೆಗೂ ತಲುಪಲಿದೆ ಎಂದು ಹೇಳಲಾಗಿದೆ. ಒಂದೂವರೆ ತಿಂಗಳು ನಿರಂತರ ಪರಿಮಳ ಸೂಸುವ ಅಗರಬತ್ತಿ 3,610 ಕೆ.ಜಿ ತೂಕ ಹೊಂದಿದೆ. ಗುಜರಾತ್‌ನ ವಡೋದರದ ದಾನಿಗಳು ಇದನ್ನು ಉಡುಗೊರೆಯಾಗಿ ನೀಡಿದ್ದಾರೆ. ಸಗಣಿ, ತುಪ್ಪ, ಗಿಡಮೂಲಿಕೆಗಳು ಮತ್ತು ಸುಗಂದ ದ್ರವ್ಯ ಬಳಸಿ ಅಗರಬತ್ತಿ ತಯಾರಿಸಲಾಗಿದೆ.

- ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ಕೊನೆಯಲ್ಲಿ ಪ್ರಧಾನಿ ಮೋದಿ ಅವರಿಂದ ಭಾಷಣ
- 8,000 ಆಹ್ವಾನಿತರಿಗೆ ಆಸನ ವ್ಯವಸ್ಥೆ ಮಾಡಿರುವುದಾಗಿ ಹೇಳಿರುವ ಟ್ರಸ್ಟ್
- ಆಗ್ರಾ ವಾಣಿಜ್ಯ ಮಂಡಳಿ ವತಿಯಿಂದ 560 ಕೆ.ಜಿಯಷ್ಟು ಆಗ್ರಾ 'ಪೇಠಾ'ವನ್ನು (ಮಿಠಾಯಿ) ಮಂಗಳವಾರ ಅಯೋಧ್ಯೆಗೆ ತಲುಪಿಸಲಾಯಿತು
- ಭದ್ರತೆಯ ದೃಷ್ಟಿಯಿಂದ ಅಯೋಧ್ಯೆ ಜಿಲ್ಲೆಯಾದ್ಯಂತ 10 ಸಾವಿರ ಸಿಸಿಟಿವಿ ಕ್ಯಾಮೆರಾ ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ
- ಜನವರಿ 22ರಂದು ಕೋಲ್ಕತ್ತದಲ್ಲಿ ಎಲ್ಲ ಧರ್ಮಗಳ ಜನರೊಂದಿಗೆ 'ಸಾಮರಸ್ಯ ರ‍್ಯಾಲಿ' ಆಯೋಜಿಸುವುದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘೋಷಿಸಿದ್ದಾರೆ

ಗಾಯಕಿ ಚಿತ್ರಾ ಹೇಳಿಕೆಗೆ ನೆಟ್ಟಿಗರ ಆಕ್ಷೇಪ

ಕೆ.ಎಸ್ ಚಿತ್ರಾ

ತಿರುವನಂತಪುರ (ಪಿಟಿಐ): 'ಅಯೋಧ್ಯೆಯಲ್ಲಿ ಶ್ರೀರಾಮ ಮೂರ್ತಿ ಪ್ರತಿಷ್ಠಾಪಿಸುವ ದಿನ ರಾಮಸ್ತೋತ್ರ ಪಠಿಸಬೇಕು' ಎಂದು ಹಿನ್ನೆಲೆ ಗಾಯಕಿ ಕೆ.ಎಸ್.ಚಿತ್ರಾ ಸಲಹೆ ಮಾಡಿದ್ದು, ಇದಕ್ಕೆ ಜಾಲತಾಣದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕೇರಳದಲ್ಲಿ ಆಡಳಿತಪಕ್ಷ ಸಿಪಿಎಂ, ಪ್ರತಿಪಕ್ಷ ಕಾಂಗ್ರೆಸ್ ಸೇರಿ ಎಲ್ಲ ರಾಜಕೀಯ ಪಕ್ಷಗಳು, 60 ವರ್ಷದ ಗಾಯಕಿಯ ಬೆಂಬಲಕ್ಕೆ ನಿಂತಿವೆ. 'ತನ್ನ ಅಭಿಪ್ರಾಯ-ವನ್ನು ವ್ಯಕ್ತಪಡಿಸುವ ಹಕ್ಕು ಗಾಯಕಿಗಿದೆ' ಎಂದು ಸಮರ್ಥಿಸಿಕೊಂಡಿವೆ.

ಚಿತ್ರಾ ಮನವಿ ವಿರುದ್ಧ ಜಾಲತಾಣದಲ್ಲಿ ಆಕ್ರೋಶ ವ್ಯಕ್ತವಾದ ಬೆನ್ನಿಗೆ, ಬಿಜೆಪಿ, ಅದರ ಸಹಯೋಗಿ ಸಂಘಟನೆಗಳು ಗಾಯಕಿ ಪರ ಅಭಿಯಾನ ಆರಂಭಿಸಿವೆ. 'ಈ ಆಕ್ರೋಶ ಕೇರಳದಲ್ಲಿ-ರುವ ಅಸಹಿಷ್ಣುತೆಗೆ ನಿದರ್ಶನ' ಎಂದು ಟೀಕಿಸಿವೆ.

ಜಾಲತಾಣದಲ್ಲಿ ವಿಡಿಯೊ ಹಂಚಿಕೊಂಡಿದ್ದ ಚಿತ್ರಾ ಅವರು, ಶ್ರೀರಾಮ ಮೂರ್ತಿ ಪ್ರತಿಷ್ಠಾಪಿಸುವ 22ರ ಮಧ್ಯಾಹ್ನ 12.20ಕ್ಕೆ 'ಶ್ರೀರಾಮ, ಜಯ ರಾಮ, ಜಯ ಜಯ ರಾಮ' ಸ್ತೋತ್ರ ಪಠಿಸಲು ಜನತೆಗೆ ಮನವಿ ಮಾಡಿದ್ದರು. ಅದೇ ದಿನದಂದು ಸಂಜೆ ಮನೆಗಳಲ್ಲಿ ಐದು ಬತ್ತಿಗಳಿರುವ ದೀಪವನ್ನು ಬೆಳಗಿಸಬೇಕು ಎಂದೂ ಕೋರಿದ್ದರು.

ಸಂಸ್ಕೃತದ ಶ್ಲೋಕ 'ಲೋಕ ಸಮಸ್ತಾ ಸುಖಿನೋ ಭವಂತು..' ಅನ್ನು ಪಠಿಸುವ ಮೂಲಕ 'ಭಗವಂತನು ಎಲ್ಲರಿಗೂ ಒಳ್ಳೆಯದು ಮಾಡಲಿ' ಎಂದು ಪ್ರಾರ್ಥಿಸಿ ಅಲ್ಪ ಅವಧಿಯ ತಮ್ಮ ವಿಡಿಯೊವನ್ನು ಗಾಯಕಿ ಮುಕ್ತಾಯ-ಗೊಳಿಸಿದ್ದರು.

ಚಿತ್ರಾ ಹೇಳಿಕೆಗೆ ವಿರೋಧ ವ್ಯಕ್ತ-ಪಡಿಸಿರುವ ಲೇಖಕಿ ಇಂದು ಮೆನನ್, 'ಚಿತ್ರಾ ತಮ್ಮ ಮನೆಯಲ್ಲಿಯೇ ಸ್ತೋತ್ರ ಪಠಿಸಿ, ದೀಪ ಬೆಳಗಿಸಲಿ. ನರಮೇಧ ಮತ್ತು ಜನಾಂಗೀಯ ದ್ವೇಷಕ್ಕೆ ಕಾರಣ ಆಗಿದ್ದನ್ನು ಸಂಭ್ರಮಿಸುವುದು ನೋವಿನ ಅನುಭವ' ಎಂದು ಫೇಸ್‌ಬುಕ್‌ನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗಾಯಕ ಜಿ.ವೇಣುಗೋಪಾಲ್ ಅವರು 'ಜಾಲತಾಣಗಳಲ್ಲಿ ಗಾಯಕಿಯನ್ನು ನಿಂದಿಸುವುದು ನೋವು ತರಿಸುತ್ತದೆ. ಅವರ ಹೇಳಿಕೆ ಕುರಿತಂತೆ ಭಿನ್ನಮತವಿದ್ದರೆ ಮರೆಯಬೇಕು' ಎಂದು ಕೋರಿದ್ದಾರೆ.

ವಿವಾದ ಅನಗತ್ಯ: ಆದರೆ, ಸಿಪಿಎಂ ಪಕ್ಷದ ಹಿರಿಯ ಮುಖಂಡ, ಸಚಿವ ಸಾಜಿ ಚೆರಿಯನ್ ಅವರು, 'ಗಾಯಕಿ ಚಿತ್ರಾ ಅವರ ಹೇಳಿಕೆಯನ್ನು ವಿವಾದವಾಗಿಸುವ ಅಗತ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೇರಳ ವಿಧಾನಸಭೆ ವಿರೋಧಪಕ್ಷದ ನಾಯಕ ವಿ.ಡಿ.ಸತೀಶನ್ ಅವರು, 'ಜಾಲತಾಣದಲ್ಲಿ ದಾಳಿ ನಡೆಸುವುದು ಫ್ಯಾಸಿಸಂ ಮನಸ್ಥಿತಿ' ಎಂದು ಪ್ರತಿಕ್ರಿಯಿ-ಸಿದ್ದಾರೆ.

ರಾಜ್ಯ ಬಿಜೆಪಿ ಅಧ್ಯಕ್ಷ ಕೆ.ಸುರೇಂದ್ರನ್, 'ಚಿತ್ರಾ ಸನಾತನ ಧರ್ಮದಲ್ಲಿ ನಂಬಿಕೆ ಹೊಂದಿದ್ದಾರೆ ಎಂಬುದೇ ಈ ಟೀಕೆಗೆ ಕಾರಣ. ಅವರನ್ನು ಟೀಕಿಸುತ್ತಿರು-ವವರು 'ಎಡ ಜಿಹಾದಿ ಮನಸ್ಥಿತಿ ಯುಳ್ಳವರು' ಎಂದು ವಾಗ್ದಾಳಿ ನಡೆಸಿದ್ದಾರೆ. ನಟಿ, ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯೆ ಖುಷ್ಬೂ ಸುಂದರ್, 'ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಆಡಳಿತ ವಿರುವ ರಾಜ್ಯಗಳಲ್ಲಿ ಅಸಹಿಷ್ಣುತೆ ಉತ್ತುಂಗಕ್ಕೇರಿದೆ. ಅನ್ಯರ ನಂಬಿಕೆ ಗೌರವಿಸುತ್ತಿಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ಕೇರಳದ ಕೋಗಿಲೆ' ಎಂದೇ ಗುರು-ತಿಸಲ್ಪಡುವ ಚಿತ್ರಾ ಅವರು ಹಲವು ರಾಷ್ಟ್ರೀಯ ಮತ್ತು ರಾಜ್ಯ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಶಾಹಿ ಈದ್ಗಾ ಸಮೀಕ್ಷೆಗೆ 'ಸುಪ್ರೀಂ' ತಡೆ

ನವದೆಹಲಿ (ಪಿಟಿಐ): ಮಥುರಾದಲ್ಲಿನ ಕೃಷ್ಣ ಜನ್ಮಭೂಮಿಗೆ ಹೊಂದಿಕೊಂಡಿರುವ ಶಾಹಿ ಈದ್ಗಾ ಮಸೀದಿಯಲ್ಲಿ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ಸಮೀಕ್ಷೆ ನಡೆಸಲು ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

ಮಸೀದಿ ಆವರಣದಲ್ಲಿ ಸಮೀಕ್ಷೆ ನಡೆಸಲು ಕೋರ್ಟ್ ಕಮಿಷನರ್ ನೇಮಕ ಮಾಡಲು ಒಪ್ಪಿಗೆ ನೀಡಿದ್ದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರಿದ್ದ ವಿಭಾಗೀಯ ಪೀಠ ತಡೆ ನೀಡಿತು. ಈ ಮಸೀದಿಯ ಆವರಣದಲ್ಲಿ ಹಿಂದೆ ದೇವಸ್ಥಾನ ಇತ್ತು ಎಂದು ಹೇಳುವ ಕುರುಹುಗಳು ಇವೆ ಎಂಬುದು ಹಿಂದೂಗಳ ವಾದ.

'ಕೋರ್ಟ್ ಕಮಿಷನರ್ ನೇಮಕ ಮಾಡಲು ನೀವು ಅಸ್ಪಷ್ಟವಾದ ಅರ್ಜಿಯನ್ನು ಸಲ್ಲಿಸಲು ಅವಕಾಶ ಇಲ್ಲ. ಅರ್ಜಿಯ ಉದ್ದೇಶವು ಬಹಳ ನಿರ್ದಿಷ್ಟವಾಗಿರಬೇಕು' ಎಂದು ವಿಭಾಗೀಯ ಪೀಠವು ಹಿಂದೂ ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಶಾಮ್ ದಿವಾನ್ ಅವರಿಗೆ ಹೇಳಿತು.

ವಿವಾದಕ್ಕೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆಯು ಮುಂದುವರಿಯುತ್ತದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಕೋರ್ಟ್ ಮೇಲ್ವಿಚಾರಣೆಯಲ್ಲಿ ಸಮೀಕ್ಷೆ ನಡೆಸಲು ಅನುಮತಿ ನೀಡಿದ ಆದೇಶವನ್ನು ಪ್ರಶ್ನಿಸಿ ಮಸೀದಿ ಟ್ರಸ್ಟ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ವಿಭಾಗೀಯ ಪೀಠ ನಡೆಸಿತು.

ತೊಟ್ಟಿ ಸ್ವಚ್ಛಗೊಳಿಸಲು ಅನುಮತಿ

ನವದೆಹಲಿ (ಪಿಟಿಐ): ವಾರಾಣಸಿಯ ಜ್ಞಾನವಾಪಿ ಮಸೀದಿಯ ಆವರಣದಲ್ಲಿ ಬೀಗಹಾಕಲಾಗಿರುವ ಪ್ರದೇಶದಲ್ಲಿ ಇರುವ ನೀರಿನ ತೊಟ್ಟಿಯನ್ನು ಸ್ವಚ್ಛಗೊಳಿಸಲು ಅನುಮತಿ ಕೋರಿ ಹಿಂದೂ ಮಹಿಳೆಯರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿದೆ.

ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ, ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ಪೀಠವು ವಾರಾಣಸಿ ಜಿಲ್ಲಾ ಮ್ಯಾಜಿಸ್ಟ್ರೇಟರ ಮೇಲ್ವಿಚಾರಣೆಯಲ್ಲಿ ಈ ತೊಟ್ಟಿಯನ್ನು ಸ್ವಚ್ಛಗೊಳಿಸಲು ಆದೇಶಿಸಿತು.

ತೊಟ್ಟಿಯಲ್ಲಿ ಸತ್ತುಬಿದ್ದಿರುವ ಮೀನುಗಳು ಇವೆ ಎಂದು ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಮಾಧವಿ ದಿವಾನ್ ಅವರು ಪೀಠದ ಗಮನಕ್ಕೆ ತಂದರು. ವಾರಾಣಸಿಯ ವಿಚಾರಣಾ ನ್ಯಾಯಾಲಯವೊಂದರಲ್ಲಿ ಅಂಜುಮನ್ ಇಂತೆಜಾಮಿಯಾ ಮಸೀದಿ ಸಮಿತಿಯು ಇದೇ ಬಗೆಯ ಮನವಿ ಸಲ್ಲಿಸಿದೆ ಎಂದು ಪೀಠವು ಹೇಳಿದೆ. ಈ ಸಮಿತಿಯು ಮಸೀದಿಯ ಆಡಳಿತ ನಿರ್ವಹಣೆಯ ಹೊಣೆ ಹೊತ್ತಿದೆ.

ಕಾಶಿ ವಿಶ್ವನಾಥ ದೇವಸ್ಥಾನದ ಪಕ್ಕದಲ್ಲಿರುವ ಮಸೀದಿಯನ್ನು ದೇವಸ್ಥಾನವೊಂದರ ಮೇಲೆ ನಿರ್ಮಿಸಲಾಗಿದೆಯೇ ಎಂಬುದನ್ನು ನಿರ್ಧರಿಸಲು ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ವಾರಾಣಸಿ ಜಿಲ್ಲಾ ನ್ಯಾಯಾಲಯವು 2023ರಲ್ಲಿ ಆದೇಶಿಸಿತ್ತು.

ಅಯೋಧ್ಯೆಯಲ್ಲಿ ಬಯಲಾಟ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ-ಪ್ರತಿಷ್ಠಾಪನೆ ಪ್ರಯುಕ್ತ ಅಯೋಧ್ಯೆಗೆ ತೆರಳಿದ ಹೊಸಪೇಟೆಯ ಬಯಲಾಟ ತಂಡ ಮೂರು ದಿನ 'ಸಂಪೂರ್ಣ ರಾಮಾಯಣ' ಪ್ರದರ್ಶನ ನೀಡಿತು.

'ಅಯೋಧ್ಯೆಯಲ್ಲಿ ಈಗ ಭಾರಿ ಚಳಿ ಇದೆ. ಹೀಗಿದ್ದರೂ ಕಲಾವಿದರು ಉತ್ಸಾಹದಿಂದ ಪ್ರದರ್ಶನ ನೀಡಿದರು. ಬುಧವಾರ ನಾಲ್ಕನೇ ಪ್ರದರ್ಶನ ನೀಡಿ ರಾಜ್ಯಕ್ಕೆ ಮರಳುವರು. ಬಯಲಾಟದ ವೇಷ, ಹಾಡು, ತಾಳವಾದ್ಯಗಳು ಎಲ್ಲರ ಮನ ಗೆದ್ದಿವೆ. ಸಂಭಾಷಣೆಗಳು ಕನ್ನಡದಲ್ಲೇ ಇದ್ದರೂ ಮನರಂಜನೆಗೆ ಕೊರತೆ ಇರಲಿಲ್ಲ' ಎಂದು ತಂಡದ ಮುಖ್ಯಸ್ಥರೂ ಆಗಿರುವ ರಾಮನ ಪಾತ್ರಧಾರಿ ಕೆ.ಎಸ್.ಸತ್ಯನಾರಾಯಣ ಅವರ ಸಹೋದರ ರಾಘವೇಂದ್ರ 'ಪ್ರಜಾವಾಣಿ'ಗೆ ತಿಳಿಸಿದರು.

ಹೊಸಪೇಟೆಯ ಬಯಲಾಟ ತಂಡದವರು ಅಯೋಧ್ಯೆಯಲ್ಲಿ 'ಸಂಪೂರ್ಣ ರಾಮಾಯಣ' ಬಯಲಾಟ ಪ್ರದರ್ಶಿಸಿದರು

'ದೇಶದ ವಿವಿಧೆಡೆಯಿಂದ ಹಲವಾರು ಕಲಾತಂಡಗಳು ಬಂದಿವೆ. ತಂಡದಲ್ಲಿ 12 ಮಂದಿ ಕಲಾವಿದರು ಮತ್ತು ನಾಲ್ವರು ಸಹ ಕಲಾವಿದರು ಇದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನಕ್ಕೆ ಒಂದು ವೇದಿಕೆ ಮಾತ್ರ ಒದಗಿಸಿದ್ದಾರೆ' ಎಂದರು.

ಬಯಲಾಟದ ಪಾತ್ರಧಾರಿಗಳು: ಸತ್ಯನಾರಾಯಣ (ರಾಮ), ಜ್ಯೋತಿ (ಸೀತೆ), ಪರಶುರಾಮ (ಲಕ್ಷ್ಮಣ), ವಿರೂಪಾಕ್ಷಯ್ಯ (ಹನುಮಂತ), ಚನ್ನಬಸವ (ರಾವಣ), ಶಂಕರ (ಸುಗ್ರೀವ), ಮಹೇಶ (ಶೂರ್ಪಣಖಿ), ಬಿ.ಶಿವಪ್ಪ (ಸಾರಥಿ) ಇತರ ಪಾತ್ರ ನಿರ್ವಹಿಸಿದರು.

ಬಿಜೆಪಿಯಿಂದ ಪ್ರಚಾರ ಕಾರ್ಯತಂತ್ರ

ನವದೆಹಲಿ (ಪಿಟಿಐ): ಲೋಕಸಭೆ ಚುನಾವಣೆಯ ಪ್ರಚಾರದಲ್ಲಿ ಈ ಬಾರಿ ಮೊದಲ ಬಾರಿಯ ಮತದಾರರು, ಸರ್ಕಾರದ ಯೋಜನೆಗಳ ಫಲಾನುಭವಿಗಳು, ಒಬಿಸಿ, ಎಸ್‌ಸಿ, ಎಸ್‌ಟಿ ಸಮುದಾಯದವರು, ಯುವಜನರು ಮತ್ತು ಮಹಿಳೆಯರನ್ನು ತಲುಪಲು ಬಿಜೆಪಿ ಕಾರ್ಯತಂತ್ರ ರೂಪಿಸಿದೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಗೃಹ ಸಚಿವ ಅಮಿತ್ ಶಾ ಅವರು ಲೋಕಸಭಾ ಚುನಾವಣೆಗೆ 543 ಕ್ಷೇತ್ರಗಳ ಪ್ರಚಾರ ಕಾರ್ಯತಂತ್ರದ ರೂಪರೇಷೆಗಾಗಿ ಮಂಗಳವಾರ ಬಿಜೆಪಿಯ ಪ್ರಮುಖರ ಸಭೆಯನ್ನು ನಡೆಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಪಕ್ಷದ 300ಕ್ಕೂ ಹೆಚ್ಚು ಮುಖಂಡರನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಶಾ, 2014ರಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಡವರ ಕಲ್ಯಾಣಕ್ಕಾಗಿ ಸಾಕಷ್ಟು ಕೆಲಸ ಮಾಡಿದೆ. ಅವರ ಎರಡನೇ ಅವಧಿಯಲ್ಲಿ ಭಾರತದ ಸ್ಥಾನಮಾನವು ಹಲವು ಪಟ್ಟು ಏರಿದೆ. ದೇಶವು ಐದನೇ ಅತಿ ದೊಡ್ಡ ಆರ್ಥಿಕತೆಯಾಗಿದೆ ಎಂದರು.

ಸಾಂಸ್ಕೃತಿಕ ರಾಷ್ಟ್ರೀಯತೆಗೆ ದೊಡ್ಡ ಉತ್ತೇಜನ ನೀಡುವ ಜತೆಗೆ ಮೋದಿ ಅವರ ಕಲ್ಪನೆಯ 'ಆತ್ಮನಿರ್ಭರ ಭಾರತ'ವು ದೇಶವನ್ನು ಹುರಿದುಂಬಿಸಿದೆ. ಅಯೋಧ್ಯೆಯಲ್ಲಿನ ರಾಮಮಂದಿರದಲ್ಲಿ ರಾಮಲಲ್ಲಾನ ಪ್ರಾಣ ಪ್ರತಿಷ್ಠೆ ಸಮಾರಂಭದ ಮೂಲಕ ಭಾರತವನ್ನು ದೊಡ್ಡ ಶಕ್ತಿಯನ್ನಾಗಿಸಲು ಸರ್ಕಾರ ಕೆಲಸ ಮಾಡುತ್ತಿದೆ. ಸರ್ಕಾರದ ಹಲವು ಯಶಸ್ವಿ ಯೋಜನೆಗಳನ್ನು ಮುಂದಿಟ್ಟುಕೊಂಡು ಜನರ ಬಳಿಗೆ ಹೋಗಬೇಕು ಎಂದು ಶಾ ಅವರು ಪಕ್ಷದ ನಾಯಕರಿಗೆ ಸಲಹೆ ನೀಡಿದರು.

ದೇಶದಾದ್ಯಂತ ಬಿಜೆಪಿಯ ಮತ್ತಷ್ಟು ನೆಲೆ ವಿಸ್ತರಣೆ ಖಾತ್ರಿಪಡಿಸಲು ಶ್ರಮಿಸಬೇಕು. 2019ರಲ್ಲಿ ಸೀಮಿತ ಯಶಸ್ಸನ್ನು ಗಳಿಸಿದ ರಾಜ್ಯಗಳಲ್ಲಿ ಸ್ಥಾನಗಳನ್ನು ಹೆಚ್ಚು ಗಳಿಸುವಂತೆ ನೋಡಿಕೊಳ್ಳಬೇಕು ಎಂದು ಜೆ.ಪಿ. ನಡ್ಡಾ ಅವರು ಪಕ್ಷದ ಮುಖಂಡರಿಗೆ ಸೂಚಿಸಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಕೂಡ ಅಮಿತ್ ಶಾ ಅವರ ಮಾತುಗಳನ್ನೇ ಉಲ್ಲೇಖಿಸಿದರು. 'ಬಿಜೆಪಿ ಮಾತ್ರವಲ್ಲದೆ, ನಮ್ಮ ಮಿತ್ರ-ಪಕ್ಷಗಳು ಎಲ್ಲೇ ಸ್ಪರ್ಧಿಸಿದರೂ ಅವರ ಗೆಲುವನ್ನು ಖಚಿತಪಡಿಸಿಕೊಳ್ಳಲು ನಾವು ಕೆಲಸ ಮಾಡುತ್ತೇವೆ. ಪಕ್ಷದ ನಾಯಕರು ಮತದಾರರೊಂದಿಗೆ ಸಂಪರ್ಕ ಸಾಧಿಸಲು 'ಗಾಂವ್ ಚಲೇನ್' ಅಭಿಯಾನದ ಭಾಗವಾಗಿ ಹಳ್ಳಿಗಳಿಗೆ ಅಭಿಮಾನಿಗಳನ್ನು ಕಳುಹಿಸಲಿದ್ದಾರೆ' ಎಂದು ತಾವ್ಡೆ ತಿಳಿಸಿದರು.

ಪಂಜಾಬ್ ಸಿ.ಎಂಗೆ ಪನ್ನೂ ಬೆದರಿಕೆ

ಖಾಲಿಸ್ತಾನಿ ಪ್ರತ್ಯೇಕತಾವಾದಿಯಿಂದ ಕೆಲ ಪತ್ರಕರ್ತರಿಗೆ ಇಮೇಲ್ ಸಂದೇಶ

ಚಂಡೀಗಢ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಮತ್ತು ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಗೌರವ್ ಯಾದವ್ ಅವರಿಗೆ ಜೀವ ಬೆದರಿಕೆ ಹಾಕಿರುವ ಖಾಲಿಸ್ತಾನ ಪರ ಹೋರಾಟದ ನಾಯಕ ಗುರುಪತ್ವಂತ್ ಸಿಂಗ್ ಪನ್ನೂ, ರಾಜ್ಯದ ದರೋಡೆಕೋರರು ನ್ಯಾಯಕ್ಕಾಗಿ ನಿಷೇಧಿತ ಸಿಖ್ಸ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ) ಸಂಘಟನೆ ಸೇರುವಂತೆ ಆಹ್ವಾನಿಸಿದ್ದಾನೆ.

ಅಲ್ಲದೆ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಉನ್ನತ ರಾಜಕೀಯ ನಾಯಕರು ಭಾಗವಹಿಸದಂತೆ ತಡೆಯುವಂತೆ ಆತ ಕರೆ ನೀಡಿದ್ದಾನೆ.

ಈ ಕುರಿತು ಕೆಲ ಪತ್ರಕರ್ತರಿಗೆ ಪನ್ನೂ ಇ-ಮೇಲ್ ಮಾಡಿದ್ದಾನೆ. ಆತ ಕಳುಹಿಸಿರುವ ಎರಡು ವಿಡಿಯೊಗಳು ಪಿಟಿಐಗೆ ದೊರೆತಿದ್ದು, ಅದರಲ್ಲಿ ಆತನು 1995ರ ಆಗಸ್ಟ್ 31ರಂದು ಬಾಂಬ್ ಸ್ಫೋಟದಲ್ಲಿ ಹತ್ಯೆಯಾದ ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಅವರಿಗೆ ಮಾನ್ ಅವರನ್ನು ಹೋಲಿಸಿದ್ದಾನೆ. ಆ ಸ್ಫೋಟದಲ್ಲಿ 17 ಜನರು ಮೃತಪಟ್ಟಿದ್ದರು. ನಿಷೇಧಿತ ಭಯೋತ್ಪಾದಕ ಸಂಘಟನೆ ಬಬ್ಬರ್ ಖಾಲ್ಸಾ ಇಂಟರ್ ನ್ಯಾಷನ್ ಅದರ ಹೊಣೆ ಹೊತ್ತಿತ್ತು.

ಅಲ್ಲದೆ, ಆತನು 1990ರ ಬಾಂಬ್ ಸ್ಫೋಟದಲ್ಲಿ ಮೃತಪಟ್ಟ ಪೊಲೀಸ್ ಅಧಿಕಾರಿ ಗೋವಿಂದ್ ರಾಮ್ ಅವರಿಗೆ, ಪಂಜಾಬ್ ಪೊಲೀಸ್ ಮಹಾ ನಿರ್ದೇಶಕ ಯಾದವ್ ಅವರನ್ನು ಸಮೀಕರಿಸಿದ್ದಾನೆ.

ಪನ್ನೂ ಮತ್ತು ಆತನ ಸಂಘಟನೆಯು ಈ ಹಿಂದೆಯೂ ಜೀವ ಬೆದರಿಕೆಗಳ-ನ್ನು ಹಾಕಿದೆ ಎಂದಿರುವ ಪಂಜಾಬ್‌ನ ಹಿರಿಯ ಪೊಲೀಸ್ ಅಧಿಕಾರಿಯೊಬ್ಬ-ರು, ರಾಜ್ಯದ ಎಲ್ಲ ವಿಐಪಿಗಳಿಗೆ ಬಿಗಿ ಭದ್ರತೆಯನ್ನು ಒದಗಿಸಲಾಗಿದ್ದು, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನೂ ತೆಗೆದುಕೊ-ಳ್ಳಲಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

'ಪ್ರಧಾನಿ ಮೋದಿ ಅವರಿಗೆ ಧೈರ್ಯವಿದ್ದರೆ ಅವರು, ಯಾವುದೇ ಭದ್ರತೆಯಿಲ್ಲದೆ ಗಣರಾಜ್ಯೋತ್ಸವ ಪರೇಡ್‌ಗೆ ಹಾಜರಾಗಲಿ' ಎಂದು ವಿಡಿಯೊವೊಂದರಲ್ಲಿ ಹೇಳಿರುವ ಆತ, 'ಎಸ್‌ಎಫ್‌ಜೆಯು ಖಾಲಿಸ್ತಾನ ಧ್ವಜವನ್ನು ಹಾರಿಸುವ ಮೂಲಕ ನಿಜ್ಜರ್ ಹತ್ಯೆಗೆ ಸೇಡು ತೀರಿಸಿಕೊಳ್ಳಲು ಹೊರಟಿದೆ' ಎಂದಿದ್ದಾನೆ. ಕೆನಡಾದ ಗುರುದ್ವಾರದ ಬಳಿ ನಿಜ್ಜರ್‌ನನ್ನು ಅಪರಿಚಿತ ದುಷ್ಕರ್ಮಿಗಳು ಕೊಂದಿದ್ದರು.

ಮತ್ತೊಂದು ವಿಡಿಯೊದಲ್ಲಿ ಪನ್ನೂ, ಪಂಜಾಬ್‌ನ ಗ್ಯಾಂಗ್‌ಸ್ಟರ್ ಗಳಿಗೆ ಎಸ್‌ಎಫ್‌ಜೆಗೆ ಸೇರುವಂತೆ ಆಹ್ವಾನ ನೀಡಿದ್ದಾನೆ. ಈ ಮೂಲಕ ಅವರು ಖಾಲಿಸ್ತಾನಕ್ಕಾಗಿ ಜನಾಭಿಪ್ರಾಯ ಸಂಗ್ರಹಣೆಯಲ್ಲಿ ತೊಡಗಬೇಕು ಎಂದಿದ್ದಾನೆ. ಮುಂದುವರಿದು, ಗಣರಾಜ್ಯೋತ್ಸವದಂದು ತ್ರಿವರ್ಣ ಧ್ವಜ ಹಾರಿಸದಂತೆ ಮುಖ್ಯಮಂತ್ರಿ ಮಾನ್ ಅವರನ್ನು ತಡೆಯುವಂತೆಯೂ ಆತ ಕರೆ ನೀಡಿದ್ದಾನೆ.

ಇ.ಡಿ ವಿಚಾರಣೆಗೆ ಕವಿತಾ ಗೈರು

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಜಾರಿ ನಿರ್ದೇಶನಾಲ-ಯದ (ಇ.ಡಿ) ವಿಚಾರಣೆಗೆ ಬಿಆರ್‌ಎಸ್ ನಾಯಕಿ ಕವಿತಾ ಕೆ., ಮಂಗಳವಾರ ಹಾಜರಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಚಾರಣೆಗೆ ಹಾಜರಾಗದಿರುವುದನ್ನು ಇ ಮೇಲ್ ಮೂಲಕ ತನಿಖಾಧಿಕಾರಿಗೆ ತಿಳಿಸಿದ್ದಾರೆ ಎಂಬುದು ತಿಳಿದುಬಂದಿದೆ.

'ಈ ಪ್ರಕರಣದಲ್ಲಿ ಕವಿತಾ ಅವರಿಗೆ ಇ.ಡಿ ಸಮನ್ಸ್ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ' ಎಂದು ವಕೀಲ ನಿತೇಶ್ ರಾಣಾ ಅವರು ತಿಳಿಸಿದ್ದಾರೆ.

'ಮೊಹಬ್ಬತ್ ಕಿ ದುಕಾನ್' ಬಸ್ ಏರಲು ಕಾಂಗ್ರೆಸ್‌ನಿಂದ ಟಿಕೆಟ್

ಖುಝುಮಾ (ನಾಗಾಲ್ಯಾಂಡ್): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೈಗೊಂಡಿರುವ ಭಾರತ್ ಜೋಡೊ ನ್ಯಾಯ ಯಾತ್ರೆಯ 'ಮೊಹಬ್ಬತ್ ಕಿ ದುಕಾನ್' (ಪ್ರೀತಿಯ ಅಂಗಡಿ) ಬಸ್ ಏರಲು ಬಯಸುವವರು ವಿಶೇಷ ಟಿಕೆಟ್ ಪಡೆಯಬೇಕು ಎಂದು ಪಕ್ಷ ಹೇಳಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಈ ವಿಶೇಷ ಟಿಕೆಟ್‌ನ ಚಿತ್ರವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಟಿ–ಶರ್ಟ್, ಪ್ಯಾಂಟ್ ತೊಟ್ಟು ನಡೆಯುತ್ತಿರುವ ಭಂಗಿಯಲ್ಲಿರುವ ರಾಹುಲ್ ಚಿತ್ರ ಮತ್ತು ಅವರ ಹಸ್ತಾಕ್ಷರವನ್ನು ಟಿಕೆಟ್ ಮೇಲೆ ಮುದ್ರಿಸಲಾಗಿದೆ.

'10 ವರ್ಷಗಳ ಅನ್ಯಾಯದ ವಿರುದ್ಧ ನ್ಯಾಯಕ್ಕೆ ಆಗ್ರಹಿಸಿ ರಾಹುಲ್ ಗಾಂಧಿ ನಡೆಸುತ್ತಿರುವ ಈ ಪ್ರಯಾಣದಲ್ಲಿ ಭಾಗಿ ಆಗಲು ಮತ್ತು ಅವರನ್ನು ಭೇಟಿಯಾಗಲು ಬಯಸುವವರಿಗೆ ಈ ಟಿಕೆಟ್ ನೀಡಲಾಗುತ್ತದೆ. ಟಿಕೆಟ್ ಪಡೆದವರಿಗೆ ಬಸ್ಸಿನಲ್ಲಿ ಪ್ರಯಾಣಿಸಲು ಅವಕಾಶ ನೀಡಲಾಗುತ್ತದೆ' ಎಂದು ಅವರು ಬರೆದಿದ್ದಾರೆ.

ಭಾರತ್ ಜೋಡೊ ನ್ಯಾಯ ಯಾತ್ರೆಯು ನಾಗಾಲ್ಯಾಂಡ್‌ನ ಕೊಹಿಮಾದಲ್ಲಿ ಮಂಗಳವಾರ ಸಾಗಿದ ವೇಳೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಬೆಂಬಲಿಗರೊಂದಿಗೆ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಯಾತ್ರೆಗಾಗಿ ಬಳಕೆಯಾಗುತ್ತಿರುವ ಬಸ್ಸಿನ ಮೇಲೆ 'ಮೊಹಬ್ಬತ್ ಕಿ ದುಕಾನ್' ಎಂದು ಬರೆಯಲಾಗಿದೆ. ಈ ಬಸ್ಸನ್ನು ಚಕ್ರಗಳ ಮೇಲೆ ಚಲಿಸುವ 'ಮೊಹಬ್ಬತ್ ಕಿ ದುಕಾನ್' ಎಂದೇ ಕಾಂಗ್ರೆಸ್ ನಾಯಕರು ಕರೆಯುತ್ತಿದ್ದಾರೆ. ರಾಹುಲ್ ಅವರು ಕನ್ಯಾಕುಮಾರಿಯಿಂದ ಕಾಶ್ಮೀರಕ್ಕೆ ಭಾರತ್ ಜೋಡೊ ಪಾದಯಾತ್ರೆ ನಡೆಸಿದ್ದ ಸಂದರ್ಭದಲ್ಲಿ 'ದ್ವೇಷದ ಮಾರುಕಟ್ಟೆಯಲ್ಲಿ ಪ್ರೀತಿಯ ಅಂಗಡಿ' ತೆರೆಯುವುದಾಗಿ ಹೇಳಿದ್ದರು. ಆಗ 'ಮೊಹಬ್ಬತ್ ಕಿ ದುಕಾನ್' ಎಂಬ ಪದ ಮೊದಲ ಬಾರಿಗೆ ಬಳಕೆಯಾಗಿತ್ತು. ನ್ಯಾಯ ಯಾತ್ರೆಯು ಸೋಮವಾರ ಸಂಜೆ ನಾಗಾಲ್ಯಾಂಡ್‌ನ ಖುಝುಮಾ ಗ್ರಾಮವನ್ನು ತಲುಪಿತು.

ಮುಂಬೈ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಆದ ಕಿರಿಕಿರಿ

ಇಂಡಿಗೊ, ಎಂಐಎಎಲ್‌ಗೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): ಮುಂಬೈ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ವಿಮಾನ ನಿಲುಗಡೆ ಪ್ರದೇಶದಲ್ಲಿ ನೆಲದ ಮೇಲೆ ಕುಳಿತು ಆಹಾರ ಸೇವಿಸಬೇಕಾದ ಸಂದರ್ಭ ಎದುರಾಗಿದ್ದು ಏಕೆ ಎಂಬುದನ್ನು ತಿಳಿಸುವಂತೆ ಮುಂಬೈ ಅಂತರರಾ-ಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಂಐಎಎಲ್) ಮತ್ತು ಇಂಡಿಗೊ ವಿಮಾನಯಾನ ಕಂಪನಿಗೆ ನಾಗರಿಕ ವಿಮಾನಯಾನ ಸುರಕ್ಷತಾ ಸಂಸ್ಥೆಯು (ಬಿಸಿಎಎಸ್) ಮಂಗಳವಾರ ನೋಟಿಸ್ ಜಾರಿಗೊಳಿಸಿದೆ.

ಗೋವಾದಿಂದ ದೆಹಲಿಗೆ ತೆರಳುವ ಇಂಡಿಗೊ ವಿಮಾನವೊಂದನ್ನು ಮುಂಬೈನಲ್ಲಿ ಇಳಿಸಲಾಗಿತ್ತು. ಮುಂಬೈ ವಿಮಾನ ನಿಲ್ದಾಣದಲ್ಲಿ-ದ್ದ ಈ ವಿಮಾನದಿಂದ ಹೊರಬಂದ ಹಲವು ಪ್ರಯಾಣಿಕರು ನೆಲದ ಮೇಲೆ ಕುಳಿತಿದ್ದರು, ಕೆಲವರು ಅಲ್ಲಿಯೇ ಆಹಾರ ಸೇವಿಸಿದ್ದರು.

ಮೂರು ಬಾರಿ ವರದಿಗೆ ಸೂಚನೆ

ದಟ್ಟ ಮಂಜಿನಿಂದಾಗಿ ವಿಮಾನಗಳ ಹಾರಾಟಕ್ಕೆ ಅಡಚಣೆ ಆಗುತ್ತಿರುವ ಪ್ರಕರಣಗಳ ಬಗ್ಗೆ ದಿನಕ್ಕೆ ಮೂರು ಬಾರಿ ವರದಿ ಮಾಡಬೇಕು ಎಂದು ನಾಗರಿಕ ವಿಮಾನಯಾನ ಸಚಿವಾಲಯವು ದೆಹಲಿ, ಮುಂಬೈ ಹಾಗೂ ನಾಲ್ಕು ಇತರ ಮಹಾನಗರಗಳ ವಿಮಾನ ನಿಲ್ದಾಣಗಳಿಗೆ ಮಂಗಳವಾರ ಸೂಚಿಸಿದೆ.

ಹೈದರಾಬಾದ್, ಬೆಂಗಳೂರು, ಚೆನ್ನೈ ಮತ್ತು ಕೋಲ್ಕತ್ತ ವಿಮಾನ ನಿಲ್ದಾಣಗಳಿಗೂ ಈ ಸೂಚನೆ ನೀಡಲಾಗಿದೆ. ಪ್ರಯಾಣಿಕರಿಗೆ ಆಗುವ ತೊಂದರೆಗಳಿಗೆ ಸ್ಪಂದಿಸಲು ವಿಮಾನಯಾನ ಕಂಪನಿಗಳು ಹಾಗೂ ಈ ವಿಮಾನ ನಿಲ್ದಾಣಗಳು 'ವಾರ್ ರೂಂ' ರಚಿಸಬೇಕು ಎಂದು ಕೂಡ ಸಚಿವಾಲಯ ಹೇಳಿದೆ.

ವಿಮಾನ ನಿಲ್ದಾಣಗಳಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ ಸಿಬ್ಬಂದಿ ದಿನದ ಇಪ್ಪತ್ತನಾಲ್ಕು ಗಂಟೆಗಳೂ ಅಗತ್ಯ ಸಂಖ್ಯೆಯಲ್ಲಿ ಲಭ್ಯರಿರುವಂತೆ ನೋಡಿಕೊಳ್ಳಲಾಗುತ್ತದೆ ಎಂದು ಕೂಡ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ತಿಳಿಸಿದ್ದಾರೆ.

ದೆಹಲಿ ವಿಮಾನ ನಿಲ್ದಾಣದಲ್ಲಿ ಒಂದು ರನ್‌ವೇಅನ್ನು ಮಂಗಳವಾರದಿಂದ ಅನ್ವಯವಾಗುವಂತೆ ಸಿಎಟಿ–3 ಮಾನದಂಡಕ್ಕೆ ಅನುಗುಣವಾಗಿ ಮೇಲ್ದರ್ಜೆಗೆ ಏರಿಸಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಇನ್ನೊಂದು ರನ್‌ವೇಅನ್ನು ಕೂಡ ಸಿಎಟಿ–3 ಮಾನದಂಡಕ್ಕೆ ಅನುಗುಣವಾಗಿ ರೂಪಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಹಾಗೂ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅಗತ್ಯ ಸೌಲಭ್ಯಗಳ-ನ್ನು ಕಲ್ಪಿಸುವ ವಿಚಾರದಲ್ಲಿ ಇಂಡಿಗೊ ಮತ್ತು ಎಂಐಎಎಲ್ ಸೂಕ್ತ ರೀತಿಯಲ್ಲಿ ವರ್ತಿಸಿಲ್ಲ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ. ಪ್ರಯಾಣಿಕರನ್ನು ಸರಿಯಾಗಿ ನಡೆಸಿಕೊಳ್ಳದೆ ಇದ್ದುದಕ್ಕಾಗಿ ನೋಟಿಸ್ ನೀಡಲಾಗುತ್ತಿದೆ ಎಂದು ಕೂಡ ಹೇಳಲಾಗಿದೆ.

ವಿಮಾನದಲ್ಲಿನ ಪ್ರಯಾಣಿಕರಿಗೆ ಬೋರ್ಡಿಂಗ್ ಗೇಟ್‌ಗೆ ತೆರಳಲು ವ್ಯವಸ್ಥೆ ಕಲ್ಪಿಸುವ ಬದಲು, ವಿಮಾನದಿಂದ ಇಳಿಯಲು ಮಾತ್ರ ಆಗುವಂತೆ ಮೆಟ್ಟಿಲುಗಳನ್ನು ಜೋಡಿಸಿಕೊಡಲಾಯಿತು. ಇದರಿಂದಾಗಿ, ಪ್ರಯಾಣಿಕರಿಗೆ ವಿಮಾನ ನಿಲ್ದಾಣದ ಟರ್ಮಿನಲ್‌ನಲ್ಲಿ ಶೌಚಾಲಯ ಸೌಲಭ್ಯ ಪಡೆಯಲು, ತಿಂಡಿ–ಪಾನೀಯ ಖರೀದಿಸಲು ಸಾಧ್ಯ-ವಾಗಲಿಲ್ಲ ಎಂದು ಮೂಲಗಳು ಹೇಳಿವೆ. ಸುಸ್ತಾಗಿದ್ದ ಪ್ರಯಾಣಿಕರಿಗೆ ಇದು ಕಿರಿಕಿರಿ ಉಂಟುಮಾಡಿತು ಎಂದು ಮೂಲಗಳು ವಿವರಿಸಿವೆ.

ವಿಮಾನ ಪ್ರಯಾಣಿಕರು ನಿಲ್ದಾಣದ ಟಾರುಹಾಸಿನ ಮೇಲೆ ಕುಳಿತು ತಿಂಡಿ ತಿನ್ನುತ್ತ ಇದ್ದ ದೃಶ್ಯಾವಳಿಯು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ ನಂತರದಲ್ಲಿ, ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಮಂಗಳವಾರ ಮಧ್ಯರಾತ್ರಿ (12.30ಕ್ಕೆ) ಅಧಿಕಾರಿಗಳ ಜೊತೆ ಸಭೆ ನಡೆಸಿದರು.

ಇಂಡಿಗೊ ಮತ್ತು ಎಂಐಎಎಲ್‌ಗೆ ಬಿಸಿಎಎಸ್ ಕಡೆಯಿಂದ ಮಂಗಳವಾರ ಮುಂಜಾನೆಯೇ ನೋಟಿಸ್ ರವಾನೆ ಆಗಿದೆ ಎಂದು ಮೂಲಗಳು ವಿವರಿಸಿವೆ.

ಗೋವಾದಿಂದ ದೆಹಲಿಗೆ ತೆರಳುತ್ತಿದ್ದ ಇಂಡಿಗೊ ವಿಮಾನವನ್ನು ಕೆಟ್ಟ ಹವಾಮಾನದ ಕಾರಣದಿಂದಾಗಿ ಮುಂಬೈನಲ್ಲಿ ಇಳಿಸಲಾಗಿತ್ತು. ಗೋವಾದಿಂದ ಈ ವಿಮಾನ ಹೊರಡುವುದೇ ಬಹಳ ತಡವಾಗಿದ್ದ ಪರಿಣಾಮವಾಗಿ ಪ್ರಯಾಣಿಕರಿಗೆ ಕಿರಿಕಿರಿ ಆಗಿತ್ತು. ಮುಂಬೈನಲ್ಲಿ ವಿಮಾನ ಇಳಿದು, ಅದಕ್ಕೆ ಏಣಿಯನ್ನು ಜೋಡಿ-ಸುತ್ತಿದ್ದಂತೆಯೇ, ಅವರು ವಿಮಾನದಿಂದ ಹೊರಬಂದರು ಎಂದು ಎಂಐಎಎಲ್ ವಕ್ತಾರರು ತಿಳಿಸಿದ್ದಾರೆ.

ಪ್ರಯಾಣಿಕರು ವಿಮಾನಯಾನ ಕಂಪನಿಯ ಬಸ್ ಏರಿ, ಟರ್ಮಿನಲ್ ಕಟ್ಟಡದ ಕಡೆ ತೆರಳಲು ನಿರಾಕರಿಸಿದ ಕಾರಣ ಅವರನ್ನು ಸಿಐಎಸ್‌ಎಫ್ ಸಿಬ್ಬಂದಿಯ ನೆರವಿನಿಂದ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಯಿತು ಎಂದು ವಕ್ತಾರರು ಹೇಳಿದ್ದಾರೆ.

ಭಾರತ–ಅಫ್ಗಾನಿಸ್ತಾನ ಟಿ20 ಹಣಾಹಣಿ ಇಂದು; ಅಭಿಮಾನಿಗಳಿಗೆ ವಿರಾಟ್ ಆಕರ್ಷಣೆ

ರೋಹಿತ್ ಪಡೆಗೆ ಕ್ಲೀನ್‌ಸ್ವೀಪ್ ಗುರಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಭಾರತ ಮತ್ತು ಅಫ್ಗಾನಿಸ್ತಾನ ತಂಡಗಳು ಬುಧವಾರ ಮುಖಾಮುಖಿಯಾಗಲಿರುವ ‘ಚುಟುಕು’ ಪಂದ್ಯದ ಟಿಕೆಟ್‌ಗಳಿಗಾಗಿ ಮಂಗಳವಾರ ಚಿನ್ನಸ್ವಾಮಿ ಕ್ರೀಡಾಂಗಣದ ಕೌಂಟರ್‌ಗಳಲ್ಲಿ ಬಹಳಷ್ಟು ಜನರು ಸಾಲುಗಟ್ಟಿದ್ದರು.

ಮೂರು ಪಂದ್ಯಗಳ ಸರಣಿಯನ್ನು ಆತಿಥೇಯರು ಈಗಾಗಲೇ 2–0ಯಿಂದ ಕೈವಶ ಮಾಡಿಕೊಂಡಿದ್ದಾರೆ. ಭಾರತಕ್ಕೆ ಕ್ಲೀನ್‌ಸ್ವೀಪ್ ಮಾಡಿಕೊಳ್ಳುವ ಅವಕಾಶ ಇದೆ. ಆದರೆ ಇದಕ್ಕಿಂತಲೂ ಅಭಿಮಾನಿಗಳು ಕ್ರೀಡಾಂಗಣದತ್ತ ಮುಖ ಮಾಡಲು ಪ್ರಮುಖ ಆಕರ್ಷಣೆಯೆಂದರೆ ವಿರಾಟ್ ಕೊಹ್ಲಿ.

14 ತಿಂಗಳುಗಳ ನಂತರ ವಿರಾಟ್ ಹಾಗೂ ನಾಯಕ ರೋಹಿತ್ ಶರ್ಮಾ ಅಂತರರಾಷ್ಟ್ರೀಯ ಟಿ20 ಮಾದರಿಗೆ ಮರಳಿರುವ ಸರಣಿ ಇದು. ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡುವ ರಾಯಲ್ ಚಾಲೆಂಜರ್ಸ್ ತಂಡದ ವಿರಾಟ್ ಎಂದರೆ ಉದ್ಯಾನನಗರಿಯ ಅಭಿಮಾನಿಗಳಿಗೆ ಅಚ್ಚುಮೆಚ್ಚು. ಅಲ್ಲದೇ ಒಂದೂವರೆ ತಿಂಗಳು ಹಿಂದೆ ಇಲ್ಲಿಯೇ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಟಿ20 ಪಂದ್ಯದಲ್ಲಿ ವಿರಾಟ್ ಆಡಿರಲಿಲ್ಲ. ಅದಕ್ಕೂ ಮುನ್ನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ನೆದರ್ಲೆಂಡ್ಸ್ ಎದುರಿನ ಪಂದ್ಯದಲ್ಲಿ ಅವರು ಆಡಿದ್ದರು.

ಜನರ ಅಭಿಪ್ರಾಯ ಏನೇ ಇರಲಿ. ಪಂದ್ಯ ಔಪಚಾರಿಕವೇ ಆಗಿರಲಿ. ಇದೇ ವರ್ಷ ಟಿ20 ವಿಶ್ವಕಪ್ ನಡೆಯುತ್ತಿರುವುದರಿಂದ ತಂಡದಲ್ಲಿ ಸ್ಥಾನ ಪಡೆಯಲು ಆಟಗಾರರಿಗೆ ಈ ಪಂದ್ಯ ಮುಖ್ಯವೇ ಆಗಿದೆ.

‘ಸರಣಿ ಕೈವಶ ಆಗಿರಬಹುದು. ಆದರೂ ನಾವು ಗೆಲುವಿನ ಓಟ ಮುಂದುವರಿಸುವ ಮನೋಭಾವದೊಂದಿಗೆ ಕಣಕ್ಕಿಳಿಯುತ್ತೇವೆ. ಎದುರಿಗೆ ಯಾವುದೇ ತಂಡವಿದ್ದರೂ ಹಗುರವಾಗಿ ಪರಿಗಣಿಸಲ್ಲ. ನಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಆಡುತ್ತೇವೆ. ಪ್ರತಿಯೊಂದು ಪಂದ್ಯವೂ ನಮಗೆ ಮುಖ್ಯ’ ಎಂದು ಸುದ್ದಿಗೋಷ್ಠಿಯಲ್ಲಿ ಎಡಗೈ ವೇಗಿ ಅರ್ಷದೀಪ್ ಸಿಂಗ್ ಹೇಳಿದರು.

ಜೂನ್‌ನಲ್ಲಿ ನಡೆಯುವ ವಿಶ್ವಕಪ್ ಟೂರ್ನಿಗೂ ಮುನ್ನ ಭಾರತ ಆಡಲಿರುವ ಕೊನೆಯ ಅಂತರರಾಷ್ಟ್ರೀಯ ಟಿ20 ಪಂದ್ಯ ಇದಾಗಿದೆ.

ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮಂಗಳವಾರ ಭಾರತ ತಂಡದ ಆಟಗಾರ ವಿರಾಟ್ ಕೊಹ್ಲಿ ಅವರೊಂದಿಗೆ ವಿಕೆಟ್‌ಕೀಪರ್ ರಿಷಭ್ ಪಂತ್ ಮಾತುಕತೆಯ ಕ್ಷಣ. ಈ ಸಂದರ್ಭದಲ್ಲಿ ತಂಡದ ನೆರವು ಸಿಬ್ಬಂದಿ ಇದ್ದರು –ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಭಾರತದ ನೆಟ್ಸ್‌ನಲ್ಲಿ ರಿಷಭ್ ಪಂತ್ ಬ್ಯಾಟಿಂಗ್

ಹದಿಮೂರು ತಿಂಗಳುಗಳ ಹಿಂದೆ ಭೀಕರ ರಸ್ತೆ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ವಿಕೆಟ್‌ಕೀಪರ್– ಬ್ಯಾಟರ್ ರಿಷಭ್ ಪಂತ್ ಭಾರತ ತಂಡದೊಂದಿಗೆ ಕಾಣಿಸಿಕೊಂಡರು!

ಹೌದು; ಮಂಗಳವಾರ ಸಂಜೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾರತದ ಆಟಗಾರರೊಂದಿಗೆ ರಿಷಭ್ ಕೆಲಹೊತ್ತು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ನಂತರ ಬಹಳಷ್ಟು ಸಮಯ ತಂಡದ ಆಟಗಾರರೊಂದಿಗೆ ಹರಟೆ ಹೊಡೆದರು. ವಿಶೇಷವಾಗಿ ವಿರಾಟ್ ಕೊಹ್ಲಿಯೊಂದಿಗೆ ಹಾಸ್ಯ ಚಟಾಕಿ ಹಾರಿಸುತ್ತ, ನಗುನಗುತ್ತ ಮಾತನಾಡಿದ್ದು ಗಮನ ಸೆಳೆಯಿತು. ನಾಯಕ ರೋಹಿತ್ ಶರ್ಮಾ, ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮತ್ತು ಉಳಿದ ಆಟಗಾರರೊಂದಿಗೆ ಮಾತನಾಡಿದರು.

ಅವರು ಕಳೆದ ಕೆಲವು ತಿಂಗಳುಗಳಿಂದ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಪುನಶ್ಚೇತನ ಆರೈಕೆ ಪಡೆಯುತ್ತಿದ್ದಾರೆ. ಫಿಟ್‌ನೆಸ್ ಮರಳಿ ಗಳಿಸಲು ತಾಲೀಮು ನಡೆಸುತ್ತಿದ್ದಾರೆ. ರಿಷಭ್ ಅವರ ಫಿಟ್‌ನೆಸ್ ಸುಧಾರಿಸುತ್ತಿದ್ದು ಮುಂಬರುವ ಐಪಿಎಲ್‌ನಲ್ಲಿ ಅವರು ಆಡುವ ನಿರೀಕ್ಷೆ ಇದೆ. ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿದ್ದಾರೆ. ರಿಷಭ್ ಫಿಟ್‌ನೆಸ್ ಉತ್ತಮವಾಗುತ್ತಿದೆ ಎಂದು ಈಚೆಗೆ ಡೆಲ್ಲಿ ತಂಡದ ಮೆಂಟರ್ ಸೌರವ್ ಗಂಗೂಲಿ ಕೂಡ ಹೇಳಿದ್ದರು.

ಚಿನ್ನಸ್ವಾಮಿಯಲ್ಲಿ ಭಾರತ (ಟಿ20)	
ಪಂದ್ಯ	7
ಜಯ	3
ಸೋಲು	3
ಫಲಿತಾಂಶವಿಲ್ಲ	1

ಕಳೆದೆರಡೂ ಪಂದ್ಯಗಳಲ್ಲಿ ಮಿಂಚಿರುವ ಶಿವಂ ದುಬೆ, ವಿರಾಟ್, ಯಶಸ್ವಿ ಜೈಸ್ವಾಲ್, ರಿಂಕು ಸಿಂಗ್, ಬೌಲರ್‌ಗಳಾದ ಅರ್ಷದೀಪ್, ಅಕ್ಷರ್ ಪಟೇಲ್ ಮತ್ತು ರವಿ ಬಿಷ್ಣೋಯಿ ಅವರಿಗೆ ಮತ್ತೊಂದು ಅವಕಾಶ ಸಿಗಬಹುದು.

ಆದರೆ ಜಿತೇಶ್ ಶರ್ಮಾಗೆ ವಿಶ್ರಾಂತಿ ನೀಡಿ ಸಂಜು ಸ್ಯಾಮ್ಸನ್‌ಗೆ ವಿಕೆಟ್‌ಕೀಪಿಂಗ್ ಹೊಣೆ ನೀಡುವ ಸಾಧ್ಯತೆ ಹೆಚ್ಚಿದೆ. ಎರಡೂ ಪಂದ್ಯಗಳಲ್ಲಿ ಸೊನ್ನೆ ಸುತ್ತಿರುವ ರೋಹಿತ್ ಶರ್ಮಾ ಇಲ್ಲಿ ಲಯಕ್ಕೆ ಮರಳುವ ನಿರೀಕ್ಷೆ ಇದೆ. ಆದರೆ ತನಗಿಂತಲೂ ಬಲಿಷ್ಠವಾಗಿರುವ ಭಾರತದ ಎದುರು ಮೊದಲ ಸರಣಿ ಆಡುತ್ತಿರುವ ಅಫ್ಗಾನಿಸ್ತಾನಕ್ಕೆ ಒಂದಾದರೂ ಪಂದ್ಯದಲ್ಲಿ ಗೆಲ್ಲುವ ಛಲವಿದೆ. ಕೋಚ್ ಜೋನಾಥನ್ ಟ್ರಾಟ್ ಅವರೇ ಹೇಳಿದಂತೆ ಎರಡೂ ಪಂದ್ಯಗಳಲ್ಲಿ ತಂಡದ ಆಟಗಾರರ ಬ್ಯಾಟಿಂಗ್ ಅಮೋಘವಾಗಿತ್ತು. ಆದರೆ ಬೌಲಿಂಗ್ ದುರ್ಬಲವಾಗಿತ್ತು.

ಬ್ಯಾಟರ್‌ಗಳಾದ ಗುಲ್ಬದೀನ್ ನೈಬ್, ಆಲ್‌ರೌಂಡರ್ ಮೊಹಮ್ಮದ್ ನಬಿ, ಬೌಲಿಂಗ್‌ನಲ್ಲಿ ನವೀನ್ ಉಲ್ ಹಕ್, ಕರೀಂ ಜನತ್ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೋ ಸಿನಿಮಾ ಆ್ಯಪ್.

ನಗಾಲ್‌ಗೆ ದಾಖಲೆ ಜಯ

ಆಸ್ಟ್ರೇಲಿಯಾ ಓಪನ್: ಎರಡನೇ ಸುತ್ತಿಗೆ ಸುಮಿತ್ ಲಗ್ಗೆ

ಭಾರತದ ಸುಮಿತ್ ನಗಾಲ್ –ಎಎಫ್‌ಪಿ ಚಿತ್ರ

ಮೆಲ್ಬರ್ನ್ (ಪಿಟಿಐ): ಚುರುಕಿನ ಆಟವಾಡಿದ ಭಾರತದ ಸುಮಿತ್ ನಗಾಲ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಐತಿಹಾಸಿಕ ಗೆಲುವು ದಾಖಲಿಸಿದರು.

ವಿಶ್ವದ 137ನೇ ಕ್ರಮಾಂಕದ ನಗಾಲ್ ಅವರು, 27ನೇ ಕ್ರಮಾಂಕದ ಅಲೆಕ್ಸಾಂಡರ್ ಬುಬ್ಲಿಕ್ ಅವರಿಗೆ ಆಘಾತ ನೀಡಿ, ಎರಡನೇ ಸುತ್ತಿಗೆ ಲಗ್ಗೆ ಹಾಕಿದರು.

ಮಂಗಳವಾರ ನಡೆದ ಪಂದ್ಯದಲ್ಲಿ 26 ವರ್ಷದ ನಗಾಲ್ ಅವರು 6-4, 6-2, 7-6(5)ರಿಂದ ಕಜಕಸ್ತಾನದ 31ನೇ ಶ್ರೇಯಾಂಕದ ಆಟಗಾರನನ್ನು ಹಿಮ್ಮೆಟ್ಟಿಸಿದರು. ಇದು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ 35 ವರ್ಷಗಳ ಬಳಿಕ ಶ್ರೇಯಾಂಕಿತ ಆಟಗಾರನ ವಿರುದ್ಧ ಭಾರತದ ಆಟಗಾರರೊಬ್ಬರಿಗೆ ದೊರೆತ ಮೊದಲ ಜಯವಾಗಿದೆ.

1989ರ ಆಸ್ಟ್ರೇಲಿಯನ್ ಓಪನ್‌ನಲ್ಲಿ ಭಾರತದ ರಮೇಶ್ ಕೃಷ್ಣನ್ ಅವರು ಅಂದಿನ ವಿಶ್ವದ ನಂಬರ್ ಒನ್ ಮತ್ತು ಚಾಂಪಿಯನ್ ಆಗಿದ್ದ ಸ್ವೀಡನ್‌ನ ಮ್ಯಾಟ್ಸ್ ವಿಲಾಂಡರ್ ಅವರನ್ನು ಸೋಲಿಸಿ, ದಾಖಲೆ ನಿರ್ಮಿಸಿದ್ದರು. ಅದಾದ ಬಳಿಕ ಭಾರತದ ಆಟಗಾರರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಶ್ರೇಯಾಂಕಿತ ಆಟಗಾರರ ವಿರುದ್ಧ ಗೆಲುವು ದಕ್ಕಿರಲಿಲ್ಲ.

2020ರ ಅಮೆರಿಕ ಓಪನ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದ್ದ ನಗಾಲ್, ಎರಡನೇ ಶ್ರೇಯಾಂಕ ಹೊಂದಿದ್ದ ಡಾಮಿನಿಕ್ ಥೀಮ್ (ಆಸ್ಟ್ರಿಯಾ) ವಿರುದ್ಧ ಸೋತು ನಿರ್ಗಮಿಸಿದ್ದರು. 2021ರ ಆಸ್ಟ್ರೇಲಿಯನ್ ಓಪನ್‌ನ ಆರಂಭಿಕ ಸುತ್ತಿನಲ್ಲಿ ರಿಕಾರ್ಡಾಸ್ ಬೆರಾಂಕಿಸ್ ವಿರುದ್ಧ ಪರಾಭವಗೊಂಡಿದ್ದ ಭಾರತದ ಆಟಗಾರ, ಇಲ್ಲಿ ಮೊದಲ ಬಾರಿಗೆ ಎರಡನೇ ಸುತ್ತು ಪ್ರವೇಶಿಸಿದ್ದಾರೆ.

ಎರಡು ಗಂಟೆ 38 ನಿಮಿಷಗಳ ಹೋರಾಟದಲ್ಲಿ ನಗಾಲ್ ನೇರ ಸೆಟ್‌ಗಳ ಮೂಲಕ ಗೆಲುವು ಸಾಧಿಸಿದರು. ಎರಡನೇ ಸುತ್ತಿನಲ್ಲಿ ವಿಶ್ವದ 140ನೇ ಕ್ರಮಾಂಕದ ಚೀನಾದ ಜುಂಚೆಂಗ್ ಶಾಂಗ್ ಅವರನ್ನು ಎದುರಿಸಲಿದ್ದಾರೆ.

ಅರ್ಹತಾ ಸುತ್ತಿನಲ್ಲಿ ಮೂರು ಪಂದ್ಯಗಳನ್ನು ಗೆದ್ದು ಸುಮಾರು ₹ 35 ಲಕ್ಷ ಬಹುಮಾನ ಗಳಿಸಿದ್ದ ನಗಾಲ್, ಮುಖ್ಯಸುತ್ತಿನ ಮೊದಲ ಪಂದ್ಯದಲ್ಲಿ ಜಯಗಳಿಸಿ ಮತ್ತೆ ₹65 ಲಕ್ಷ ಖಚಿತಪಡಿಸಿಕೊಂಡಿದ್ದಾರೆ. 2023ರ ಋತುವಿನ ಅಂತ್ಯದಲ್ಲಿ ಹಣಕಾಸಿನ ಬವಣೆಯನ್ನು ತೋಡಿಕೊಂಡಿದ್ದ ನಗಾಲ್, ತಮ್ಮ ಬಳಿ ಲಕ್ಷ ರೂಪಾಯಿ ಕೂಡ ಇಲ್ಲವೆಂದು ಹೇಳಿದ್ದರು. ನಂತರ ಅವರಿಗೆ ನೆರವು ಹರಿದುಬಂದಿತ್ತು. ಬುಬ್ಲಿಕ್ ವಿರುದ್ಧದ ಪಂದ್ಯದಲ್ಲಿ ನಗಾಲ್ ಉತ್ತಮ ಆರಂಭ ಪಡೆದರು. ಮೊದಲ ಎರಡು ಸೆಟ್‌ಗಳಲ್ಲಿ ನಿಖರ ಆಟದ ಮೂಲಕ ಹಿಡಿತ ಸಾಧಿಸಿ, ಎದುರಾಳಿಗೆ ಮುನ್ನಡೆ ಸಾಧಿಸಲು ಅವಕಾಶ ನೀಡಲಿಲ್ಲ. ಆದರೆ, ಮೂರನೇ ಸೆಟ್‌ನಲ್ಲಿ ಪುಟಿದೆದ್ದ ಕಜಕಸ್ತಾನದ ಆಟಗಾರ ಪ್ರತಿರೋಧ ತೋರಿದರು. ಟೈಬ್ರೇಕರ್‌ನಲ್ಲಿ ನಗಾಲ್ ಗೆದ್ದರು.

ಬಾಂಬ್ರಿ- ಹಾಸ್ ಜೋಡಿಗೆ ಸೋಲು: ಪುರುಷರ ಡಬಲ್ಸ್‌ನಲ್ಲಿ ಭಾರತದ ಯೂಕಿ ಬಾಂಬ್ರಿ ಮತ್ತು ಡಚ್ ಆಟಗಾರ ರಾಬಿನ್ ಹಾಸ್ ಜೋಡಿ ಮೊದಲ ಸುತ್ತಿನಲ್ಲಿ ನಿರಾಸೆ ಅನುಭವಿಸಿತು.

ಈ ಜೋಡಿಯು 6-1, 6-7 (8-10), 6-7 (7-10)ರಿಂದ ಕೊಲಂಬಿಯಾದ ನಿಕೋಲಸ್ ಬ್ಯಾರಿಯೆಂಟೋಸ್ ಮತ್ತು ಬ್ರೆಜಿಲ್‌ನ ರಾಫೆಲ್ ಮಾಟೋಸ್ ಅವರಿಗೆ ಮಣಿಯಿತು.

ಅಲ್ಕರಾಜ್, ಇಗಾ ಶ್ವಾಂಟೆಕ್‌ಗೆ ಮುನ್ನಡೆ

ಮೆಲ್ಬರ್ನ್ (ಎಎಫ್‌ಪಿ): ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ಪೋಲೆಂಡ್‌ನ ಇಗಾ ಶ್ವಾಂಟೆಕ್ ಅವರು ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತಿಗೆ ಮುನ್ನಡೆದರು.

ವಿಶ್ವದ ಎರಡನೇ ಕ್ರಮಾಂಕದ ಅಲ್ಕರಾಜ್ ಅವರು ಪ್ರಸಕ್ತ ಋತುವಿನ ಮೊದಲ ಪಂದ್ಯದಲ್ಲಿ 7-6 (7–5), 6-1, 6-2 ರಿಂದ ಫ್ರಾನ್ಸ್‌ನ ಅನುಭವಿ ಆಟಗಾರ ರಿಚರ್ಡ್ ಗ್ಯಾಸ್ಕೆಟ್ ಅವರನ್ನು ಸೋಲಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರಕ್ರಮಾಂಕದ ಇಗಾ ಅವರು ಆರಂಭಿಕ ಸುತ್ತಿನಲ್ಲಿ 7-6 (7–2), 6-2ರಿಂದ ಆಸ್ಟ್ರೇಲಿಯನ್ ಓಪನ್ ಮಾಜಿ ಚಾಂಪಿಯನ್ ಸೋಫಿಯಾ ಕೆನಿನ್ ವಿರುದ್ಧ ಜಯ ಸಾಧಿಸಿದರು.

ಇಂಡಿಯಾ ಓಪನ್: ಮೊದಲ ಸುತ್ತಿನಲ್ಲೇ ಲಕ್ಷ್ಯ ನಿರ್ಗಮನ

ರಾಜಾವತ್, ಪ್ರಣಯ್ ಮುನ್ನಡೆ

ನವದೆಹಲಿ (ಪಿಟಿಐ): ಭಾರತದ ಯುವ ಪ್ರತಿಭೆ ಪ್ರಿಯಾಂಶು ರಾಜಾವತ್ ಅವರು ಮಂಗಳವಾರ ಇಲ್ಲಿ ಆರಂಭವಾದ ಇಂಡಿಯಾ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಲಕ್ಷ್ಯ ಸೇನ್ ಅವರಿಗೆ ಆಘಾತ ನೀಡಿದರು. ಇನ್ನೊಂದು ಪಂದ್ಯದಲ್ಲಿ ಏಷ್ಯನ್ ಕ್ರೀಡಾಕೂಟದ ಕಂಚಿನ ಪದಕ ವಿಜೇತ ಎಚ್‌.ಎಸ್. ಪ್ರಣಯ್ ಅವರೂ ಜಯಗಳಿಸಿದರು.

ಕೆ.ಡಿ. ಜಾಧವ್ ಒಳಾಂಗಣ ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ವಿಶ್ವ ರ‍್ಯಾಂಕಿಂಗ್‌ನಲ್ಲಿ 30ನೇ ಸ್ಥಾನದಲ್ಲಿರುವ ರಾಜಾವತ್ ಅವರು 16-21, 21-16, 21-13ರಿಂದ 19ನೇ ಕ್ರಮಾಂಕದ ಸೇನ್ ಅವರಿಗೆ ಆಘಾತ ನೀಡಿದರು. 75 ನಿಮಿಷಗಳ ಗೇಮ್‌ನಲ್ಲಿ 22 ವರ್ಷದ ಸೇನ್ ಮೇಲುಗೈ ಸಾಧಿಸಿದರು. ಆದರೆ, ನಂತರದ ಗೇಮ್‌ನಲ್ಲಿ 21 ವರ್ಷದ ರಾಜಾವತ್ ಪಾರಮ್ಯ ಮೆರೆದರು.

ಈ ಋತುವಿನ ಮೊದಲ ಟೂರ್ನಿಯಲ್ಲೂ ಆರಂಭಿಕ ಸುತ್ತಿನಲ್ಲಿ ನಿರ್ಗಮಿಸಿದ್ದ ಸೇನ್ ಅವರಿಗೆ ಒಲಿಂಪಿಕ್ಸ್ ಅರ್ಹತೆ ಮತ್ತಷ್ಟು ಕಠಿಣವಾಗಿದೆ.

ವಿಶ್ವದ 9ನೇ ರ‍್ಯಾಂಕ್‌ನ ಆಟಗಾರ ಪ್ರಣಯ್ ಅವರು ಮೊದಲ ಸುತ್ತಿನಲ್ಲಿ 21-6, 21-19ರಿಂದ ಚೀನಾ ತೈಪೆಯ ಚೌ ಟಿಯೆನ್ ಚೆನ್ ಅವರನ್ನು ಮಣಿಸಿದರು. ಮೊದಲ ಗೇಮ್ ಅನ್ನು ಸುಲಭವಾಗಿ ಗೆದ್ದಿದ್ದ ಪ್ರಣಯ್‌ಗೆ ಎರಡನೇಯದ್ದರಲ್ಲಿ ಪ್ರಬಲ ಸ್ಪರ್ಧೆ ಎದುರಾಯಿತು. ಒಂದು ಹಂತದಲ್ಲಿ 11–16ರ ಹಿನ್ನಡೆ ಹೊಂದಿದ್ದ ಪ್ರಣಯ್ ಮತ್ತೆ ಚೇತರಿಸಿಕೊಂಡು ಹಿಡಿತ ಸಾಧಿಸಿದರು.

ವಿಶ್ವದ 13ನೇ ಕ್ರಮಾಂಕದ ಎದುರಾಳಿಯನ್ನು 42 ನಿಮಿಷದಲ್ಲಿ ಸೋಲಿಸಿದ 31 ವರ್ಷದ ಪ್ರಣಯ್, ಎರಡನೇ ಸುತ್ತಿನಲ್ಲಿ ರಾಜಾವತ್ ಅವರ ಸವಾಲನ್ನು ಎದುರಿಸಲಿದ್ದಾರೆ.

ಪ್ರಿಯಾಂಶು ರಾಜಾವತ್ –ಪಿಟಿಐ ಚಿತ್ರ

‘ಸಿಇಒ ನೇಮಕ: ಪಿ.ಟಿ. ಉಷಾ ಒತ್ತಡ’

ನವದೆಹಲಿ (ಪಿಟಿಐ): ‘ಭಾರತ ಒಲಿಂಪಿಕ್ ಸಂಸ್ಥೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ (ಸಿಇಒ) ಆಗಿ ರಘು ಅಯ್ಯರ್ ಅವರನ್ನೇ ಶಿಫಾರಸು ಮಾಡಲು ಅಧ್ಯಕ್ಷೆ ಪಿ.ಟಿ. ಉಷಾ ಅವರು ತಮ್ಮ ಮೇಲೆ ಒತ್ತಡ ಹೇರಿದ್ದರು’ ಎಂದು ಕಾರ್ಯಕಾರಿ ಸಮಿತಿಯ 12 ಸದಸ್ಯರು ಆರೋಪಿಸಿದ್ದಾರೆ.

ಅಯ್ಯರ್ ಅವರನ್ನು ಸಿಇಒ ಆಗಿ ನೇಮಕ ಮಾಡುವ ಬಗ್ಗೆ ಉಷಾ ಜನವರಿ 6 ರಂದು ಅಧಿಕೃತ ಹೇಳಿಕೆ ನೀಡಿದ್ದರು. ಆದರೆ, ಕಾರ್ಯಕಾರಿ ಸಮಿತಿಯ 15 ಸದಸ್ಯರಲ್ಲಿ 12 ಮಂದಿ ರಾಜಸ್ಥಾನ ರಾಯಲ್ಸ್‌ನ ಮಾಜಿ ಮುಖ್ಯ ಕಾರ್ಯನಿರ್ವಾಹಕರ ನೇಮಕಾತಿಯನ್ನು ಉನ್ನತ ಸಂಸ್ಥೆ ಅನುಮೋದಿಸಿಲ್ಲ ಎಂದು ಹೇಳಿದರು.

‘ಹಿಂದಿನ ಕಾರ್ಯಕಾರಿ ಸಮಿತಿ ಸಭೆ (ಇಸಿ)ಯ ಕಾರ್ಯಸೂಚಿಯಲ್ಲಿ ಸಿಇಒ ನೇಮಕವನ್ನು ಪಟ್ಟಿ ಮಾಡಿಲ್ಲ. ಈ ವಿಷಯವನ್ನು ಏಕಪಕ್ಷೀಯವಾಗಿ ಕಾರ್ಯಸೂಚಿಯಲ್ಲಿ ಪರಿಚಯಿಸಿ, ಆತುರದ ನಿರ್ಧಾರ ತೆಗೆದುಕೊಳ್ಳಲು ನಮ್ಮ ಮೇಲೆ ಒತ್ತಡ ಹೇರಲು ಪ್ರಯತ್ನಿಸಿದ್ದೀರಿ’ ಎಂದು ಜ. 14ರಂದು ಬರೆದ ಪತ್ರದಲ್ಲಿ 12 ಸದಸ್ಯರು ಸಹಿ ಮಾಡಿದ್ದಾರೆ. ಉಷಾ, ಮೇರಿ ಕೋಮ್ ಮತ್ತು ಅಚಂತ ಶರತ್ ಕಮಲ್ ಅವರನ್ನು ಹೊರತುಪಡಿಸಿ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಪತ್ರಕ್ಕೆ ಸಹಿ ಹಾಕಿದ್ದಾರೆ.

‘ನಾಮನಿರ್ದೇಶನ ಸಮಿತಿಯ ಕಾರ್ಯಕಲಾಪಗಳು, ನಿರ್ಧಾರ ತೆಗೆದುಕೊಂಡ ಪ್ರಕ್ರಿಯೆ ಮತ್ತು ಅಭ್ಯರ್ಥಿ ಆಯ್ಕೆ ಮಾಡಲು ಬಳಸುವ ಮಾನದಂಡ ಪರಿಶೀಲಿಸಲು ಅವಕಾಶ ನೀಡಿಲ್ಲ. ಉಷಾ ಅವರು ಏಕಪಕ್ಷೀಯವಾಗಿ ಸಿಇಒ ವೇತನ, ಸವಲತ್ತು ನಿರ್ಧರಿಸಿದ್ದಾರೆ. ಇದು ವರ್ಷಕ್ಕೆ ₹ 3 ಕೋಟಿ’ ಎಂದು ಸದಸ್ಯರು ಆರೋಪಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಉಷಾ, ‘ಶರತ್ ಕಮಲ್ ಹೊರತುಪಡಿಸಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ಹಣಕಾಸಿನ ಕೊರತೆಯ ಕಾರಣ ಉಲ್ಲೇಖಿಸಿ ಸಿಇಒಗೆ ನಿಗದಿ ಪಡಿಸಿದ ಸಂಭಾವನೆ ಮರುಪರಿಶೀಲಿಸುವಂತೆ ಶಿಫಾರಸು ಮಾಡಿದ್ದರು. ಈ ಹಿಂದೆ ಒಪ್ಪಿದ ವೇತನಕ್ಕಿಂತ ಶೇಕಡ 30 ಕಡಿಮೆ ಮಾಡಲಾಗಿದೆ’ ಎಂದು ಹೇಳಿದ್ದಾರೆ.

ಸಚಿನ್, ಯುವರಾಜ್ ನಾಯಕತ್ವದಲ್ಲಿ ‘ಟಿ20’

ಚಿಕ್ಕಬಳ್ಳಾಪುರ: ತಾಲ್ಲೂಕಿನ ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದಲ್ಲಿ ‘ಸಾಯಿ ಕೃಷ್ಣ’ ಅಂತರರಾಷ್ಟ್ರೀಯ ಕ್ರೀಡಾಂಗಣ ಉದ್ಘಾಟನೆಯ ಅಂಗವಾಗಿ ಇದೇ 18ರಂದು ಟಿ20 ಪ್ರದರ್ಶನ ಪಂದ್ಯ ನಡೆಯಲಿದೆ. ಸಚಿನ್ ಮತ್ತು ಯುವರಾಜ್ ಸಿಂಗ್ ಅವರು ಈ ತಂಡಗಳನ್ನು ಮುನ್ನಡೆಸುವರು.

‘ಒಂದೇ ವಿಶ್ವ ಒಂದೇ ಕುಟುಂಬ’ದ ಹೆಸರಿನಲ್ಲಿ ನಡೆಯುವ ಪಂದ್ಯದಲ್ಲಿ ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಇಂಗ್ಲೆಂಡ್, ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗರು ಕಣಕ್ಕಿಳಿಯಲಿದ್ದಾರೆ. ಮಾಜಿ ಕ್ರಿಕೆಟಿಗರಾದ ಸುನಿಲ್ ಗಾವಸ್ಕರ್, ಮುತ್ತಯ್ಯ ಮುರಳೀಧರನ್, ಸನತ್ ಜಯಸೂರ್ಯ, ಚಮಿಂದಾ ವಾಸ್, ಮಾಂಟಿ ಪನೇಸರ್, ಇರ್ಫಾನ್ ಪಠಾಣ್, ಮೊಹಮ್ಮದ್ ಕೈಫ್, ಯೂಸುಫ್ , ವೆಂಕಟೇಶ್ ಪ್ರಸಾದ್ ಮತ್ತಿತರರು ಭಾಗವಹಿಸಲಿದ್ದಾರೆ.

‘ಸಂಘರ್ಷ ಬಯಸಲ್ಲ, ಅಮಾನತು ಹಿಂಪಡೆಯಿರಿ’

ನವದೆಹಲಿ (ಪಿಟಿಐ): ತನ್ನ ಮೇಲೆ ಹಾಕಿರುವ ಅಮಾನತು ಹಿಂಪಡೆಯಲು ಆಗ್ರಹಿಸಿ ಕ್ರೀಡಾ ಸಚಿವಾಲಯದ ಜತೆ ಮಾತುಕತೆ ನಡೆಸಲು ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಂಗಳವಾರ ನಿರ್ಧರಿಸಿದೆ.

ಸರ್ಕಾರದ ಜತೆ ಸಂಘರ್ಷ ಬಯಸುವುದಿಲ್ಲ ಮತ್ತು ಮಾತುಕತೆ ವಿಫಲವಾದರೆ ಕಾನೂನು ಮೊರೆ ಹೋಗುವ ಬಗ್ಗೆ ತೀರ್ಮಾನಿಸಲಾಗುವುದು ಎಂದೂ ಹೇಳಿದೆ.

ಅಮಾನತು ಹಿಂಪಡೆಯಲು ಕೋರ್ಟ್‌ಗೆ ಹೋಗುವುದಾಗಿ ಡಬ್ಲ್ಯುಎಫ್‌ಐ ಈ ಹಿಂದೆ ಹೇಳಿತ್ತು. ಆದರೆ, ಅಮಾನತುಗೊಂಡಿರುವ ಆಡಳಿತ ಮಂಡಳಿ ಅಧ್ಯಕ್ಷ ಸಂಜಯ್ ಸಿಂಗ್ ನೇತೃತ್ವದಲ್ಲಿ ನಡೆದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ನಿರ್ಧಾರ ಬದಲಾಯಿಸಲಾಯಿತು. ಇತರ 12 ಚುನಾಯಿತ ಸದಸ್ಯರು ಭಾಗವಹಿಸಿದ್ದರು.

ಪ್ರಧಾನ ಕಾರ್ಯದರ್ಶಿ ಪ್ರೇಮ್ ಚಂದ್ ಲೋಚಬ್ ಮತ್ತು ಹಿರಿಯ ಉಪಾಧ್ಯಕ್ಷ ದೇವೇಂದರ್ ಕಡಿಯಾನ್ ಸಭೆಗೆ ಗೈರಾಗಿದ್ದರು.

‘ಸರ್ಕಾರದ ಜತೆ ಸಂಘರ್ಷ ಬಯಸುವುದಿಲ್ಲ. ನ್ಯಾಯಾಲಯಕ್ಕೆ ಹೋಗುತ್ತಿಲ್ಲ. ಸಚಿವಾಲಯದ ಸಮಯ ಕೋರಿದ್ದೇವೆ. ನಿಯೋಗವು ಸರ್ಕಾರದೊಂದಿಗೆ ಚರ್ಚೆಗೆ ಪ್ರಯತ್ನಿಸಲಿದೆ’ ಎಂದು ಸಂಜಯ್ ಸಿಂಗ್ ಸಭೆಯ ನಂತರ ಸುದ್ದಿಸಂಸ್ಥೆಗೆ ತಿಳಿಸಿದರು.

ಸಂಜಯ್‌ಸಿಂಗ್

‘ಅಮಾನತು ತೆರವು ಮಾಡಲು ಏನು ಮಾಡಬೇಕು ಎಂಬುದನ್ನು ತಿಳಿಯಲು ಬಯಸುತ್ತೇವೆ. ಡಬ್ಲ್ಯುಎಫ್‌ಐ ಅಮಾನತುಗೊಳಿಸುವ ವೇಳೆ ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು) ಕೆಲವು ಷರತ್ತುಗಳನ್ನು ವಿಧಿಸಿತ್ತು. ಸರ್ಕಾರ ಅಮಾನತು ಹೇಗೆ ತೆರವು ಮಾಡಲಾಗುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ. ಈ ಹಿಂದೆಯೂ ಸಚಿವಾಲಯಕ್ಕೆ ಪತ್ರ ಬರೆದಿದ್ದೆವು. ಆದರೆ ಉತ್ತರ ಬಂದಿಲ್ಲ. 2-3 ದಿನಗಳಲ್ಲಿ ಸಚಿವಾಲಯ ವನ್ನು ಸಂಪರ್ಕಿಸುತ್ತೇವೆ. ಮಾತುಕತೆಗೆ ನಿಯೋಗ ರಚಿಸಲಾಗುವುದು ಮತ್ತು ಪುಣೆಯಲ್ಲಿ ನಡೆಯುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೂ ಮುನ್ನ ಅಮಾನತು ತೆರವು ಮಾಡಬಹುದೆಂದು ಭಾವಿಸುತ್ತೇನೆ’ ಎಂದರು.

‘ಈ ಸಭೆಗೆ ಪ್ರೇಮಚಂದ್ ಲೋಚಬ್ ಸೇರಿದಂತೆ ಎಲ್ಲಾ ಚುನಾಯಿತ ಸದಸ್ಯರನ್ನು ಆಹ್ವಾನಿಸಿದ್ದೇವೆ. ಆದರೆ, ಅವರು ಹಾಜರಾಗಲಿಲ್ಲ’ ಎಂದರು.

ಕ್ರಿಕೆಟಿಗ ಕೆ.ಎಲ್.ರಾಹುಲ್ ಮಂಗಳವಾರ ರಾತ್ರಿ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನಕ್ಕೆ ತೆರಳಿ ದೇವರ ದರ್ಶನ ಪಡೆದರು. ದೇಗುಲದ ವತಿಯಿಂದ ರಾಹುಲ್ ಅವರನ್ನು ಸನ್ಮಾನಿಸಲಾಯಿತು. ದೇವಳದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ್ ಶೆಟ್ಟಿ, ಸಾರ್ವಜನಿಕ ಸಂಪರ್ಕಾಧಿಕಾರಿ ಜಯಕುಮಾರ್, ಅರ್ಚಕ ಸುರೇಶ್ ಭಟ್ ಪಾಲ್ಗೊಂಡಿದ್ದರು.

ಮಹಿಳಾ ಹಾಕಿ: ಭಾರತ ಸೆಮಿಗೆ

ರಾಂಚಿ (ಪಿಟಿಐ): ಸಾಂಘಿಕ ಆಟವಾಡಿದ ಭಾರತ ಮಹಿಳಾ ಹಾಕಿ ತಂಡವು ಇಲ್ಲಿ ನಡೆಯುತ್ತಿರುವ ಎಫ್‌ಐಎಚ್ ಒಲಿಂಪಿಕ್ ಅರ್ಹತಾ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿತು.

ಮಂಗಳವಾರ ನಡೆದ ‘ಬಿ’ ಗುಂಪಿನ ಪಂದ್ಯದಲ್ಲಿ ಭಾರತವು 5–1ರಿಂದ ಇಟಲಿ ವಿರುದ್ಧ ಸುಲಭ ಜಯ ದಾಖಲಿಸಿತು. ಈ ಪಂದ್ಯದಲ್ಲಿ ಉದಿತಾ ದುಹಾನ್ ಅವರು ಎರಡು ಗೋಲು ಗಳಿಸುವ ಮೂಲಕ ತಮ್ಮ 100ನೇ ಅಂತರರಾಷ್ಟ್ರೀಯ ಪಂದ್ಯವನ್ನು ಸ್ಮರಣೀಯವಾಗಿಸಿಕೊಂಡರು.

ಅವರು ಒಂದನೇ ಮತ್ತು 55ನೇ ನಿಮಿಷದಲ್ಲಿ ಗೋಲು ಗಳಿಸಿದರೆ, ದೀಪಿಕಾ (41ನೇ), ಸಲೀಮಾ ಟೆಟೆ (45ನೇ) ಮತ್ತು ನವನೀತ್ ಕೌರ್ (53ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಅಮೆರಿಕ, ಜರ್ಮನಿ ಮತ್ತು ಜಪಾನ್ ತಂಡಗಳೂ ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿದವು.

ಇಟಲಿ ವಿರುದ್ಧ ಗೆಲುವು ಸಾಧಿಸಿದ ಸಂಭ್ರಮದಲ್ಲಿ ಭಾರತ ಹಾಕಿ ತಂಡದ ಆಟಗಾರ್ತಿಯರು –ಪಿಟಿಐ ಚಿತ್ರ

‘ಬಿ’ ಗುಂಪಿನ ಮತ್ತೊಂದು ಪಂದ್ಯದಲ್ಲಿ ಅಮೆರಿಕವು 1–0ಯಿಂದ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತು. ಈ ಮೂಲಕ ಗುಂಪು ಹಂತದ ಮೂರು ಪಂದ್ಯಗಳನ್ನು ಗೆದ್ದು, ಅಗ್ರಸ್ಥಾನದೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

‘ಎ’ ಗುಂಪಿನ ಪಂದ್ಯಗಳಲ್ಲಿ ಜರ್ಮನಿಯು 10–0 ಯಿಂದ ಜೆಕ್ ಗಣರಾಜ್ಯ ವಿರುದ್ಧ ಗೆಲುವು ಸಾಧಿಸಿದರೆ, ಜಪಾನ್ 2–0ಯಿಂದ ಚಿಲಿ ತಂಡವನ್ನು ಮಣಿಸಿತು.

ಗುರುವಾರ ನಡೆಯುವ ಸೆಮಿಫೈನಲ್ ಪಂದ್ಯದಲ್ಲಿ ಭಾರತವು ಜರ್ಮನಿಯನ್ನು ಮತ್ತು ಅಮೆರಿಕವು ಜಪಾನ್ ತಂಡವನ್ನು ಎದುರಿಸಲಿದೆ. ಈ ಟೂರ್ನಿಯಲ್ಲಿ ಮೊದಲ ಮೂರು ಸ್ಥಾನ ಪಡೆಯುವ ತಂಡಗಳು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿವೆ.

ತಲೈವಾಸ್‌ಗೆ ಮಣಿದ ಪೈರೇಟ್ಸ್

ಜೈಪುರ (ಪಿಟಿಐ): ಅಜಿಂಕ್ಯ ಪವಾರ್ ಅವರ ಚುರುಕಿನ ದಾಳಿ ಮತ್ತು ಎಂ. ಅಭಿಷೇಕ್ ಅವರ ಅಮೋಘ ಟ್ಯಾಕಲ್‌ನ ನೆರವಿನಿಂದ ತಮಿಳು ತಲೈವಾಸ್ ತಂಡವು ಮಂಗಳವಾರ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 41–25ರಿಂದ ಪಟ್ನಾ ಪೈರೇಟ್ಸ್ ವಿರುದ್ಧ ಸುಲಭ ಗೆಲುವು ದಾಖಲಿಸಿತು.

ಇಲ್ಲಿನ ಸವಾಯಿ ಮಾನ್‌ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಆರಂಭದಿಂದಲೇ ಪಾರಮ್ಯ ಸಾಧಿಸಿದ ತಲೈವಾಸ್ ವಿರಾಮದ ವೇಳೆಗೆ 20–11ರಿಂದ ಮುನ್ನಡೆ ಪಡೆದಿತ್ತು. ಉತ್ತರಾರ್ಧದಲ್ಲೂ ಸಾಂಘಿಕ ಪ್ರದರ್ಶನ ನೀಡಿದ ತಂಡವು 16 ಪಾಯಿಂಟ್ಸ್ ಅಂತರದಿಂದ ಎದುರಾಳಿ ತಂಡವನ್ನು ಮಣಿಸಿತು.

ತಲೈವಾಸ್‌ನ ಅಜಿಂಕ್ಯಾ ರೈಡಿಂಗ್ ಮೂಲಕ 10 ಅಂಕಗಳೊಂದಿಗೆ ‘ಸೂಪರ್ ಟೆನ್’ ಸಾಧನೆ ಮಾಡಿದರು.

ಪ್ರೊ ಕಬಡ್ಡಿ ಪಂದ್ಯದಲ್ಲಿ ತಮಿಳು ತಲೈವಾಸ್ ಮತ್ತು ಪಟ್ನಾ ಪೈರೇಟ್ಸ್ ನಡುವೆ ಹಣಾಹಣಿ

ಅಭಿಷೇಕ್ ಟ್ಯಾಕಲ್‌ನಲ್ಲಿ 7 ಅಂಕವನ್ನು ತಂಡಕ್ಕೆ ಒದಗಿಸಿಕೊಟ್ಟರು. ಸುಧಾಕರ್ ಎಂ. ಪೈರೇಟ್ಸ್ ತಂಡಕ್ಕೆ 8 ಪಾಯಿಂಟ್ಸ್ ತಂದಿತ್ತರು.

ಈ ಗೆಲುವಿನ ಬಳಿಕ ತಲೈವಾಸ್ ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ 25 ಅಂಕಗಳೊಂದಿಗೆ 10ನೇ ಸ್ಥಾನದಲ್ಲಿದೆ. ಪಟ್ನಾ ಪೈರೇಟ್ಸ್ ತಂಡವು 32 ಅಂಕಗಳೊಂದಿಗೆ ಎಂಟನೇ ಸ್ಥಾನದಲ್ಲಿದೆ.

ಐಟಿಎಫ್ ಮಹಿಳಾ ಓಪನ್: ಸಿಂಗಲ್ಸ್‌ನಲ್ಲಿ ಸಹಜಾ ನಿರ್ಗಮನ

ವೈದೇಹಿ, ರಶ್ಮಿಕಾ ಕ್ವಾರ್ಟರ್ ಫೈನಲ್‌ಗೆ

ಬೆಂಗಳೂರು: ಭಾರತದ ವೈದೇಹಿ ಚೌಧರಿ ಮತ್ತು ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ ಅವರು ಇಲ್ಲಿ ನಡೆಯುತ್ತಿರುವ ಕೆಪಿಬಿ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್‌ನ ಮಹಿಳೆಯರ ಡಬಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಇಲ್ಲಿನ ಕೆಎಸ್‌ಎಲ್‌ಟಿಎ ಕ್ರೀಡಾಂಗಣ ದಲ್ಲಿ ಮಂಗಳವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿಯು 7-5, 6-0 ಯಿಂದ ಸ್ವದೇಶದ ಋತುಜಾ ಭೋಸ್ಲೆ ಮತ್ತು ಚೀನಾ ತೈಪೆಯ ಯೆನ್ ಶುವೋ ಲಿಯಾಂಗ್ ಅವರನ್ನು ಹಿಮ್ಮೆಟ್ಟಿಸಿತು.

ವೈದೇಹಿ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ಕ್ವಾಲಿಫೈಯರ್ ಮೂಲಕ ಮುಖ್ಯಸುತ್ತು ಪ್ರವೇಶಿಸಿದ್ದರೆ, ರಶ್ಮಿಕಾ ಎಡವಿದ್ದರು.

ಮತ್ತೊಂದು ಪಂದ್ಯದಲ್ಲಿ ಭಾರತದ ಶರ್ಮದಾ ಬಾಲು ಮತ್ತು ಶ್ರಾವ್ಯಾ ಶಿವಾನಿ ಜೋಡಿಯು 7-6 (4), 6-4ರಿಂದ ಸ್ವದೇಶದ ಸಾಯಿ ಸಂಹಿತಾ ಮತ್ತು ಸೋಹಾ ಸಾದಿ ಅವರನ್ನು ಸೋಲಿಸಿತು.

ಸಿಂಗಲ್ಸ್‌ನಲ್ಲಿ ಜಪಾನ್‌ನ ಸಕುರಾ ಹೊಸೋಗಿ 6-3, 6-7 (5), 6-3 ರಿಂದ ಇಟಲಿಯ ಕ್ಯಾಮಿಲ್ಲಾ ರೊಸಾಟೆಲ್ಲೊ ವಿರುದ್ಧ ಗೆಲುವು ಸಾಧಿಸಿ 16ರ ಘಟ್ಟ ಪ್ರವೇಶಿಸಿದರು.

ಇನ್ನೊಂದು ಪಂದ್ಯದಲ್ಲಿ ಸ್ಲೋವಾಕಿಯಾದ ಡಲಿಲಾ ಜಕುಪೋವಿಕ್ 6-2, 6-3 ರಿಂದ ಭಾರತದ ಸಹಜಾ ಯಮಲಪಲ್ಲಿ ಅವರನ್ನು ಮಣಿಸಿ ಮುನ್ನಡೆದರು.

ಸುಮಾರು ₹ 33 ಲಕ್ಷ ಒಟ್ಟು ಬಹುಮಾನದ ಟೂರ್ನಿಯನ್ನು ಬೆಂಗಳೂರಿನ ಆಸ್ಟ್ರೇಲಿಯಾದ ಕಾನ್ಸುಲ್ ಜನರಲ್ ಹಿಲರಿ ಮೆಕ್‌ಗೆಚಿ ಮತ್ತು ಕರ್ನಾಟಕದ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ಹೆಪ್ಸಿಬಾ ರಾಣಿ ಕೊರ್ಲಪಾಟಿ ಅವರು ಉದ್ಘಾಟಿಸಿದರು.

ಡಬಲ್ಸ್ ಪಂದ್ಯಗಳ ಫಲಿತಾಂಶ: ಭಾರತದ ಪ್ರಾರ್ಥನಾ ಜಿ.ಟಿ–ಅನಾಸ್ತಾಸಿಯಾ ಟಿಖೋನೋವಾ 6-4, 6-3ರಿಂದ ಭಾರತದ ಹುಮೇರಾ ಬಹರ್ಮಸ್–ಸೌಮ್ಯ ವಿಗ್ ವಿರುದ್ಧ; ಜಪಾನ್‌ನ ಸಾಕಿ ಇಮಾಮುರಾ–ನಹೊ ಸಾಟೊ 6-3, 6-1ರಿಂದ ಭಾರತದ ಸೋಫಿಯಾ ಲಾನ್ಸೆರೆ–ಅಂಕಿತಾ ರೈನಾ ವಿರುದ್ಧ; ಭಾರತದ ಶರ್ಮದಾ ಬಾಲು–ಶ್ರಾವ್ಯಾ ಶಿವಾನಿ ಚಿಲಕಲಪುಡಿ 7-6 (4), 6-4ರಿಂದ ಭಾರತದ ಸಾಯಿ ಸಂಹಿತಾ – ಸೋಹಾ ಸಾದಿಕ್ ವಿರುದ್ಧ; ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ–ವೈದೇಹಿ ಚೌಧರಿ 7-5, 6-0ರಿಂದ ಭಾರತದ ಋತುಜಾ ಭೋಸ್ಲೆ– ಚೀನಾ ತೈಪೆಯ ಯೆನ್ ಶುವೋ ಲಿಯಾಂಗ್ ವಿರುದ್ಧ ಜಯಿಸಿದರು.

ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಪಾಟಿ ಮತ್ತು ವೈದೇಹಿ ಚೌಧರಿ

ರಾಷ್ಟ್ರೀಯ ಕ್ರಾಸ್ ಕಂಟ್ರಿ: ಶಿವಾಜಿಗೆ ಚಿನ್ನದ ಪದಕ

ಬೆಂಗಳೂರು: ಶಿವಾಜಿ ಪಿ.ಎಂ ಅವರು ಬಿಹಾರದ ಗಯಾದಲ್ಲಿ ಸೋಮವಾರ ನಡೆದ 58ನೇ ರಾಷ್ಟ್ರೀಯ ಕ್ರಾಸ್‌ಕಂಟ್ರಿ ಓಟದ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು.

ಇಲ್ಲಿನ ಸೌಂದರ್ಯ ನಿರ್ವಹಣಾಶಾಸ್ತ್ರ ಮತ್ತು ವಿಜ್ಞಾನ ಕಾಲೇಜಿನಲ್ಲಿ ಬಿ.ಎ ಪದವಿಯ ತೃತೀಯ ಸೆಮಿಸ್ಟರ್‌ನಲ್ಲಿ ವಿದ್ಯಾರ್ಥಿಯಾಗಿರುವ ಶಿವಾಜಿ ಎಂಟು ಕಿಲೋಮೀಟರ್ ದೂರದ ಓಟವನ್ನು 23 ನಿಮಿಷ 40 ಸೆಕೆಂಡುಗಳಲ್ಲಿ ಪೂರೈಸಿ ಗುರಿ ಮುಟ್ಟಿದರು.

ವಿದ್ಯಾರ್ಥಿ ಈ ಸಾಧನೆಗೆ ಕೋಚ್‌ಗಳಾದ ಮಂಟೂರ್ ಮತ್ತು ವಿಶ್ವನಾಥ್, ದೈಹಿಕ ಶಿಕ್ಷಣ ನಿರ್ದೇಶಕರಾದ ಹರೀಶ್ ಪಿ.ಎಂ, ಸುರೇಶ್ ರೆಡ್ಡಿ ಎಂ.ಎಸ್. ಮಾರ್ಗದರ್ಶನ ನೀಡಿದ್ದಾರೆ ಎಂದು ಕಾಲೇಜಿನ ಸಿಇಒ ಕೀರ್ತನ್ ಕುಮಾರ್ ಎಂ ಮತ್ತು ಪ್ರಾಚಾರ್ಯ ಬಿ.ಎ. ವಾಸು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.